ಅಪೊಸ್ತೋಲಿಕ್ ಕಾರ್ಮೆಲ್ ಸಭೆ: ಕರಾವಳಿ ಕರ್ನಾಟಕದ ಮಹಿಳಾ ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ (1870–1970)

ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಸಿದ್ಧಪಡಿಸಿದ ಮಹಾಪ್ರಬಂಧ

ಸಂಶೋಧಕರು

ಮೋನಾ ಜಾಕ್ಲೀನ್ ಮೆಂಡೋನ್ಸಾ

ಮಾರ್ಗದರ್ಶಕರು

ಡಾ. ಡೆನಿಸ್ ಫೆರ್ನಾಂಡಿಸ್
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ
ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ)
ಮಂಗಳೂರು – 575003

ಚರಿತ್ರೆ ವಿಭಾಗ, ಸಮಾಜ ವಿಜ್ಞಾನಗಳ ನಿಕಾಯ
ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ ಮಾನ್ಯತೆ ಪಡೆದಿದೆ.

2019–2020

305.42
MON a

ಪರಾಮರ್ಶೆಗೆ ಮಾತ್ರ

“ಸಿರಿಗನ್ನಡ” ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

1092

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಿರಗನ್ನದ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ.ಹಂಪಿ

ಅಪೊಸ್ತೋಲಿಕ್ ಕಾರ್ಮೆಲ್ ಸಭೆ: ಕರಾವಳಿ ಕರ್ನಾಟಕದ ಮಹಿಳಾ ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ (1870–1970)

ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಸಿದ್ಧಪಡಿಸಿದ ಮಹಾಪ್ರಬಂಧ

ಸಂಶೋಧಕರು

ಮೋನಾ ಜಾಕ್ಲೀನ್ ಮೆಂಡೋನ್ಸಾ

ಮಾರ್ಗದರ್ಶಕರು

ಡಾ. ಡೆನಿಸ್ ಫೆರ್ನಾಂಡಿಸ್
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ
ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ)
ಮಂಗಳೂರು – 575003

ಚರಿತ್ರೆ ವಿಭಾಗ, ಸಮಾಜ ವಿಜ್ಞಾನಗಳ ನಿಕಾಯ
ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ ಮಾನ್ಯತೆ ಪಡೆದಿದೆ.

2019–2020

141647

ಪ್ರಸಾರಾಂಗ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

305.42
MON 9

ಸಂಶೋಧಕರ ಪ್ರಮಾಣಪತ್ರ

'ಅಪೊಸ್ತೋಲಿಕ್ ಕಾರ್ಮೆಲ್ ಸಭೆ: ಕರಾವಳಿ ಕರ್ನಾಟಕದ ಮಹಿಳಾ ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ (1870–1970)' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಲಾಗಿದೆ. ಡಾ. ಡೆನಿಸ್ ಫೆರ್ನಾಂಡಿಸ್, ಇತಿಹಾಸ ಪ್ರಾಧ್ಯಾಪಕರು, ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ) ಮಂಗಳೂರು, ಇವರು ಈ ಪ್ರಬಂಧ ರಚನೆಗೆ ಮಾರ್ಗದರ್ಶನ ಮಾಡಿದ್ದಾರೆ. ಈ ಮಹಾಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಯಾವುದೇ ಪದವಿಗಾಗಲಿ, ಇಲ್ಲವೇ ಬೇರೆ ಯಾವುದೇ ಪ್ರಕಟಣೆಗಾಗಲಿ ಬಳಸಿಕೊಳ್ಳುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

Mona Mendon

ದಿನಾಂಕ: 07/2/2020 **(ಮೋನಾ ಜಾಕ್ಲೀನ್ ಮೆಂಡೋನ್ಸಾ)**

ಸ್ಥಳ: ಬಲ್ಮಠ, ಮಂಗಳೂರು **ಸಂಶೋಧನಾ ವಿದ್ಯಾರ್ಥಿ**

ಮಾರ್ಗದರ್ಶಕರ ದೃಡೀಕರಣ ಪತ್ರ

ಮೋನಾ ಜಾಕ್ಲೀನ್ ಮೆಂಡೋನ್ಸಾ ಇವರು **ಅಪೊಸ್ತೋಲಿಕ್ ಕಾರ್ಮೆಲ್ ಸಭೆ: ಕರಾವಳಿ ಕರ್ನಾಟಕದ ಮಹಿಳಾ ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ (1870–1970)** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಮಂಡಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಈ ಮಹಾಪ್ರಬಂಧವನ್ನು ಇಲ್ಲವೇ ಇದರ ಯಾವುದೇ ಭಾಗವನ್ನು ಈ ಅಭ್ಯರ್ಥಿಯು ಯಾವುದೇ ಪದವಿಗಾಗಲಿ, ಇಲ್ಲವೇ ಬೇರೆ ಯಾವುದೇ ಪ್ರಕಟಣೆಗಾಗಲಿ ಬಳಸಿಕೊಳ್ಳುವುದಿಲ್ಲ ಎಂದು ಈ ಮೂಲಕ ಧೃಢೀಕರಿಸುತ್ತೇನೆ.

ಮಾರ್ಗದರ್ಶಕರು

ದಿನಾಂಕ: 07/2/2020

ಸ್ಥಳ: Mangalore

ಡಾ. ಡೆನಿಸ್ ಫೆರ್ನಾಂಡಿಸ್

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ

ಸಂತ ಅಲೋಶಿಯಸ್ ಕಾಲೇಜು (ಸ್ವಾಯತ್ತ)

ಮಂಗಳೂರು – 575003

ಅಪೊಸ್ತೋಲಿಕ್ ಕಾರ್ಮೆಲ್ ಸಭೆ: ಕರಾವಳಿ ಕರ್ನಾಟಕದ ಮಹಿಳಾ ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ (1870–1970)

ಪರಿವಿಡಿ

ಸಂಕೇತಾಕ್ಷರಗಳು ಮತ್ತು ವಿಸ್ತರಣೆ.

AC	Apostolic Carmel
ಭ	ಭಗಿನಿ
ಫ	ಫಾದರ್
ಎಸ್‌ಜೆ	ಸೊಸೈಟಿ ಆಫ್ ಜೀಸಸ್
ಎಸ್‌ಟಿ	ಸೈಂಟ್
ಎಸ್‌ಆರ್	ಸಿಸ್ಟರ್
ಎಫ್‌ಆರ್	ಫಾದರ್
ಒಸಿಡಿ	ಆರ್ಡರ್ ಆಫ್ ಡಿಸ್‌ಕಾಲ್ಸ್‌ಡ್ ಕಾರ್ಮೆಲೈಟ್ಸ್
ರೆ	ರೆವೆರೆಂಡ್

ಅಧ್ಯಾಯ: ಒಂದು

ಪರಿಚಯ

1.1 ಐತಿಹಾಸಿಕ ಹಿನ್ನಲೆ

1.2 ಸಮಸ್ಯೆಯ ಹೇಳಿಕೆ

1.3 ಸಾಹಿತ್ಯ ವಿಮರ್ಶೆ

1.4 ಗುರಿ ಮತ್ತು ಉದ್ದೇಶಗಳು

1.5 ಸಂಶೋಧನಾ ವಿಧಾನ

1.6 ಇತಿಮಿತಿಗಳು

1.7 ಅಧ್ಯಾಯ ವಿನ್ಯಾಸ

ಅಧ್ಯಾಯ: 1

ಪರಿಚಯ

"ಆಧುನಿಕ ಇತಿಹಾಸಕಾರನು ಮಾನವ ಕುಲದ ಕಥೆಯನ್ನು, ಸಾಮಾನ್ಯ ಮನುಷ್ಯನ ಆಕಾಂಕ್ಷೆಗಳು, ಸಾಧನೆಗಳು, ನಿರಾಶೆಗಳು, ಸೋಲು ಮತ್ತು ವೈಫಲ್ಯಗಳ ಮೇಲೆ ಬೆಳಕು ಚೆಲ್ಲುವ ರೀತಿಯಲ್ಲಿ ಹೊಸ ದೃಷ್ಟಿಕೋನದಿಂದ ಚರಿತ್ರೆಯನ್ನು ಹೇಳುವುದಕ್ಕೆ ಪ್ರಯತ್ನಿಸುತ್ತಾನೆ. ಒಬ್ಬ ವ್ಯಕ್ತಿ ಮಾತ್ರವಲ್ಲದೆ, ಒಂದು ಸಮುದಾಯ ಮತ್ತು ಸಮಾಜ ಇತಿಹಾಸದ ಅಧ್ಯಯನದ ವಿಷಯಗಳಾಗಿವೆ." ಹೀಗಿರುವಾಗ ಹಲವಾರು ದೇಶೀಯ ಮತ್ತು ವಿದೇಶಿಯ ಪ್ರಭಾವಗಳು ನಮ್ಮ ಇತಿಹಾಸವನ್ನು ಪುನರ್‌ರಚನೆಯನ್ನು ಮಾಡುವ ಸಂದರ್ಭದಲ್ಲಿ ಉಲ್ಲೇಖಿಸುವುದು ಚರಿತ್ರೆ ಅಧ್ಯಯನದ ಭಾಗವಾಗಿದೆ.

19ನೇ ಶತಮಾನದಲ್ಲಿ ಭಾರತದಲ್ಲಿ ಮಿಶನರಿಗಳು ಶಿಕ್ಷಣವನ್ನು ತಮ್ಮ ನೆಲೆಯೂರಿಯುವಿಕೆಯನ್ನು ಬಲಪಡಿಸಿಕೊಳ್ಳಲು ಸಾಧನವಾಗಿ ಉಪಯೋಗಿಸಿದರು. ಆದುದರಿಂದ ಅವರು ಮಿಶನರಿ ಸೇವೆಯನ್ನು ಮುಂದುವರಿಸಲು ಬೇರೆ ಬೇರೆ ವಿಧಾನಗಳನ್ನು ಬಳಸಿಕೊಂಡರು. ವಸಾಹತುಶಾಹೀ ಆಡಳಿತದ ಸಹಾಯ ಮತ್ತು ಸಹಕಾರಗಳಿಂದ ಅದು ಇನ್ನೂ ಬಲವರ್ಧನೆಗೊಂಡಿತು. 40 ವರ್ಷಗಳ ಕಾಲಾವಧಿಯಲ್ಲಿ ಸರಕಾರ ಹಾಗೂ ಸ್ಥಳೀಯ ಸಮುದಾಯದ ಮಧ್ಯೆ ಬಲವಾದ ಸಂಬಂಧವನ್ನು ಬೆಳೆಸಿಕೊಂಡಿದ್ದರಿಂದ ದೀರ್ಘಕಾಲದ ಅವರ ಅಸ್ತಿತ್ವಕ್ಕೆ ಅದು ಕಾರಣವಾಯಿತು.

ಈ ಅಧ್ಯಯನವು ಮಿಶನರಿಗಳಿಂದ ನೀಡಲ್ಪಟ್ಟ ಶಿಕ್ಷಣ ಹೇಗೆ ಆಳವಾದ ಪ್ರಭಾವವನ್ನು ಬೀರಿದೆ ಮತ್ತು ಮುಖ್ಯವಾಗಿ ಮದರ್ ವೆರೋನಿಕ ಅವರು ಜುಲೈ 16, 1868ರಲ್ಲಿ ಫ್ರಾನ್ಸ್‌ನ ಬೇಯೋನ್ನೆಯಲ್ಲಿ ಸ್ಥಾಪಿಸಿದ ಅಪೊಸ್ತೋಲಿಕ್ ಕಾರ್ಮೆಲ್ ಸಭೆ ಹಾಗೂ ಅದರ ಆಗಮನದ ಪರಿಣಾಮಗಳನ್ನು ಪರಿವೀಕ್ಷಿಸುತ್ತದೆ. ಅವರನ್ನು ಭಾರತಕ್ಕೆ ಸಿಸ್ಟರ್ ಜೋಸೆಫ್ ಆಫ್ ದಿ ಅಪಾರಿಷನ್ ಸಭೆಯು ಕಲ್ಲಿಕೋಟೆಯಲ್ಲಿ ಒಂದು ಶಾಲೆಯನ್ನು ನಡೆಸಲು ಕಳುಹಿಸಿದರು. ಇಲ್ಲಿ ಮುಖ್ಯಸ್ಥೆಯಾಗಿ ಸೇವೆ ಸಲ್ಲಿಸುತ್ತಿರುವಾಗ ಅವರು ಕೆನರಾದ ವಿಕಾರ್ ಅಪೊಸ್ತೋಲಿಕ್ ಆಗಿದ್ದ ಬಿಷಪ್ ಮೇರಿ ಎಫ್ರೆಮ್ (ಒ.ಸಿ.ಡಿ,) ಅವರನ್ನು ಭೇಟಿಯಾದಾಗ ಅವರು ಶಾಲೆಯಲ್ಲಿ ಶಿಕ್ಷಕಿಯರಾಗಿ ಸೇವೆ ಸಲ್ಲಿಸುತ್ತಿದ್ದ ಭಗಿನಿಯರಿಂದ ಕಾರ್ಮೆಲೈಟ್ ಸಭೆಯೊಂದನ್ನು ತೆರೆಯುವ ಇಚ್ಚೆಯನ್ನು ವ್ಯಕ್ತಪಡಿಸಿದರು. ಕರಾವಳಿಯಾದ್ಯಂತ, ಯುವ ಮಹಿಳೆಯರು ಶಿಕ್ಷಣ ಹೊಂದುವುದಕ್ಕೆ ಯಾವುದೇ ವ್ಯವಸ್ಥೆಯನ್ನು ಹೊಂದಿಲ್ಲದಿರುವುದು ಮತ್ತು ಮಕ್ಕಳಿಗೆ ಶಿಕ್ಷಣದ ಸವಲತ್ತುಗಳನ್ನು ಒದಗಿಸುವ ಹೆಚ್ಚಿನ ಅಗತ್ಯತೆಯನ್ನು ಈ

ಮೂಲಕ ಮನಗಂಡರು. ಆದುದರಿಂದ ಜನರ ಮನಸ್ಸಿನಿಂದ ನಿರ್ಲಕ್ಷತೆ ಮತ್ತು ಅಂಧ ವಿಶ್ವಾಸವನ್ನು ತೆಗೆದುಹಾಕಿ ತನ್ಮೂಲಕ ಕತ್ತಲೆಯನ್ನು ಹೊಡೆದು ಹಾಕಿ ಮಹಿಳೆಯರ ಸಬಲೀಕರಣ ಮತ್ತು ಸಶಕ್ತತೆಗಾಗಿ ಕೆಲಸ ನಿರ್ವಹಿಸಲು ನಿರ್ಧರಿಸಿದರು.

ಮದರ್ ವೆರೋನಿಕರವರು ಶಿಕ್ಷಣಸೇವೆಯಲ್ಲಿಯೇ ತನ್ನನ್ನು ತೊಡಗಿಕೊಳ್ಳಬೇಕೆಂಬ ದ್ಯೇಯವನ್ನು ಹೊಂದಿದ್ದರು. ಈ ಆಂಗ್ಲ ಮಹಿಳೆಗೆ ಅವರ ಕನಸಾಗಿದ್ದ ಹೊಸ ಸಭೆಯ ಸ್ಥಾಪಿಸುವ ಪಂಥಾಹ್ವಾನಕ್ಕೆ ಕಟಿಬದ್ಧರಾದರು. ಮಿಶನರಿಗಳನ್ನು ಸಿದ್ಧಪಡಿಸಿ ಭಾರತಕ್ಕೆ ಕಳುಹಿಸುವುದು ಆಕೆಯ ಗುರಿಯಾಗಿತ್ತು. ಈ ನಿಟ್ಟಿನಲ್ಲಿ ಪ್ರಥಮ ಸಭೆಯನ್ನು ಕ್ವಿಲಾನ್‌ನಲ್ಲಿ (ಕೇರಳ ರಾಜ್ಯದಲ್ಲಿ ಕೊಲ್ಲಂ ಎಂಬ ನಗರ) ಸ್ಥಾಪಿಸಲಾಗಿದ್ದರೂ, ಬಿಷಪ್ ಮಾರಿ ಏಫ್ರೆಮ್ ಅವರು 1870ರಲ್ಲಿ ಭಾರತದಲ್ಲಿ ಪ್ರಥಮ ಭಗಿನಿಯರ ಗುಂಪನ್ನು ಸ್ವತಹ ತರಬೇತುಗೊಳಿಸುವುದಕ್ಕಾಗಿ ಎರಡು ಯೋಜನೆಗಳಿಗೆ ಆಡಿಪಾಯಗಳನ್ನು ಮಂಗಳೂರಿನಲ್ಲಿ ಹಾಕಿದರು. ಸಿಸ್ಟರ್ ಮೇರಿ ಡೆಸ್ ಏಂಜಸ್, ಸಿಸ್ಟರ್ ಎಲಿಯಾಸ್ ಮತ್ತು ಸಿಸ್ಟರ್ ಜೋಸೆಫ್ ಮಾರ್ಸೆಲೀಸ್‌ನಿಂದ ಭಾರತಕ್ಕೆ ಆರು ಮಂದಿ ಕ್ಲೋಯ್ಸ್‌ಸರ್ಡ್ ಕಾರ್ಮೆಲೈಟ್ಸ್ ಆಫ್ ಪಾವ್ ಇವರ ಜತೆ ಪ್ರಯಾಣ ಬೆಳೆಸಿ ಮಂಗಳೂರಿನಲ್ಲಿ ಶಿಕ್ಷಣ ಕ್ಷೇತ್ರದ ಸೇವೆಯನ್ನು ನಿರ್ವಹಿಸುವುದಕ್ಕಾಗಿ ನವೆಂಬರ್ 19, 1870 ರಂದು ಬಂದಿಳಿದರು. ಮೊದಲ ಸುಪೀರಿಯರ್ ಜನರಲ್ ಆಗಿದ್ದ ಮದರ್ ಮಾರಿ ಆಫ್ ಏಂಜೆಲ್ಸ್ ಇವರ ನಾಯಕತ್ವದಲ್ಲಿ ನಂತರ ಸಮಾಜದ ಅಗತ್ಯಕ್ಕೆ ತಕ್ಕಂತೆ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಭಗಿನಿಯರ ವಾಸಸ್ಥಾನವಾಗಿ ಸೈಂಟ್ ಆನ್ಸ್ ಕಾನ್ವೆಂಟ್ ಸಂಸ್ಥೆಯು ಆಪೊಸ್ತೋಲಿಕ್ ಕಾರ್ಮೆಲ್‌ಗಳಿಗೆ ತೊಟ್ಟಿಲಾಯಿತು. ಮದರ್ ವೆರೋನಿಕರ ಸೇವೆಯು ಅಪೊಸ್ತೋಲಿಕ್ ಕಾರ್ಮೆಲ್ ಸಿಸ್ಟರ್‌ಗಳಿಗೆ ಸ್ಪೂರ್ತಿಯಾಗಿದ್ದು ಜನರನ್ನು ಮತ್ತು ಅದರಲ್ಲೂ ವಿಶೇಷವಾಗಿ ಯುವಜನರ ಶಿಕ್ಷಣ ಮತ್ತು ಶಾಲೆ, ಕಾಲೇಜು, ಸೇವಾ ಕೇಂದ್ರ, ಇತ್ಯಾದಿಗಳಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ ತಾಂತ್ರಿಕತೆಯುಳ್ಳ ಕೆಲಸಗಾರರ ಮೂಲಕ ನಂಬಿಕೆಯನ್ನು ಬೆಳೆಸುವುದಕ್ಕೆ ಸಹಾಯಕವಾಯಿತು. ಈ ಧಾರ್ಮಿಕ ಸಂಸ್ಥೆಯ ಸೇವಾ ನಿಯೋಗ ಕೆಥೋಲಿಕ ಮೌಲ್ಯಗಳನ್ನಾಧರಿಸಿದ ಶಿಕ್ಷಣವನ್ನು ಸಮಾಜದ ಸವಲತ್ತು ವಂಚಿತ ಜನರನ್ನು ವಿಧವಿಧವಾದ ಪೂರ್ವ–ಪ್ರಾಥಮಿಕ, ಪ್ರಾಥಮಿಕ, ಪ್ರೌಢ, ಪದವಿ–ಪೂರ್ವ, ಉನ್ನತ ಮತ್ತು ತಾಂತ್ರಿಕ ವಿಶೇಷ ಶಿಕ್ಷಣ ನೀಡುವ ಶಿಕ್ಷಣ ವ್ಯವಸ್ಥೆಗೆ ಪ್ರಾಧಾನ್ಯತೆ ನೀಡಿತು. ಈ ಯೋಜನೆಯಲ್ಲಿ ಭಾರತದ ಪಶ್ಚಿಮ ಕರಾವಳಿಯ ಮಂಗಳೂರಿನಲ್ಲಿ ಸ್ಥಾಪನೆಯಾದ ಸೈಂಟ್ ಆಗ್ನೆಸ್ ಕಾಲೇಜು ಪ್ರಥಮ ಮಹಿಳಾ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಂದು ಅಪೊಸ್ತೋಲಿಕ ಕಾರ್ಮೆಲ್ ಸಭೆ ತನ್ನ ಶಾಖೆಗಳನ್ನು ಭಾರತ, ಶ್ರೀಲಂಕಾ, ಕುವೈತ್, ಪಾಕಿಸ್ತಾನ, ಕೀನ್ಯಾ, ರೋಮ್ ಮತ್ತು ಬೆಹರಿನ್‌ನ ವಿವಿಧ ಭಾಗಗಳಲ್ಲಿ ಸ್ಥಾಪಿಸಿದೆ. ಇಂದು ಅದು

ಆರು ಪ್ರಾಂತ್ಯಗಳ ಮೂಲಕ ನಡೆಸಲ್ಪಡುತ್ತಿದ್ದು, ಬೆಂಗಳೂರಿನಲ್ಲಿರುವ "ಜನರಲ್ ಮದರ್ ಹೌಸ್"ನ ಕೇಂದ್ರದ ಮೂಲಕ ಆಡಳಿತ ವ್ಯವಸ್ಥೆಗೊಳಪಟ್ಟಿದೆ ಮತ್ತು ಇದರಲ್ಲಿ 1337 ಅಪೊಸ್ತೋಲಿಕ್ ಕಾರ್ಮೆಲೈಟರು ಇದ್ದಾರೆ.

ಔಪಚಾರಿಕ ಶಿಕ್ಷಣದ ಜತೆಗೆ ಅವರು ವೈದ್ಯಕೀಯ ಸೇವೆ, ನರ್ಸಿಂಗ್ ಕೇರ್, ಮದ್ಯ ಹಾಗೂ ಅಮಲು ಪದಾರ್ಥ ವ್ಯಸನಮುಕ್ತತೆ ಮತ್ತು ಪುನರ್ವಸತಿ, ಸ್ವಸಹಾಯ ಗುಂಪು ರಚನೆ, ಸೆರೆಮನೆಯ ಸೇವೆ, ವಿವಿಧ ಅಶಕ್ತರ ಮಧ್ಯೆ ಸೇವೆ ಮತ್ತು ಸಾಮುದಾಯಿಕವಾದ ಪುನರ್ವಸತಿ, ಕ್ರೈಸ್ತ ಶಿಕ್ಷಣ ಹಾಗೂ ನೈತಿಕ ಶಿಕ್ಷಣವನ್ನೂ ಒದಗಿಸುತ್ತಿದೆ. ಭಗಿನಿಯರ ಈ ಸಭೆಯು ಶಿಕ್ಷಣದ ಮೂಲಕ ಮಹಿಳೆಯರಲ್ಲಿ ಸುಧಾರಣೆಯನು ತಂದಿದ್ದು ಮಾತ್ರವಲ್ಲದೆ ಅವರನ್ನು ಸ್ವತಂತ್ರರನ್ನಾಗಿಸಲು ಹಾಗೂ ಸಮುದಾಯದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳನ್ನು ತರುವಲ್ಲಿ ದಿಟ್ಟ ಹೆಜ್ಜೆ ಇಡುವಂತೆ ಮತ್ತು ಆ ಮೂಲಕ ಆರ್ಥಿಕ ಸುಧಾರಣೆಯಾಗುವಂತೆ ಬದಲಾಯಿಸಿತು. ಈ ಅಧ್ಯಯನವು ಭಗಿನಿಯರು ಹೇಗೆ ದೇಶೀಯ ಸಮಾಜಕ್ಕೆ ಹೊಂದಿಕೊಂಡರು ಮತ್ತು ತಾವು ವಿದೇಶಿಯರಾಗಿದ್ದರೂ ಮಿತಿಯುಳ್ಳ ಸಂಪನ್ಮೂಲಗಳೊಂದಿಗೆ ಪ್ರಾಥಮಿಕ ಹಂತದಲ್ಲಿ ಹಲವು ತರಹದ ಎಡರು-ತೊಡರುಗಳನ್ನು ಎದುರಿಸಿ ದೇಶೀಯ ಸಂಸ್ಕೃತಿಯನ್ನು ತಮ್ಮದಾಗಿಸಿಕೊಂಡು ತಮ್ಮ ಸೇವೆಯನ್ನು ಮುಂದುವರಿಸಿಕೊಂಡು ಹೋದರೆಂಬುದನ್ನೂ ಪರಿಶೀಲಿಸುವಂತದ್ದಾಗಿದೆ.

ಸಭೆಯ ಹಿನ್ನೆಲೆ ಮತ್ತು ಕರಾವಳಿ ಕರ್ನಾಟಕದಲ್ಲಿ 19ನೇ ಶತಮಾನದ ಅಂತ್ಯಭಾಗ ಹಾಗೂ 20ನೇ ಶತಮಾನದ ಮೊದಲ ಭಾಗದಲ್ಲಿ ಮಹಿಳೆಯರಿಗಾಗಿ ಅರ್ಥವತ್ತಾದ ಶಿಕ್ಷಣ ಕೇಂದ್ರವನ್ನು ಯಾವ ತಳಹದಿಯ ಮೇಲೆ ಸ್ಥಾಪಿಸಿದರು ಎನ್ನುವುದನ್ನು ಅರಿತುಕೊಳ್ಳುವುದಕ್ಕೂ ಗಮನಹರಿಸಲಾಗಿದೆ. ವಿವಿಧ ಸಭೆಗಳು ಶಿಕ್ಷಣ ಯೋಜನೆಗಳನ್ನು ಹಮ್ಮಿಕೊಳ್ಳಲು ಯಾವ ವಿಧಾನವನ್ನು ಅನುಸರಿಸಿದರು ಎಂಬುದನ್ನು ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಅಂದು ಸಕ್ರಿಯವಾಗಿ ಇರುವಂತಹ ಸಭೆಗಳು ಮತ್ತು ಅಪೊಸ್ತೋಲಿಕ್ ಕಾರ್ಮೆಲ್ ಕಾಂಗ್ರಿಗೇಶನ್‌ಗಳ ಬಗ್ಗೆ ತುಲನಾತ್ಮಕ ಅಧ್ಯಯನವನ್ನು ನಡೆಸಲಾಗಿದೆ. ಈ ಹಂತದಲ್ಲಿ ಪ್ರತೀ ಸಂಸ್ಥೆಗಳು ತಮ್ಮ ಯೋಜನೆಗಳಲ್ಲಿ ಯಾವ ರೀತಿಯಲ್ಲಿ ವ್ಯತ್ಯಾಸವನ್ನು ಹೊಂದಿದ್ದರು, ಹೇಗೆ ಪ್ರತಿಯೊಂದು ಧಾರ್ಮಿಕ ಸಂಘಗಳು ಸಮುದಾಯದ ಅಗತ್ಯತೆಗೆ ಯಾವ ಕಾಲದಲ್ಲಿ ಯಾವ ರೀತಿ ಸ್ಪಂದಿಸಿದ್ದರು ಎಂಬುದನ್ನೂ ವಿಶ್ಲೇಸಿಸಲಾಗಿದೆ.

ಅಂತಿಮವಾಗಿ, ಜನರ ಪೂರ್ವಾಗ್ರಹ ಪೀಡಿತ ಮನಸ್ಥಿತಿಯ ಹೊರತಾಗಿಯೂ ಹೇಗೆ ಭಗಿನಿಯರಿಂದಾಗಿ ಹೊಸ ಉತ್ತಮ ಮಹಿಳಾ ಸಮಾಜದ ಸೃಷ್ಟಿಗೆ ಕಾರಣವಾಯಿತು ಮತ್ತು ಆ ಮೂಲಕ ಹೆಣ್ಣು ಮಕ್ಕಳು ಸಾಮಾಜಿಕ ಪಿಡುಗುಗಳನ್ನು ಪ್ರಶ್ನಿಸುವುದರ ಪ್ರಬುದ್ಧತೆಯನ್ನು ಬೆಳೆಸಿಕೊಂಡರು ಹಾಗೂ ಆ ಮೂಲಕ ಸಮುದಾಯದಲ್ಲಿ ಸಾಮಾಜಿಕ ಬದಲಾವಣೆಗೆ ಕಾರಣವಾಯಿತು ಎಂಬುದನ್ನು ಪ್ರಬಂಧವು ವಿಶ್ಲೇಷಿಸುತ್ತದೆ. ಬಹಳಷ್ಟು ಮಂದಿ

ಹಳೆ ವಿದ್ಯಾರ್ಥಿನಿಯರು ಸಮಾಜದಲ್ಲಿ ಮಾದರಿಯಾದ ಪಾತ್ರ ವಹಿಸುತ್ತಿದ್ದಾರೆ ಎಂದು ಪ್ರಶಂಸಿಸುವುದರ ಮೂಲಕ ಇತರ ಜನರು ತಮ್ಮ ಮಕ್ಕಳನ್ನು ಅಪೊಸ್ತೋಲಿಕ್ ಕಾರ್ಮೆಲ್ ಶಿಕ್ಷಣ ಸಂಸ್ಥೆಗಳಿಗೆ ಶಿಕ್ಷಣಕ್ಕಾಗಿ ಸೇರಿಸಲು ಪ್ರೇರಕವಾಯಿತು ಮತ್ತು ತಾವೂ ಸುಧಾರಿತ ವರ್ಗಕ್ಕೆ ಸೇರಿದವರು ಎಂದು ಗುರುತಿಸಿಕೊಳ್ಳಲು ಕಾರಣವಾಯಿತು. 150 ವರ್ಷಗಳ ನಂತರವೂ ಕಾರ್ಮೆಲ್ ಸಭೆಯ ಭಗಿನಿಯರಿಂದ ದೇಶದಲ್ಲಿ ಸ್ಥಾಪಿಸಲ್ಪಟ್ಟ ಸಂಸ್ಥೆಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ ಮತ್ತು ಪವಿತ್ರವಾದ ಶಿಕ್ಷಣವನ್ನು ಸಮುದಾಯಕ್ಕೆ ಮತ್ತು ಮುಖ್ಯವಾಗಿ ಹೆಣ್ಣು ಮಕ್ಕಳಿಗೆ ನೀಡುತ್ತಿವೆ.

1.1. ಐತಿಹಾಸಿಕ ಹಿನ್ನೆಲೆ

ಕರ್ನಾಟಕದ ಇತಿಹಾಸದಲ್ಲಿ, ಪ್ರಸ್ತುತ ಉಡುಪಿ ಮತ್ತು ಮಂಗಳೂರು ಜಿಲ್ಲೆಗಳನ್ನೊಳಗೊಂಡಿರುವ ಸೌತ್ ಕೆನರಾವು ಅನೇಕ ಕಾರಣಗಳಿಂದ ಅದ್ವಿತೀಯ ಸ್ಥಾನವನ್ನು ಪಡೆದಿದೆ. ಅದಕ್ಕೆ ಪ್ರಮುಖ ಕಾರಣವೇನೆಂದರೆ ಕರಾವಳಿ ಪ್ರಾಂತವು ಹೊರದೇಶದ ಸಂಭಂದವನ್ನು ಹೊಂದಿರುವುದು. 15ನೇ ಶತಮಾನದ ಪೂರ್ವಾರ್ಧದಲ್ಲಿ ಸೌತ್ ಕೆನರಾದ ಜನರ ಅಂತರ್–ಪ್ರಾಂತ ಹಾಗೂ ಅಂತರ್–ರಾಷ್ಟ್ರೀಯ ವಲಸೆಗೆ ಇಲ್ಲಿನ ಅದ್ವಿತೀಯ ಭೌಗೋಳಿಕ ಹಿನ್ನೆಲೆಯ ಕೊಡುಗೆ ಬಹಳಷ್ಟಿದೆ. ಪ್ರಾಮುಖ್ಯವಾಗಿ ಗೋವಾದ ಕೆಥೋಲಿಕರು ಮತ್ತು ವಿವಿಧ ಧಾರ್ಮಿಕ ವರ್ಗದ ಮಿಶನರಿಗಳು ಇದರಲ್ಲಿ ವಿಶಿಷ್ಠ ಪಾತ್ರ ವಹಿಸುತ್ತಾರೆ. 16ನೇ ಶತಮಾನದಿಂದ 19ನೇ ಶತಮಾನದ ಆರಂಭದವರೆಗೆ ಕೆನರಾ–ಮಲಬಾರ್ ಪ್ರದೇಶವು "ಮಿಶನ್ ಶಾಖೆ" ಎಂದು ಪರಿಗಣಿಸಲ್ಪಟ್ಟಿದೆ. ಮಂಗಳೂರು ಮತ್ತು ಕೆನರಾದ ಇತರ ಪ್ರದೇಶಗಳ ಚರ್ಚುಗಳು ಮತ್ತು ಸಭೆಗಳು ಪೋರ್ಚುಗೀಸರಿಂದ ಇಲ್ಲವೇ ಕೆಲವು ಸಂದರ್ಭಗಳಲ್ಲಿ ಗೋವಾದ ಧಾರ್ಮಿಕ ಮುಖಂಡರುಗಳಿಂದ ನಡೆಸಲ್ಪಡುತ್ತಿತ್ತು.

ಬಾಸೆಲ್‌ನ ಜರ್ಮನ್ ಇವ್ಯಾಂಜಲಿಕಲ್ ಮಿಶನ್ ಅಥವಾ ಬಾಸೆಲ್ ಮಿಶನರಿ ಸೊಸೈಟಿ 19ನೇ ಶತಮಾನದಲ್ಲಿ ಭಾರತಕ್ಕೆ ಕಾಲಿಟ್ಟ ಮೊದಲನೇ ಸೌಹಾರ್ದಿಕ ಮಿಶನ್ ಆಗಿರುತ್ತದೆ. ಈ ಪ್ರೊಟೆಸ್ಟೆಂಟ್ ಮಿಶನ್ ಸ್ವಿಜರ್‌ಲ್ಯಾಂಡ್‌ನ ಬಾಸೆಲ್‌ನಲ್ಲಿ 1815ರಲ್ಲಿ ಸ್ಥಾಪಿಸಲ್ಪಟ್ಟಿತು. ಅಲ್ಲಿಂದ ಧರ್ಮಭೋದಕರ ತರಬೇತಿ ಕೇಂದ್ರ ಸ್ಥಾಪನೆಗಾಗಿ ಮಿಶನರಿಗಳನ್ನು ಕಳುಹಿಸಿರು. ಅಂದಿನ ಮಿಶನ್ ಡೈರೆಕ್ಟರ್‌ರವರು ಭಾರತದ ಪಶ್ಚಿಮ ಕರಾವಳಿಯಲ್ಲಿ ಕೊಚ್ಚಿನ್ ಮತ್ತು ಮುಂಬಯಿಯ ಮಧ್ಯೆ ಮಿಶನ್‌ನ ಕೇಂದ್ರವನ್ನು ಸ್ಥಾಪಿಸಲು ಬಯಸಿದರು. ಆಗ ಸಾಮುವೆಲ್ ಹೆಬಿಕ್, ಜಾನ್ ಕ್ರಿಸ್ಟೋಫರ್ ಲೆಹ್ನರ್ ಮತ್ತು ಕ್ರಿಸ್ಟೋಫರ್ ಲಿಯೊನಾರ್ಡ್ ಗ್ರೇನರ್ ಎಂಬ ಸನ್ಯಾಸಿಗಳಿಗೆ ಪ್ರತಿಷ್ಠೆ ನೀಡಿ

ಹೊಸ ಸೇವಾ ಕೇಂದ್ರಕ್ಕೆ 16 ಮಾರ್ಚ್ 1834ರಂದು ಕಳುಹಿಸಿದರು. ಅವರು 12 ಜುಲೈ 1834ರಂದು ಮಲಬಾರ್‌ಗೆ ಬಂದಿಳಿದು ನಂತರ ಮಂಗಳೂರಿಗೆ 30 ಅಕ್ಟೋಬರ್ 1834ರಂದು ತಲಪಿದರು. ಆವರ ಮುಖ್ಯ ಉದ್ದೇಶ ಯೇಸುಕ್ರಿಸ್ತನ ಸುವಾರ್ತೆಯ ಸಂದೇಶವನ್ನು ಸಾರುವುದು.

1836ರಲ್ಲಿ ತುಳುನಾಡಿನಲ್ಲಿ ಪ್ರಥಮ ಶಾಲೆಯೊಂದು ಆರಂಭವಾಯಿತು. ಬಾಸೆಲ್ ಮಿಶನರಿಗಳು ಬೈಬಲಿನ ಬೋಧನೆಯ ಹೊರತಾಗಿ ಶಿಕ್ಷಣವನ್ನು ತಮ್ಮ ಮುಖ್ಯ ಉದ್ದೇಶವನ್ನಾಗಿ ತೆಗೆದುಕೊಂಡಿದ್ದರು. ಅವರು ಸಾಮಾನ್ಯವಾಗಿ ಮೂರು ವಿಧದ ಶಾಲೆಗಳನ್ನು ನಡೆಸುತ್ತಿದ್ದರು: (1) ಇಂಗ್ಲೀಷ್, ಸ್ಥಳೀಯ ಭಾಷೆ, ಗಣಿತ, ಇತಿಹಾಸ ಮತ್ತು ಭೂಗೋಳ ಶಾಸ್ತ್ರ ಹಾಗೂ ಬೈಬಲ್ ಮತ್ತು ಧಾರ್ಮಿಕ ಶಾಸ್ತ್ರದ ಪ್ರಾಥಮಿಕ ಶಿಕ್ಷಣ ನೀಡುವ ಗಂಡು ಮಕ್ಕಳ ಶಾಲೆ. (2) ತಾಂತ್ರಿಕ ತರಬೇತಿ ವಿಭಾಗವನ್ನೊಳಗೊಂಡ ಅನಾಥಾಲಯ ಮತ್ತು ಬೋರ್ಡಿಂಗ್ ಶಾಲೆ. (3) ಹೆಣ್ಣು ಮಕ್ಕಳ ಶಾಲೆ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಮೊದಲಿಗೆ ಈ ಶಾಲೆಗಳು ಕೇವಲ ಕ್ರೈಸ್ತ ಮತಾವಲಂಬಿಗಳಿಗೆ ಮಾತ್ರ ಸೀಮಿತವಾಗಿದ್ದು ಸತ್ಯವೇದವನ್ನು ಓದಲು ಅವರನ್ನು ಅಕ್ಷರಸ್ತರನ್ನಾಗಿಸಬೇಕಿತ್ತು. ಆದರೆ ಶಿಕ್ಷಣವನ್ನೆ ಕಾಣದ ಜಿಲ್ಲೆಯ ಸರ್ವರನ್ನು ಶಿಕ್ಷಣದ ಮಾರ್ಗಕ್ಕೆ ಮುನ್ನಡೆಸಬೇಕಾಯಿತು.

ನಂತರ 1845ರಿಂದ ಸಕ್ರಿಯವಾಗಿ ಈ ಪ್ರಾಂತಕ್ಕೆ ಕಾರ್ಮೆಲೈಟ್ ಮಿಶನರಿಗಳ ಆಗಮನ ಆರಂಭವಾಯಿತು. ಅವರು ಮಂಗಳೂರಿನ ಜನರ ಧಾರ್ಮಿಕ ಅಗತ್ಯತೆಗಳ ಜತೆಗೆ ಕೆಳವರ್ಗದವರುಗೆ ಶಿಕ್ಷಣ ನೀಡುವ ಕೆಲಸವನ್ನು ಮಾಡಿದರು. ಮುಖ್ಯವಾಗಿ ಟಿಪ್ಪು ಸುಲ್ತಾನನ ಆಡಳಿತ ಕಾಲದಲ್ಲಿ ಗೋವಾದ ಆರ್ಚ್‌ಬಿಷಪ್‌ರಿಂದ ಕೆನರಾದ ಕ್ರೈಸ್ತರು ಅವಗಣನೆಗೆ ಒಳಗಾಗಿ ಹೀನಾಯ ಸ್ಥಿತಿಯಲ್ಲಿದ್ದುದರಿಂದ ವ್ಯಾಟಿಕನ್ ಇವರನ್ನು ಕಳುಹಿಸುವ ವ್ಯವಸ್ಥೆ ಮಾಡಿತ್ತು. ಕ್ರೈಸ್ತತ್ವವನ್ನು ಉಳಿಸುವುದು ಮತ್ತು ಮೈಸೂರಿನ ಶ್ರೀರಂಗಪಟ್ಟಣದಲ್ಲಿ ಇಸ್ಲಾಂ ಧರ್ಮಕ್ಕೆ ಬಲವಂತವಾಗಿ ಮತಾಂತರಿಸಲ್ಪಟ್ಟು ಬಂಧಿಗಳಾಗಿ ಹಿಂತಿರುಗುತ್ತಿರುವ ಕೆಥೋಲಿಕರನ್ನು ಪುನಃ ಕ್ರೈಸ್ತಧರ್ಮ ನಂಬಿಕೆಗೆ ಹಿಂತಿರುಗಿಸುವುದು ಇವರ ಉದ್ದೇಶವಾಗಿತ್ತು. ಕಾರ್ಮೆಲೈಟ್ ಬಿಷಪರುಗಳು ಮತ್ತು ಧರ್ಮಗುರುಗಳು ಆಂಗ್ಲೋ-ವರ್ನಾಕ್ಯುಲರ್ (ಇಂಗ್ಲೀಷ್ ಮತ್ತು ಸ್ಥಳೀಯ ಭಾಷೆ) ಶಾಲೆಗಳನ್ನು ತೆರೆಯುವ ಪ್ರಯತ್ನ ಮಾಡಿದರು. ಇವುಗಳಲ್ಲಿ ಒಂದು ರೊಸಾರಿಯೋ ಶಾಲೆಯಾಗಿದ್ದು ಇದು 1858ರಲ್ಲಿ ಸ್ಥಾಪಿತವಾಗಿ ಇಂದಿನ ದಿನದಲ್ಲೂ ಶಿಕ್ಷಣ ಕ್ಷೇತ್ರದ ಬಗ್ಗೆ ಅವರಿಗಿದ್ದ ಆಸಕ್ತಿಗೆ ಉದಾತ್ತ ಉದಾಹರಣೆಯಾಗಿದೆ. ಕೆಥೋಲಿಕ್ ಶಾಲೆಗಳಿಗೆ ಮಂಗಳೂರಿನಲ್ಲಿ ಹೆಚ್ಚಿದ ಬೇಡಿಕೆಯನ್ನು ಮನಗಂಡು ಬಿಷಪ್ ಮೈಕೆಲ್ ಆಂಟನಿಯವರು ಮಂಗಳೂರಿನ ಯುವಕರಿಗೆ ಶಿಕ್ಷಣ ನೀಡುವುದಗೋಸ್ಕರ ಬದ್ಧತೆ ನೀಡಿ ಅವರ ವಿಕಾರ್ ಜನರಲ್ ಆದಂತಹ ಫಾ। ಆಂಡ್ರೂರವರನ್ನು ಗಂಡು

ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಕ್ಕಾಗಿ ಕ್ರೈಸ್ತ ಬ್ರದರ್‌ಗಳನ್ನು ಕರೆತರುವುದಕ್ಕಾಗಿ ಫ್ರಾನ್ಸ್‌ಗೆ ಕಳುಹಿಸಿದರು. ಫಾ। ಆಂಡ್ರೂ ನಾಲ್ಕು ಮಂದಿ ಕ್ರೈಸ್ತ ಬ್ರದರ್‌ಗಳನ್ನು ಕರೆತಂದರು. ಬ್ರದರ್‌ಗಳು ಬಂದು ತಲಪಿದ ಕೂಡಲೇ ಸೈಂಟ್ ಮೇರೀಸ್ ಇಂಗ್ಲೀಷ್ ಶಾಲೆಯನ್ನು ರೊಸಾರಿಯೋ ಕೆಥೆಡ್ರಲ್‌ನ ಪರಿಸರದಲ್ಲಿದ್ದ ಮನೆಯೊಂದರಲ್ಲಿ ತೆರೆದರು. ಇಲ್ಲಿ ಬಿಷಪರು ಶಾಲಾ ಕಟ್ಟಡ ನಿರ್ಮಿಸಲು ಆರಂಭಿಸಿದರು. ಈ ಸ್ಥಳವು ಕೇಂದ್ರ ಸ್ಥಳದಲ್ಲಿ ಇಲ್ಲ ಎಂಬ ಕಾರಣಕ್ಕೆ ಜನರು ಇದಕ್ಕೆ ಆಕ್ಷೇಪ ವ್ಯಕ್ತ ಪಡಿಸಿದರು. ಬ್ರದರ್‌ಗಳೂ ಕೂಡ ಶಾಲೆಯು ಕೇಂದ್ರ ಸ್ಥಾನದಲ್ಲಿ ಇರುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಅಲ್ಲಿ ಸ್ವಲ್ಪ ಅಸಮಾಧಾನ ಉಂಟಾದುದರಿಂದ ಕ್ರೈಸ್ತ ಬ್ರದರ್‌ಗಳು 1868ರಲ್ಲಿ ಕೊಲಂಬೋಗೆ ತೆರಳಿದರು. ಈ ಕಾರಣದಿಂದ ಶಾಲೆಯು ಮುಚ್ಚಲ್ಪಟ್ಟಿತು.

ಮಂಗಳೂರಿನ ಕೆಥೋಲಿಕ್ ಕಾರ್ಮೆಲೈಟ್ ಅವಧಿಯಲ್ಲಿ ಮಂಗಳೂರಿಗೆ ಸಂಭಂದಿಸಿದಂತೆ ಎರಡು ಮುಖ್ಯ ಭಗಿನಿಯರ ವರ್ಗ ಅಥವಾ ಸಂಸ್ಥೆಯು ಸ್ಥಾಪಿತವಾಯಿತು. ಅವುಗಳು ಕ್ಲೋಯ್‌ಸ್ಟರ್ಡ್ ಕಾರ್ಮೆಲ್ ಮತ್ತು ಅಪೊಸ್ತೋಲಿಕ ಕಾರ್ಮೆಲ್ (ಅಂದು ಮೂರನೇ ವರ್ಗದ ಕಾರ್ಮೆಲೈಟರು ಎಂದು ಕರೆಯಲ್ಪಡುತ್ತಿದ್ದವರು). 1867ರಲ್ಲಿ ಕಾಂಗ್ರಿಗೇಶನ್ ಆಫ್ ಕಾರ್ಮೆಲೈಟ್ ಸಿಸ್ಟರ್ಸ್ ಇದನ್ನು ಸ್ಥಾಪಿಸಿದ ಮೇಲೆ ಮಿಶನರಿಯವರು ಮಂಗಳೂರಿನಲ್ಲಿ 1870ರಲ್ಲಿ ಸೈಂಟ್ ಆ್ಯನ್ಸ್ ಎಂಬ ಅವರ ಮೊದಲ ಶಾಲೆಯನ್ನು ಮಂಗಳೂರಿನಲ್ಲಿ ಸ್ಥಾಪಿಸಿದರು. ಶಿಕ್ಷಣ ಸಂಸ್ಥೆಯಾದ ಸೈಂಟ್ ಆನ್ಸ್‌ನ ಚರಿತ್ರೆಯು ಬಿಷಪ್ ಮೈಕೆಲ್ ಆಂಟನಿಯವರಿಂದ ಆಹ್ವಾನಿತರಾಗಿ 1859ರಲ್ಲಿ ಸ್ಥಾಪನೆಗೊಂಡ "ಸಿಸ್ಟರ್ಸ್ ಆಫ್ ಸೈಂಟ್ ಜೋಸೆಫ್" ಸಂಸ್ಥೆಯಿಂದ ಆರಂಭವಾಗುತ್ತದೆ.

1878ರಲ್ಲಿ ಮಂಗಳೂರಿಗೆ ಯೇಸು ಸಭೆಯ ಪಾದ್ರಿಗಳ ಆಗಮನಕ್ಕೆ ಮೊದಲು ಇಲ್ಲಿ ಕಾರ್ಮೆಲೈಟ್ ಮಿಶನರಿಗಳಿದ್ದವು. ಟಿಪ್ಪು ಸುಲ್ತಾನನ ಅಧಿಕಾರವಿದ್ದ ಕಾಲದಲ್ಲಿ ಕೆನರಾದಲ್ಲಿದ್ದ ಕ್ರೈಸ್ತರು ಅವಗಣನೆಗೆ ಒಳಗಾಗಿದ್ದು ನಿಕೃಷ್ಟ ಪರಿಸ್ಥಿತಿಯಲ್ಲಿದ್ದಾಗ ಗೋವಾದ ಆರ್ಚ್ ಬಿಷಪರಿಂದ ವ್ಯಾಟಿಕನ್ ಇವರನ್ನು ಕಳುಹಿಸಿತ್ತು. ಕಮ್ಯುನಿಟಿ ಆಫ್ ಫ್ರೆಂಚ್ ಕ್ಲೊಯಿಸ್ಟರ್ಡ್ ಕಾರ್ಮೆಲೈಟ್ಸ್ ಅವರ ಪರಿಚಯ ಮತ್ತು ವಿಕಾರಿಯೇಟ್‌ನಲ್ಲಿ ಹೆಣ್ಣು ಮಕ್ಕಳ ಶಿಕ್ಷಣ ಮತ್ತಿತರ ಕೆಲಸಕ್ಕಾಗಿ 1870ರಲ್ಲಿ ಕಾರ್ಮೆಲೈಟ್ ಟರ್ಷರಿ ಭಗಿನಿಯರ ಆಗಮನವು ನೂತನ ಬಿಷಪ್, ಮೇರಿ ಎಫ್ರೆಮ್‌ರವರ ಕೊಡುಗೆಯಾಗಿದೆ. ಅಪೊಸ್ತೋಲಿಕ್ ಕಾರ್ಮೆಲರ ರಚನೆಯ ಹುರುಪಿನಿಂದ ಕೆಲಸ ನಿರ್ವಹಿಸುವ ಕಾರ್ಮೆಲ್ ಪಾವ್‌ನ ಮೂರು ಕಾರ್ಮೆಲೈಟ್ ಭಗಿನಿಯರ ಸ್ಥಾಪನೆಗೆ ಕಾರಣವಾಯಿತು. ಇವರು ಸಂಪೂರ್ಣ ಅಪೊಸ್ತೋಲರ ಹುರುಪಿನೊಂದಿಗೆ ಮಂಗಳೂರಿನ ಕಾರ್ಮೆಲೈಟ್ ಮಿಶನ್ ಮೂಲಕ ಸೇವಾ

ನಿರತರಾದರು. ಭಗಿನಿಯರ ಎರಡು ಸಮುದಾಯಗಳು ಕ್ಲೊಯ್‌ಸ್ಟರ್ಡ್ ಕಾರ್ಮೆಲ್‌ಗಳಿಗಾಗಿ 7 ಮಾರ್ಚ್ 1882ರಲ್ಲಿ ಕಂಕನಾಡಿಯಲ್ಲಿ ಪ್ರತ್ಯೇಕ ಕಾನ್ವೆಂಟ್ ರಚಯೆಯಾಗುವವರೆಗೆ ಸೈಂಟ್ ಆನ್ಸ್‌ನಲ್ಲಿ 7 ತಿಂಗಳುಗಳ ಕಾಲ ಒಟ್ಟಾಗಿ ವಾಸಿಸಿದರು. ಇದರ ಜೊತೆಗೆ ಪ್ರೊಟೆಸ್ಟೆಂಟ್ ಪಂಗಡದಿಂದ ಕೆಥೋಲಿಕ್ ಪಂಗಡಕ್ಕೆ ಮತಾಂತರಗೊಂಡ ಆಂಗ್ಲ ಮಹಿಳೆ ಮದರ್ ವೆರೋನಿಕಾ ಇವರಿಂದ ಸ್ಥಾಪಿಸಲ್ಪಟ್ಟ ಸಾಮಾನ್ಯವಾಗಿ ಅಪೊಸ್ತೋಲಿಕ್ ಕಾರ್ಮೆಲ್ ಆರ್ಡರ್ ಎಂದು ಕರೆಯಲ್ಪಡುತ್ತಿದ್ದ ಸಂಸ್ಥೆಯ ಶಿಕ್ಷಣ ಶಾಖೆಯು ಆರಂಭವಾಯಿತು. ಭಾರತದಲ್ಲಿ ಮದರ್ ಮೇರಿ ಆಗ್ನೆಸ್ ಇವರು ಬಿಷಪ್ ಮೇರಿ ಏಫ್ರೆಮ್‌ರವರಿಂದ ಈ ಸಂಸ್ಥೆ ಸ್ಥಾಪಿಸಲ್ಪಟ್ಟಾಗ ಮೊದಲ ಸುಪೀರಿಯರ್ ಆಗಿದ್ದು 1870ರಲ್ಲಿ ಮೊದಲು ಬಿಷಪ್ ಮೈಕೆಲ್‌ನಿಂದ ಸ್ಥಾಪಿಸಲ್ಪಟ್ಟ ಹಿಂದಿನ ಕಾರ್ಮೆಲೈಟರೂ ಈ ಗುಂಪಿಗೆ ಸೇರಿದರು. ಟರ್ಟಿಯರೀಸ್‌ರವರು ಯುರೋ–ಏಶಿಯಾ ಮತ್ತು ದೇಶಿಯರನ್ನು 1872 ಮತ್ತು 1876ರಲ್ಲಿ ಸೇರಿಸಿಕೊಳ್ಳುವ ಮೂಲಕ ಮಂಗಳೂರಿನ ಸೈಂಟ್ ಆನ್ಸ್ ಕಾನ್ವೆಂಟ್ ಮದರ್ ಹೌಸ್ ಎಂದು ಪರಿಗಣಿಸಲ್ಪಟ್ಟಿತು ಮತ್ತು ನೊವಿಶಿಯೇಟ್‌ನಲ್ಲಿ ಸದಸ್ಯತನ ಪಡೆಯಿತು. ಹೀಗೆ ಸೌತ್ ಕೆನರಾದಲ್ಲಿ ಶಿಕ್ಷಣಕ್ಕೆ ಭದ್ರ ಬುನಾದಿ ಹಾಕಲ್ಪಟ್ಟಿತು.

ಅಪೋಸ್ತಲಿಕ್ ಕಾರ್ಮೆಲ್ ಸಭೆ: ಕರಾವಳಿ ಕರ್ನಾಟಕದ ಮಹಿಳಾ ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆ (1870–1970) ಈ ಪ್ರಬಂಧ ಅಪೊಸ್ತೋಲಿಕ್ ಕಾರ್ಮೆಲ್ ಸಭೆಯಿಂದ ಸ್ಥಾಪಿಸಲ್ಪಟ್ಟ ಶಿಕ್ಷಣ ಸಂಸ್ಥೆಗಳು ಮತ್ತು ಕರಾವಳಿ ಕರ್ನಾಟಕದ ಮೇಲೆ ಅದರಲ್ಲೂ ಮುಖ್ಯವಾಗಿ ಮಂಗಳೂರು ನಗರದ ಮೇಲೆ ಅದರ ಪರಿಣಾಮದ ಬಗ್ಗೆ ವಿಶ್ಲೇಷಣೆ ಮಾಡುವಂತಾದ್ದಾಗಿದೆ. ಅಪೊಸ್ತೋಲಿಕ್ ಕಾರ್ಮೆಲ್ ಸಭೆಯ ಹಿನ್ನೆಲೆ, ಕರಾವಳಿ ಕರ್ನಾಟಕದಲ್ಲಿ ಮಹಿಳಾ ಶಿಕ್ಷಣ ಮತ್ತು ಸಾಮಾಜಿಕ ಪರಿವರ್ತನೆಯ ಒಂದು ಸಮಗ್ರ ಹಾಗೂ ವಿವರಣಾತ್ಮಕ ಅಧ್ಯಯನವಾಗಿರುತ್ತದೆ. ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಸಬಲೀಕರಣವು ಲಿಂಗ ಸಮಾನತೆಗೆ ಒಂದು ಅಗತ್ಯವುಳ್ಳ ಹೆಜ್ಜೆ ಎಂದು ಪರಿಗಣಿಸಿರುವುದಕ್ಕೆ ಈ ಅಧ್ಯಯನ ಪ್ರಾಶಸ್ತ್ಯ ನೀಡಿದೆ. ಇದರ ಜೊತೆಗೆ ಸಾಮಾಜಿಕ ಶಿಕ್ಷಣಕ್ಕೆ ಈ ಅದ್ಯಯನ ಪ್ರಾಮುಖ್ಯತೆ ನೀಡಿದೆ.

ಮಹಿಳಾ ಶಿಕ್ಷಣಕ್ಕೆ ಸಂಭಂದಿಸಿದಂತೆ ಕಾರ್ಮೆಲ್ ಶಿಕ್ಷಣ ಒಂದು ಪ್ರಾಮುಖ್ಯ ಸ್ಥಾನವನ್ನು ಹೊಂದಿದೆ. ಈ ಒಿನ್ನೆಲೆಯಲ್ಲಿ ಇಲ್ಲಿ ಮಹಿಳೆಯರ ಬಿಡುಗಡೆ, ಸ್ವಾತಂತ್ರ್ಯ ಮತ್ತು ಸಿದ್ಧತೆಗೆ ಮುಖ್ಯ ಪ್ರಾಶಸ್ತ್ಯ ನೀಡಲಾಗಿದೆ. ಅಪೊಸ್ತೋಲಿಕ್ ಕಾರ್ಮೆಲ್ ಶಾಲೆಗಳು ಮತ್ತು ಕಾಲೇಜುಗಳು ಲಿಂಗ ಅಸಮಾನತೆ ಮತ್ತು ಸಾಮಾಜಿಕ ಪಿಡುಗುಗಳ ಪೂರ್ವಾಗ್ರಹ ಪೀಡಿತ ಸಂಪ್ರದಾಯಗಳನ್ನು ಮೆಟ್ಟಿ ನಿಲ್ಲುವಲ್ಲಿ ಮಹಿಳೆಯರು ತಮ್ಮ ಸ್ವ–ತಿಳುವಳಿಕೆ, ಉತ್ತೇಜನ ಮತ್ತು ಪ್ರೋತ್ಸಾಹ ಹೊಂದುವಂತೆ ಮಾಡುತ್ತದೆ. ಈ ಅಧ್ಯಯನವು ಕರಾವಳಿ ಕರ್ನಾಟಕದ ಮುಖ್ಯ

ಭಾಗವಾದಂತಹ ಮಂಗಳೂರಿನಲ್ಲಿ ಅಪೊಸ್ತೋಲಿಕ್ ಕಾರ್ಮೆಲ್ ಸಭೆ ಈ ವಿಷಯವನ್ನು ಎಷ್ಟರ ಮಟ್ಟಿಗೆ ಪ್ರತಿಪಾದಿಸಿದೆ ಎಂಬುದನ್ನು ಅಧ್ಯಯನ ಮಾಡುವ ಗುರಿ ಹೊಂದಿದೆ. ಈ ಅಧ್ಯಯನವು ಕಾರ್ಮೆಲ್ ಸಭೆ ಮತ್ತು ಅವರ ಶಿಕ್ಷಣ ಸಂಸ್ಥೆಗಳ ಒಳಿತು ಕೆಡುಕುಗಳು ಇಲ್ಲವೇ ಅವರ ಸೇವೆ ಹೇಗೆ ಪರಿಣಾಯಕಾರಿಯಾಗಿತ್ತು ಅಥವಾ ಯಾಕೆ ಪರಿಣಾಮಕಾರಿಯಾಗಿರಲಿಲ್ಲ ಎಂದು ಹಣೆಪಟ್ಟಿ ನೀಡುವ ಪೂರ್ವಾಗ್ರಹ ಪೀಡಿತ ಅಧ್ಯಯನವಾಗಿರದೆ, ಅವರ ಸಂಸ್ಥೆಗಳಲ್ಲಿನ ಶಿಕ್ಷಣ ಮತ್ತು ಅದರ ಪರಿಣಾಮವಾಗಿ ಆದ ಸಾಮಾಜಿಕ ಬದಲಾವಣೆ ಹಾಗೂ ನಿರ್ವಹಣೆಯನ್ನು ನೋಡಿ, ತಿಳುಕೊಳ್ಳುವುದಕ್ಕೆ ಸೀಮಿತವಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯಾನಂತರ ಈ ಸಂಸ್ಥೆಗಳು ಹೇಗೆ ನಡೆಸಲ್ಪಡುತ್ತಿದ್ದವು ಎಂಬುದನ್ನು ಪರಿಗಣಿಸುವುದು, ಅವರ ವಿಭಿನ್ನ ರೀತಿ ಮತ್ತು ಯೋಜನೆಗಳು ಅವರ ಸಂಸ್ಥೆಯು ಕರಾವಳಿಯುದ್ದಕ್ಕೂ ಪಸರಿಸುವುದಕ್ಕೆ ಪೂರಕವಾದ ಅಂಶಗಳು ಮತ್ತು ಆ ಮೂಲಕ ತೀರಾ ಹಳ್ಳಿಗಳ ಹೆಣ್ಣು ಮಕ್ಕಳಿಗೆ ಶಿಕ್ಷಣ ಲಭ್ಯವಾಗುವುದಕ್ಕೆ ಕೈಗೊಂಡ ಬೇರೆ ಬೇರೆ ಶೈಕ್ಷಣಿಕ ಪ್ರಯೋಗಗಳನ್ನು ತಿಳಿದುಕೊಳ್ಳುವಂತದ್ದು ಈ ಅಧ್ಯಯನದ ಇನ್ನೊಂದು ಪ್ರಮುಖ ಭಾಗವಾಗಿದೆ.

ಬದಲಾಗುತ್ತಿದ್ದ ರಾಜಕೀಯ ವ್ಯವಸ್ಥೆ ಹಾಗೂ ಮಿಷನರಿಗಳು ಕೂಡ ಇದನ್ನು ಸ್ವೀಕರಿಸಿದರು ಎಂಬುದನ್ನು ಸಹ ಅಧ್ಯಯನದಲ್ಲಿ ಅರ್ಥ ಮಾಡಿಕೊಳ್ಳಲಾಗಿದೆ. ಮಿಶನ್‌ಗಳು ಸಂಪೂರ್ಣ ಸಹಯೋಗದೊಂದಿಗೆ ಕಾರ್ಯಾಚರಿಸುತ್ತಿದ್ದರೆ ವಸಾಹತು ಸರಕಾರದ ಮಿತ ಚೌಕಟ್ಟಿನೊಳಗೆ ಯಾಕೆ ಕಾರ್ಯ ನಿರತವಾಗಿಲ್ಲ? ವಸಾಹತು ಸರಕಾರ ಇವರು ಮಾಡುವ ಮಾನವೀಯ ಸೇವೆಗೆ ಪೂರಕವಾಗಿ ಸರಕಾರಿ ಶಾಲೆಗಳನ್ನು ಪ್ರಾರಂಭಿಸುವುದರೊಂದಿಗೆ ಮಿಶನರಿ ಶಾಲೆಗಳಿಗೆ ಹಣದ ನೆರವನ್ನು ಒದಗಿಸುತ್ತಿದ್ದರೂ ಮಿಶನರಿಗಳು ತಮ್ಮ ಶಿಕ್ಷಣ ಕೇತ್ರದ ಕಾರ್ಯವನ್ನು ಸ್ಥಗಿತಗೊಳಿಸಲಿಲ್ಲ ಅಥವಾ ತಮ್ಮ ಯೋಜನೆಗಳನ್ನು ಕಡಿತಗೊಳಿಸಲಿಲ್ಲ. ವಸಾಹತು ಸರಕಾರದ ಸಹಕಾರವಿಲ್ಲದೆ ಮಿಶನರಿ ಕೆಲಸ ಮುಂದುವರಿಸುವುದು ಅಷ್ಟು ಸುಲಭ ಸಾಧ್ಯವಲ್ಲ ಎಂಬುದನ್ನು ಅರತಿದ್ದರು. ಇಂದು ಅಧಿಕ ಸಂಖ್ಯೆಯ ಮಿಶನ್ ಸಂಸ್ಥೆಗಳು ಯಾವುದೇ ಸರಕಾರಿ ಧನ ಸಹಾಯವಿಲ್ಲದೆ ಸ್ವತಂತ್ರವಾಗಿ ಕಾರ್ಯ ಪ್ರವೃತ್ತವಾಗಿವೆ. ಇಲ್ಲಿ ಪ್ರಶ್ನೆ ಉದ್ಭವಿಸುವುದೇನಂದರೆ, ತಮ್ಮ ಸರಕಾರ ಸ್ಥಿರವಾಗಿರುವುದು ಎಂದು ವಸಾಹತು ಅಧಿಕಾರ ಭಾವಿಸಿತ್ತೇ? ಆದರೆ ಮಿಶನರಿಗಳು ತಮ್ಮ ವರ್ಚಸ್ಸು ಸಮರ್ಪಣೆ ಮತ್ತು ದೃಢಬದ್ಧ ಸೇವೆಯ ಮೂಲಕ ಈ ನೆಲದಲ್ಲಿ ತಮ್ಮ ನೆಲೆ ಗಟ್ಟಿಯಾಗಿರುವಂತೆ ನೋಡಿಕೊಂಡರು ಮತ್ತು ಆ ಮೂಲಕ ಜನರೊಂದಿಗೆ ಹತ್ತಿರದ ಸಂಭಂದ ಮತ್ತು ಆತ್ಮೀಯತೆಯನ್ನು ಬೆಳೆಸಿಕೊಂಡು ಭಾರತದ ಮಣ್ಣಿನಲ್ಲಿ ಸಾಕಷ್ಟು ಹೆಚ್ಚಿನ ಅಸ್ತಿತ್ವವನ್ನು ದೃಢಪಡಿಸಿಕೊಂಡರು.

ವಸಾಹತು ಸರ್ಕಾರ ಮತ್ತು ಮಿಶನ್‌ಗಳ ಕ್ರಮ ಮತ್ತು ಕೆಲಸಗಳು ಪರಸ್ಪರ ಸಂಪೂರ್ಣ ವ್ಯತ್ಯಾಸ ಮತ್ತು ವಿರೋಧಾಭಾಸಗಳಿಂದ ಕೂಡಿತ್ತು. ಉದಾಹರಣೆಗಾಗಿ ಮಿಶನ್ ಪರೋಪಕಾರ, ನಿಸ್ವಾರ್ಥ, ಪರಿಶುದ್ಧ ಮತ್ತು ಮಿತಾಚಾರವೆಂಬ ಕ್ರೈಸ್ತ ಮೌಲ್ಯಗಳನ್ನು ಪಾಲಿಸಿದರೆ ವಸಾಹತು ಅಧಿಕಾರಿಗಳು ದಯಾರಹಿತ ಕ್ರೂರ ನಡವಳಿಕೆಯನ್ನು ಅನುಸರಿಸುತ್ತಿದ್ದರು. ಹೀಗೆ ಒಟ್ಟಾರೆಯಾಗಿ ನೋಡಿದರೆ 19ನೇ ಶತಮಾನದ ಕೊನೆಯ ಭಾಗದಲ್ಲಿ ಕರಾವಳಿ ಕರ್ನಾಟಕದಲ್ಲಿ ಮಿಷನರಿಗಳ ಪಾತ್ರವನ್ನು ನೋಡಿದಾಗ ಅಂದಿನ ವಸಾಹತು ಸರಕಾರವನ್ನು ಬೇರ್ಪಡಿಸಿ ಶಿಕ್ಷಣವನ್ನು ಕುರಿತು ಪ್ರಸ್ತಾವನೆ ಮಾಡುವ ಹಾಗಿಲ್ಲ.

1. 2 ಸಮಸ್ಯೆಯ ಬಗ್ಗೆ ಹೇಳಿಕೆ

ಲೋಕಸೇವೆ ಮತ್ತು ಶಿಕ್ಷಣದಲ್ಲಿ ಮಹಿಳೆಯರ ಪಾತ್ರದ ಬಗೆಗಿನ ಸಂಕುಚಿತ ಮನೋಭಾವನೆಯಿಂದಾಗಿ ಮಹಿಳೆಯರ ಶಿಕ್ಷಣ ಕ್ಷೇತ್ರದಲ್ಲಿನ ಲೋಕಸೇವೆಯ ಕುರಿತಾದ ಹೆಚ್ಚಿನ ಸಾಹಿತ್ಯದಲ್ಲಿ ಮಹಿಳೆಯರು ನಗಣ್ಯರಾಗಿದ್ದಾರೆ. ಮಹಿಳಾ ಮಿಶನರಿಗಳು ಕೇವಲ ಮಹಿಳೆಯರಿಗಾಗಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಮತ್ತು ನಂತರ ಪ್ರೌಢ ಹಾಗೂ ಕಾಲೇಜು ಶಿಕ್ಷಣ ಸೇವೆಗೆ ಗಣನೀಯ ಕೊಡುಗೆಯನ್ನು ನೀಡಿರುತ್ತಾರೆ. ಇದು ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಸಮಗ್ರ ಅಭಿವೃದ್ಧಿಗೆ ಕಾರಣವಾಯಿತು. ಆದರೆ ಅವರ ಸಕಾರಾತ್ಮಕ ಕೊಡುಗೆಗಳು ವಿರಳವಾಗಿ ಪರಿಗಣಿತವಾಗಿ ಹೆಚ್ಚಿನ ಸಂದರ್ಭಗಳಲ್ಲಿ ನಿಶೇಧಾತ್ಮಕ ಅಭಿಪ್ರಾಯದೊಂದಿಗೆ ಸ್ವೀಕರಿಸಲಾಗಿದೆ. ಅವರ ಕೊಡುಗೆಗಳು ನೀರವವಾಗಿ ಪರಿಗಣಿಸಲ್ಪಟ್ಟಿರುವುದು ಮಾತ್ರವಲ್ಲದೆ ಮಹಿಳಾ ಮಿಶನರಿಗಳ ನಗಣ್ಯವಲ್ಲದ ಪಾತ್ರದ ಬಗೆಗಿನ ಕೊಂಡಿಯೇ ತಪ್ಪಿಹೋಗಿರುವಂತಾಗಿ ಭಾರತೀಯ ಕಲಾ ಸಂಸ್ಕೃತಿಯ ಪುನರುಜ್ಜೀವನ ಕಾಲದ ಸಾಮಾಜಿಕ ಸುಧಾರಕರೂ ಅವರ ಬಗೆಗೆ ಮೌನವಾಗಿರಲು ಬಯಸಿದರು. ಹೀಗೆ ಮಹಿಳಾ ಮಿಶನರಿಗಳು ಮತ್ತು ಪ್ರಾಮುಖ್ಯವಾಗಿ ಅಪೋಸ್ತಲಿಕ್ ಕಾರ್ಮೆಲ್ ಸಭೆ ಮಹಿಳೆಯರ ಮತ್ತು ಕರಾವಳಿ ಕರ್ನಾಟಕದ ಹಾಗೂ ಮಂಗಳೂರಿಗೆ ನೀಡಿರುವ ಅಪಾರ ಕೊಡುಗೆಗಳ ಬಗ್ಗೆ ವಿಸ್ತೃತ ಗಮನಹರಿಸುವುದು ಅಗತ್ಯವಾಗಿದೆ.

1. 3 ಸಾಹಿತ್ಯ ವಿಮರ್ಶೆ

ಕರಾವಳಿ ಕರ್ನಾಟಕದಲ್ಲಿ 15ನೇ ಶತಮಾನದಿಂದ ಮಿಷನರಿಗಳ ಕುರಿತು ಸುದೀರ್ಘವಾದ ಅಧ್ಯಯನಗಳು ಬಹಳಷ್ಟು ಆಗಿದೆ. ಅದರಲ್ಲೂ ಪ್ರಮುಖವಾಗಿ ಕರಾವಳಿ ಕರ್ನಾಟಕಕ್ಕೆ ಆಗಮಿಸಿದ ಮೊದಲ ಮಿಷನರಿ ಪಂಗಡ ಫ್ರಾನ್ಸಿಸ್ಕನ್ ಕಪುಚಿನ್ ತದನಂತರ ಕಾರ್ಮೆಲೈಟ್ ಮಿಷನರಿಗಳು ಹಾಗೂ ಅನೇಕರು ಸುದೀರ್ಘವಾದ ಅಧ್ಯಯನ ಮಾಡಿದ್ದಾರೆ. ಪ್ರತಿಯೊಂದು ಅಧ್ಯಯನದಲ್ಲಿ ಕಂಡುಕೊಂಡ ಅಂಶವೇನೆಂದರೆ ಇವುಗಳೆಲ್ಲ

ಮಿಷನರಿಗಳ ಚರಿತ್ರೆ, ಭಾರತಕ್ಕೆ ಆಗಮನ, ಆಗಮಿಸಿದ ಉದ್ದೇಶ, ಶಿಕ್ಷಣ ವೈದ್ಯಕೀಯ ಹಾಗೂ ಸಮಾಜ ಸೇವೆಗೆ ಅವರು ಕೊಟ್ಟ ಕೊಡುಗೆ ಬಗ್ಗೆ ಅಧ್ಯಯನಗಳು ನಡೆದಿವೆ, ಆದರೆ ಕರಾವಳಿ ಕರ್ನಾಟಕದಲ್ಲಿ ಭಗಿನಿಯರ ಕುರಿತು ಇದುವರೆಗಿನ ಅಧ್ಯಯನಗಳು ತೀರ ಕಡಿಮೆ. ಶಿಕ್ಷಣ ಮತ್ತು ಸಾಮಾಜಿಕ ಬದಲಾವಣೆಯಲ್ಲಿ ಇರುವ ಮಾಹಿತಿ ಬಗ್ಗೆ ಅಪರೂಪವಾಗಿ ಕೆಲವು ಪುಟಗಳಲ್ಲಿ ಇಲ್ಲವೇ ಕೆಲವು ಸಾಲುಗಳಿಗೆ ಮಾತ್ರ ಸೀಮಿತವಾಗಿದೆ. ಇದರಲ್ಲಿ ಪ್ರಮುಖವಾಗಿ ಭಗಿನಿ ಎಮಿಲಿ ಇವರ ಸಂಶೋಧನೆ 'A History of Bethany Congregation Mangalore and its Contribution to the field of Education and Social a Change in Karnataka' ಪ್ರಪ್ರಥಮ ಬಾರಿಗೆ ಮಂಗಳೂರಿನಲ್ಲಿ ಪ್ರಸಿದ್ಧವಾದಂತಹ ಭಗಿನಿಯರ ಸಭೆಯಾದ ಭೆಥನಿ ಸಂಸ್ಥೆಯ ಕುರಿತಾಗಿದ್ದು ನನ್ನ ಈ ಸಂಶೋಧನೆಗೆ ಒಂದು ಮಾದರಿಯಾಗಿದೆ. ಇವರ ಜೊತೆಗೆ ಕ್ರಾಂತಿ ಫರಾಯಸ್, ಪಿಯೂಸ್ ಫಿಡಲಿಸ್ ಪಿಂಟೊ, ಜೆ. ಬಿ. ಮೊಂತೆರೊ, ಮೈಕಲ್ ಲೋಬೊ ಮುಂತಾದವರುಗಳ ಪುಸ್ತಕದಲ್ಲಿ ಮೊದಲ ಬಾರಿಗೆ ಭಗಿನಿಯರ ಪಾತ್ರವನ್ನು ಸಮಾಜಕ್ಕೆ ತಿಳಿಸುವ ಪ್ರಯತ್ನವನ್ನು ಮಾಡಿದ್ದಾರೆ. ಇಂದಿಗೂ ಸಹ ಹಲವಾರು ವಿದ್ವಾಂಸರು ದಕ್ಷಿಣ ಕನ್ನಡದ ಕಥೋಲಿಕರ ಕೊಡುಗೆ ಶಿಕ್ಷಣ ಹಾಗೂ ಇತರ ಕ್ಷೇತ್ರದಲ್ಲಿ ಸಂಶೋಧನೆ ಮಾಡಿದ್ದು ಪ್ರಕಟಿತ ಅಪ್ರಕಟಿತ ಗ್ರಂಥಗಳಾಗಿ ಹೊರಹೊಮ್ಮಿದೆ.

ಮಂಗಳೂರು ದರ್ಶನದ 2 ಸಂಪುಟಗಳು ಇಡೀ ಮಂಗಳೂರನ್ನು ಕುರಿತು ಸಮಗ್ರ ನಗರದ ಅಧ್ಯಯನವಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಹಿರಿಯರ ಪರಿಚಯ ಮಾತ್ರವಲ್ಲದೆ 200 ವರ್ಷದ ಇತಿಹಾಸವನ್ನು ಒಂದು ಚೌಕಟ್ಟಿನಲ್ಲಿ ವಿವರಿಸುವ ಒಂದು ಬೃಹತ್ ಗ್ರಂಥ ಇದಾಗಿದೆ. ಅಧ್ಯಾಯ 6 ಪುಟ 389 ರಿಂದ ಪುಟ 651 ರವರೆಗೆ ಮಂಗಳೂರಿನಲ್ಲಿ ಶಿಕ್ಷಣದ ಕುರಿತು ಹಲವಾರು ಲೇಖನಗಳಿವೆ. ಅದರಲ್ಲೂ ಮಿಶನರಿಗಳು ಪ್ರಾರಂಭಿಸಿದ ಜೊಚ್ಚಲ ವಿದ್ಯಾಸಂಸ್ಥೆಗಳ ಕುರಿತು ವಿಸ್ತಾರವಾದ ಮಾಹಿತಿ ಲಭ್ಯವಿದೆ. ನನ್ನ ಸಂಶೋಧನೆಯ ವ್ಯಾಪ್ತಿ ಇದೇ ವಿಷಯವಾಗಿದ್ದರಿಂದ ನಾನು ಅವಲೋಕಿಸಿದ ಕಾನ್ವೆಂಟ್‌ಗಳ ಹಳೇಯ ಸ್ಮರಣ ಸಂಚಿಕೆಗಳೊಂದಿಗೆ ಈ ಪುಸ್ತಕವು ನನ್ನ ಸಂಶೋಧನೆಗೆ ಅತ್ಯಮೂಲ್ಯವಾದ ಆಕರ ಗ್ರಂಥವಾಗಿದೆ.

ಡಾ॥ ಕೆ. ಶಾಂತಿ ಅವರ ಕೃತಿ 'Women in India Retrospect and Prospect' ಇದರಲ್ಲಿ ವೈದಿಕ ಕಾಲದಿಂದ ಇಂದಿನವರೆಗೆ ಮಹಿಳೆಯ ಸಾಮಾಜಿಕ ಮತ್ತು ಆರ್ಥಿಕ ಬದುಕನ್ನು ಕುರಿತು ವಿವರಿಸುವ ಅಧ್ಯಯನವಾಗಿದೆ. ಲಿಂಗಬೇಧ, ಮೂಢನಂಬಿಕೆಗಳು, ಮಹಿಳಾ ಸುರಕ್ಷತೆ, ಉದ್ಯೋಗ, ಆರೋಗ್ಯ, ಶೋಷಣೆ, ಸಮಾನತೆ ಇತ್ಯಾದಿ ವಿಚಾರಗಳನ್ನು ಒಳಪಡಿಸಿದ್ದಾರೆ. ಪ್ರಾಚೀನ ಭಾರತದಲ್ಲಿ ಮಹಿಳೆಯ ಸ್ಥಾನಮಾನ ಮತ್ತು ಬದಲಾಗುತ್ತಿದ್ದ ರಾಜಕೀಯ ವ್ಯವಸ್ಥೆಯಲ್ಲಿ ಹೆಣ್ಣು ಎದುರಿಸುವ ಸವಾಲುಗಳು ಹಾಗೂ ಸ್ವಾತಂತ್ರ್ಯದ ಪೂರ್ವ

ಮತ್ತು ಸ್ವಾತಂತ್ರ್ಯದ ನಂತರದ ಮಹಿಳೆಯ ಜೀವನ ಕ್ರಮ, ಪುರುಷ ಪ್ರಧಾನ ಸಮಾಜದಲ್ಲಿ ತಾನು ಎದುರಿಸಿಕೊಳ್ಳುವ ಅಸ್ಮಿತೆಯ ವಿಚಾರವನ್ನು ಇಲ್ಲಿ ಉಲ್ಲೇಖಿಸಿದ್ದಾರೆ.

ಕ್ರೀಸ್ಟೋಫರ್ ಝುಫ್ರಲೆಟ್ ಇವರ ಕೃತಿಯಾದ 'India Since 1950: Society Politics Economy and Culture' ಇದರಲ್ಲಿ 20ನೇ ಶತಮಾನದ ಕೊನೆಯ ದಶಕದಲ್ಲಿ ಕ್ರೈಸ್ತ ಸಮುದಾಯಗಳ ಚಟುವಟಿಕೆಯ ಕುರಿತು ಚರ್ಚಿಸುತ್ತಾರೆ. ಮುಖ್ಯವಾಗಿ ಮಿಶನರಿಗಳು ಭಾರತಕ್ಕೆ ಬಂದ ಸಂದರ್ಭ, ಚರ್ಚುಗಳ ಸ್ಥಾಪನೆ, ಬ್ರಿಟಿಷ್ ವಸಹಾತು ಕಾಲ ಮತ್ತು ಕ್ರೈಸ್ತ ಸಮುದಾಯದ ಬೆಳವಣಿಗೆ ಮತ್ತು ದೇಶ ಕಟ್ಟುವ ಪ್ರಕ್ರಿಯೆಯಲ್ಲಿ ಮಿಶಿನರಿಗಳ ಪಾತ್ರದ ಕುರಿತು ಉಲ್ಲೇಖಿಸುತ್ತಾರೆ.ಇವರ ಅಧ್ಯಯನದಲ್ಲಿ ಕ್ರೈಸ್ತ ಸಮುದಾಯವು ಹೇಗೆ ಭಾರತದ ಸಂಸ್ಕೃತಿಯನ್ನು ಮೈಗೂಡಿಸುತ್ತಾರೆ, ಕ್ರೈಸ್ತೇತರ ಜನರೊಂದಿಗೆ ಇವರು ಸ್ಪಂದಿಸಿದ ರೀತಿ ಮತ್ತು ತಮಗಿದ್ದ ಆಸ್ಮೀತೆಯ ಪ್ರಶ್ನೆಯನ್ನು ವಿವರವಾಗಿ ಬರೆಯುತ್ತಾರೆ.ಇದರ ಜೊತೆಗೆ ಮಂಗಳೂರು ಹಾಗೂ ಕರಾವಳಿ ಕರ್ನಾಟದಲ್ಲಿರುವ ಸರಿಸುಮಾರು 200 ಕ್ಕೂ ಹೆಚ್ಚು ಧರ್ಮ ಭಗಿನಿಯರ ಸಭೆಗಳು ಸಕ್ರಿಯವಾಗಿದ್ದು ಸಹ ಅವರು ಪ್ರಕಟಿಸುವ ಪುಸ್ತಕಗಳು ಕೇವಲ ಅವರ ಸಭೆಗೆ ಸೀಮಿತವಾಗಿದ್ದು ಹೊರ ಜಗತ್ತಿಗೆ ಇದರ ಬಗ್ಗೆ ಇರುವ ಮಾಹಿತಿ ಕಡಿಮೆ. ಹೀಗೆ, ಚರಿತ್ರಾಕಾರರಿಗೆ ಅನ್ವೇಷಣೆ ನಡೆಸಲು ವಿಶಾಲವಾದ ಭೂಪ್ರದೇಶದ ಅವಕಾಶ ತೆರೆದಿರುತ್ತದೆ. ಅದೃಷ್ಟವಶಾತ್, ಲೋಕೋಪಕಾರಿ ವಿಷಯಗಳ ಅಧ್ಯಯನ, ಮಹಿಳಾ ಚರಿತ್ರೆ ಮತ್ತು ಮಹಿಳಾ ಶಿಕ್ಷಣದ ಕುರಿತಾದ ಅನೇಕ ವಿದ್ವಾಂಸರ ಬರಹಗಳು ಶಿಕ್ಷಣ ಸೇವೆಯಲ್ಲಿನ ಮಹಿಳೆಯರ ಲೋಕ ಸೇವೆಯ ಕಥೆಗಳನ್ನು ಪುನರ್ ರಚಿಸಲು ಸಹಾಯಕವಾಗಬಹುದು. ನೋಬರ್ಟ್ ಮಸ್ಕರೇಸ್ಹಸ್‌ರವರ ಮಹಾ ಪ್ರಬಂಧ 'ದಕ್ಷಿಣ ಕನ್ನಡ ಜಿಲ್ಲೆಯ ಸಾಮಾಜಿಕ ಬದಲಾವಣೆಯಲ್ಲಿ ಕ್ರೈಸ್ತ ಸಂಸ್ಥೆಗಳ ಪಾತ್ರ'ವು ಎಲ್ಲಾ ಶೈಕ್ಷಣಿಕ ಹಾಗೂ ಅನೌಪಚಾರಿಕ ಸಂಸ್ಥೆಗಳ ಕುರಿತು ಸುದೀರ್ಘವಾದ ಅಧ್ಯಯನವನ್ನು ಮಾಡಿದ್ದಾರೆ.

1.4 ಗುರಿ ಮತ್ತು ಉದ್ದೇಶಗಳು

ಈ ಪ್ರಬಂಧದ ಮುಖ್ಯ ಉದ್ದೇಶ ಅಪೊಸ್ಟೋಲಿಕ್ ಕಾರ್ಮೆಲ್ ಸಭೆ ಭಾರತದಲ್ಲಿ ಹೇಗೆ ಶಿಕ್ಷಣವನ್ನು ಅವರ ಧ್ಯೇಯೋದ್ಧೇಶವಾಗಿ ಮುಖ್ಯವಾಗಿ ನಗರದ ಬಡ ಮಹಿಳೆಯರ ಮಧ್ಯೆ ಶಿಕ್ಷಣ ಸೇವೆಯನ್ನು ಸಕಾರಗೊಳಿಸಿತು ಎಂಬುದನ್ನು ಅಧ್ಯಯನ ಮಾಡುವುದಾಗಿದೆ. ಈ ಉದ್ದೇಶವನ್ನು ಹೇಗೆ ಸಾಧಿಸಿದರೆಂಬುದನ್ನು ಇದು ಪರಿಶೋಧಿಸುತ್ತದೆ. ಈ ಸಭೆಯ ಶಿಕ್ಷಣ ಯೋಜನೆಗಳು ಒಂದೆಡೆ ಗ್ರಾಮೀಣ ಪ್ರದೇಶದ ಶಿಕ್ಷಣ ಕ್ರಮಗಳನ್ನು ಮತ್ತು ಇನ್ನೊಂದೆಡೆ ಮಹಿಳಾ ಬಂಧವಿಮೋಚನೆ ಹಾಗೂ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಹೇಗೆ ಸಹಕಾರಿಯಾಗಿವೆ ಎಂಬುದನ್ನು ವಿಶ್ಲೇಷಿಸುವ ಪ್ರಯತ್ನವನ್ನೂ ಮಾಡಲಾಗಿದೆ. ಮಹಿಳೆಯರ ಜೀವನ

ಶೈಲಿಯ ಮೇಲೆ ಈ ಶಿಕ್ಷಣ ಸೇವೆಯ ಪ್ರಭಾವ ಮಾಡಿದೆ ಮತ್ತು ಆ ಮೂಲಕ ಹಿಂದೆ ಮನೆಯ ನಾಲ್ಕು ಗೋಡೆಗಳ ಮಧ್ಯೆ ಬಂಧಿತರಂತೆ ಜೀವಿಸುತ್ತಿದ್ದ ಮಹಿಳೆಯರು ಯಾವ ರೀತಿ ಹೊರಬಂದು ದೇಶದ ಬೆಳವಣಿಗೆಯಲ್ಲಿ ಪಾತ್ರವಹಿಸಿದರು ಮಾತ್ರವಲ್ಲದೆ ಮಹಿಳೆಯರು ಹೇಗೆ ಕುಟುಂಬವನ್ನು ಅಭಿವೃದ್ಧಿ ಪಡಿಸಿದರು ಮತ್ತು ಅಂತಿಮವಾಗಿ ದೇಶ ಕಟ್ಟುವಲ್ಲಿಯೂ ಅವರ ಪಾತ್ರವೇನು ಎಂಬುದನ್ನೂ ಈ ಪ್ರಬಂಧ ಚರ್ಚಿಸುವ ಪ್ರಯತ್ನ ಮಾಡಿದೆ. ಈ ಪೂರಕ ಕೆಲಸದೊಂದಿಗೆ ಪರೋಪಕಾರಿ ಸೇವೆಯಲ್ಲಿ ಮಹಿಳೆಯರ ಅನುಭವವನ್ನು ವರ್ಣಿಸುವ ಪ್ರಯತ್ನವನ್ನು ಮಾಡಿದೆ.

1. 5 ಸಂಶೋಧನಾ ವಿಧಾನ

ಅಪ್ರಸುತ್ತ ಅಧ್ಯಯನವು ಅಪೋಸ್ತಲಿಕ್ ಕಾರ್ಮೆಲ್ ಸಭೆಯ ಕಾನ್ವೆಂಟ್‌ಗಳಲ್ಲಿ ದೊರಕುವ ದಾಖಲೆಗಳು ಹಾಗೂ ವರದಿಗಳನ್ನು ಹೆಚ್ಚಾಗಿ ಅವಲಂಬಿಸಿದ್ದು ಪ್ರಪ್ರಥಮ ಬಾರಿಗೆ ಧರ್ಮಗಳಿಗೆ ಮಾತ್ರ ಚಾಲ್ತಿಯಲ್ಲಿದ್ದ ಅಕರಗಳನ್ನು ಅಧ್ಯಯನದ ದೃಷ್ಟಿಯಿಂದ ಉಪಯೋಗಿಸಲಾಗಿದೆ. ವಸಾಹತು ಸರಕಾರದ ಆಡಳಿತದಲ್ಲಿ ಶಿಕ್ಷಣ ವ್ಯವಸ್ಥೆ, ಶಿಕ್ಷಣದ ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳುವ ನಿಟ್ಟಿನಿಂದ ತಮಿಳುನಾಡು ಪತ್ರಾಗಾರ, ಬೆಂಗಳೂರಿನ ಅಪೋಸ್ತಲಿಕ್ ಜರ್ನಲೇಟ್ ಹೌಸ್ ಪತ್ರಾಗಾರ, ಮಂಗಳೂರಿನ ಕರ್ನಾಟಕ ತಿಯೊಲಾಜಿಕಲ್ ಕಾಲೇಜಿನ ಪತ್ರಾಗಾರ ಹಾಗೂ ಜಿಲ್ಲೆಯ ಇತರ ಸಂಸ್ಥೆಗಳಿಗೆ ಭೇಟಿ ನೀಡಿ ಶಿಕ್ಷಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಶಿಕ್ಷಣ ಸಂಸ್ಥೆಗಳ ವಿವರಣಾ ಪುಸ್ತಕಗಳು, ವಾರ್ಷಿಕ ವರದಿಗಳು, ಮೀಟಿಂಗ್ ಠರಾವುಗಳು, ಸಂಬಳ ಬಟವಾಡೆ ಬಿಲ್ಲುಗಳು, ದಾಖಲಾತಿ ಮತ್ತು ಹಾಜರಾತಿ ರಿಜಿಸ್ಟರ್‌ಗಳು, ಸಿಬಂಧಿ ವರ್ಗದ ವೈಯಕ್ತಿಕ ಕಡತಗಳು ಇವುಗಳಲ್ಲಿ ಒಳಗೊಂಡಿವೆ. ಮಂಗಳೂರು ಹಾಗೂ ಉಡುಪಿ ಜಿಲ್ಲೆಯಲ್ಲಿ ಇರುವಂತಹ ವಿವಿಧ ಕಾರ್ಮೆಲ್ ಸಭೆಯ ಶಾಲೆ ಕಾಲೇಜುಗಳಿಗೆ ಬೇಟಿಯಾಗಿ 100 ವರ್ಷಕ್ಕೂ ಹಿಂದಿನ ರಿಜಿಸ್ಟರ್ ಪುಸ್ತಕಗಳು, ಛಾಯಾಚಿತ್ರಗಳನ್ನು ಪರಿಶೀಲಿಸಿ ಅಧ್ಯಯನದ ದೃಷ್ಟಿಯಿಂದ ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಲಾಗಿದೆ. ವಿಷಯ ಕಲೆಹಾಕುವಲ್ಲಿ ವ್ಯಕ್ತಿ ಸಂದರ್ಶನವನ್ನು ಪ್ರಾಮುಖ್ಯ ವಿಧಾನವಾಗಿ ಬಳಸಲಾಗಿದೆ. ಸಾಮಾಜಿಕ ಪರಿವರ್ತನೆಯ ಅಧ್ಯಯನವನ್ನು ಮಾಡುವ ಸಂದರ್ಭದಲ್ಲಿ ಬಹಳಷ್ಟು ಹಳೆಯ ವಿದ್ಯಾರ್ಥಿಗಳನ್ನು ಮತ್ತು 1948 –1970ರ ಅವದಿಯ ಶಾಲೆಗಳಲ್ಲಿ ಶಿಕ್ಷಕರನ್ನು ಭೇಟಿಯಾಗಿ ಅವರಿಂದ ಸಂದರ್ಶನವನ್ನು ಪಡೆದು ಮಾಹಿತಿಯನ್ನು ಕಲೆ ಹಾಕಲಾಗಿದೆ. ಈ ಅಧ್ಯಯನದ ವಿಸ್ತೀರ್ಣತೆ 100 ವರ್ಷಗಳನ್ನು ಒಳಗೊಂಡಿದ್ದರಿಂದ ಮಾಹಿತಿಯನ್ನು ಪಡೆಯಲು ಪ್ರಶ್ನಾವಳಿಯನ್ನು ತಯಾರಿಸಿದ್ದು, ಅದರಿಂದ ಮಾಹಿತಿ ಪಡೆಯುಲು ಪ್ರಶ್ನಾವಳಿಯನ್ನು ತಯಾರಿಸಿದ್ದು, ಅದರಿಂದ ಪಡೆದ ಉತ್ತರಗಳಿಂದ ಸಮಾಜವನ್ನು ಪರಿವರ್ತಸುವಲ್ಲಿ ಸಭೆ ಕಾರ್ಯನಿರ್ವಹಿಸಿತು ಎಂಬುದನ್ನು

ಫಲಾನುಭವಿಗಳ ದೃಷ್ಟಿಕೋನದಿಂದ ನೋಡಲಾಗಿದೆ. ಈ ಅಧ್ಯಯನವು ಕೇವಲ ಅಪೊಸ್ಟೋಲಿಕ್ ಕಾರ್ಮೆಲ್ ಸಭೆಯ ಜೊತೆಗೆ 19ನೇ ಶತಮಾನದಲ್ಲಿ ವಿವಿಧ ಮಿಶನರಿ ಸಭೆಗಳು ಹಾಗೂ ಅಂದಿನ ವಸಾಹತುಶಾಹಿ ಸರಕಾರ ಒಟ್ಟಾರೆಯಾಗಿ ಶಿಕ್ಷಣದ ಬಗ್ಗೆ ತೆಗೆದುಕೊಂಡ ನಿಲುವನ್ನು ಸಹಾ ಸೇರಿಸಿ ಅಧ್ಯಯನವನ್ನು ಮಾಡಲಾಗಿದೆ.

1. 6 ಇತಿಮಿತಿಗಳು

ಸಂಶೋಧನಾ ಪ್ರಪಂಚ ವಿಶಾಲವಾಗಿರುವುದರಿಂದ, ಈ ಪ್ರಭಂದ ಕರಾವಳಿ ಕರ್ನಾಟಕದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅಪೊಸ್ತೋಲಿಕ್ ಕಾರ್ಮೆಲ್ ಸಭೆಯ ಸೇವೆಗೆ ಮಾತ್ರ ಸೀಮಿತಗೊಂಡಿದೆ. ಮದರ್ ಮೇರಿ ವೆರೋನಿಕ ಆಫ್ ದ ಪ್ಯಾಶನ್ ಇವರ ದೃಷ್ಟಿಕೋನದಲ್ಲಿ ಭಾರತ ಮತ್ತು ಹೊರದೇಶದಲ್ಲಿನ ಅಪೊಸ್ತೋಲಿಕ್ ಕಾರ್ಮೆಲ್ ಶಿಕ್ಷಣ ಸೇವೆಯನ್ನು ತಿಳಿದುಕೊಳ್ಳುವುದಕ್ಕೆ ಈ ಅಧ್ಯಯನವು ಆಧಾರಿತವಾಗಿದೆ. ಇದನ್ನು ಪ್ರಯೋಗಾತ್ಮಕ ಅಧ್ಯಯನ ಮತ್ತು ಪಠ್ಯಾಧಾರಿತ ಅಧ್ಯಯನದ ಮೂಲಕ ವಿಶ್ಲೇಷಿಸಲಾಗಿದೆ. ಶಿಕ್ಷಣದ ಹೊರತಾಗಿ ಮಿಶನರಿ ಸೇವೆಯ ಇತರ ಕೊಡುಗೆಗಳ ವಿಸ್ತೃತ ಚರಿತ್ರಾ ಅವಲೋಕನವು ಈ ಪ್ರಭಂದ ಒಳಗೊಂಡಿಲ್ಲ.

1. 8 ಅಧ್ಯಾಯ ವಿನ್ಯಾಸ

ಇಡೀ ಪ್ರಬಂಧವು 6 ಅಧ್ಯಾಯಗಳನ್ನೊಳಗೊಂಡಿದೆ.ಮೊದಲ ಅಧ್ಯಾಯ ಜಿಲ್ಲೆಗೆ ಮಿಶನರಿಗಳ ಆಗಮನಕ್ಕೆ ಕೆನರಾದ ಚಾರಿತ್ರಿಕ ಹಿನ್ನೆಲೆಯನ್ನೊಳಗೊಂಡ ಪ್ರಸ್ತಾವನೆಯಾಗಿರುತ್ತದೆ. ಇದರಲ್ಲಿ ಸಮಸ್ಯೆಗಳ ಬಗೆಗಿನ ಉಲ್ಲೇಖಗಳು. ಸಾಹಿತ್ಯದ ಅಧ್ಯಯನ, ಗುರಿ ಮತ್ತು ಉದ್ದೇಶ, ಅನ್ವೇಶಣೆಯ ಕ್ರಮವಿಧಾನ ಮತ್ತು ಇತಿಮಿತಿಗಳ ವಿವರಗಳನ್ನು ನೀಡಲಾಗಿದೆ.

ಎರಡನೇ ಅಧ್ಯಾಯ ಸೌತ್ ಕೆನರಾಕ್ಕೆ ಕ್ರೈಸ್ತ ಮಿಶನರಿಗಳ ಆಗಮನದ ಕುರಿತು ವಿವರಿಸುವಂತಾದ್ದಾಗಿದೆ. ಈ ಅಧ್ಯಾಯದಲ್ಲಿ ಈ ಮಣ್ಣಿಗೆ ಕಾಲಿರಿಸಿದ ವಿವಿಧ ಕ್ರಿಶ್ಚಿಯನ್ ಮಿಶನರಿಗಳ ಸಂಕ್ಷಿಪ್ತ ವಿವರ, ಮುಖ್ಯವಾಗಿ ಕೆಥೋಲಿಕ ಕ್ರೈಸ್ತ ಮಿಶನ್, ಪ್ರೊಟೆಸ್ಟೆಂಟ್ ಮಿಶನ್, ಭಗಿನಿಯರ ಮಿಶನ್ ಮತ್ತು ಜಿಲ್ಲೆಯಲ್ಲಿ ಅದರ ಪರಿಣಾಮದ ಕುರಿತಾಗಿ ಚರ್ಚಿಸಲಾಗಿದೆ.

ಮೂರನೇ ಅಧ್ಯಾಯ "ಅಪೊಸ್ತೋಲಿಕ್ ಕಾರ್ಮೆಲ್ ಕಾಂಗ್ರಿಗೇಶನ್‌ನ ಆಗಮನ" ಅವರ ಪ್ರಾರಂಭಿಕ ಚರಿತ್ರೆ, ಸ್ಥಾಪಕಿ ಮದರ್ ವೆರೋನಿಕ ಅವರ ಜೀವನ ಮತ್ತು ಸಾಧನೆ, ಪ್ರಾರಂಭದಲ್ಲಿ ಅವರು ಎದುರಿಸಬೇಕಾಗಿದ್ದ ಸವಾಲುಗಳು ಮತ್ತು ಇತಿಮಿತಿಗಳು. ಮಹಿಳಾ ಶಿಕ್ಷಣಕ್ಕೆ ಸಂಸ್ಥಾಪಕ ಸುಪೀರಿಯರ್ ಜನರಲ್ ಅವರ ಕೊಡುಗೆ ಮತ್ತು ಸಂಸ್ಥಾಪಕಿಯ ಸೇವೆಯನ್ನು ಮುಂದುವರಿಸಿದ ಮದರ್ ಮೇರಿ ಡೆಸ್ ಆಗ್ನೆಸ್. ಮದರ್ ಆಲೊಯ್ಸಿಯಾ.

ಮದರ್ ಎಮ್. ಜೊಸೆಫಿನ್, ಮದರ್ ಎನನ್ಸಿಯಾಟ, ಮದರ ಸಿಲ್ವಿಯಾ, ಮದರ್ ತೆದೋಸಿಯಾ ಮತ್ತು ಮದರ್ ಕಾರ್ಮೆಲಿಟ ಇವರುಗಳ ಮಹಿಳಾ ಸೇವೆಯ ಅನುಭವದ ವಿಷಯಗಳನ್ನು ವಿಶ್ಲೇಷಿಸುವಂತಾದ್ದಾಗಿದೆ.

ನಾಲ್ಕನೇ ಅಧ್ಯಾಯವು ಕಾರ್ಮೆಲ್ ಸಭೆ ಮತ್ತು ಸೌತ್ ಕೆನರಾದಲ್ಲಿ ಮಹಿಳಾ ಶಿಕ್ಷಣ ಇವುಗಳ ಆಳವಾದ ಅಧ್ಯಯನದ ಜತೆಗೆ 19ನೇ ಶತಮಾನದಲ್ಲಿ ಮಹಿಳೆಯರ ಪರಿಸ್ಥಿತಿ, ಕಾರ್ಮೆಲ್ ಸಂಸ್ಥೆಗಳ ಸಂಸ್ಥಾಪಕರಾದ ಕಾರ್ಮೆಲೈಟರ ಆಗಮನಕ್ಕೆ ಪೂರ್ವದಲ್ಲಿ ಕೆನರಾದಲ್ಲಿ ಮಹಿಳಾ ಶಿಕ್ಷಣ ಪರಿಸ್ಥಿತಿ, ಇದರ ಆಳವಾದ ವಿಚಾರಗಳನ್ನು ಪ್ರಸ್ತಾಪಿಸುವಂತಾದ್ದಾಗಿದೆ. ಅಧ್ಯಯನವು ಭಾರತದ ಪಶ್ಚಿಮ ಕರಾವಳಿಯಲ್ಲಿ ಮೊದಲ ಮಹಿಳಾ ಕಾಲೇಜು ಆಗಿ ಸ್ಥಾಪನೆಗೊಂಡ ಸೈಂಟ್ ಆಗ್ನೆಸ್ ಕಾಲೇಜಿನ ಉಗಮ ಮತ್ತು ಈ ಹೆಸರಾಂತ ಸಂಸ್ಥೆಯ ಚರಿತ್ರೆಯನ್ನೂ ಸಂಕ್ಷಿಪ್ತವಾಗಿ ನೀಡುತ್ತದೆ. ಮಂಗಳೂರು ಆಸುಪಾಸಿನಲ್ಲಿ ಸ್ಥಾಪಿತವಾದ ಶಿಕ್ಷಣ ಸಂಸ್ಥೆಗಳಾದ ಸೈಂಟ್ ಆನ್ಸ್ ಟೀಚರ್ಸ್ ಟ್ರೈನಿಂಗ್ ಇನ್ಸ್ಟಿಟ್ಯೂಟ್, ಸೈಂಟ್ ಆನ್ಸ್ ಕಾಲೇಜ್ ಆಫ್ ಎಜುಕೇಶನ್ ಮತ್ತು ಇತರ ಸಂಸ್ಥೆಗಳ ವಿವರವಾದ ವಿಚಾರಗಳು ಈ ಅಧ್ಯಯನದಲ್ಲಿ ಒಳಗೊಂಡಿವೆ.

ಐದನೇ ಅಧ್ಯಾಯ ಅಸಾಂಪ್ರದಾಯಕ ಶಿಕ್ಷಣಕ್ಕೆ ಪ್ರಾಯೋಗಿಕ ಮಾರ್ಗಗಳು ಮತ್ತು ಜಿಲ್ಲೆಯ ಹಾಗೂ ದೇಶದ ಸಮಗ್ರ ಸಾಮಾಜಿಕ ಬದಲಾವಣೆಗೆ ಸೈಂಟ್ ಆನ್ಸ್ ಸ್ಪೆಷಲ್ ಸ್ಕೂಲ್, ಕ್ರೀಯಾತ್ಮಕವಾಗಿ ಪಟ್ಟಣದಿಂದ ಹಳ್ಳಿಗಳಿಗೆ ಶಿಕ್ಷಣ ಸೇವೆಯ ಸ್ಥಳಾಂತರ, ವೃತ್ತಿಪರ ತರಬೇತಿ ಕೇಂದ್ರಗಳು, ಶಾಲೆ ಮತ್ತು ಕಾಲೇಜುಗಳಲ್ಲಿನ ಶಿಕ್ಷಣ ವಿಧಾನ, ಕಡ್ಡಾಯ ಮೌಲಧಾರಿತ ಶಿಕ್ಷಣದ ತರಗತಿಗಳ ಮೂಲಕ ಮನ ನಾಟುವಂತ ಮೌಲ್ಯಾಧಾರಿತ ಶಿಕ್ಷಣ ಮತ್ತು ಈ ಭಗಿನಿಯರು ಇತರ ವಿಧಾನಗಳನ್ನು ಅನುಸರಿಸುವ ಮೂಲಕ ಶಿಕ್ಷಣ ಮಟ್ಟ ಉನ್ನತೀಕರಣಗೊಂಡಿರುವ ಸಂಗತಿಗಳನ್ನು ಚರ್ಚಿಸಲಾಗಿದೆ. ಮಾತ್ರವಲ್ಲದೆ ಈ ಶಿಕ್ಷಣ ಸಂಸ್ಥೆಗಳು ಯಾವ ರೀತಿ ಈ ಸಾಧನೆಯಲ್ಲಿ ಮುಂದಿನ ಪೀಳಿಗೆಗೆ ಶಿಕ್ಷಕರನ್ನು ತಯಾರಿಸುವಲ್ಲಿ ಮತ್ತು ಅವರು ಇಂದೂ ದೇಶದ ವಿವಿಧ ಭಾಗಗಳಲ್ಲಿ ಸೇವಾ ನಿರತರಾಗಿದ್ದು ಜನರ ಅದರಲ್ಲೂ ಮುಖ್ಯವಾಗಿ ಮಹಿಳೆಯ ಜೀವನವನ್ನು ರೂಪಾಂತರಗೊಳಿಸುವಲ್ಲಿ ಸಫಲವಾಯಿತು ಎಂಬುದನ್ನು ತಿಳಿದುಕೊಳ್ಳಲೂ ಪ್ರಯತ್ನಿಸಲಾಗಿದೆ.

ಅಂತಿಮ ಅಧ್ಯಾಯವು ಸಮಾಪ್ತಿಯ ಅಧ್ಯಾಯವಾಗಿದ್ದು, ಇತರ ಎಲ್ಲಾ ಅಧ್ಯಾಯಗಳನ್ನು ಕ್ರೋಢೀಕರಿಸಿ ಅಂತಿಮ ಹಂತಕ್ಕೆ ತರಲು ಮತ್ತು ಕೊನೆಯದಾಗಿ ಈ ಅಧ್ಯಯನದ ಉದ್ದೇಶ ಮತ್ತು ಅಧ್ಯಯನದ ಸಮರ್ಥನೆ. ಈ ಸಭೆಯು ಜಿಲ್ಲೆಗೆ ಬಿಟ್ಟುಹೋಗಿರುವ ಮಹಾಕೊಡುಗೆ ಮತ್ತು ಅದರ ಪರಿಣಾಮ ಹಾಗೂ ಆ ಮೂಲಕ ಹೇಗೆ ಅದು ವಿದ್ಯಾರ್ಥಿಗಳನ್ನು ಸಾಮಾಜಿಕ ಬದಲಾವಣೆಯ ನಿಯೋಗಿಗಳಾಗಲು ಕಾರಣವಾಯಿತು ಎಂಬುದನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಕಾರ್ಮೆಲ್ ಸಭೆ ಮತ್ತು ನಿದಿ ಅವರ ಶಿಕ್ಷಣವು

ಮಂಗಳೂರಿನ ಮಹಿಳೆಯರ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಒಂದು ವಿಶಿಷ್ಟ ಸ್ಥಾನವನ್ನು ಹೊಂದಿದೆ. ಮಹಿಳೆಯರಿಗೆ ವಿಮೋಚನೆ, ಮತ್ತು ಸ್ವಾತಂತ್ರ್ಯ ಪ್ರಜ್ಞೆಯನ್ನು ನೀಡುವುದು ಅವರ ಮುಖ್ಯ ಗಮನವಾಗಿತ್ತು. ಅಪೋಸ್ಟೋಲಿಕ್ ಕಾರ್ಮೆಲ್ ಶಾಲೆಗಳು ಮತ್ತು ಕಾಲೇಜುಗಳು ಒಬ್ಬರ ಸ್ವಂತ ಆಲೋಚನೆಗಳ ಬೆಳವಣಿಗೆಗೆ ಪರಿಣಾಮಕಾರಿಯಾಗಿ ಕೊಡುಗೆ ನೀಡುತ್ತಿವೆ. ಲಿಂಗ ಅಸಮಾನತೆ ಮತ್ತು ಸಾಮಾಜಿಕ ನಿಷೇಧಗಳ ಆಧಾರದ ಮೇಲೆ ಪೂರ್ವಾಗ್ರಹಗಳನ್ನು ಮುರಿಯಲು ಮಹಿಳೆಯರನ್ನು ಪ್ರೇರೇಪಿಸುತ್ತದೆ. ಕರಾವಳಿ ಕರ್ನಾಟಕದಲ್ಲಿ ಮತ್ತು ವಿಶೇಷವಾಗಿ ಮಂಗಳೂರಿನಲ್ಲಿ ಈ ಶಿಕ್ಷಣ ಸಂಸ್ಥೆಗಳು 150 ವರ್ಷಗಳಲ್ಲಿ ಬೆಳೆದಿರುವ ಹಾದಿಯನ್ನು ನೋಡಿದರೆ ಈ ಅಂಶವನ್ನು ಸಾಬೀತುಪಡಿಸುವ ಸ್ಪಷ್ಟ ಸೂಚನೆಯಾಗಿದೆ.

ಅಧ್ಯಾಯ : 2

ಕೆನರಾದಲ್ಲಿ ಕ್ರೈಸ್ತ ಮಿಶನರಿಗಳು: ಒಂದು ಅವಲೋಕನ

2.1 ಐತಿಹಾಸಿಕ ದೃಷ್ಟಿಕೋನ

2.2 ಕೆಥೋಲಿಕ ಕ್ರಿಶ್ಚಿಯನ್ ಮಿಶನ್

2.3 ಕೆನರಾದಲ್ಲಿ 19ನೇ ಶತಮಾನದಲ್ಲಿ ಕ್ರೈಸ್ತ ಧರ್ಮ

2.4 ಭಗಿನಿಯರ ಮಿಶನರಿ ಸೇವೆ

2.5 ಮಿಶನರಿ ಚಟುವಟಿಕೆಗಳ ಪರಿಣಾಮ

ಅಧ್ಯಾಯ : 2

ಕೆನರಾದಲ್ಲಿ ಕ್ರೈಸ್ತ ಮಿಶನರಿಗಳು: ಒಂದು ಅವಲೋಕನ

2.1. ಐತಿಹಾಸಿಕ ದೃಷ್ಟಿಕೋನ

ದಕ್ಷಿಣ ಭಾರತಕ್ಕೆ ಪಾಶ್ಚಾತ್ಯ ಮಿಶನರಿಗಳ ಆಗಮನಕ್ಕೆ ಬಹಳಷ್ಟು ಪೂರ್ವದಲ್ಲಿಯೇ, ನಮ್ಮ ಯುಗದ ಮೊದಲ ಶತಮಾನದಲ್ಲಿಯೇ ಭಾರತದಲ್ಲಿ (ಮಲಬಾರ್) ಕ್ರೈಸ್ತ ಮಿಶನರಿ ಸಂತ ಥಾಮಸ್ ಅಲ್ಪ ಸಂಖ್ಯಾತರನ್ನು ಒಗ್ಗೂಡಿಸಿ ಮೊದಲ ಕ್ರೈಸ್ತ ದೇವಾಲಯವನ್ನು ಸ್ಥಾಪಿಸಿದ ಎಂದು ನಂಬಲಾಗಿದೆ.[1] ಮಲಬಾರಿನ ರಾಜನು ಸಂತ ಥಾಮಸನ ಕ್ರೈಸ್ತರಿಗೆ ಬೇಕಾದಷ್ಟು ಭೂಮಿಯನ್ನು ಕೊಟ್ಟು ಅವರಿಗೆ ರಾಜಮನೆತನದ ಗೌರವವನ್ನು ಕೊಟ್ಟನು ಮಾತ್ರವಲ್ಲದೆ ಅನುದಾನ ಹಾಗೂ ಗೌರವವನ್ನು ತಾಮ್ರದ ಪಲಕಗಳನ್ನು ಕೆತ್ತಿಸಿದನು. ಸ್ಥಳೀಯರು ಬಹುಬೇಗನೇ ಹೊಸ ಸಾಮಾಜಿಕ-ಆರ್ಥಿಕ ಜೀವನಕ್ಕೆ ಹೊಂದಿಕೊಂಡರು ಮತ್ತು ಶೀಘ್ರವಾಗಿ ಇತರ ಪ್ರಬಲ ಸಮುದಾಯದವರಾದ ನಂಬೂದಿರಿ ಮತ್ತು ನಾಯರ್ ಇವರಿಗೆ ಸರಿಸಮಾನರಾದರು. ಯಾವುದೇ ಪರಿಸರಕ್ಕೆ ಹೊಂದಿಕೊಳ್ಳುವುದು ಕೈಸ್ತರ ಒಂದು ಗುಣವಾಗಿದ್ದು ಮತ್ತು ಇದು ದಕ್ಷಿಣ ಭಾರತದಲ್ಲಿ ಕ್ರೈಸ್ತ ಯುಗದ ಆರಂಭಿಕ ಶತಮಾನಗಳಲ್ಲಿ ಸತ್ಯವಾಗಿದೆ.

ಪಶ್ಚಿಮ ಯುರೋಪಿನ ರಾಷ್ಟ್ರಗಳ ಅನ್ವೇಷಣಾ ಸಮುದ್ರ ಪರ್ಯಟನೆಯ ಪರಿಣಾಮವಾಗಿ ಹದಿನೈದನೇ ಶತಮಾನದ ದ್ವಿತೀಯಾರ್ಧ ಭಾಗವು ವಿಶ್ವದ ಇತಿಹಾಸದಲ್ಲಿ ಪ್ರಸಿದ್ಧವಾದ ಸಮಯ ಯಾಕಂದರೆ ಇದರ ಪರಿಣಾಮವಾಗಿ ಅಮೇರಿಕಾ, ಆಫ್ರಿಕಾ ಮತ್ತು ಏಷ್ಯಾದಲ್ಲಿ ವಸಾಹತು ಸಾಮ್ರಾಜ್ಯಗಳು ಸ್ಥಾಪನೆಗೊಂಡವು, ಇದರಲ್ಲಿ ಸ್ಪೇನ್ ಮತ್ತು ಪೋರ್ಚುಗಲ್ ಮೂಲ ಪ್ರವರ್ತಕರೆನಿಸಿಕೊಂಡವು. ವ್ಯಾಪಾರ ವಹಿವಾಟಿಗಾಗಿ ಭಾರತ ದೇಶಕ್ಕೆ ಒಂದು ಹೊಸ ಮಾರ್ಗವನ್ನು ಹುಡುಕುವುದು ಇದರ ಹಿಂದಿನ ಉದ್ದೇಶವಾಗಿತ್ತು.

ಕೆ.ಎಂ. ಪಣಿಕ್ಕರ್ ಹೇಳುವಂತೆ, ಪೋರ್ಚುಗೀಸ್ ರಾಜರು ಈ ಸೇವೆಗೆ ಸಹಾಯ ಮಾಡುವುದು ಒಂದು ಪವಿತ್ರ ಕರ್ತವ್ಯವೆಂದು ತಿಳಿದು ಕ್ರಿಸ್ತನ ಸುವಾರ್ತೆಯನ್ನು ಪಸರಿಸುವ ಸೇವೆಗೆ ಎಲ್ಲಾ ರೀತಿಯ ಸಹಾಯವನ್ನು ಮಾಡುತ್ತಿದ್ದರು. ಪೋರ್ಚುಗೀಸ್ ಮತ್ತು ಸ್ಪೇನ್‌ನ ಕ್ರೈಸ್ತರಲ್ಲಿ ತುಂಬಾ ಮೂಲಭೂತ ವ್ಯತ್ಯಾಸಗಳಿದ್ದಾಗ್ಯೂ, ಮುಂದಿನ ದಿನಗಳಲ್ಲಿ ಸ್ವಲ್ಪ ಸಂಕೀರ್ಣತೆ ಗೋಚರವಾದರೂ ಜನರು ಹೊಸ ಧರ್ಮೀಯ ಅನನ್ಯತೆಗೆ ಬೇಗನೆ ಹೊಂದಿಕೊಂಡರು

ಪೋರ್ಚುಗೀಸರ ಆಗಮನದಿಂದ ಪ್ರೇರಿತರಾಗಿ ಬಹಳಷ್ಟು ಮಿಶನರಿಗಳು ಏಶಿಯಾಗೆ ಬಂದರು.ಇವರಲ್ಲಿ ಮಧ್ಯಕಾಲೀನ ಕಾಲದಲ್ಲಿ ಮುಖ್ಯವಾದವರು ಜೆಸುವಿತರು. ಇವರು "ದ ಸೊಸೈಟಿ ಆಫ್ ಜೀಸಸ್" ಸಂಸ್ಥಾಪಕ ಇಗ್ನೇಶಿಯಸ್ ಲೊಯೊಲ್ಲಾ ಇವರ ಪ್ರೇರಣೆಯಿಂದ ಕ್ರಿಸ್ತನ ಸಂದೇಶ ಪ್ರಸರಣಾ ಸೇವೆಯ ಉದ್ದೇಶಕ್ಕಾಗಿಯೇ ಭಾರತಕ್ಕೆ ಪ್ರಯಾಣ ಬೆಳೆಸಿದರು. ಇದು ಉಪಖಂಡದ ದಕ್ಷಿಣ-ಪಶ್ಚಿಮ ಮತ್ತು ದಕ್ಷಿಣ-ಪೂರ್ವ ಭಾಗಕ್ಕೆ ಅದರಲ್ಲೂ ತೀರಾ ಕನಿಷ್ಠ ವಿದ್ಯೆ ಹೊಂದಿರುವ ಜನರಿಗೆ ಸೀಮಿತವಾಗಿತ್ತು.

ಮೊಗಲರ ಆಳ್ವಿಕೆಯ ಕಾಲದಲ್ಲೂ ಕ್ರೈಸ್ತ ಧರ್ಮದ ಉಪಸ್ಥಿತಿ ಹೆಚ್ಚು ಪ್ರಭಾವಿಯಾಗಿತ್ತು. ಅಕ್ಬರ್ ಚಕ್ರವರ್ತಿಯು ವಿದ್ಯಾಸಂಪನ್ನ ಕ್ರೈಸ್ತ ಮಿಶನರಿಗಳನ್ನು ತನ್ನ ಸ್ವಂತ ಧರ್ಮ "ದಿನ್-ಇಲಾಹಿ"ಯ ಕ್ರಮನಿಯಮಗಳನ್ನು ರೂಪಿಸಿಕೊಳ್ಳುವ ಬಗ್ಗೆ ಚರ್ಚಿಸಲು ತನ್ನ ಆಸ್ಥಾನಕ್ಕೆ ಆಮಂತ್ರಿಸಿರುವ ದೃಷ್ಟಾಂತಗಳನ್ನು ಗಮನಿಸಬಹುದು. ಪೋರ್ಚುಗೀಸರು ಮತ್ತು ಡಚ್ಚರ ನಿರ್ಗಮನದ ಬಳಿಕ ಬ್ರಿಟಿಷರು ವ್ಯಾವಹಾರಿಕ ಕಾರ್ಯಗಳಲ್ಲಿ ಸಕ್ರೀಯರಾಗಿದ್ದರೂ, ಅವರು ವ್ಯಾಪಾರಕ್ಕೆ ಹೆಚ್ಚು ಆಸಕ್ತಿ ಹೊಂದಿದವರಾಗಿದ್ದುದರಿಂದ ಮಿಶನರಿ ಸೇವೆಯ ಬಗ್ಗೆ ಹೆಚ್ಚು ಆಸಕ್ತಿ ತೋರಿಸಲಿಲ್ಲ. ಕೆಥೋಲಿಕ ಮಿಶನರಿಗಳ ಸೇವೆಯ ಬಗ್ಗೆ ಅವರಿಗೆ ಆಸಕ್ತಿಯೇ ಇರಲಿಲ್ಲ. ಆದುದರಿಂದ ಉಪಖಂಡದಲ್ಲಿ ಪೋಚುಗೀಸರ ರಾಜಕೀಯ ಪ್ರಭಾವ ಅಂತ್ಯಗೊಂಡುದರಿಂದ ಪ್ರಥಮ ಹಂತದ ಸುವಾರ್ತಿಕ ಸೇವೆ 17ನೇ ಶತಮಾನದ ಮಧ್ಯ ಭಾಗದಲ್ಲಿ ನಿಂತು ಹೋಯಿತು.

1833ರ ಚಾರ್ಟರ್ ಆಕ್ಟ್ ಭಾರತದಲ್ಲಿ ಶಾಶ್ವತ ಮಿಶನರಿ ಸೇವೆಗೆ ಅನುಮೋದನೆ ನೀಡಿ ಕೋಲ್ಕತ್ತದಲ್ಲಿ ಆಂಗ್ಲಿಕಾನ ಧರ್ಮ ಕ್ರಮಾನುಗತಕ್ಕೆ ಅವಕಾಶ ಮಾಡಿಕೊಟ್ಟಿತು.ಈ ಕಾನೂನಿನಿಂದ ಮಿಶನರಿಗಳು ಆಡೆತಡೆ ಇಲ್ಲದೆ ಭಾರತಕ್ಕೆ ಬರಲು ಅವಕಾಶವಾಯಿತು. ಮತ್ತು ಬ್ರಿಟಿಷ್ ಆಡಳಿತ ಮಿಶನರಿ ಸೇವೆಗೆ ಮೂಲಭೂತ ಸೌಕರ್ಯ ಮತ್ತು ಪೂರಕ ವಾತಾವರಣವನ್ನು ಒದಗಿಸಿತು. ಹೀಗೆ ವಸಾಹತುಶಾಹಿ ಪರಿಸ್ಥಿತಿಯಲ್ಲಿ ಮಿಶನರಿಗಳು ತಾವು ಒಬ್ಬರಿಗೊಬ್ಬರು ಅವಶ್ಯವೆಂದು ಅರಿತುಕೊಂಡು ಸಹಜವಾಗಿ ಬೆಂಬಲ ನೀಡಿದರು.ಹೀಗೆ ಮಿಶನರಿ ಗುಂಪುಗಳು ಬಲಗೊಂಡು ಅವರ ಕಾರ್ಯಶೈಲಿ ಬದಲಾಯಿತು.[2] ಮಿಶನರಿಗಳು ಭಾರತೀಯರು ಕ್ರೈಸ್ತತ್ವವನ್ನು ಅಂಗೀಕರಿಸಲು ಅನುಕೂಲವಾಗುವುದಕ್ಕಾಗಿ ನಾಗರೀಕತೆಯನ್ನು ಬೆಳೆಸುವುದಕ್ಕೆ ಪ್ರೋತ್ಸಾಹ ನೀಡಿದರು. ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣೆಗೊಂಡಂತೆ ಮಿಶನರಿಗಳು ಬರಲು ಆರಂಭಿಸುವುದರೊಂದಿಗೆ ಮದರಾಸು ಮತ್ತು ಮುಂಬಯಿ ಧರ್ಮಪ್ರಾಂತ ಸ್ಥಾಪನೆಗೊಂಡು ಕ್ರೈಸ್ತ ಧರ್ಮ ವಿಸ್ತಾರಗೊಂಡಿತು. ಅಂದಿನಿಂದ ಮಿಶನರಿಗಳು ಮತ್ತು ವಸಾಹತುಶಾಹಿ ಆಡಳಿತಗಳೊಳಗೆ ಅವರವರ ಕೆಲಸ ಕಾರ್ಯಗಳಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡುವ ಸಹಕಾರ ಮನೋಭಾವನೆಯಲ್ಲಿ ಸುಧಾರಣೆ ಉಂಟಾಯಿತು.[3]

ವಸಾಹತುಶಾಹಿ ಆಡಳಿತ ಶೈಲಿಯಲ್ಲಿ ಭಾರತದಲ್ಲಿ ಮೂರು ವಿಶಿಷ್ಠ ಪಾತ್ರಗಳು ಪ್ರಾಮುಖ್ಯವಾಗಿ ಗಮನಿಸತಕ್ಕ ಸಂಗತಿಗಳಾಗಿವೆ. ಮೊದಲನೆಯದು ವ್ಯಾಪಾರಸ್ಥನಾಗಿ, ಎರಡನೆಯದು ಆಡಳಿತಗಾರನಾಗಿ ಮತ್ತು ಮೂರನೆಯದು ಕ್ರೈಸ್ತ ಧರ್ಮ ಪ್ರಚಾರಕನಾಗಿ, ಬೇರೆ ರೀತಿಯಲ್ಲಿ ಹೇಳಬೇಕೆಂದರೆ ಮಿಶನರಿ ಸೇವೆ ಬಹುಜನರಲ್ಲಿ ಕೋಲಾಹಲ ಉಂಟು ಮಾಡಬಹುದಾದ ವಿಷಯವಾಗಿದ್ದರೂ ಮಿಶನರಿಗಳಿಗೆ ಪರಸ್ಪರ ಪ್ರೋತ್ಸಾಹ ನೀಡುವ ಮೂಲಕ ಭಾರತದ ಮೇಲೆ ಹಿಡಿತ ಸಾಧಿಸಿಕೊಳ್ಳುವುದು ಅವರ ಪ್ರಥಮ ಆದ್ಯತೆಯಾಗಿತ್ತು. ಆದುದರಿಂದ ಈ ಕಾನೂನು ಅವರ ಉದ್ದೇಶವನ್ನು ಸಾಧಿಸಿಕೊಳ್ಳುವ ಒಂದು ಮಾರ್ಗವಾಗಿತ್ತು.ಕಂಪೆನಿಯು ಬೃಹತ್ ದಂಗೆಯನ್ನು ಎದುರಿಸುವುದಕ್ಕೆ ಸಾಕ್ಷಿಯಾದುದರಿಂದ ಪ್ರಥಮತ ಈ ಸಂಪೂರ್ಣ ಸೌವಾರ್ತಿಕ ಯೋಜನೆ ಅಷ್ಟು ಸುಲಭವಾಗಿರಲಿಲ್ಲ ಮತ್ತು ಧಾರ್ಮಿಕ ಹಾಗೂ ಸಾಮಾಜಿಕ ವ್ಯವಹಾರದಲ್ಲಿ ತಟಸ್ಥ ಧೋರಣೆಯನ್ನು ತೋರಿಸುವುದು ಅವಶ್ಯಕವಾಗಿತ್ತು. ಅದು ತೋರಿಬರಬಹುದಾದ ವಿವಾದಗಳಿಂದ ದೂರವಿರಿಸಿಕೊಂಡರೂ ಅದೇ ಸಮಯದಲ್ಲಿ ಪೌರಾತ್ಯದ ಕಲಿಕೆಗೆ ಬೆಂಬಲ ನೀಡುವುದನ್ನು ನಿರಾಕರಿಸಲಿಲ್ಲ.

2.2 ಕೆಥೋಲಿಕ್ ಕ್ರಿಶ್ಚಿಯನ್ ಮಿಶನ್

ಮಂಗಳೂರು ಭಾರತದ ಪಶ್ಚಿಮ ಕರಾವಳಿಯಲ್ಲಿ ಸೌತ್ ಕೆನರಾ ಜಿಲ್ಲೆಯ ಮುಖ್ಯ ಕೇಂದ್ರಸ್ಥಾನವಾಗಿದೆ. ಕೆನರಾವು 16ನೇ ಶತಮಾನದ ಪೂರ್ವಾರ್ಧದಿಯಿಂದಲೂ ವ್ಯಾಪಾರಕ್ಕಾಗಿ ಪ್ರಾಮುಖ್ಯತೆಯನ್ನು ಹೊಂದಿಕೊಂಡಿತ್ತು. ಅಲ್ಬುಕರ್ಕ್ 1510ರಲ್ಲಿ ಗೋವಾವನ್ನು ಜಯಿಸುವ ಮೊದಲು ಪೋರ್ಚುಗೀಸರು ಕೆನರಾದಲ್ಲಿ ಕೆಲವು ವಸಾಹತುಗಳನ್ನು ಹೊಂದಿದ್ದರು ಮತ್ತು ಅವರಲ್ಲಿ ಕೆಲವರು ಪಾದ್ರಿಗಳೂ ಇದ್ದು ಅವರು ಕ್ರೈಸ್ತಧರ್ಮ ಪ್ರಚಾರ ಮಾಡುವಲ್ಲಿ ಶ್ರಮಿಸಿದ್ದರು. ಇದಕ್ಕಾಗಿ ಪ್ರಧಾನ ಎಡ್ಮಿರಲ್ ಮಂಗಳೂರಿನಲ್ಲಿ ವಾಸ್ತವ್ಯವಿದ್ದರೆಂದು ತಿಳಿದು ಬರುತ್ತದೆ.[4] ಕ್ರಮೇಣ, ವಿಜಯನಗರ ಮತ್ತು ಬಿದನೂರು ಆಡಳಿತವಿದ್ದಾಗ ಕೆಲವು ಭಾರತೀಯ ಕ್ರೈಸ್ತರು ಗೋವಾ ಪ್ರಾಂತದಿಂದ ಅಧಿಕ ಸಂಖ್ಯೆಯಲ್ಲಿ ಕೆನರಾಕ್ಕೆ ವಲಸೆ ಬಂದರು. ಈ ಎರಡು ರಾಜ್ಯಗಳ ಆಡಳಿತಗಾರರು ಇವರಿಗೆ ಅನೇಕ ಸವಲತ್ತುಗಳನ್ನು ನೀಡಿದರು, ಯಾಕಂದರೆ ಅವರು ಕೃಷಿಕರಾಗಿದ್ದುದರಿಂದ ಅವರು ಇಲ್ಲಿಯೇ ನೆಲೆಸಲು ಒತ್ತಾಯಿಸಿ ಒಳ್ಳೆಯ ಪುರಸ್ಕಾರಗಳನ್ನು ನೀಡಿದರು.

17ನೇ ಶತಮಾನದಲ್ಲಿ ಪೋರ್ಚುಗೀಸ್ ಆಡಳಿತ ಅವನತಿಯನ್ನು ಕಂಡಾಗ, ಮಿಶನರಿ ಸೇವೆಯೂ ತಟಸ್ಥಗೊಂಡಿತು. ಮರಾಠರು ಹೆಚ್ಚಿನ ಅಧಿಕಾರವನ್ನು ಪಡೆದಾಗ ಈ ನಾಡಿನಲ್ಲಿ ಭದ್ರತೆ ಇಲ್ಲ ಎಂಬ ಕಾರಣಕ್ಕೆ

ಮಿಶನರಿಗಳನ್ನು ಅವರ ಮುಖ್ಯಸ್ಥರು ಹಿಂದಕ್ಕೆ ಕರೆಸಿಕೊಂಡರು. ಆದರೆ 17ನೇ ಶತಮಾನದ ಕೊನೆಯ ದಶಕಗಳಲ್ಲಿ ಫಾ। ಜೋಸೆಫ್ ವಾಸ್ ಸ್ಥಳೀಯ ಕ್ರೈಸ್ತರ ಆತ್ಮೀಕ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಸೇವಾ ಉದ್ದೇಶದಿಂದ ಕೆನರಾಕ್ಕೆ ಬಂದರು. ಅವರು ಫ್ಯಾಕ್ಟರಿ ಚರ್ಚ್ ಎಂದು ಕರೆಯಲ್ಪಡುತ್ತಿದ್ದ ಹುಲ್ಲು ಹೊದಿಕೆಯ ರೊಜಾರಿಯೋ ಚರ್ಚ್‌ನ ನವೀಕರಣದ ಜವಾಬ್ದಾರಿಯನ್ನು ವಹಿಸಿಕೊಂಡರು. 1685ರಲ್ಲಿ ಅವರು ಗೋವಾಕ್ಕೆ ಹಿಂತಿರುಗಿದರು.

1763ರಲ್ಲಿ ಬ್ರಿಟಿಷರು ತನ್ನ ಕೋಟೆಯನ್ನು ವಶಪಡಿಸಿಕೊಳ್ಳುವುದಲ್ಲಿ ಕೆನರಾ ಕ್ರೈಸ್ತರು ಕೂಡಾ ಬ್ರಿಟಿಷರ ಜತೆಗಾರರು ಎಂದು ನಂಬಿದ್ದ ಹೈದರ್ ಆಲಿಯು ಅವರನ್ನು ಸಂಶಯದಿಂದ ನೋಡುತ್ತಿದ್ದನು. ಇದರಿಂದಾಗಿ ಟಿಪ್ಪು ಸುಲ್ತಾನನ ಕೈಕೆಳಗಿದ್ದ ಕ್ರೈಸ್ತರು ಇನ್ನೂ ಹೆಚ್ಚಿನ ಹಿಂಸೆಯನ್ನು ಅನುಭವಿಸಿ ಸಾವಿರಾರು ಮಂದಿ ಶ್ರೀರಂಗಪಟ್ಟಣಕ್ಕೆ 1799ರ ವರೆಗೆ ಗಡಿಪಾರು ಮಾಡಲ್ಪಟ್ಟರು.

2.3 ಕೆನರಾದಲ್ಲಿ 19ನೇ ಶತಮಾನದಲ್ಲಿ ಕ್ರೈಸ್ತ ಧರ್ಮ

19ನೇ ಶತಮಾನದಲ್ಲಿ ಕರಾವಳಿಯಲ್ಲಿ ಬಂದಿಳಿದ ಪ್ರಥಮ ಕ್ರೈಸ್ತಧರ್ಮ ಪ್ರಚಾರಕ ಸಂಸ್ಥೆ ಬಾಸೆಲ್‌ನ ಜರ್ಮನ್ ಇವ್ಯಾಂಜಲಿಕಲ್ ಮಿಶನ್ .ಈ ಪ್ರೊತೆಸ್ತಾಂತ ಮಿಶನ್ ಸ್ವಿಟ್ಜರ್‌ಲ್ಯಾಂಡ್‌ನ ಬಾಸೆಲ್‌ನಲ್ಲಿ 1815ರಲ್ಲಿ ಸ್ಥಾಪಿಸಲ್ಪಟ್ಟಿತು. ಅದು ಭಾರತದಲ್ಲಿ ಒಂದು ಕ್ರೈಸ್ತ ದೈವಜ್ಞಾನ ತರಬೇತಿಯ ವಿದ್ಯಾಲಯ ಸ್ಥಾಪನೆ ಮಾಡುವ ಉದ್ದೇಶದಿಂದ ಮಿಶನರಿಗಳನ್ನು ಮೊದಲ ಬಾರಿಗೆ ಕಳುಹಿಸಿತು.ಅಂದಿನ ಸೇವಾ ನಿರ್ದೇಶಕರು ಭಾರತದ ಪಶ್ಚಿಮ ಕರಾವಳಿಯಲ್ಲಿ ಕೊಚ್ಚಿನ್ ಮತ್ತು ಮುಂಬಯಿಯ ಮಧ್ಯ ಭಾಗದಲ್ಲಿ ಮಿಶನ್ ಕೇಂದ್ರವೊಂದನ್ನು ಸ್ಥಾಪಿಸುವುದು ಅಗತ್ಯವೆಂದು ಮನಗಂಡರು. ಆಗ ಸಾಮುವೆಲ್ ಹೆಬಿಕ್, ಜಾನ್ ಕ್ರಿಸ್ಟೋಫರ್ ಲೆಹ್ನರ್ ಮತ್ತು ಕ್ರಿಸ್ಟೋಫರ್ ಲಿಯೊನಾರ್ಡ್ ಗ್ರೇನರ್ ಇವರು ಹೊಸ ಮಿಶನ್ ಸೇವೆಗೆ ಹೋಗುವುದಕ್ಕಾಗಿ 16 ಮಾರ್ಚ್ 1834ರಂದು ಅಭಿಷಿಕ್ತರಾದರು. ಅವರು 12 ಜುಲೈ 1834ರಂದು ಮಲಬಾರ್‌ನಲ್ಲಿ ಬಂದಿಳಿದು ನಂತರ 30 ಅಕ್ಟೋಬರ್ 1834ರಂದು ಮಂಗಳೂರಿಗೆ ಬಂದರು.ಅವರ ಮುಖ್ಯ ಉದ್ದೇಶ ಸುವಾರ್ತಾ ಪ್ರಸರಣೆ.

1836ರಲ್ಲಿ ಪ್ರಥಮ ಶಾಲೆ ಆರಂಭವಾಯಿತು.ಸುವಾರ್ತಾ ಸೇವೆ ಹೊರತಾಗಿ ಶಿಕ್ಷಣಕ್ಕೆ ಬಾಸೆಲ್ ಮಿಶನರಿಗಳು ಪ್ರಾಮುಖ್ಯತೆ ನೀಡಿ ಅದರಲ್ಲಿಯೂ ತಮ್ಮನ್ನು ತೊಡಗಿಸಿಕೊಂಡರು. ಅವರು ಸಾಮಾನ್ಯವಾಗಿ ಮೂರು ವಿಧದ ಶಾಲೆಗಳನ್ನು ನಡೆಸುತ್ತಿದ್ದರು: (1) ಪ್ರಾಥಮಿಕ ಪಠ್ಯವಾಗಿ ಇಂಗ್ಲೀಷ್, ಭಾರತೀಯ ಸ್ಥಳೀಯ ಭಾಷೆಗಳು, ಗಣಿತ, ಚರಿತ್ರೆ, ಭೂಗೋಳ, ಸತ್ಯವೇದ ಮತ್ತು ಕ್ರೈಸ್ತ ಧರ್ಮ ಪಾಠ ಕಲಿಸುವ ಒಂದು ಹುಡುಗರ ಶಾಲೆ. (2)

ಕೈಗಾರಿಕಾ ಶಾಖೆಯನ್ನು ಹೊಂದಿರುವ ಅನಾಥಾಲಯ ಮತ್ತು ಬೋರ್ಡಿಂಗ್ ಶಾಲೆ.[5] (3) ಹೆಣ್ಣು ಮಕ್ಕಳ ಶಾಲೆ. ಆದರೆ ಈ ಶಾಲೆಗಳು ಮತ್ತು ಸಂಸ್ಥೆಗಳು ಕ್ರೈಸ್ತ ಸುವಾರ್ತೆಯನ್ನು ಅರ್ಥಮಾಡಿಕೊಳ್ಳುವ ಉದ್ದೇಶದಿಂದ ಮತಾಂತರಗೊಂಡವರಿಗೆ ಸೀಮಿತವಾಗಿದ್ದರೂ ನಂತರ ಎಲ್ಲರಿಗೂ ಮುಕ್ತ ಅವಕಾಶವನ್ನು ಕಲ್ಪಿಸಿದರು ಎಂಬುದನ್ನು ಗಮನಿಸಬೇಕು. ದಕ್ಷಿಣ ಭಾರತದ ಪಶ್ಚಿಮ ಕರಾವಳಿ ಭಾಗದಲ್ಲಿ ಹಂಚು ತಯಾರಿಕೆ ಮತ್ತು ಬಟ್ಟೆ ಉದ್ಯಮ, ಮರಗೆಲಸ, ಪೀಠೋಪಕರಣ ತಯಾರಿಕೆ ಮತ್ತಿತರ ಕರಕುಶಲ ತರಭೇತಿಗೆ ಬಾಸೆಲ್ ಮಿಶನ್ ಹೆಸರುವಾಸಿಯಾಗಿತ್ತು. ಪ್ರೊಟೆಸ್ಟಾಂಟ್ ಮಿಶನ್‌ನ ಸಮಾಜಿಕ ಕಾರ್ಯಸೂಚಿಯಲ್ಲಿ ಗ್ರಾಮೀಣ ಶಿಕ್ಷಣ ಮತ್ತು ಪುನರ್‌ನಿರ್ಮಾಣಕ್ಕೆ ಬಹು ಹೆಚ್ಚಿನ ಪ್ರಾಧಾನ್ಯತೆ ಇತ್ತು.

ಕೆನರಾಕ್ಕೆ ಕಾರ್ಮೆಲೈಟ್ ಮಿಶನರಿಗಳ (ಒ.ಸಿ.ಡಿ.) ಆಗಮನವು ಒಂದು ವಿಭಿನ್ನ ಅಧ್ಯಾಯವನ್ನು ಒಳಗೊಂಡಿತ್ತು. ಕೆನರಾದಲ್ಲಿ ಟಿಪ್ಪು ಸುಲ್ತಾನನ ಆಡಳಿತದಲ್ಲಿದ್ದಾಗ ಕೆನರಾದ ಕ್ರೈಸ್ತರು ಅಲಕ್ಷ್ಯಕ್ಕೆ ಒಳಗಾಗಿ ನಿಕೃಷ್ಟ ಪರಿಸ್ಥಿತಿಯಲ್ಲಿದ್ದರು. ಇದಕ್ಕಾಗಿ ಗೋವಾದ ಆರ್ಚ್‌ಬಿಷಪ್ ವ್ಯಾಟಿಕನ್‌ನಿಂದ ನಿಯೋಜಿಸಲ್ಪಟ್ಟರು. ಪೂರ್ವದಲ್ಲಿ ಭೀತಿಯ ಮತ್ತು ಬಂಧನಕ್ಕೆ ಒಳಗಾಗಿದ್ದ ಪರಿಸ್ಥಿತಿ 1799ರಲ್ಲಿ[6] ಅಂತ್ಯಗೊಂಡಾಗ ಬದುಕುಳಿದವರ ನಂಬಿಕೆಯನ್ನು ಸ್ಥಿರಗೊಳಿಸುವುದರಲ್ಲಿ ಕೆಥೋಲಿಕ ಮಿಶನರಿಗಳು ಪ್ರಯಾಸ ಪಡಬೇಕಾಯಿತು.ಯಾಕಂದರೆ ಸಾವಿರಾರು ಕೆಥೋಲಿಕರು ಇಸ್ಲಾಂ ಧರ್ಮಕ್ಕೆ ಬಲಾತ್ಕಾರದಿಂದ ಮತಾಂತರಗೊಂಡಿದ್ದರು. ಮಾತ್ರವಲ್ಲದೆ ಕೆನರಾದಲ್ಲಿದ್ದ ಪ್ರೊತೆಸ್ತಾಂತ ಮಿಶನರಿಗಳ ಸೇವೆಯಿಂದ ಕೆಥೋಲಿಕ ಧರ್ಮವನ್ನು ಉಳಿಸಿಕೊಳ್ಳುವುದು ಅವಶ್ಯಕವಾಗಿತ್ತು. ಹೀಗೆ ಕಾರ್ಮೆಲೈಟ್ ಮಿಶನರಿಗಳ (ಒ.ಸಿ.ಡಿ.) ಆಗಮನವು ಟಿಪ್ಪು ಸುಲ್ತಾನನ 16 ವರ್ಷಗಳ ಆಡಳಿತಾವದಿಯಲ್ಲಿ ಕಳೆದು ಹೋದ ನಂಬಿಕೆಯನ್ನು ಪುನಸ್ಥಾಪಿಸುವ ಕಾರ್ಯಸೂಚಿಯನ್ನು ಹೊಂದಿತ್ತು. ಅವರು 1845ರಿಂದ ಈ ಪ್ರಾಂತದಲ್ಲಿ ಸಕ್ರೀಯರಾಗಿದ್ದರು. ಮಂಗಳೂರಿನ ಜನರ ಧಾರ್ಮಿಕ ಅಗತ್ಯತೆಗಳನ್ನು ಪೂರೈಸುವುದು ಮಾತ್ರವಲ್ಲದೆ ಶಿಕ್ಷಣದಿಂದ ವಂಚಿತರಾದವರಿಗೆ ಶಿಕ್ಷಣ ಒದಗಿಸುವ ಸೇವೆ ಪ್ರಾರಂಭಿಸಿದರು.

ಒ.ಸಿ.ಡಿ., ಬಿಷಪರು ಮತ್ತು ಧರ್ಮಬೋಧಕರು ಆಂಗ್ಲ ಮತ್ತು ಮಾತೃಭಾಷಿಕ ಶಾಲೆಗಳನ್ನು ಆರಂಭಿಸುವ ಪ್ರಯತ್ನ ಮಾಡಿದರು. ಇವುಗಳಲ್ಲಿ 1858ರಲ್ಲಿ ಪ್ರಾರಂಭವಾದ ಮೊದಲ ಶಾಲೆಯಾದ 'ರೊಸಾರಿಯೋ ಶಾಲೆ' ಶಿಕ್ಷಣ ಕ್ಷೇತ್ರದಲ್ಲಿನ ಸಾಕ್ಷಿಯಾಗಿ ಇಂದೂ ಅಸ್ತಿತ್ವದಲ್ಲಿದೆ. ಮಂಗಳೂರಿನಲ್ಲಿ ಕೆಥೋಲಿಕ ಶಾಲೆಗಳ ಸ್ಥಾಪನೆಯ ಅಧಿಕ ಬೇಡಿಕೆಯನ್ನು ಪರಿಗಣಿಸಿ ಬಿಷಪ್ ಮೈಕಲ್ ಆಂಟನಿ ಇವರು ತಮ್ಮ ವಿಕಾರ್ ಜನರಲ್, ಫಾ। ಆಂಡ್ರೂ ಇವರನ್ನು ಫ್ರಾನ್ಸ್‌ಗೆ ಕಳುಹಿಸಿ ಅಲ್ಲಿ ಕ್ರೈಸ್ತ ಸಹೋದರರನ್ನು ಇಲ್ಲಿಯ ಹುಡುಗರ ಶಿಕ್ಷಣ ಸೇವೆಗಾಗಿ ಕರೆದುಕೊಂಡು ಬರಲು ನಿಯೋಜಿಸಿದರು. ಫಾ। ಆಂಡ್ರೂ ನಾಲ್ಕು ಮಂದಿ ಕ್ರೈಸ್ತ ಸಹೋದರರನ್ನು ಕರೆತಂದರು.

ಬಂದ ಕೂಡಲೇ ಈ ಕ್ರೈಸ್ತ ಸಹೋದರರು ರೊಸಾರಿಯೋ ದೇವಾಲಯದ ಪರಿಸರದಲ್ಲಿದ್ದ ತಾತ್ಕಾಲಿಕ ನಿವಾಸದಲ್ಲಿ ಸೈಂಟ್ ಮೇರೀಸ್ ಇಂಗ್ಲೀಷ್ ಸ್ಕೂಲ್ ಸ್ಥಾಪನೆ ಮಾಡಿದರು .ನಂತರ ಬಿಷಪರು ಇಲ್ಲಿಯೇ ಶಾಲಾ ಕಟ್ಟಡ ನಿರ್ಮಾಣ ಆರಂಭಿಸಿದರು.ಆದರೆ ಕೇಂದ್ರ ಸ್ಥಳದಲ್ಲಿ ಇಲ್ಲವೆಂದು ಜನರು ಆಕ್ಷೇಪಿಸಿದರು. ಆ ಸಹೋದರರೂ ಕೂಡಾ ಶಾಲೆಯು ಕೇಂದ್ರ ಸ್ಥಳದಲ್ಲಿ ನಿರ್ಮಾಣಗೊಳ್ಳುವುದರ ಪರವಾಗಿದ್ದರು. ಸ್ವಲ್ಪ ತಿಕ್ಕಾಟ ಉಂಟಾಗಿ, ಈ ಕಾರಣದಿಂದ ಕ್ರೈಸ್ತ ಸಹೋದರರು 1868ರಲ್ಲಿ (ಕೊಲಂಬೋಗೆ) ನಿರ್ಗಮಿಸಿದರು ಮತ್ತು ಶಾಲೆಯು ಮುಚ್ಚಲ್ಪಟ್ಟಿತು.

ಮಂಗಳೂರು ಕೆಥೋಲಿಕರ ಕಾರ್ಮೆಲೈಟ್ ವ್ಯಾಪ್ತಿಯ ಸಮಯದಲ್ಲಿ ಮಂಗಳೂರಿಗೆ ಸಂಭಂದಿಸಿದಂತೆ ಬಹು ಪ್ರಾಮುಖ್ಯವಾದ ಎರಡು ಭಗಿನಿಯರ ವರ್ಗ ಸ್ಥಾಪನೆಯಾಯಿತು – ಕ್ಲೋಸ್ಟರ್ಡ್ ಕಾರ್ಮೆಲ್ ಮುತ್ತು ಅಪೋಸ್ತೋಲಿಕ್ ಕಾರ್ಮೆಲ್ (ನಂತರ ಇದನ್ನು ಮೂರನೇ ವರ್ಗದ ಕಾರ್ಮೆಲೈಟ್ಸ್ ಎಂದು ಕರೆಯುತ್ತಿದದರು). ಕಾರ್ಮೆಲೈಟ್ ಸಿಸ್ಟರ್ಸ್ ಸಭೆಯನ್ನು 1867ರಲ್ಲಿ ಸ್ಥಾಪಿಸಿದ ಈ ಮಿಶನರಿ ಮಂಗಳೂರಿನಲ್ಲಿ 1870ರಲ್ಲಿ ಸೈಂಟ್ ಆನ್ಸ್ ಎಂಬ ಅವರ ಪ್ರಥಮ ಶಾಲೆಯನ್ನು ಸ್ಥಾಪಿಸಿದರು. ಸೈಂಟ್ ಆನ್ಸ್‌ನ ಶಿಕ್ಷಣ ಸಂಸ್ಥೆಯ ಚರಿತ್ರೆ ಬಿಷಪ್ ಮೈಕಲ್ ಆಂಟೊನಿಯವರ ನೆರವಿನಿಂದ 1859 ರಲ್ಲಿ ಸ್ಥಾಪನೆಯಾದ ಸಿಸ್ಟರ್ಸ್ ಆಫ್ ಸೈಂಟ್ ಜೋಸೆಫ್ ಆಫ್ ದ ಅಪರಿಶನ್ ಸಭೆಯು ಹೆಣ್ಣು ಮಕ್ಕಳಿಗಾಗಿ ಶಾಲೆಯೊಂದನ್ನು ಪ್ರಾರಂಭಿಸಿತು.

ಮಂಗಳೂರಿನ ಕೆಥೋಲಿಕರ ಸೆರೆವಾಸದ 200 ವರ್ಷಗಳ ನಂತರದ ಇತಿಹಾಸದಲ್ಲಿ 1879ರಲ್ಲಿ ಜೆಸೂಯಿತರ (ಸೊಸೈಟಿ ಆಫ್ ಜೀಸಸ್) ಆಗಮನವೊಂದೇ ಪ್ರಮುಖ ಘಟನೆಯಾಗಿತ್ತು ಎಂದರೆ ಅತಿಶಯೋಕ್ತಿಯಲ್ಲ. ಜೆಸೂಯಿತರು ಶಿಕ್ಷಣ ಮತ್ತು ಆರೋಗ್ಯ ಸೇವೆಯಲ್ಲಿ ಪರಿಣಿತರಾಗಿದ್ದರು. ಆದುದರಿಂದಲೇ ಶಿಕ್ಷಣ ಸೇವೆಯಲ್ಲಿ ನೆನಪಿನಲ್ಲಿಡತಕ್ಕ ಕೊಡುಗೆಗಳಿಗೆ ಮತ್ತು ಈ ಕರಾವಳಿಯ ಕೆಥೋಲಿಕ ಸಭೆಯಲ್ಲಿ ಸಾಮಾಜಿಕ ಬದಲಾವಣೆಗಳಿಗೆ ಅವರ ಆಗಮನವೇ ಮೊದಲ ಕಾರಣವಾಯಿತು.

ಧರ್ಮಪ್ರಾಂತದ ಅಭಿಷಿಕ್ತರು ಮತ್ತು ಸೊಸೈಟಿ ಆಫ್ ಜೀಸಸ್ ಇವರ ನಂತರ ಕಪುಚಿನರು (ಫ್ರಾನ್ಸಿಸಿಯನ್ಸ್ ಇವರ ಉಪ ವಿಭಾಗ) ಮಂಗಳೂರಿನಲ್ಲಿ ಹೆಚ್ಚಿನ ಅನುಯಾಯಿಗಳನ್ನು ಹೊಂದಿದ್ದಾರೆ. 19ನೇ ಶತಮಾನದಲ್ಲಿ ಅವರ ಕೆಲಸ ಉತ್ತರ ಭಾರತದ ಪ್ರಾಚೀನ ಉತ್ತರ ಧರ್ಮಪ್ರಾಂತ – ಆಗ್ರ, ಪಾಟ್ನಾ ಅಲಹಾಬಾದ್ ಮತ್ತು ಅಜ್ಮೀರ್‌ಗಳಿಗೆ ಸೀಮಿತವಾಗಿದ್ದು ಕಾಪುಚಿನ್‌ಗಳಿಂದ ನಡೆಸಲ್ಪಡುತ್ತಿತ್ತು. 1923ರಲ್ಲಿ[7] ಪ್ರಥಮವಾಗಿ ಮಂಗಳೂರಿಗರೊಬ್ಬರು ಈ ನೊವಿಶಿಯೇಟ್‌ಗೆ ಸೇರಿದರು. ಉತ್ತರಕ್ಕಿಂತ ದಕ್ಷಿಣದಲ್ಲಿ ಹೆಚ್ಚಿನ ಸಂದರ್ಭಗಳು ಒದಗಿ ಬಂದದ್ದರಿಂದ ನೊವಿಶಿಯೇಟನ್ನು ದಕ್ಶಿಣಕ್ಕೆ ವರ್ಗಾಯಿಸುವ ನಿರ್ಧಾರ ಕೈಗೊಳ್ಳಲಾಯಿತು ಮತ್ತು ಇದಕ್ಕೆ

ಮಂಗಳೂರು ಸಮೀಪದ ಪರಂಗಿಪೇಟೆಯನ್ನು ಆಯ್ಕೆ ಮಾಡಲಾಯಿತು. ಈ ಸ್ಥಳದ ಚಾರಿತ್ರಿಕ ಮಹತ್ವವೇನೆಂದರೆ 16ನೇ ಶತಮಾನದಲ್ಲಿ ಪೋರ್ತುಗೀಸ್ ಫ್ರಾನ್ಸಿಸ್‌ಕಾನ್ಸ್ ಇಲ್ಲಿ ಒಂದು ಚರ್ಚನ್ನು ಮತ್ತು ಒಂದು ಸೆಮಿನರಿಯನ್ನು ಸ್ಥಾಪಿಸಿದ್ದರು. (ಧಾರ್ಮಿಕ ಶಿಕ್ಷಣ ಕೊಡುವ ಕಾಲೇಜು) ಟಿಪ್ಪು ಸುಲ್ತಾನನ ಕಾಲದಲ್ಲಿ ಕ್ರೈಸ್ತರು ಸೆರೆಯಾಗುವ ಸಮಯದಲ್ಲಿ ಕೆಡವಲ್ಪಟ್ಟಿತ್ತು. 1799ರಲ್ಲಿ ಶಾಂತಿ ಮರುಸ್ಥಾಪನೆಯಾದಾಗ ಕಾರ್ಮೆಲೈಟ್ಸ್ ಸಭೆಯು ಒಂದು ಪ್ರಾರ್ಥನಾಲಯ(ಚಾಪೆಲ್) ಸಹಿತವಾಗಿ ಉಳಿದಿದ್ದ ಸನ್ಯಾಸಿ ಮಠ ಮತ್ತು ನಿವೇಶನಗಳನ್ನು ಕಾಪುಚಿನ್ ಸಭೆಗೆ 1930ರಲ್ಲಿ ದಾನವಾಗಿ ನೀಡಿದರು. ಸನ್ಯಾಸಿ ಮಠ ಹಳೆ ಹೆಸರು "ಮೋಂಟೆ ಮರಿಯಾನೊ"ಎಂಬುದಾಗಿದ್ದು ಕಾಪುಚಿನರು ಅದನ್ನು ಉಳಿಸಿಕೊಂಡರು. ಆದುದರಿಂದ 19ನೇ ಶತಮಾನದಲ್ಲಿ ಭಾರತದಲ್ಲಿದ್ದ ಕೆಥೋಲಿಕ ಚರ್ಚ್‌ನ ಮೂರು ಮುಖ್ಯ ಧಾರ್ಮಿಕ ಸಂಸ್ಥೆಗಳಾದ ಕಾಪುಚಿನರು (ಉತ್ತರ ಭಾರತದ ಹೆಚ್ಚಿನ ಭಾಗವು ಇವರ ವಶಕ್ಕೆ ಕೊಡಲ್ಪಟ್ಟವು), ಕಾರ್ಮೆಲೈಟರು ಮತ್ತು ಜೆಸೂವಿತರ ಸಭೆಗಳಿದ್ದವು. ಇವರಲ್ಲಿ ಕಾಪುಚಿನರು ಮತ್ತು ಕಾರ್ಮೆಲೈಟರು ಮುಖ್ಯವಾಗಿ ಮಿಶನರಿ ಸೇವೆಯಲ್ಲಿ ತೊಡಗಿಸಿಕೊಂಡರೆ, ಜೆಸೂವಿತರು ಶೈಕ್ಷಣಿಕ ವಿಷಯಗಳಿಗೆ ಪ್ರಾಶಸ್ತ್ಯ ನೀಡಿದರು. ಮಾತ್ರವಲ್ಲದೆ ಕಾರ್ಮೆಲೈಟ್ಸರ ಕೈಯಲ್ಲಿದ್ದ ಕೆನರಾ ವಿಕಾರಿಯೇಟ್‌ನ ಆಡಳಿತವನ್ನು ಪಡೆದುಕೊಂಡರು.

2.4 ಸನ್ಯಾಸಿನಿಗಳ ಮಿಷನರಿ / ಭಗಿನಿಯರ ಮಿಷನರಿ ಸೇವೆ

ಮಹಿಳಾ ಮಿಶನರಿಗಳನ್ನು (ಹೆಚ್ಚಾಗಿ ಭಗಿನಿಯರು) ಮಿಶನರಿ ಸೇವೆಗೆ ಸೇರಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಲಿಂಗ ತಾರತಮ್ಯದ ಬಾವನೆಗಳಿಂದ ಜನರು ಹೊರಬರುವ ಪ್ರಯತ್ನವನ್ನು ಮಾಡಿದರು. ಮಹಿಳಾ ಮಿಶನರಿಗಳ ಅವಶ್ಯಕತೆಗೆ ಮುಖ್ಯ ಕಾರಣ ಪುರುಷ ಮಿಶನರಿಗಳು. ಇವರು ಸುವಾರ್ತಾ ಸೇವೆ ಮತ್ತು ಕ್ರೈಸ್ತ ಸಂದೇಶವನ್ನು ತಮ್ಮ ಶಾಲೆಗಳಲ್ಲಿ ಮತ್ತು ಸಮಾಜದ ಪುರುಷರಿಗೆ ಪಸರಿಸುವುದರಲ್ಲಿ ಕಾರ್ಯ ನಿರತರಾಗಿದ್ದರು. ಆದರೆ ಹೆಣ್ಣು ಮಕ್ಕಳ ಶಿಕ್ಷಣದ ವಿಚಾರದಲ್ಲಿ ಪುರುಷ ಮಿಶನರಿಗಳು ಮೃದು ಮನೋಭಾವ ಹೊಂದಿದ್ದರು. 19ನೇ ಶತಮಾನದಲ್ಲಿ ಪುರುಷ ಮಿಶನರಿಗಳು ಮಹಿಳೆಯರಿಗೆ ಶಿಕ್ಷಣ ನೀಡುವುದಕ್ಕೆ ತಯಾರಿರಲಿಲ್ಲ. ಆದುದರಿಂದ ಆಗ ಶಿಕ್ಷಣ ಪುರುಷರಿಗೆ ಮಾತ್ರ ಸೀಮಿತವಾಗಿತ್ತು. ಸಾಂಪ್ರಾದಾಯಿಕ ಸಮಾಜದಲ್ಲಿ ಅಂದಿನ ಮಹಿಳಾ ಸಮುದಾಯ ವಾಸಿಸುತ್ತಿದ್ದು ತಮ್ಮ ಕನಸಿನ ಪ್ರಪಂಚದಿಂದ ಹೊರಬರುವುದು ಅಸಾಧ್ಯವಾಗಿತ್ತು.

ಆದುದರಿಂದಲೇ ಪುರುಷ ಮಿಶನರಿಗಳು ತಮ್ಮಿಂದ ಸಾಧ್ಯವಾಗದ ಈ ಸೇವೆಗೆ ಮಹಿಳಾ ಮಿಶನರಿಗಳನ್ನು ನಿಯೋಜಿಸಲು ಆಲೋಚಿಸಿದರು. ಮಾತ್ರವಲ್ಲದೆ ಇವರು ಮಹಿಳಾ ಶಿಕ್ಷಣ ಎಂದರೆ ನೇಯ್ಗೆ, ಹೊಲಿಗೆ, ಕುಟುಂಬ ನಿರ್ವಹಣೆ ಮತ್ತು ಕಸೂತಿ ಇತ್ಯಾದಿಗಳೆಂದೇ ಪರಿಗಣಿಸಿದ್ದರು.[8]

ಪುರುಷ ಅಮೆರಿಕನ್ ಮಿಶನರಿಗಳಿಂದ ಸ್ಥಳೀಯ ಮಹಿಳೆಯರ ಮಧ್ಯೆ ಸೇವೆ ಸಲ್ಲಿಸುವುದಕ್ಕೆ ಅವಿವಾಹಿತ ಮಹಿಳಾ ಮಿಶನರಿಗಳ ಅವಶ್ಯಕತೆಯನ್ನು ಕಂಡರು. ಯಾಕಂದರೆ ಆ ಕಾಲದಲ್ಲಿ ಹುಡುಗಿಯರಿಗಿದ್ದ ನಿರ್ಬಂದನೆಗಳು, ಹುಡುಗರ ಜತೆಯಲ್ಲಿ ಕಲಿಯಬಾರದೆಂಬ ಪ್ರಚಲಿತ ಕಟ್ಟುಪಾಡುಗಳಿಂದ ರೋಸಿ ಹೋಗಿದ್ದರು.[10]

"ಮಹಿಳಾ ಮಿಶನರಿಗಳ"ವೀರಗಾಥೆ 15ನೇ ಶತಮಾನದಷ್ಟು ಹಿಂದೆ ಹೋಗುತ್ತದೆ. 1452ರಲ್ಲಿಪೋಪ್ ನಿಕೊಲಸ್. ಸಭಾ ಸೇವೆಯಲ್ಲಿ ಕೆಥೋಲಿಕ ಶಿಕ್ಷಣದ ಪ್ರಾಮುಖ್ಯತೆಯನ್ನು ಮನಗಂಡು ಜನರಲೇಟ್ ಆಫ್ ಬ್ಲೆಸ್ಸ್‌ಡ್ ಜಾನ್ ಸೋರೆತ್ ಅವರ ನೇತೃತ್ವದಲ್ಲಿ ಮೊದಲ ಕಾರ್ಮೆಲೈಟ್ ಸನ್ಯಾಸಿ ಮಠ ಸ್ಥಾಪಿಸಲು ಅನುಮತಿ ನೀಡಿದರು. ಸೈಂಟ್ ಥೆರೆಸಾ ಅವರು ಆಗಸ್ಟ್ 24, 1562ರಲ್ಲಿ ಅವಿಲಾದಲ್ಲಿ "ಕಾನ್ವೆಂಟ್ ಆಫ್ ದಿ ರಿಫಾರ್ಮ್) ಸ್ಥಾಪಿಸಿರುವುದರಲ್ಲಿ ಮೊದಲನೆಯವರು ಮತ್ತು ಇದು"ಡಿಸ್‌ಕಾಲ್ಸ್‌ಡ್ ಕಾರ್ಮೆಲೈಟ್ ನನ್ಸ್" (ಒ.ಸಿ.ಡಿ.ಯ ಸೆಕೆಂಡ್ ಆರ್ಡರ್) 1613ರಲ್ಲಿ ಭಾರತಕ್ಕೆ ಬಂದು ಪ್ರಥಮ ನಿವಾಸ (ಮಿಶನ್ ಸ್ಟೇಶನ್)ವನ್ನು ಸಿಂಧ್ ಪ್ರಾಂತದ ಟಟ್ಟಾ ಎಂಬಲ್ಲಿ ಸ್ಥಾಪಿಸಿ ಮಲಬಾರ್ ಕರಾವಳಿಗೆ 1656ರಲ್ಲಿ ಆಗಮಿಸಿದರು. ಭಾರತದಲ್ಲಿ ಡಿಸ್‌ಕಾಲ್ಸ್‌ಡ್ ಕಾರ್ಮೆಲೈಟ್ ಭಗಿನಿಯರ ಉಪಸ್ಥಿತಿ 1859ರಷ್ಟು ಹಿಂದಿನದಾಗಿತ್ತು. ಯುರೋಪ್‌ನ ವಿವಿಧ ದೇಶಗಳಿಂದ ಕಾರ್ಮೆಲೈಟ್ ನನ್‌ಗಳು ಆಗಮಿಸಲಾರಂಭಿಸಿದರು. ಇವರಲ್ಲಿ ಕಾರ್ಮೆಲ್ ಸಭೆಯವರು ಮೊದಲಿಗರು.[11]

ಧಾರ್ಮಿಕ ಭಗಿನಿಯರು ತಮ್ಮನ್ನು ಯೇಸು ಕ್ರಿಸ್ತನ ಅನುಯಾಯಿಗಳು ಮತ್ತು ಪ್ರೇಮಿಗಳು ಎಂದು ಹೇಳಿಕೊಳ್ಳುತ್ತಾರೆ. ಅವರು ಸಮುದಾಯ ಜೀವನವನ್ನು ನಡೆಸುತ್ತಾ, ಸಮಾಜದಿಂದ ಪ್ರತ್ಯೇಕ ಜೀವನ ನಡೆಸುತ್ತಿದ್ದು, ಕ್ರೈಸ್ತ ಧಾರ್ಮಿಕ ವಿಧಿವಿದಾನಗಳನ್ನು ನಡೆಸುವುದು ಮತ್ತು ಧ್ಯಾನದಲ್ಲಿ ನಿರತರಾಗಿರುತ್ತಾರೆ. ಭಗಿನಿಯರು ಪ್ರಾರ್ಥನೆ, ಮೌನವೃತ, ತ್ಯಾಗ, ವಿಧೇಯತೆ ಮೊದಲಾದ ಧಾರ್ಮಿಕ ಕಟ್ಟುಪಾಡಿನ ಕೆಲವು ಆಚಾರಗಳನ್ನು ಅಳವಡಿಸಿಕೊಳ್ಳಬೇಕಾಗಿರುತ್ತದೆ. ಸೌಮ್ಯ ಸ್ವಭಾವ, ಮಿತಭಾಷಿಗಳು, ದಯಾ ಮನೋಭಾವಕ್ಕೆ ಉಧಾಹರಣೆಯಾಗಿದ್ದುಕೊಂಡು ಧಾರ್ಮಿಕ ತರಗತಿಗಳನ್ನು ಹೆಚ್ಚು ಉತ್ಸಾಹದಿಂದ ಮಾಡುವವರಾಗಿದ್ದು ವಿದ್ಯಾರ್ಥಿಗಳ ಆತ್ಮವಿಶ್ವಾಸವನ್ನು ಗಳಿಸುತ್ತಾರೆ. ಪಾವಿತ್ರ್ಯತೆಯನ್ನು ಬೆಳೆಸುವ ಪ್ರಜ್ಞೆ ಉಳ್ಳವರಾಗಿರಬೇಕು, ಅಂದರೆ ಎಷ್ಟೇ ಕಠಿಣ ಪರಿಸ್ಥಿತಿಯಲ್ಲಿ ದೇವರ ಸೇವೆಯಲ್ಲಿ ನಿಯೋಜಿಸಿಕೊಳ್ಳಲು ಯಾವಾಗಲೂ ಸಿದ್ಧರಾಗಿರಬೇಕು. ಅವರು ಅದ್ವಿತೀಯ ದಿನಚರಿಯನ್ನು ಪಾಲಿಸಿಕೊಂಡು, ಬೆಳಿಗ್ಗೆ ಬೇಗನೇ ಏಳುವುದು, ಪವಿತ್ರ ಆರಾಧನೆಯಲ್ಲಿ ಪಾಲ್ಗೊಳ್ಳುವುದು, ಪವಿತ್ರ ಸಂಸ್ಕಾರದಲ್ಲಿ[12] ತಪ್ಪದೇ ಭಾಗವಹಿಸುವುದು, ಕೈರ್ವರ್ತಿಸಿದ ಕೆಲಸಗಳನ್ನು ನಿರ್ವಹಿಸುವುದು, ಆತ್ಮೀಕ ಸ್ಮರಣ ಶಕ್ತಿಯನ್ನು ಬೆಳೆಸಿಕೊಳ್ಳುವುದು, ಯಾವಾಗಲೂ ಹಸನ್ಮುಖದಿಂದ ಇರುವುದು,

ಸಮುದಾಯ ಮತ್ತು ಹೊರಗಿನ ಸಮಾಜದಲ್ಲಿ ಸಹಾಯ ಮತ್ತು ಸಹಕಾರದಿಂದ ಇರುವುದು ಇವರ ಗುಣ. ಅವರು ಲಭ್ಯವಿರುವುದರಲ್ಲಿಯೇ ತೃಪ್ತರಾಗುವ ನಮ್ರ ಜೀವನವನ್ನು ನಡೆಸುತ್ತಾರೆ. ಭಗಿನಿಯರು ಹೊಂದಿರುವ ವಸ್ತುಗಳಲ್ಲಿ ಮೂರು ಸೀರೆಗಳು (ಧರಿಸಲು, ತೊಳೆದು ಹಾಕಲು, ಅಗತ್ಯಕ್ಕೆ ತಕ್ಕಂತೆ ಸರಿಪಡಿಸಿಕೊಳ್ಳಲು), ಎರಡು ಅಥವಾ ಮೂರು ಹತ್ತಿಯ ನಿಲುವಂಗಿ, ಒಂದು ನಡುಪಟ್ಟಿ, ಒಂದು ಜತೆ ಚಪ್ಪಲಿ, ಒಂದು ಶಿಲುಬೆ ಗುರುತು, ಒಂದು ಜಪಮಾಲೆ ಇವು ಮುಖ್ಯ ವಸ್ತುಗಳು. ಅವರು ಒಂದು ಪ್ಲೇಟ್, ಕೆಲವು ಕತ್ತರಿಸುವ ಸಲಕರಣೆಗಳು, ಕರವಸ್ತ್ರ, ನಾರು ಬಟ್ಟೆಯ ಕೈಚೀಲ ಮತ್ತು ಒಂದು ಪ್ರಾರ್ಥನಾ ಪುಸ್ತಕ ಇವುಗಳನ್ನೂ ಹೊಂದಿರುತ್ತಿದ್ದರು.ಶೀತ ರಾಷ್ಟ್ರಗಳಲ್ಲಿ ಭಗಿನಿಯರು ಆ ಪ್ರದೇಶಕ್ಕೆ ಹೊಂದಿಕೊಳ್ಳುವಂತೆ ಒಂದು ಕಸೂತಿಯ ಒಳಅಂಗಿ ಮತ್ತು ಕೋಟು, ಸ್ಕಾರ್ಫ್, ಪಾದಮುಚ್ಚುವ ಶೂ ಇಂತಹ ಸಲಕರಣೆಗಳನ್ನು ಹೊಂದಿರುತ್ತಿದ್ದರು.ಅವರು ದೂರದರ್ಶನ, ರೇಡಿಯೋ ಮುಂತಾದವುಗಳನ್ನು ಹೊಂದಿರದೆ ಬಹಳ ಸಾಮಾನ್ಯ ಜೀವನ ನಡೆಸುತ್ತಾರೆ.ಅವರು ಅಮಲು ಪದಾರ್ಥ ಸೇವನೆ ಮಾಡುವುದಾಗಲಿ ಅಥವಾ ಆಹಾರಕ್ಕಾಗಿ ಯಾರಮುಂದೆಯೂ ಕೈಚಾಚುವುದಿಲ್ಲ. ಅವರು 5 ವರ್ಷಗಳಿಗೊಮ್ಮೆ ತಮ್ಮ ಕುಟುಂಬವನ್ನು ಭೇಟಿಯಾಗುತ್ತಾರೆ ಆದರೆ ಇದಕ್ಕಾಗಿ ವಾರ್ಷಿಕ ರಜೆ ಪಡೆದುಕೊಳ್ಳುವುದಿಲ್ಲ.ಅವರು ಚರ್ಚ್‌ನ ಸೇವೆಯಲ್ಲಿ ಅಥವಾ ಚರ್ಚ್‌ನ ಕೆಲಸಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುತ್ತಾರೆ. ಆರಾಧನೆಗೆ ಉಪಯೋಗಿಸುವ ನಿಲುವಂಗಿಗಳನ್ನು ಸಿದ್ಧಪಡಿಸುವುದು, ಭಾನುವಾರಗಳಂದು ಕ್ರೈಸ್ತ ಮಕ್ಕಳಿಗೆ ಕ್ರೈಸ್ತ ಶಿಕ್ಷಣ ತರಗತಿ ನಡೆಸುವುದು, ಭಕ್ತಿಸಂಜೀವನ ಕೂಟಗಳಲ್ಲಿ ಭಾಗವಹಿಸುವುದು ಮುಂತಾದವುಗಳು ಇವರ ಕರ್ತವ್ಯಗಳು. ಇತ್ತೀಚಿನ ಎರಡನೇ ವ್ಯಾಟಿಕನ್ ಪರಿಷತ್ತಿನ ಬಳಿಕ ಚರ್ಚ್‌ನ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶ ನೀಡಲಾಗಿದೆ. ಆದರೆ ಪ್ರಭೋದನೆ ಮಾಡುವ ಮುಖ್ಯ ಕೆಲಸಕ್ಕೆ ಅವಕಾಶ ನೀಡಲಾಗಿಲ್ಲ. ಆದುದರಿಂದ ಈ ದಿನದವರೆಗೂ ಅವರ ಪಾತ್ರ ಅಧೀನರಾಗಿರುವುದಕ್ಕೆ ಸೀಮಿತವಾಗಿದೆ.ಆದರೆ ಅವರು ತಮ್ಮ ಕೆಲಸಗಳನ್ನು ನಿಷ್ಠೆಯಿಂದ ಮಾಡುತ್ತಿದ್ದು ಅದನ್ನು ದೇವರ ಕೆಲಸವೆಂದು ಸ್ವೀಕರಿಸಿದ್ದಾರೆ.

ಭಗಿನಿಯರು ಆಗಬೇಕೆಂದಿರುವವರು ನಡವಳಿಕೆಯ ಕೆಲವು ಮೌಲ್ಯಗಳನ್ನು ಪಾಲಿಸಬೇಕಾಗುತ್ತದೆ. "ಕ್ರೈಸ್ತ" ಮೌಲ್ಯಕ್ಕೆ ಧಕ್ಕೆಬರುವ ಜೀವನ ಶೈಲಿಗೆ ಕುತ್ತು ತರುವ ಮಾಧಕ ದ್ರವ್ಯಗಳನ್ನು ವಿರೋಧಿಸುವುದು, ಆರೋಗ್ಯಕರ ಆಹಾರ ಸೇವನೆಗೆ ಒತ್ತು ನೀಡುವುದು, ಮಹಿಳೆಯರನ್ನು ಮುಂಚೂಣಿಗೆ ತರುವ ಮತ್ತು ಸ್ವಾಭಿಮಾನ ಜೀವನಕ್ಕೆ ಸಮರ್ಥನೆ ನೀಡುವುದು ಇವರ ಜವಾಬ್ದಾರಿಯಲ್ಲಿ ಸೇರಿದೆ.

ಮಿಶನರಿ ವ್ಯವಸ್ಥೆ ಭಗಿನಿಯರಿಗೆ ಮತ್ತು ಮಹಿಳಾ ಮಿಶನರಿಗಳಿಗೆ ಒಂಟಿಯಾಗಿ ಪ್ರಯಾಣಿಸಲು[13] ಮತ್ತು ಅವರ ಅನುಭವದ ಕೆಲಸಗಳಿಗೆ ಅವಕಾಶ ನೀಡಿದ್ದರೂ ಹೊರದೇಶದಲ್ಲಿ ಧಾರ್ಮಿಕ ಜೀವನ ನಡೆಸುವುದು ಅಷ್ಟು ಸುಲಭ ಸಾಧ್ಯವಿರಲಿಲ್ಲ ಮತ್ತು ಅನ್ಯ ಸಂಸ್ಕೃತಿಯ ಮಧ್ಯೆ ಯೇಸುವಿನ ಬಗ್ಗೆ ಮಮತೆ ಮತ್ತು ಅತೀವ ಪ್ರೀತಿಯನ್ನು ವ್ಯಕ್ತಪಡಿಸುವುದು ಅಷ್ಟು ಸುಲಭವಾಗಿರಲಿಲ್ಲ. ನಿಜವಾಗಿಯೂ ಪ್ರಾಪಂಚಿಕ ಆಕರ್ಷಣೆಗಳನ್ನು ನಿರ್ಲಕ್ಷಿಸಿ ಪಾವಿತ್ರ್ಯತೆಯಲ್ಲಿ ಬೆಳೆಯುವುದು ಒಂದು ಪಂಥಾಹ್ವನವೇ ಆಗಿದೆ. ಆದರೆ ಭಗಿನಿಯರು ತಮ್ಮ ವಾಗ್ದಾನಗಳಿಗೆ ನಂಬಿಗಸ್ಥರಾಗಿದ್ದು ಘಟನಾವಳಿಯಲ್ಲಿ ಹೇಳಲ್ಪಟ್ಟ ಮತ್ತು ಅವರ ಧಾರ್ಮಿಕ ವಿಧಿಯಾನುಸಾರ ಕ್ರಮ ನಿಯಮಗಳನ್ನು ಪಾಲಿಸುವವರಾಗಿದ್ದಾರೆ.

ಸ್ವಚ್ಚತೆಗೆ ಪ್ರಾಧಾನ್ಯತೆ ನೀಡುವುದಕ್ಕೆ ಭಗಿನಿಯರಿಗೆ ಯಾವಾಗಲೂ ಸೂಚನೆ ನೀಡಲಾಗುತ್ತಿತ್ತು.[14] ಸ್ವ–ಸ್ವಚ್ಚತೆ ಕಾಪಾಡಿಕೊಳ್ಳುವುದು ಮತ್ತು ಆರೋಗ್ಯಕರ ಜೀವನ ಕ್ರಮಗಳಿಗೆ ಹೆಚ್ಚು ಒತ್ತು ನೀಡಲಾಗುತ್ತಿತ್ತು. ಇದರ ಭಾಗವಾಗಿ "ದೈವತ್ವದ ನಂತರ ಶುಚಿತ್ವ" ಮುಖ್ಯ ಅಂಶ ಎಂದು ಪ್ರಾಧಾನ್ಯತೆ ನೀಡಲಾಗುತ್ತಿತ್ತು., ಆದರೆ ಅದೇ ವೇಳೆ[15] ಜೀವನ ಕ್ರಮದಲ್ಲಿ ಆರೋಗ್ಯಕರ ಆಹಾರದ ಹೊರತಾಗಿ ಬರುವ ರೋಗಗಳ ಬಗ್ಗೆಯೂ ಪ್ರಾಮುಖ್ಯತೆ ವಹಿಸಲಾಗುತ್ತಿತ್ತು. ಎಲ್ಲಾ ಮಿಶನ್ ಶಾಲೆಗಳಲ್ಲಿ ಆರೋಗ್ಯಕರ ಅಭ್ಯಾಸಗಳು ಮತ್ತು ಸ್ವಚ್ಚತೆಯನ್ನು ವಿದ್ಯಾರ್ಥಿಗಳಿಗೆ ಕಲಿಸುವುದು ಕಡ್ಡಾಯವಾಗಿತ್ತು. ಕ್ರೈಸ್ತ ಮಿಶನರಿಗಳು ಅವರಿಗೆ ಶಿಸ್ತು ಮತ್ತು ಸ್ವಚ್ಚತೆಯನ್ನು ಕಲಿಸುತ್ತಿದ್ದರು ಮತ್ತು ಇತರ ಧರ್ಮೀಯರು ಇವರಲ್ಲಿರುವ ವ್ಯತ್ಯಾಸವನ್ನು ಹಳೆ ಅಭ್ಯಾಸಗಳು ಮತ್ತು ಸಂಪ್ರದಾಯಗಳನ್ನು ಬಿಟ್ಟುಬಿಡುವ ಮೂಲಕ ಕಂಡುಕೊಳ್ಳಬೇಕೆಂದು ಹೇಳುತ್ತಿದ್ದರು.ಮಿಶನ್ ಶಾಲೆಗಳಲ್ಲಿ ಹುಡುಗಿಯರಿಗೆ ಆಗಾಗ್ಗೆ ಸ್ವಚ್ಚತೆಯ ಬಗ್ಗೆ ತಿಳಿಹೇಳುವ ಉಧಾಹರಣೆಗಳನ್ನು ಕಾಣಬಹುದು. ಹೆಚ್ಚಿನ ಮಿಶನರಿ ಬರಹಗಳಲ್ಲಿ ಕ್ರೈಸ್ತ ಮಿಶನರಿಗಳ ಮುಖ್ಯ ಧ್ಯೇಯಗಳಲ್ಲಿ ಕ್ರೈಸ್ತ ನಡವಳಿಕೆ, ಕೆಲವು ಜೀವನ ಶೈಲಿಯ ಬಗ್ಗೆ ಆಗಾಗ್ಗೆ ಹೇಳಿರುವುದನ್ನು ಕಾಣಬಹುದು.

ಮಹಿಳಾ ಶಿಕ್ಷಣ ಮತ್ತು ಪ್ರಾಮುಖ್ಯವಾಗಿ ಅವರ ಪಠ್ಯಕ್ರಮದಲ್ಲಿ ಅವರ ಶಿಕ್ಷಣದ ಜತೆಗೆ ಆರ್ಥಿಕ ಲಾಭ ಹೊಂದುವ ಕೌಶಲ್ಯಗಳ ಬಗ್ಗೆ ಸಮಯ ಕೊಡುವಂತೆ ವ್ಯವಸ್ಥೆ ಮಾಡುತ್ತಿದ್ದರು.ನೇಯ್ಗೆ ಮತ್ತು ಹೊಲಿಗೆ ಮಾತ್ರವಲ್ಲದೆ ಅವರ ಕಾರ್ಯರೂಪದ ಚಟುವಟಿಕೆಗಳಲ್ಲಿ –ಮನೆವಾರ್ತೆ ನಿರ್ವಹಣೆ, ಅಡಿಗೆ ತಯಾರಿ, ಧೋಬಿ ಕೆಲಸ, ಕೈತೋಟ, ಚಿತ್ರಕಲೆ, ಪೈಂಟಿಂಗ್, ಸಂಗೀತ, ಹೈನುಗಾರಿಕೆ ಇತ್ಯಾದಿ ಕೈಕೆಲಸಗಳು ಒಳಗೊಂಡಿದ್ದವು. ಆದುದರಿಂದ ಮಹಿಳಾ ಮಿಶನರಿಗಳು ಔದ್ಯೋಗಿಕ ಶಿಕ್ಷಣದ ಮೂಲಕ ಹೆಣ್ಣುಮಕ್ಕಳಿಗೆ ಸ್ವಾವಲಂಬಿಗಳಾಗಲು ಕಲಿಸುತ್ತಿದ್ದರು. ಮಹಿಳಾ ಮಿಶನರಿಗಳು ಶಿಕ್ಷಣವನ್ನು ಹುಡುಗಿಯರಿಗೆ ಆಕರ್ಶಿತವಾಗುವಂತೆ ಮತ್ತು ಅದೇ ವೇಳೆ

ಅವರು ಸಮುದಾಯಕ್ಕೆ ಒಂದು ಆಸ್ತಿಯ ರೂಪದಲ್ಲಿ ಪರಿವರ್ತಿತರಾಗುವಂತೆ ಮಾಡುತ್ತಿದ್ದರು.[17] ಕ್ರೈಸ್ತ ಮಿಶನರಿಗಳ ಈ ಪ್ರಯತ್ನಗಳು ವ್ಯರ್ಥವಾಗಲಿಲ್ಲ ಎಂಬುದನ್ನು ಹೆಣ್ಣು ಮಕ್ಕಳು ಹೇಗೆ ಕಾರ್ಯರೂಪದ ಮತ್ತು ಅನೌಪಚಾರಿಕ ಶಿಕ್ಷಣದ ಮೂಲಕ ಪ್ರಯೋಜನವನ್ನು ಹೊಂದಿದ್ದಾರೆ ಎಂಬುದು ಮಹಿಳ ಮಿಶನರಿಗಳ ಅನೇಕ ವರದಿಗಳಲ್ಲಿ ವ್ಯಕ್ತವಾಗುತ್ತದೆ.

ಶೈಕ್ಷಣಿಕ ಮಿಶನರಿ ಸಂಸ್ಥೆ (ಪುರುಷರು ಮತ್ತು ಮಹಿಳಾ ಮಿಶನರಿಗಳು) ಆಧುನಿಕ ಭಾರತದಲ್ಲಿ ಪ್ರಾಚೀನ ಮತ್ತು ತೀರಾ ವಿಸ್ತೃತವಾದ ಸರಕಾರೇತರ ಸಂಸ್ಥೆ ಎಂದು ಪರಿಗಣಿಸಲ್ಪಟ್ಟಿದೆ; ಮಾತ್ರವಲ್ಲದೆ ಅವರ ಸೇವೆ 1813–1883ರ ಸಮಯದಲ್ಲಿ ಬಹಳ ಶಕ್ತಿಯುತವಾಗಿತ್ತು ಮತ್ತು 1854ರಲ್ಲಿ ದೇಶದ ಕಂಪೆನಿ ಸರಕಾರ ಶಿಕ್ಷಣ ಸೇವೆಗೆ ಪ್ರಾಶಸ್ತ್ಯ ಮುಖ್ಯವೆಂದು ಎಣಿಸದಿರುವಾಗ ಬಹಳಷ್ಟು ಶಿಕ್ಷಣ ಸೇವೆಗಳು ಮಿಶನರಿಗಳಿಂದ ನಡೆಸಲ್ಪಡುತ್ತಿತ್ತು. ಅವರು ಧಾರ್ಮಿಕ ಮತಾಂತರಕ್ಕಿಂತಲೂ ಅದಕ್ಕೆ ಪೂರಕವಾಗಿ ಶಿಕ್ಷಣ ಸೇವೆ ಅಗತ್ಯವೆಂದು ಕಂಡುಕೊಂಡು ಭಾರತೀಯರನ್ನು ಈ ಸೇವೆಗೆ ತರಬೇತುಗೊಳಿಸುವುದಕ್ಕೆ ಮನಸ್ಸು ಮಾಡಿದರು. ಯಾಕಂದರೆ ಸಮಾಜದ ತೀರಾ ಕೆಳವರ್ಗದ ಜನರು ತಮ್ಮ ಆಡು ಭಾಷೆಯ ಹೊರತಾಗಿ ಇತರ ಯಾವುದೇ ಭಾಷೆಯನ್ನು ಅರ್ಥೈಸಿಕೊಳ್ಳಲು ಅಸಮರ್ಥರಾಗಿದ್ದು ಕಂಪೆನಿ ಸರಕಾರವು ಈ ಮಿಶನರಿಗಳಿಗೆ ಸ್ಥಳೀಯಾ ಭಾಷೆಗಳನ್ನು ಕಲಿಯಲು, ಶಬ್ಧಕೋಶಗಳನ್ನು ತಯಾರಿಸಲು, ಗ್ರಾಮರ್ ಮತ್ತಿತರ ಪುಸ್ತಕಗಳನ್ನು ರಚಿಸಿ ಮತ್ತು ಧಾರ್ಮಿಕ ಗ್ರಂಥಗಳನ್ನು ಪ್ರಾದೇಶಿಕ ಭಾಷೆಗಳಿಗೆ ಭಾಷಾಂತರಿಸಲು ಉತ್ತೇಜನ ನೀಡಿತು.[18] ಮಿಶನರಿಗಳು ಮುಖ್ಯವಾಗಿ ಪ್ರೊತೆಸ್ತಾಂತರು ಮಹಿಳಾ ಶಿಕ್ಷಣದ ಕ್ಷೇತ್ರದಲ್ಲಿ ಮೊದಲಿಗರಾಗಿ ಕೆಲಸವನ್ನು ಮಾಡಿದ್ದು ಈ ಸೇವೆಗೆ ನಿಯೋಜಿಸಿಕೊಂಡ ತಮ್ಮ ಪತ್ನಿಯರು ಮತ್ತು ಇತರ ಮಹಿಳಾ ಮಿಶನರಿ ಸೇವಕರಿಗೆ ಪ್ರೋತ್ಸಾಹ ನೀಡಿರುವುದಕ್ಕೆ ಸಾಕ್ಷಿಯಾಗಿರುತ್ತಾರೆ.

ಆದರೆ ಅವರ ಸಕಾರಾತ್ಮಕ ಕೊಡುಗೆಗಳನ್ನು ಕೆಲವು ಸಾರಿ ಉದಾಹರಿಸಿ ಹೆಚ್ಚಾಗಿ ವಕ್ರ ಟೀಕೆ ನೀಡಲ್ಪಡುತ್ತದೆ. ಮಾತ್ರವಲ್ಲದೆ ಅವರ ಕೊಡುಗೆಗಳು ಕಂಡಿತವಾಗಿ ತಪ್ಪಿರುವ ಒಂದು ಕೊಂಡಿಯನ್ನು ಜೋಡಿಸುವ ಕೆಲಸ ಮತ್ತು ಅಲ್ಲಗಳೆಯಲಾಗದ ಕಾರ್ಯವಾಗಿದ್ದರೂ ಅದನ್ನು ನೀರವವಾಗಿ ಪರಿಗಣಿಸಿ ಭಾರತೀಯ ನವೋದಯ ಕಾಲದ ಸಾಮಾಜಿಕ ಸುಧಾರಕರು ಮೌನವಾಗಿರಲು ಬಯಸುತ್ತಾರೆ.[19]

ಮಂಗಳೂರಿನಲ್ಲಿ ಮಹಿಳಾ ಮಿಶನರಿಗಳು

ಕೆನರಾದಲ್ಲಿ ಪ್ರಥಮ ಬಾರಿಗೆ ಬಂದಿಳಿದ ಭಗಿನಿಯರು ಹೆಣ್ಣುಮಕ್ಕಳಿಗಾಗಿ ಶಾಲೆ ತೆರೆಯಲು ಬಿಷಪ್ ಮೈಕೆಲ್ ಆಂಟನಿ ಇವರಿಂದ ಆಹ್ವಾನಿಸಲ್ಪಟ್ಟ ಸೈಂಟ್ ಜೋಸೆಫ್ ಆಫ್ ಅಪಾರಿಶನ್ ಭಗಿನಿಯರು. 1859ರಲ್ಲಿ ಅವರು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಶಾಲೆಯನ್ನು ಆರಂಭಿಸಿದರು. ಶಾಲೆ ಮತ್ತು ಅವರ ಕಾನ್ವೆಂಟ್ ಮಂಗಳೂರು ಹಳೆ ಬಂದರಿನಿಂದ ಅರ್ಧ ಕಿ.ಮೀ. ವ್ಯಾಪ್ತಿಯಲ್ಲಿದ್ದು "ಬಂಗಲೆ" ಎಂದು ಕರೆಯಲ್ಪಡುತ್ತಿದ್ದ ವಿಶಾಲವಾದ ಹಳೆ ಕಟ್ಟಡದಲ್ಲಿತ್ತು. ಇದು ಅಂದು ಮಂಗಳೂರಿನಲ್ಲಿ ಹೆಸರುವಾಸಿಯಾದ ವಿಶಾಲ ಕಟ್ಟಡವಾಗಿತ್ತು. ಆದರೆ, ಅದರ ಹಾಲ್‌ಗಳ ವಿಶಾಲತೆ ಮತ್ತು ವಿನ್ಯಾಸಕ್ಕನುಸಾರವಾಗಿ ಅದು ಶಿಥಿಲ ಕಟ್ಟಡವಾಗಿತ್ತು.[20] 1866ರಲ್ಲಿ ಕಟ್ಟಡದ ಜಂತಿ ಕುಸಿದು ಬಿತ್ತು.ಮತ್ತೊಂದು ದಿನ ಮಾಡು ಕುಸಿದು ಬಿದ್ದು ತೊಂದರೆಗಳನ್ನು ಎದುರಿಸಬೇಕಾಯಿತು. ಒಬ್ಬ ಹೆಣ್ಣು ಮಗಳು ಮೃತಳಾಗಿ ಅನೇಕರು ಗಾಯಗೊಂಡರು. ಶಾಲೆ ಮುಚ್ಚಲ್ಪಟ್ಟು ಇಡೀ ಸಂಸ್ಥೆ ಮಂಗಳೂರಿನ ಜೆಪ್ಪು ಎಂಬ ಸ್ಥಳಕ್ಕೆ ಸ್ಥಳಾಂತರವಾಯಿತು. ಬಿಷಪ್ ಮೈಕೆಲ್ ಆಂಟೊನಿಯವರು ಎಷ್ಟು ಸಾಧ್ಯವೋ ಅಷ್ಟು ಬೇಗ "ಬಂಗಲೆ"ಯನ್ನು ನವೀಕರಿಸಿ "ಸೈಂಟ್ ಆನ್ಸ್" ಎಂಬ ಹೆಸರಿನಲ್ಲಿ ಮರುಸ್ಥಾಪಿಸಿದರು. ಇಲ್ಲಿ ಒಂದು ಸಣ್ಣ ಶಾಲೆ ಸ್ಥಾಪಿಸಲ್ಪಟ್ಟಿತು.ಈ ಶಾಲೆಯನ್ನು 1870ರಲ್ಲಿ ಮಂಗಳೂರಿಗೆ ಆಗಮಿಸಿದ ಅಪೋಸ್ತೊಲಿಕ್ ಕಾರ್ಮೆಲ್ ಸಿಸ್ಟರ್ಸ್ ಇವರು ವಹಿಸಿಕೊಂಡರು.ತದನಂತರ ಸಿಸ್ಟರ್ಸ್ ಆಫ್ ಸೈಂಟ್ ಜೋಸೆಫ್ ಆಫ್ ದಿ ಅಪಾರಿಶಿನ್ಸ್ ಇವರು ಕಣ್ಣಾನೂರಿನ ಪ್ರೀಸ್ಟ್ ಅವರ ಕರೆಯ ಮೇರೆಗೆ ಶಾಲೆ ಆರಂಭಿಸಲು ಅಲ್ಲಿಗೆ ಹೋದರು.

'ದಿ ಕ್ಲೋಯಿಸ್ಟರ್ಡ್ ಕಾರ್ಮೆಲ್ ಆಫ್ ಕಂಕನಾಡಿ' ಮಂಗಳೂರಿನ ಹೆಸರಾಂತ ಧಾರ್ಮಿಕ ಸಂಸ್ಥೆಯಾಗಿದೆ. 1870ರಲ್ಲಿ ಸ್ಥಾಪಿಸಲ್ಪಟ್ಟು ಭಾರತದ ಪ್ರಾಚೀನ ಕಾನ್ವೆಂಟ್ ಎಂಬ ಹೆಸರು ಗಳಿಸಿದೆ. ಕ್ಲೋಯಿಸ್ಟರ್ಡ್ ಕಾರ್ಮೆಲ್‌ನ ಸಂಸ್ಥಾಪಕರು ಮಂಗಳೂರಿನ ಮೂರನೇ ಕಾರ್ಮೆಲೈಟ್ ವಿಕಾರ್ ಅಪೋಸ್ತೋಲಿಕ್ ಆಗಿದ್ದ ಬಿಷಪ್ ಮೇರಿ ಎಫ್ರೆಮ್ ಇವರಿಂದ ಆಹ್ವಾನಿತರಾದ ಫ್ರೆಂಚ್ ಕಾರ್ಮೆಲೈಟರು.ಬಿಷಪ್ ಮೇರಿ ಎಫ್ರೆಮ್ ಇವರು ಕಾರ್ಮೆಲೈತ್ ಟೆರ್ಟಿಯಾರಿಸ್ (ಅಪೋಸ್ತೋಲಿಕ್ ಕಾರ್ಮೆಲ್) ಇದರ ಸಂಸ್ಥಾಪನೆಯ ರೂವಾರಿಯಾಗಿದ್ದರು; ಅಂದರೆ 1870ರಲ್ಲಿ ಎರಡೂ ಮಿಶನರಿ ಆರ್ಡರ್‌ನ ಮಿಶನರಿಗಳು ಜತೆಯಾಗಿ ಫ್ರಾನ್ಸ್‌ನಿಂದ ಮಂಗಳೂರಿಗೆ ಪ್ರಯಾಣಿಸಿದರು.ಈ ಸಂಸ್ಥಾಪಕರಲ್ಲಿ ಮದರ್ ವೆರೋನಿಕಾ ಆಫ್ ಪ್ಯಾಶನ್ (ಅಪೋಸ್ತೊಲಿಕ್ ಕಾರ್ಮೆಲೈಟ್ ಸಂಸ್ಥಾಪಕರು) ಮತ್ತು ಸಿಸ್ಟರ್ ಮೇರಿ ಆಫ್ ಜೀಸಸ್ ಕ್ರೂಸಿಫೈಡ್ (ಎರಡು ವರ್ಷಗಳ ವರೆಗೆ ಕ್ಲೋಯಿಸ್ಟರ್ಡ್ ಆರ್ಡರ್‌ಗೆ ಸೇರಿ ನಂತರ ಯುರೋಪ್‌ಗೆ ಹಿಂತಿರುಗಿ ನಂತರ ಬೆತ್ಲೆಹೇಮಿನಲ್ಲಿ ಮೃತಪಟ್ಟರು).ಮಂಗಳೂರಿನ ಕೆಥೋಲಿಕ ಚರಿತ್ರೆಯಲ್ಲಿ ಇವರಿಬ್ಬರೂ ಪ್ರಮುಖ ವ್ಯಕ್ತಿಗಳು. 12 ವರ್ಷಗಳ ವರೆಗೆ ಎರಡೂ ಕಾರ್ಮೆಲೈಟ್

ಸಂಸ್ಥೆಗಳು ಸೈಂಟ್ ಆನ್ಸ್ ಕಾನ್ವೆಂಟ್‌ನಲ್ಲಿ ಒಟ್ಟಿಗೆ ವಾಸ್ತವ್ಯವಿದ್ದು 1883ರ ಅಂತ್ಯದಲ್ಲಿ ಕ್ಲೋಯಿಸ್ಟರ್ಡ್ ಸಿಸ್ಟರ್ಸ್ ಹೊಸ ಸ್ಥಳಕ್ಕೆ ಸ್ಥಳಾಂತರಗೊಂಡರು. [21]

1887ರಲ್ಲಿ 'ಉರ್ಸುಲೈನ್ ಫ್ರಾನ್ಸಿಸ್ಕನ್ ಸಿಸ್ಟರ್ಸ್' (ಯು.ಎಫ್.ಎಸ್.) ಕಾಂಗ್ರೇಶನ್‌ನ ಭಗಿನಿಯರು ಮಂಗಳೂರಿಗೆ ಬಂದರು. ಫಾ। ಅರ್ಬನ್ ಸ್ಟೇನ್ ಎಂಬ ರೊಸಾರಿಯೋ ಕೆಥೆಡ್ರಲ್‌ನ ಜೆಸೂವಿಟ್ ವಿಕಾರ್‌ರವರು ತನ್ನ ಸಭಾ ವ್ಯಾಪ್ತಿಯಲ್ಲಿ ಬಹಳಷ್ಟು ಅವಿವಾಹಿತ ಮಹಿಳೆಯರು ಇರುವುದನ್ನು ಕಂಡು, ಅವರು ಹೆಚ್ಚು ಧಾರ್ಮಿಕ ನಿಷ್ಠರಾಗಿದ್ದರೂ ತಮ್ಮ ಮನೆಗಳಲ್ಲಿ ತಮ್ಮ ಉಪಸ್ಥಿತಿಯ ಅಗತ್ಯತೆಯನ್ನು ಮನಗಂಡು ಕಾಂಗ್ರಿಗೇಶನ್‌ಗೆ ಸೇರಲು ಇಚ್ಛಿಸುತ್ತಿರಲಿಲ್ಲ. ಆದುದರಿಂದ ವಿಕಾರ್‌ರವರು ತಮ್ಮ ವಿಶಾಲವಾದ ಸಭೆ (ಪಾರಿಶ್)ಯಲ್ಲಿ ಸೇವೆಗೆ ಸಹಾಯ ಮಾಡುವುದಕ್ಕಾಗಿ ಈ ಯುವ ಮಹಿಳೆಯರ ಒಂದು ಸಂಘವನ್ನು ರಚಿಸಿದರು. ಹೀಗೆ ಈ ಸಂಘವು ಒಂದು ಆರ್ಡರ್ ಆಗಿ ಪರಿವರ್ತನೆಗೊಂಡು 1934ರಲ್ಲಿ ಧಾರ್ಮಿಕ ಆರ್ಡರ್‌ನ ಮಾನ್ಯತೆಯನ್ನು ಹೊಂದಿತು.

ತಿಂಗಳ ಅಲ್ಪವಿರಾಮದೊಂದಿಗೆ ಅವರು 18 ವರ್ಷಗಳ ಕಾಲ ಸಂಸ್ಥೆಯನ್ನು ನಡೆಸಿದರು. ಆ ಅವಧಿಯಲ್ಲಿ ಶಾಂತ ಪಟ್ಟಣಗಳಲ್ಲಿ ಹಾಗೂ ಕೆಲವು ಗಲಭೆ ಪೀಡಿತ ಪ್ರದೇಶಗಳಲ್ಲಿ 25 ಕಾನ್ವೆಂಟುಗಳನ್ನು ತೆರೆಯಲಾಯಿತು.ಬಡವರ ಮತ್ತು ಅನಾಥರ ಮೇಲಿನ ಪ್ರೀತಿ ಮನಸ್ಸಿನಲ್ಲಿ ಅಮೋಘವಾಗಿತ್ತು. ಕುಂದಾಪುರ, ಮನಂತೊಡ್ಡಿ, ಕೆಮ್ಮಣ್ಣು, ಉಳ್ಳಾಲ, ಮೇರಿಹಿಲ್ ಮತ್ತು ಕೋಟೆಕಾರ್‌ನಲ್ಲಿ ಅನಾಥಾಶ್ರಮಗಳನ್ನು ತೆರೆದರು.ಹೀಗೆ ಅವರು ಸಭೆಗೆ ಸಲ್ಲಿಸಿದ ಸೇವೆಗಳು ಅವರ ಸಾಮರ್ಥ್ಯವನ್ನು ಎತ್ತಿಹಿಡಿಯುತ್ತವೆ. ಅವರ ಸಮಕಾಲೀನರು ಬಡವರು ಮತ್ತು ನಿರ್ಗತಿಕರ ಬಗೆಗಿನ ಅವರ ಕಾಳಜಿಯನ್ನು ಗಮನಿಸುತ್ತಾರೆ.ಅವರು ತಮ್ಮ ಕಛೇರಿಯನ್ನು ತ್ಯಜಿಸಿದ ನಂತರ ಶ್ರೀಲಂಕಾದಲ್ಲಿ ಕೆಲವು ವರ್ಷಗಳ ಕಾಲ ದುಡಿದು 1956ರ ಡಿಸೆಂಬರ್‌ನಲ್ಲಿ ಮಂಗಳೂರಿಗೆ ಮರಳಿದರು.ಕ್ಯಾನ್ಸರ್‌ಗೆ ಬಲಿಯಾದ ಅವರು ತಮ್ಮ ಕೊನೆಯ ದಿನಗಳನ್ನು ಮಂಗಳೂರಿನ ಸಂತ ಆನ್ಸ್ ಆಸ್ಪತ್ರೆಯಲ್ಲಿ ಕಳೆದು ಮಾರ್ಚ್ 15, 1961 ರಂದು ನಿಧನರಾದರು.

ಮದರ್ ಅನುನ್ಸಿಯಾಟಾ (1946 – 1947)

ಕೋಡಿಯಾಲ್‌ಬೈಲ್‌ನ ಪ್ರಸಿದ್ಧ ಕೊಯೆಲ್ಹೋ ಕುಟುಂಬದ ಚವೆಲಿಯರ್ ಜಾರ್ಜ್ ಮಾರ್ಟಿನ್ ಕೊಯೆಲ್ಹೋ[26] ಅವರ ಮುದ್ದಿನ ಮಗಳಾಗಿ ಜನಿಸಿದ ಮೇರಿ ಅಲೋಶಿಯಾ ಕೊಯೆಲ್ಹೋ ಮೇರಿ ಅಲೋಶಿಯಾ ಕೊಯೆಲ್ಹೋ ಅವರು ಸಭೆಗೆ ಸೇರಿ ಏಪ್ರಿಲ್ 1914ರಲ್ಲಿ ತಮ್ಮ ಮೊದಲ ಪ್ರತಿಜ್ಞೆಯನ್ನು ಕೈಗೊಂಡರು. ಅವರನ್ನು ಪ್ರೌಢಶಾಲಾ ಶಿಕ್ಷಕರಾಗಿ ನೇಮಿಸಲಾಯಿತು. ಡಿಸೆಂಬರ್ 1918ರಲ್ಲಿ ಆವರು ತಮ್ಮ ಅಂತಿಮ ಪ್ರತಿಜ್ಞೆಯನ್ನು ಪೂರೈಸಿ ಸಹೋದರಿ ಎಮ್. ಅನುನ್ಸಿಯಾಟಾ ಎಂಬ ಧಾರ್ಮಿಕ ಹೆಸರನ್ನು ಸ್ವೀಕರಿಸಿದರು. ಅವರ ಸಹೋದರನೂ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿ ಇಟಲಿಯಲ್ಲಿ ಪುರೋಹಿತ ಅಧ್ಯಯನದಲ್ಲಿ ತೊಡಗಿದ್ದನು. ಮದರ್ ಅಲೋಶಿಯಾ ಕಾಲೇಜು ಶಿಕ್ಷಣದ ಬಗ್ಗೆ ಯೋಚಿಸುತ್ತಿದ್ದಾಗ ಅವರ ಹಿರಿಯೆ ಅನೂನ್ಸಿಯಾಟಾ ಅವರಿಗೆ ಕರ್ತವ್ಯವನ್ನು ವಹಿಸಿ, ಕೆಲಸದಿಂದ ಭಾಗಶಃ ಮುಕ್ತರಾದರು. ಅವರು ಪ್ರಥಮ ದರ್ಜೆಯೊಂದಿಗೆ ಮಧ್ಯಂತರ ಪರೀಕ್ಷೆಯನ್ನು ಪಾಸಾದರು. ಅವರು ಬಿ.ಎ ಇಂಗ್ಲಿಷ್ ಪದವಿಯನ್ನು ಪ್ರಥಮ ದರ್ಜೆ ಮತ್ತು 2ನೇ ರ್‍ಯಾಂಕ್‌ನೊಂದಿಗೆ ಮದ್ರಾಸ್ ವಿಶ್ವವಿದ್ಯಾಲಯದಿಂದ ಪಡೆದರು. 1922 ರಿಂದ ಅಂದರೆ ಕಾಲೇಜು ಆರಂಭವಾದ ಮರುವರ್ಷದಿಂದ 1934ರ ವರೆಗೆ ಸಂತ ಆಗ್ನೆಸ್ ಕಾಲೇಜಿನ ಪ್ರಾಂಶುಪಾಲರಾಗಿದ್ದರು. 1924 ಜೂನ್‌ನಲ್ಲಿ ಅವರು ಸಂತ ಆಗ್ನೆಸ್ ಕಾನ್ವೆಂಟಿನ ಮೇಲ್ವಿಚಾರಕರಾಗಿ ನೇಮಕಗೊಂಡರು.ಈ ಅವಧಿಯಲ್ಲಿ ಅಲ್ಲಿ ಬಿ.ಎ ತರಗತಿಗಳನ್ನು ಉದ್ಘಾಟಿಸಲಾಯಿತು. ಆ ಮೂಲಕ ಸಂತ ಆಗ್ನೆಸ್ ಕಾಲೇಜು ದಕ್ಷಿಣ ಭಾರತದ ಏಕೈಕ ಪ್ರಥಮ

ದರ್ಜೆ ಕಾಲೇಜಾಯಿತು.1934ರಲ್ಲಿ ಅವರು ಅಪೊಸ್ತೋಲಿಕ್ ಕಾರ್ಮೆಲ್‌ನ ಉನ್ನತ ಅಧಿಕಾರಿಯಾಗಿ ನೇಮಕವಾದರು. ಒಂದು ವರ್ಷದ ನಂತರ ಕೊಲಂಬೊಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅವರು ನಿಧನರಾದರು.

ಮದರ್ ಸಿಲ್ವಿಯಾ (1947 – 1959)

ಕ್ಲೊಟಿಲ್ಡಾ ಅಲ್ಬುಕರ್ಕ್ (1902–77) ಆಗಿ ಜನಿಸಿದ ಇವರು ಮಂಗಳೂರಿನಲ್ಲಿದ್ದ ಪ್ರಸಿದ್ಧ ಹಾಗೂ ಪ್ರತಿಭಾವಂತ ಕುಟುಂಬದಿಂದ ಬಂದವರು. ಅವರು ಶ್ರೀ ಬಾಸಿಲ್ ಸವೆರಿನ್ ಅಲ್ಬುಕರ್ಕ್ ಅವರ ಹಿರಿಯ ಮಗಳು. 1922ರಲ್ಲಿ ಅಪೊಸ್ತೋಲಿಕ್ ಕಾರ್ಮೆಲ್‌ಗೆ ಸೇರಿದರು. ಹೊಸದಾಗಿ ಸ್ಥಾಪಿತವಾಗಿದ್ದ ಸಂತ ಆಗ್ನೆಸ್ ಕಾಲೇಜಿನಲ್ಲಿ ಬಿ. ಎ. ಪದವಿಯನ್ನು ಇಂಗ್ಲಿಷ್‌ನಲ್ಲಿ ಹೆನ್ರಿ ಸ್ಟೋನ್ ಚಿನ್ನದ ಪದಕ ಮತ್ತು ರಾಜಕೀಯ ಶಾಸ್ತ್ರ ಮತ್ತು ಅರ್ಥಶಾಸ್ತ್ರದಲ್ಲಿ ವಿಶಿಷ್ಟ ಶ್ರೇಣಿಗಾಗಿ ಕಾರ್ಡೋಜಾ ಮತ್ತು ಟೋಡ್ ಹಂಟರ್ ಬಹುಮಾನಗಳನ್ನು ಪಡೆದರು. ತರುವಾಯ ಅದೇ ಕಾಲೇಜಿನಲ್ಲಿ ಉಪನ್ಯಾಸಕರಾಗಿ ನೇಮಕವಾದ ಅವರು ಅನಾರೋಗ್ಯದ ನಡುವೆಯೂ ಸ್ಥಳಿಯ ಉನ್ನತಾಧಿಕಾರಿಯ ಹುದ್ದೆಗಳನ್ನು ಅಲಂಕರಿಸಿದರು. ಅಂತಿಮವಾಗಿ 1945–57ರವರೆಗೆ ಸಭೆಯ 5ನೇ ಉನ್ನತಾಧಿಕಾರಿಯಾಗಿ 12 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದರು. [27]

ಅವರ ಅವಧಿಯಲ್ಲಿ ಶ್ರೀಲಂಕಾ ಮತ್ತು ವಾಯುವ್ಯ ಭಾರತದಲ್ಲಿ ಸಭೆಗಳು ತೆರೆಯಲಾರಂಭಿಸಿದವು. ಅವರ ಅತ್ಯುನ್ನತ ಸಾಧನೆಯೆಂದರೆ 1955ರಲ್ಲಿ ಕ್ಯಾಲಿಕಟ್‌ನ ಪ್ರಾವಿಡೆನ್ಸ್ ಕಾಲೇಜನ್ನು ಪ್ರಾರಂಭಿಸಿದುದಾಗಿದೆ. (ಇದು ಮಂಗಳೂರಿನ ಸಂತ ಆಗ್ನೆಸ್ ಕಾಲೇಜು ಹಾಗೂ ಬಿಹಾರದ ಪಾಟ್ನಾ ಮಹಿಳಾ ಕಾಲೇಜನ್ನು ಹೊರತುಪಡಿಸಿದರೆ ಸಭೆಗೆ ಒಳಪಟ್ಟ ಮೂರನೇ ಕಾಲೇಜಾಗಿದೆ.) ತನ್ನ ಸಭೆಯ ಸಹೋದರಿಯರನ್ನು ವಿದೇಶಕ್ಕೆ ಉನ್ನತ ವ್ಯಾಸಂಗಕ್ಕೆ ಕಳುಹಿಸುವ ನಿರ್ಧಾರವನ್ನು ತೆಗೆದುಕೊಂಡು ಆ ಮೂಲಕ ಬಹುಕಾಲದ ಬಯಕೆಯನ್ನು ಈಡೇರಿಸಿದರು. ಅವರ ಸಮಕಾಲೀನರು ಅವರನ್ನು ಉತ್ತಮ ಬುದ್ಧಿವಂತಿಕೆ ಮತ್ತು ಅಪಾರ ತೇಜಸ್ಸನ್ನು ಹೊಂದಿದ್ದ ಶ್ರೇಷ್ಠ ಮತ್ತು ಮೋಹಕ ಮಹಿಳೆ ಎಂದು ನೆನಪಿಸಿಕೊಳ್ಳುತ್ತಾರೆ. ಅವರು ನ್ಯಾಯ ಮತ್ತು ಸದಾಚಾರಗಳ ಪಾಲಕರಾಗಿದ್ದರು. ಅವರು ದೊಡ್ಡವರಿರಲಿ, ಸಣ್ಣವರಿರಲಿ, ಶ್ರೀಮಂತರಿರಲಿ, ಬಡವರಿರಲಿ ಎಲ್ಲರ ಬಗ್ಗೆಯೂ ಒಲವನ್ನು ಹೊಂದಿದ್ದರು. ಯಾರ ಬಗ್ಗೆಯೂ ಅತಿಯಾದ ಒಲವನ್ನಾಗಲೀ ಪಕ್ಷಪಾತ ಧೋರಣೆಯನ್ನಾಗಲೀ ಅವರು

ಹೊಂದಿರಲಿಲ್ಲ. 54 ವರ್ಷಗಳ ಕಾಲ ಸಭೆಯಲ್ಲಿ ಸೇವೆಯನ್ನು ಸಲ್ಲಿಸಿದ ಅವರು 1977ರ ಫೆಬ್ರವರಿ 24 ರಂದು ತಮ್ಮ 74ನೇ ವಯಸ್ಸಿನಲ್ಲಿ ನಿಧನರಾದರು.

ಮದರ್ ಥಿಯೋಡೋಸಿಯಾ (1959 –1971)

ಲಿಲ್ಲಿ ಕುಲಾಸೊ (1989– 1995) ಎಂಬ ಹೆಸರಿನೊಂದಿಗೆ ಜನಿಸಿದ ಇವರು ಹೊಸಪೇಟೆಯ ಪ್ರಸಿದ್ಧ ಕುಲಾಸೊ ಕಾಮತ್ ಕುಟುಂಬಕ್ಕೆ ಸೇರಿದವರು. ಅವರು ಡಾ. ಬೊನ್‌ವೆಂಚರ್ ಕುಲಾಸೊ ಅವರ ಏಕೈಕ ಪುತ್ರಿ. ವಿದ್ಯಾವಂತ ಕುಟುಂಬದಿಂದ ಬಂದ ಅವರ ಒಬ್ಬ ಸಹೋದರ ಮುಂಬೈನಲ್ಲಿ ಎಲೆಕ್ಟ್ರಿಕಲ್ ಇಂಜಿನಿಯರ್, ಇನ್ನೊಬ್ಬ ಮುಂಬೈನ ಪಶ್ಚಿಮ ರೈಲ್ವೇಯಲ್ಲಿ ಮುಖ್ಯ ವಾಣಿಜ್ಯ ಅಧೀಕ್ಷಕ ಹಾಗೂ ಮತ್ತೊಬ್ಬ ಮದ್ರಾಸ್‌ನಲ್ಲಿ ಪತ್ರಕರ್ತನಾಗಿ ಸೇವೆಯನ್ನು ಸಲ್ಲಿಸುತ್ತಿದ್ದನು. ಅವರೊಬ್ಬ ಪ್ರಖ್ಯಾತ ಅಪೊಸ್ತೋಲಿಕ್ ಕಾರ್ಮೆಲೈಟ್. ಅವರು ಸಂತ ಆಗ್ನೆಸ್ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ (1934 –43) ಸೇವೆಯನ್ನು ಸಲ್ಲಿಸಿದರು. ಈ ಅವಧಿಯಲ್ಲಿ ಅವರು ಎಲ್. ಟಿ ಕೋರ್ಸ್ ಅನ್ನು ಪ್ರಾರಂಭಿಸಿದರು. ಪಾಟ್ನಾದ ಮಹಿಳಾ ಕಾಲೇಜಿನಲ್ಲಿ (1959–71) ಪ್ರಾಂಶುಪಾಲರಾಗಿ ಅವರು ಸಲ್ಲಿಸಿದ ಸೇವೆ ಗಮನಾರ್ಹವಾದುದು. ಶಿಕ್ಷಣ ಕ್ಷೇತ್ರಕ್ಕೆ ಅವರು ನೀಡಿದ ಸಮಗ್ರ ಕೊಡುಗೆಯನ್ನು ಗುರುತಿಸಿ 1971ರಲ್ಲಿ ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಡೆದ ಅತಿ ದೊಡ್ಡ ಹಾಗೂ ಸುಂದರ ಸಮಾರಂಭದಲ್ಲಿ ಭಾರತದ ಅಂದಿನ ರಾಷ್ಟ್ರಪತಿಗಳಾಗಿದ್ದ ಡಾ. ರಾಜೇಂದ್ರ ಪ್ರಸಾದ್ ಅವರು 'ಪದ್ಮಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ಇದು ಭಾರತರತ್ನ, ಪದ್ಮವಿಭೂಷಣ ಮತ್ತು ಪದ್ಮಭೂಷಣ ಪ್ರಶಸ್ತಿಗಳ ನಂತರದ ನಾಲ್ಕನೇ ಅತ್ಯುನ್ನತ ನಾಗರಿಕ ಪುರಸ್ಕಾರವಾಗಿದೆ. ಇದನ್ನು ವಿವಿಧ ಕ್ಷೇತ್ರಗಳಲ್ಲಿನ ವಿಶಿಷ್ಟ ಕೊಡುಗೆಯನ್ನು ಗುರುತಿಸಿ ನೀಡಲಾಗುತ್ತದೆ. ಉನ್ನತ ಅಧಿಕಾರಿಯಾಗಿ ಅವರು ಮೆಲ್ಬೋರ್ನ್, ಪೋರ್ಟ್‌ಬ್ಲೇರ್ ಮತ್ತು ಕುವೈತ್‌ನಲ್ಲಿ ಸಭೆಗಳನ್ನು ತೆರೆದರು. ಅವರು ಭಾರತದಲ್ಲಿ ನಡೆದ ಧಾರ್ಮಿಕ ಸಮ್ಮೇಳನದ (ಮಹಿಳಾ ಶಾಖೆ) ಅಧ್ಯಕ್ಷರಾಗಿದ್ದರು. ರೋಮ್‌ನಲ್ಲಿನ ಉನ್ನತ ಅಧಿಕಾರಿಗಳ ಅಂತಾರಾಷ್ಟ್ರೀಯ ಸಂಘಕ್ಕೆ ಭಾರತದ ಪ್ರತಿನಿಧಿ ಹಾಗೂ ವಕ್ತಾರರೂ ಆಗಿದ್ದರು. ಅವರು ನಂಬಿಕೆಯ ಪ್ರಸಾರಕ್ಕಾಗಿ ಪವಿತ್ರ ಸಭೆಗೆ ಸಲಹಾಗಾರರಾಗಿದ್ದರು. ಅವರು ತಮ್ಮ ಕೊನೆಯ ದಿನಗಳನ್ನು ಪಾಟ್ನಾದಲ್ಲಿ ಕಳೆದರು. [28]

ಅವರ ಸೇವೆಯ 11 ವರ್ಷಗಳ ಅಧಿಕಾರಾವಧಿಯಲ್ಲಿ ಕಾನ್ವೆಂಟುಗಳ ಸಂಖ್ಯೆಯಲ್ಲಿ 50% ಹೆಚ್ಚಳ ಕಂಡುಬಂದಿತು. ಅಂದರೆ ಕಾನ್ವೆಂಟುಗಳ ಸಂಖ್ಯೆ 60ರಿಂದ 92ಕ್ಕೆ ಏರಿತು. ಭಗಿನಿಯರ ಸಂಖ್ಯೆಯೂ 900 ರಿಂದ 1226ಕ್ಕೆ ಏರಿತು.

ಸಮಕಾಲೀನ ಸಮಸ್ಯೆಗಳು ಹಾಗೂ ಅಗತ್ಯಗಳ ಬಗ್ಗೆ ತಿಳಿದಿದ್ದ ಅವರು ಈ ಹಿನ್ನಲೆಯಲ್ಲಿ ತಮ್ಮ ಜವಾಬ್ದಾರಿಯನ್ನು ಅರಿತಿದ್ದರು. ಆ ಕಾರಣದಿಂದಾಗಿ ಅವರು ಗೋವಾದಲ್ಲಿ ಇನ್ನೂ ಒಂದು ಕಾಲೇಜು ಮತ್ತು ಪ್ರೌಢಶಾಲೆಗಳನ್ನು ಆರಂಭಿಸಿದರು. ತಾಂತ್ರಿಕ ಮತ್ತು ಕೈಗಾರಿಕಾ ಕಾಲೇಜುಗಳು ಮತ್ತು ಅನಾಥಾಶ್ರಮಗಳನ್ನು ಬಡವರು ಮತ್ತು ನಿರ್ಗತಿಕರನ್ನು ತಲುಪಲು ಹಾಗೂ ಕೆಳಮಟ್ಟದಲ್ಲಿದ್ದವರು ಹಾಗೂ ಅನಕ್ಷರಸ್ಥರ ಬಗೆಗಿನ ಕಾಳಜಿ ಹಾಗೂ ಸಹಾನುಭೂತಿಯಿಂದ ಈ ಸೇವೆಗಳನ್ನು ಮಾಡಿದರು.

ಐ.ಸಿ.ಎಸ್. ಅಧಿಕಾರಿ ಹಾಗೂ ಮದ್ರಾಸ್ ಪ್ರೆಸಿಡೆನ್ಸಿಯ ಅದೀನದಲ್ಲಿ ವಿವಿಧ ಜಿಲ್ಲೆಗಳ ಕಲೆಕ್ಟರ್ ಆಗಿದ್ದ 20ನೇ ಶತಮಾನದ ಅದ್ಭುತ ಸಾಧಕ ಮಂಗಳೂರಿನ ಜೆ. ಎಂ. ಲೋಬೊ ಪ್ರಭು, ಮದರ್ ಥಿಯೋಡೋಸಿಯಾ ಅವರನ್ನು 'ಶೂರ ಹೆಣ್ಣುಮಗಳು' ಎಂದು ಕರೆಯುತ್ತಾರೆ. ಏಕೆಂದರೆ ಅವರು ಸಭೆ ಮತ್ತು ಶಿಕ್ಷಣ ಸಂಸ್ಥೆಗಳನ್ನು ನಿರ್ವಹಿಸುವಲ್ಲಿ ದಿಟ್ಟ ಮಹಿಳೆಯಾಗಿ ಶಾಂತಿ ಮತ್ತು ಶಕ್ತಿಯನ್ನು ಹೊಂದಿದ್ದರು. ಸಂತ ಆನ್ಸ್ ಕಾನ್ವೆಂಟಿನಿಂದ ಮಾಧ್ಯಮಿಕ ಶಿಕ್ಷಣವನ್ನು ಪಡೆದ ತನ್ನ ತಾಯಿ ಮತ್ತು ಸೋದರ ಸಂಬಂಧಿಯನ್ನು ನೆನಪಿಸಿಕೊಳ್ಳುವ ಅವರು ಅಪೊಸ್ತೋಲಿಕ್ ಕಾರ್ಮೆಲ್ ಮಹಿಳೆಯರಿಗೆ ಶಿಕ್ಷಣವನ್ನು ನೀಡುವ ಮೂಲಕ ನೆಮ್ಮದಿಯನ್ನು ತಂದಿದೆ ತಮ್ಮ ಅಭಿಪ್ರಾಯವನ್ನು ಹೀಗೆ ಹೇಳುತ್ತಾರೆ: '.... ತುಂಬಾ ಅನಗತ್ಯ ಕಲಹಗಳಿವೆ. ತುಂಬಾ ಭಿನ್ನತೆಗಳಿವೆ. ಜನರ ನಡುವೆ ಭಿನ್ನತೆಗಳು ಬೆಳಕು ಇಲ್ಲದಿರುವುದರಿಂದ ಮಾತ್ರ ಇದೆ. ಏಕೆಂದರೆ ಅಲ್ಲಿ ಈಗ ಕತ್ತಲೆ ಇದೆ. ಈ ಕತ್ತಲೆಯನ್ನು ಹೊಡೆದೋಡಿಸುವುದು ಪುರುಷರಿಗಿಂತಲೂ ಜಗತ್ತನ್ನು ಇಷ್ಟೊಂದು ನ್ಯಾಯ ಸಮ್ಮತಗೊಳಿಸಿದ ಮಹಿಳೆಯರ ಕಾರ್ಯವಾಗಿದೆ. ಶಿಕ್ಷಣದ ಕಾರಣದಿಂದಾಗಿ ಮಂಗಳೂರಿನ ಹೆಣ್ಣುಮಕ್ಕಳು ತಮ್ಮ ಕಾಳಜಿಯನ್ನು ತಾವೇ ಹೊರಬಲ್ಲವರಾಗಿದ್ದಾರೆ.'

ಮದರ್ ಕಾರ್ಮೆಲಿಟಾ (1972–84)

ತಹಶೀಲ್ದಾರ್ ವಿಕ್ಟರ್ ಸಲ್ದಾನ ಅವರ ಹಿರಿಯ ಮಗಳಾಗಿ ಎನಿಡ್ ಸಲ್ದಾನ (1915 –2000) ಆಗಿ ಜನಿಸಿದ ಇವರಿಗೆ 1935ರಲ್ಲಿ ಕಿಂಗ್ ಜಾರ್ಜ್ ವಿ ಪಟ್ಟಾಭಿಷೇಕದ ಪದಕವನ್ನು ಮತ್ತು 1963ರಲ್ಲಿ ಪ್ರೊ ಎಕ್ಲೆಸಿಯಾ ಮತ್ತು ಪಾಂಟಿಫಿಕ್ ಅನ್ನು ನೀಡಿದರು. ಅವರ ಅಜ್ಜ ಶ್ರೀ ಜೋಕಿಮ್ ಎಲ್. ಸಲ್ದಾನ ಅವರು ತಮ್ಮ 36ನೇ ವಯಸ್ಸಿನಲ್ಲಿ ತಹಶೀಲ್ದಾರರಾಗಿದ್ದರು ಮತ್ತು ನಂತರ ಉಪಸಂಗ್ರಾಹಕರಾಗಿ ನೇಮಕಗೊಂಡರು. ಸಹೋದರಿ ಕಾರ್ಮೆಲಿಟಾ ಒಬ್ಬ ಪ್ರಖ್ಯಾತ ಶಿಕ್ಷಣ ತಜ್ಞರಾಗಿದ್ದರು. ಅವರು 1949 ರಿಂದ 1958ರ ವರೆಗೆ ಮಂಗಳೂರಿನ ಸಂತ ಆನ್ಸ್

ತರಬೇತಿ ಕಾಲೇಜಿನ ಪ್ರಾಂಶುಪಾಲರಾಗಿದ್ದರು. ನಂತರ 1960 ರಿಂದ 1963ರ ವರೆಗೆ ಮಂಗಳೂರಿನ ಸಂತ ಆಗ್ನೆಸ್ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆಯನ್ನು ಸಲ್ಲಿಸಿದರು. ನಂತರ ಕ್ಯಾಲಿಕಟ್‌ನ ಪ್ರಾವಿಡೆನ್ಸ್ ಕಾಲೇಜಿನ ಪ್ರಾಂಶುಪಾಲರಾಗಿ ಇವರು ಸಲ್ಲಿಸಿದ ಸೇವೆ ಅವಿಸ್ಮರಣೀಯವಾದುದು. ಅವರು 1972ರಲ್ಲಿ ಅಪೊಸ್ಟೋಲಿಕ್ ಕಾರ್ಮೆಲ್‌ನ ಎಂಟನೇ ಉನ್ನತ ಅಧಿಕಾರಿಯಾಗಿ ಆಯ್ಕೆಯಾಗಿ 1984ರ ವರೆಗೆ ತಮ್ಮ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದರು.

1870ರಿಂದ 1970ರವರೆಗಿನ ಅಪೊಸ್ತೋಲಿಕ್ ಕಾರ್ಮೆಲ್ ಸಭೆಯ ಪ್ರವರ್ತಕ ಉನ್ನತ ಅಧಿಕಾರಿಗಳ ಕಥೆ ಕೇವಲ ವೈಯಕ್ತಿಕ ಮಹಿಳಾ ಮಿಷನರಿಗಳ ಕಥೆಯಲ್ಲ. ಇದು 19 ಮತ್ತು 20ನೇ ಶತಮಾನದ ಕರಾವಳಿ ಕರ್ನಾಟಕದ ಉದಯೋನ್ಮುಖ ಮಹಿಳಾ ಲೋಕೋಪಕಾರಿಗಳು, ಶಿಕ್ಷಣ ತಜ್ಞರು ಮತ್ತು ಸಾಮಾಜಿಕ ಸುಧಾರಕರ ಜೀವನ ಮತ್ತು ಕೊಡುಗೆಗಳ ಯಶಸ್ಸಿನ ಕಥೆಯಾಗಿದೆ. ಮೇಲೆ ಹೇಳಿರುವ ಎಲ್ಲ ಮಹಿಳೆಯರೂ ಹೊರದೇಶಗಳಲ್ಲಿ ಮತ್ತು ಮಂಗಳೂರಿನಲ್ಲಿರುವ ಮತಪ್ರಚಾರಕ ಕಾಲೇಜುಗಳಲ್ಲಿ ಶಿಕ್ಷಣವನ್ನು ಪಡೆದವರು ಮತ್ತು ಪ್ರತಿಯಾಗಿ ಭಾರತದ ವಿವಿಧ ಭಾಗಗಳಲ್ಲಿನ ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗಾಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದವರು. ಯಾವುದೇ ಪರಿಸರಕ್ಕೆ ಹೊಂದಿಕೊಳ್ಳುವುದು ಕ್ರೈಸ್ತ ಮತಪ್ರಚಾರಕರ ಗುಣ ಸ್ವಭಾವವಾಗಿದೆ. ಕಾಲಕ್ರಮೇಣ ಅವರು ದ್ವಿಭಾಷಿಕರೂ ಆದರು. ಪ್ರಪಂಚದಾದ್ಯಂತ ಮತ ಪ್ರಚಾರಕರನ್ನು ಹೊಸ ಒಳನೋಟದೊಂದಿಗೆ ಕಾಲಕ್ರಮೇಣ ಸ್ಥಳೀಯ ಸಂಸ್ಕೃತಿ ಮತ್ತು ನಡವಳಿಕೆಗೆ ಹೊಂದಿಕೊಳ್ಳುವ ಕಾರ್ಯಕರ್ತರಂತೆ ಕಾಣಲಾಗುತ್ತದೆ. ಆದರೆ ಅಪೊಸ್ತೋಲಿಕ್ ಕಾರ್ಮೆಲ್ ಸನ್ಯಾಸಿಗಳ ವಿಷಯದಲ್ಲಿ ಹಾಗಲ್ಲ; ಅವರು ಶಿಕ್ಷಣ ತಜ್ಞರು ಎಂದು ಕರೆಯಲ್ಪಡುವ ಎಲ್ಲ ವೈಶಿಷ್ಟ್ಯಗಳನ್ನು ಹೊಂದಿದ್ದರು. ಅವರು ನಂಬಿಕೆಯನ್ನು ಹರಡುವ ಉದ್ದೇಶದಿಂದ ಇತರ ಮಿಶನರಿಗಳಂತೆ ಪ್ರಮುಖ ತಂತ್ರವಾಗಿ ಧಾರ್ಮಿಕ ಮತಾಂತರಗಳನ್ನು ಮಾಡಲು ಮುಂದಾಗಲಿಲ್ಲ. ಹುಟ್ಟು ಮತ್ತು ನಡವಳಿಕೆಯಲ್ಲಿ ಯೂರೋಪಿಯನ್ ಆಗಿದ್ದರೂ ಶೀಘ್ರದಲ್ಲಿಯೇ ಸ್ಥಳೀಯ ಸಂಸ್ಕೃತಿಗೆ ಹೊಂದಿಕೊಂಡ ಅವರು ಸಭೆಯನ್ನು ಭಾರತೀಯಗೊಳಿಸಿದರು.

ಮಹಿಳೆಯರಿಗಾಗಿ ಶಾಲೆಗಳು ಮತ್ತು ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ಸನ್ಯಾಸಿಗಳು ಸ್ತ್ರೀತ್ವ ಪರಿಕಲ್ಪನೆಗಳನ್ನು ಪುನರ್‌ವ್ಯಾಖ್ಯಾನಿಸತೊಡಗಿದರು. ಸೇವೆ ಮಾಡುವ ಬದ್ಧತೆ ಮತ್ತು ಮಹಿಳೆಯರ ಶಿಕ್ಷಣದ ಬಗೆಗಿನ ಕಾಳಜಿಯು ಇವರಿಗೆ ಸೇವಾ ಜೀವನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಹಾಗೂ ಆ ಸಾಹಸಕ್ಕೆ ಮುಂದಾಗಲು ಅಭೂತಪೂರ್ವ ಅವಕಾಶಗಳನ್ನು ಒದಗಿಸಿತು. ಪಾದ್ರಿಗಳು ಮತ್ತು ಬಿಷಪ್‌ಗಳು ನೀಡಿದ ಸಮಯೋಚಿತ ಬೆಂಬಲ ಮತ್ತು ಅವಕಾಶಗಳು ಇವರ ಧ್ಯೇಯವು ತ್ವರಿತವಾಗಿ ಯಶಸ್ಸನ್ನು ಸಾಧಿಸಲು ಒಂದು

ಪ್ರಮುಖ ಕಾರಣವಾಯಿತು. ಅವರ ಸಂಪರ್ಕಕ್ಕೆ ಬಂದ ಜನರೊಂದಿಗೆ ಅವರು ಸಂವಹನ ನಡೆಸಿದ ರೀತಿ ಇದನ್ನು ಮತ್ತಷ್ಟು ಬೆಂಬಲಿಸಿತು. ವಿಶೇಷವಾಗಿ ಈ ಸಭೆಗೆ ದಾನಿಗಳು ಮತ್ತು ಫಲಾನುಭವಿಗಳು ಹಾಗೂ ಸಾಮಾನ್ಯ ಜನರು ಯಾವುದೇ ಪರಿಸ್ಥಿತಿಯಲ್ಲಿ ಸಹಕರಿಸಲು ಸಿದ್ಧರಾಗಿದ್ದರು.

ಕೆನರಾದಲ್ಲಿ ಮಹಿಳೆಯರ ಉನ್ನತ ಶಿಕ್ಷಣದಲ್ಲಿ ಪ್ರಗತಿಯನ್ನು ಸಾಧಿಸುವುದು ಅವರ ಕಾರ್ಯಸೂಚಿಯಾಗಿದ್ದರೂ ಅವರು ಒಂದು ರೀತಿಯ ಸಂಸ್ಕೃತಿ ಮತ್ತು ನಡವಳಿಕೆಯನ್ನು ರೂಪಿಸುವಲ್ಲಿ ಯಶಸ್ವಿಯಾದರು. ಇದನ್ನು 'ದಿ ಕಾನ್ವೆಂಟ್ ಹ್ಯಾಬಿಟ್ಸ್' ಎಂದು ಕರೆಯಬಹುದು. ಇದು ಅದರಲ್ಲೂ ಮಂಗಳೂರಿನಲ್ಲಿ ಬಹಳ ವಿಶಿಷ್ಟವಾಗಿದೆ. ಈ ಕಾನ್ವೆಂಟ್ ಅಭ್ಯಾಸವನ್ನು ವಿದ್ಯಾರ್ಥಿಗಳು ಶ್ರೇಷ್ಠ ಎಂದು ಭಾವಿಸಿ ಅವರೂ ಕಾನ್ವೆಂಟುಗಳಿಗೆ ಸೇರಲು ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸಿದ ಅನೇಕ ಉದಾಹರಣೆಗಳಿವೆ. ಅದರಲ್ಲೂ ಆರ್ಥಿಕವಾಗಿ ಉತ್ತಮ ಕುಟುಂಬಗಳಿಂದ ಬಂದಿದ್ದರೂ ಸಹ ಆ ಸಂದರ್ಭದಲ್ಲಿ ಆ ಸಂಸ್ಕೃತಿಯೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ಉದ್ದೇಶದಿಂದ ಮಂಗಳೂರಿನ ಪ್ರಸಿದ್ಧ ಕುಟುಂಬಗಳ ಹೆಣ್ಣುಮಕ್ಕಳು ಉದ್ದೇಶಪೂರ್ವಕವಾಗಿ ಅವಿವಾಹಿತರಾಗಿ ಉಳಿದುಕೊಂಡಿದ್ದಾರೆ. ಸನ್ಯಾಸಿಗಳನ್ನು ಸ್ಥಳೀಯರು ಸುಶಿಕ್ಷಿತ ಸುಸಂಸ್ಕೃತ ನಡತೆಯ ವ್ಯಕ್ತಿಗಳ ಗುಂಪಾಗಿ ನೋಡುತ್ತಿದ್ದರೂ, ಸಾಂಸ್ಕೃತಿಕ ಭಿನ್ನತೆಗಳ ಹೊರತಾಗಿಯೂ ಮಹಿಳೆಯರನ್ನು ಒಗ್ಗೂಡಿಸುವ ಸಾಮರ್ಥ್ಯ ತಮ್ಮಲ್ಲಿದೆ ಎಂಬುದನ್ನು ಅವರು ಶೀಘ್ರವಾಗಿ ಅರಿತುಕೊಂಡರು.

ಮೊದಲಿನಿಂದಲೂ ಸಭೆಯ ದೃಷ್ಟಿಕೋನವು ಶಿಕ್ಷಣವನ್ನು ಪ್ರವರ್ಧಮಾನಕ್ಕೆ ತರುವುದೇ ಆಗಿದೆ. ಆ ಮೂಲಕ ಯುವ ಪೀಳಿಗೆಯ ನೈತಿಕ, ಸಾಮಾಜಿಕ, ಧಾರ್ಮಿಕ ಮತ್ತು ಬೌದ್ಧಿಕ ಗುಣಮಟ್ಟವನ್ನು ಹೆಚ್ಚಿಸುವುದೇ ಆಗಿದೆ. ಜ್ಞಾನಕ್ಕಾಗಿ ಶಿಕ್ಷಣ, ಸತ್ಯಕ್ಕಾಗಿ ಶಿಕ್ಷಣ, ಮಾನವನ ಅಭಿವೃದ್ಧಿಗಾಗಿ ಶಿಕ್ಷಣ ಎಂಬ ಸಾಲುಗಳಲ್ಲಿ ಈ ಪ್ರವರ್ತಕ ಸೋದರಿಯರ ದೃಷ್ಟಿಯನ್ನು ಗುರುತಿಸಬಹುದಾಗಿದೆ. ಎಲ್ಲ ಪ್ರಮುಖರೂ ತಾವು ಯೋಚಿಸಿದ ಈ ವಾತಾವರಣವನ್ನು ನಿರ್ಮಿಸುವಲ್ಲಿ ಯಶಸ್ವಿಯಾದರು. ಈ ಹಿನ್ನಲೆಯಲ್ಲಿ ಅವರ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ಅಪೊಸ್ತೋಲಿಕ್ ಕಾರ್ಮೆಲ್ ಸಭೆಯು ಭಾರತದಾದ್ಯಂತ ವಿವಿಧ ಉನ್ನತ ಅಧಿಕಾರಿಗಳ ನೇತೃತ್ವದಲ್ಲಿ ಸಂಸ್ಥೆಗಳನ್ನು ಆರಂಭಿಸಿತು. ಅವರಲ್ಲಿ ಹೆಚ್ಚಿನ ಉನ್ನತ ಅಧಿಕಾರಿಗಳು ಮಂಗಳೂರಿನವರು. ಅವರ ಯಶಸ್ಸಿನ ಕಥೆಗಳು ಅವರ ಬುದ್ಧಿವಂತಿಕೆ ಮತ್ತು ಪ್ರಸಕ್ತ ಸಮಾಜವನ್ನು ಎದುರಿಸುವ ಅವರ ಧೈರ್ಯಕ್ಕೆ ಕನ್ನಡಿಯಂತಿದೆ.

ಕೊನೆ ಟಿಪ್ಪಣಿಗಳು :

1. ಫ್ರಾ. ಗೇಬ್ರಿಯಲ್ ಮಾಲಿಯಕ್ಕಲ್ ಒ.ಸಿ.ಡಿ.,, (ಸಂ)," ಕಾರ್ಮೆಲೈಟ್ ಡೈರೆಕ್ಟರಿ ಆಫ್ ಇಂಡಿಯಾ" 1990, ಕೇರಳ
2. ಫ್ಲೋಸ್ ಕಾರ್ಮೆಲಿ', ಜನವರಿ, 1974
3. ಯುರೋಪಿನ ಪ್ರಯಾಣಿಕರು ತಮ್ಮ ಸುದೀರ್ಘ ಮತ್ತು ದುರಂತ ಪ್ರಯಾಣದ ಕೊನೆಯ ಮಗ್ಗಲಿಗೆ ಪ್ರವೇಶಿಸಿ, 1870ರ ನವೆಂಬರ್ 19 ರಂದು ಮಂಗಳೂರಿಗೆ ತಲುಪಿದರು. ಪೌ (ಫ್ರಾನ್ಸ್) ತೊರೆದ 9 ಸಹೋದರಿಯರಲ್ಲಿ ಕೇವಲ 6 ಮಂದಿ ಮಾತ್ರ ತಮ್ಮ ಗಮ್ಯಸ್ಥಾನವನ್ನು ತಲುಪುದರು – 3 ಕ್ಲೋಸ್ಟರ್ಡ್ ಕಾರ್ಮೆಲೈಟ್ಗಳು ಮತ್ತು 3 ಅಪೊಸ್ತೋಲಿಕ್ ಕಾರ್ಮೆಲ್ ಸಹೋದರಿಯರು, ಬಂದರ್‌ನಿಂದನೇರವಾಗಿ ರುಸಾರಿಯೊ ಕ್ಯಾಥೆಡ್ರಲ್‌ಗೆಹೋದರು, ಅಲ್ಲಿ ಅವರನ್ನು ಬಿಷಪ್ ಮೇರಿ ಎಪ್ರೆಮ್ ಮತ್ತು ಮಂಗಳೂರಿನ ಜನರು ಬಹಳ ಸಂತೋಷದಿಂದ ಸ್ವಾಗತಿಸಿದರು. ಗಂಭೀರವಾದ ಥ್ಯಾಂಕ್ಸ್ಗಿವಿಂಗ್ ಮತ್ತು 'ಟೆ ಡ್ಯೂಮ್' ನಂತರ, ಹೆಂಗಸರು, ಮಹನೀಯರು, ಮಕ್ಕಳು, ಭಾರತೀಯ ಪದ್ಧತಿಯ ಪ್ರಕಾರ ಮೆರವಣಿಗೆಯನ್ನು ರಚಿಸಲಾಯಿತು, ದಾರಿಯುದ್ದಕ್ಕೂ ಪರಿಮಳವನ್ನು ಸಿಂಪಡಿಸಿದರು. ಸೈಂಟ್ ಜೋಸೆಫ್ ಸಿಸ್ಟರ್ಸ್‌ಗೆ ಸೇರಿದಕಾನ್ವೆಂಟ್‌ನಲ್ಲಿ ತಂಗಿದರು. ಅಲ್ಲಿದ್ದ ಕಾಮೆಲೈಟ್‌ಗಳ ಸಣ್ಣ ಗುಂಪು ಹೊಸದಾಗಿ ಆಗಮಿಸಿದ ಸಹೋದರಿಯರನ್ನು ಸಂತೋಷದಿಂದ ಸ್ವಾಗತಿಸಿದರು. (ಎ ಸ್ಟ್ರೇಂಜ್ ಡೆಸ್ಟಿನಿ, ದಿ ಲೈಫ್ ಆಫ್ ಮದರ್ ವೆರೋನಿಕಾ ಆಫ್ ಪ್ಯಾಶನ್– ಅಪೊಸ್ತೋಲಿಕ್ ಕಾರ್ಮೆಲ್ ಇಂಡಿಯಾದ ಸ್ಥಾಪಕ
4. ಬಿಷಪ್ ಮಾರಿ ಎಫ್ರೆಮ್ ಒ.ಸಿ.ಡಿ (ನಂತರ ದಕ್ಷಿಣ ಕೆನರಾದ ವಿಕಾರ್ ಅಪೊಸ್ತೋಲಿಕ್ ಮತ್ತು ಭಾರತದ ಪಶ್ಚಿಮ ಕರಾವಳಿಯ ಮಲಬಾರ್, ಸಭೆಯ ಸಹ – ಸಂಸ್ಥಾಪಕ) ಫ್ರಾನ್ಸ್‌ನ ಅಜೆನ್ ಡಯಾಸಿಸ್‌ನ ಗೌರವಾನ್ವಿತ ಮತ್ತು ಧರ್ಮನಿಷ್ಠ ಕುಟುಂಬದಲ್ಲಿ ಜನಿಸಿದರು; ಅವರು ಫ್ರಾನ್ಸ್‌ನಲ್ಲಿ ಡಿಸ್ಕಾಲ್ಸ್ಡ ಕಾರ್ಮೆಲೈಟ್ಸ್‌ನ ಸಭೆಗೆ ಸೇರಿದರು. ರೆನ್ನಸ್ ಮತ್ತು ಬೋರ್ಡೆಕ್ಸ್ ಡಯಾಸಿಸ್‌ಗೆ ಸೇವೆ ಸಲ್ಲಿಸಿದ ನಂತರ ಅವರನ್ನು 1859ರಲ್ಲಿ ಭಾರತದ ಮಾಹೆ ಎಂಬ ಸಣ್ಣ ಫ್ರೆಂಚ್ ವಸಾಹತು ಪ್ರದೇಶಕ್ಕೆ ಕಳುಹಿಸಲಾಯಿತು. 1862ರಲ್ಲಿ ಅವರನ್ನು ಕ್ಯಾಲಿಕಟ್ಗೆ ಪ್ಯಾರಿಷ್ ಪಾದ್ರಿಯಾಗಿ ಕಳುಹಿಸಲಾಯಿತು. ಆ ಸಮಯದಲ್ಲಿ ಎರಡು ಕಾನ್ವೆಂಟ್ ಶಾಲೆಗಳು ಅಸ್ತಿತ್ವದಲ್ಲಿದ್ದವು. ಒಂದು ಮಂಗಳೂರಿನಲ್ಲಿ ಇನ್ನೊಂದು ಕ್ಯಾಲಿಕಟ್‌ನಲ್ಲಿ ಇದನ್ನು ಫ್ರೆಂಚ್ ಸಹೋದರಿಯರ ಸಭೆ ನಡೆಸುತ್ತಿದೆ, ಇದನ್ನು 'ಸಿಸ್ಟರ್ಸ್ ಆಫ್ ಸೈಂಟ್ ಜೋಸೆಫ್ ಆಫ್ ದಿ ಅಪರಿಷನ್' ಎಂದು ಕರೆಯಲಾಗುತ್ತದೆ. ಅವರ ಮದರ್ ಹೌಸ್ ಫ್ರಾನ್ಸ್‌ನ ಮಾರ್ಸೆಲ್‌ನಲ್ಲಿತ್ತು. ಶಿಕ್ಷಣದ ನಿರಂತರ ಬೇಡಿಕೆಗಳನ್ನು ನಿಬಾಯಿಸಲು ಅವರಿಗೆ ಸಾಧ್ಯವಾಗಲಿಲ್ಲ.

ಪ್ರಬುದ್ಧ ಪ್ರತಿಬಿಂಬದ ನಂತರ ಮೇರಿ ಎಫ್ರೆಮ್ ಕಾರ್ಮೆಲೈಟ್ ಮಿಷನ್‌ನಂತೆಯೇ ಅದೇ ಧಾರ್ಮಿಕ ಕುಟುಂಬದ ಬೋಧನಾ ಸಂಸ್ಥೆಯು ಭಾರತದ ಪಶ್ಚಿಮ ಕರಾವಳಿಯ ಕಾರ್ಮೆಲೈಟ್ ಡಯೋಸಿಸ್‌ನಲ್ಲಿ ಹೆಚ್ಚು ಅನುಕೂಲಕರವಾಗಿ ಕಾರ್ಯನಿರ್ವಹಿಸುತ್ತದೆ ಎಂಬ ತೀರ್ಮಾನಕ್ಕೆ ಬಂದರು. ಇದು ಮೂಲ ಕಾರ್ಮೆಲ್, ಯುರೋಪಿನ ಕ್ರಮಗಳನ್ನು ಆಧರಿಸಿಯೇ 'ಅಪೊಸ್ತೋಲಿಕ್ ಕಾರ್ಮೆಲ್' ಇರಬೇಕು. ಇದಕ್ಕಾಗಿ ಅವರು ಸ್ಥಳೀಯರನ್ನು ನೇಮಿಸಿಕೊಂಡರು.

5. 'ಪೋಸ್ಟ್ಯುಲೆಂಡ್ಸ್' ಎಂದರೆ ಧಾರ್ಮಿಕ ಸಭೆಯ ಸದಸ್ಯತ್ವಕ್ಕಾಗಿ ಪ್ರೊಬೆಷನರಿ ಅಭ್ಯರ್ಥಿಗಳು ಎಂದು ಅರ್ಥ.

6. ಅವರೊಂದಿಗೆ ಫ್ರೆಂಚ್ ಕ್ಲೋಸ್ಟರ್ಡ್ ಕಾರ್ಮೆಲೈಟ್ಸ್ ಎಂದು ಕರೆಯಲ್ಪಡುವ ಸನ್ಯಾಸಿಗಳು, ಎರಡನೇ ಕ್ರಮದ ಸನ್ಯಾಸಿಗಳು, ಏಕಾಂತ ಜೀವನವನ್ನು ನಡೆಸುತ್ತಿದ್ದರು, ಹೊರಗಿನ ಪ್ರಪಂಚದಿಂದ ಸಂಪೂರ್ಣವಾಗಿ ಬೇರ್ಪಡಿಸಲ್ಪಟ್ಟರು. ಸನ್ಯಾಸಿಗಳ ಎರಡು ಸಮುದಾಯಗಳು 1882 ರ ಮಾರ್ಚ್ 7 ರಂದು ಕಂಕನಾಡಿಯಲ್ಲಿ ಪ್ರತ್ಯೇಕ ಕಾನ್ವೆಂಟ್ ತೆರೆಯುವವರೆಗೆ ಏಳು ತಿಂಗಳು ಸೇಂಟ್ ಆನ್ಸ್‌ನಲ್ಲಿ ಒಟ್ಟಿಗೆ ವಾಸಿಸುತ್ತಿದ್ದರು. (ಭಾರತದ 100 ವರ್ಷಗಳ ಅಪೊಸ್ತೋಲಿಕ್ ಕಾರ್ಮೆಲ್ ಸ್ಮಾರಕ. ಮಂಗಳೂರು, 1970)

7. " . . . . ಮಿಷನ್ ಕಾರ್ಮೆಲೈಟ್‌ಗಳ ಅದೀನದಲ್ಲಿಯೇ ಇತ್ತು ಆದರೆ ಈಗ ವೆರಾಪೋಲಿಯ ನಿಯಂತ್ರಣಕ್ಕೆ ಬಂದಿತು, 1876ರಲ್ಲಿ ಇದನ್ನು ಸೊಸೈಟಿ ಆಫ್ ಜೀಸಸ್ ವೆರಿ ರೆವರೆಂಡ್ ಫಾದರ್ ನಿಕೋಲಸ್ ಮೇರಿ ಪಾಗಾನಿಯವರ ಉಸ್ತುವಾರಿಗೆ ವಹಿಸುವವರೆಗೆ, ಹೊಸ ಪ್ರೊ- ವಿಕಾರ್ ಅಪೋಸ್ತೋಲಿಕ್ ." ಸೆವೆರಿನ್ ಸಿಲ್ವಾ, ಕೆನರಾದಲ್ಲಿ ಕ್ರಿಶ್ಚಿಯನ್ ಧರ್ಮದ ಇತಿಹಾಸ, 2 ಸಂಪುಟ, ಕಾರ್ವಾರ್, 1957.

8. "ಜಿಲ್ಲೆಯ ಜನರು ಜೆಸ್ಯೂಟ್‌ಗಳು ಮಂಗಳೂರಿನಲ್ಲಿ ಮಿಷನ್ ಸ್ಥಾಪಿಸಬೇಕೆಂದು ಒತ್ತಾಯಿಸಿದರು. ಯಾಕಂದರೆ ಕಾರ್ಮೆಲೈಟ್ ಫಾದರ್‌ಗಳಿಗಿಂತ ಜೆಸುಯಿತರೇ ಇಲ್ಲಿ ಶಿಕ್ಷಣ ಸಂಸ್ಥೆ ನಡೆಸಲಿ ಎಂದು ವಿನಂತಿಸಿಕೊಂಡರು. ಯಾಕಂದರೆ ಉನ್ನತ ಶಿಕ್ಷಣಕ್ಕಾಗಿ ಇಲ್ಲಿನ ಯುವಕರು ಮದ್ರಾಸ್ ಅಥವಾ ಬಾಂಬೆಗೆ ಹೋಗಬೇಕಾಗಿತ್ತು .. " (ಕ್ರಾಂತಿ ಪು. 113)

9. ಬಾಸೆಲ್ ಮಿಷನ್ ವರದಿ, 1861, ಪು .14

10. ಅಧ್ಯಾಯ 4 ರಲ್ಲಿ, ವಿವಿಧ ಕಾರ್ಮೆಲ್ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಇನ್ಸ್‌ಪೆಕ್ಟರ್‌ಗಳು ಬಿಟ್ಟು ಕೊಟ್ಟ ಶೈಕ್ಷಣಿಕ ವರದಿಗಳ ಬಗ್ಗೆ ವಿಶೇಷ ಉಲ್ಲೇಖವಿದೆ.

11. ಫ್ಲೋಸ್ ಕಾರ್ಮೆಲಿ", ಸಂಪುಟ XXV, ಜುಲೈ 1969.

12. " ಯುರೋಪಿಯನ್ ಸಹೋದರಿಯರು ಸ್ವಾಭಾವಿಕವಾಗಿ, ವಸತಿ ಪರಿಸ್ಥಿತಿ, ಹವಾಮಾನ, ಅವರು ಧರಿಸಿದ್ದ ಬಟ್ಟೆಗಳು, ಜನರು ಮತ್ತು ತಮ್ಮ ಯೌವನವನ್ನು ಪರಿಗಣಿಸಿ ಧಾರ್ಮಿಕ ಶಿಸ್ತಿಗೆ ಹಲವು ಹೊಂದಾಣಿಕೆಗಳನ್ನು ಹೊಂದಿದ್ದರು" ಭಾ। ಕರೋಲ್ ಎ.ಸಿ.

13. ಬಿಷಪ್ ಮಾರಿ ಎಫ್ರೆಮ್ ಅವರ ಮರಣದ ನಂತರ ಕ್ಯಾಥೊಲಿಕರು ಮಂಗಳೂರು ಮಿಷನ್ ಅನ್ನು ಸೊಸೈಟಿ ಆಫ್ ಜೀಸಸ್‌ಗೆ ವರ್ಗಾಯಿಸಲು ತಮ್ಮ ಆಂದೋಲನವನ್ನು ನವೀಕರಿಸಿದರು. ಈ ಕಾರ್ಯಾಚರಣೆಯು ಕಾರ್ಮೆಲೈಟ್‌ಗಳು ಅಧೀನದಲ್ಲಿ ಮುಂದುವರಿಯಿತು. ಆದರೆ 1876 ರಲ್ಲಿ ವೆರಾಪೋಲಿಯ ನಿಯಂತ್ರಣಕ್ಕೆ ಬಂದಿತು, ಇದು ಹೊಸ ಪ್ರೊ–ವಿಕಾರ್ ಅಪೋಸ್ತೋಲಿಕ್ ಸೊಸೈಟಿ ಆಫ್ ಜೀಸಸ್‌ನಫಾದರ್ ನಿಕೋಲಸ್ ಮೇರಿ ಪಾಗಾನಿಯವರ ಉಸ್ತುವಾರಿಗೆ ವಹಿಸಿಕೊಡುವವರೆಗೂ. ನಿರ್ವಹಣೆಯಲ್ಲಿ ಬದಲಾವಣೆ ಕೋರಿ ಕಾಲಕಾಲಕ್ಕೆ ಮಂಗಳೂರಿನ ಜನರು ಹೋಲಿ ಸೀ ಗೆ ವಿವಿಧ ಅರ್ಜಿಗಳನ್ನು ಕಳುಹಿಸಿದ್ದರು. (ಕ್ರಾಂತಿ ಕೆ. ಫರಾಯಸ್, ದಿ ಕ್ರಿಶ್ಚಯನ್ ಇಂಪ್ಯಾಕ್ಟ್ ಇನ್ ಸೌತ್ ಕೆನರಾ, ಚರ್ಚ್ ಹಿಸ್ಟರಿ ಅಸೋಸಿಯೇಶನ್ ಆಫ್ ಇಂಡಿಯಾ, ಮುಂಬೈ 1999)

14. ಸೇಂಟ್ ಜೋಸೆಫ್ ಈ ಸನ್ಯಾಸಿಗಳು ಬಿಷಪ್ ಮೈಕಲ್ ಅವರೊಂದಿಗೆ ಹೊಸ ಸಿಸ್ಟರ್‌ಹುಡ್ ಹುಡುಕುವಲ್ಲಿ ನಿರತರಾಗಿದ್ದರಿಂದ ಅವರೊಂದಿಗೆ ಹೋಗಲಿಲ್ಲ ಎಂದು ತಿಳಿಸಲಾಯಿತು, ಅಲ್ಲಿ ಅವರ ಹೊಸ ಅಭ್ಯರ್ಥಿಗಳು ಅನಾಥರು ಮತ್ತು ಸಭೆಯ ಬೋರ್ಡಗಳು ಸೇಂಟ್ ಜೋಸೆಫ್ ಆಗಿದ್ದರು.

15. ಫ್ರಾನ್ಸ್‌ನ ಬಯೋನ್ನಿಂದ ಭಾರತಕ್ಕೆ ಬಂದ ಮೊದಲ ಮೂರು ಅಪೋಸ್ತೋಲಿಕ್ ಕಾರ್ಮೆಲೈಟ್‌ಗಳಲ್ಲಿ ಭಾ। ಎಲಿಯಾಸ್ ಒಬ್ಬರು. ಅವರು 1870–1877 ರವರೆಗೆ ಸೈಂಟ್ ಆನ್ಸ್ ಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿದ್ದರು ಮತ್ತು ನಂತರ 1879 ರವರೆಗೆ ಕ್ಯಾನನೋರ್‌ನಲ್ಲಿನ ಕಾನ್ವೆಂಟ್‌ನ ಉನ್ನತ ಸ್ಥಾನದಲ್ಲಿದ್ದರು. 1879 ರಲ್ಲಿ ಅವರು ಮಂಗಳೂರಿನ ವಿಕಾರಿಯೇಟ್ ಅನ್ನು ಬಿಟ್ಟು ತಿರುವನಂತಪುರದಲ್ಲಿ ಹೋಲಿ ಏಂಜಲ್ಸ್ ಕಾನ್ವೆಂಟ್‌ಗೆ ಸೇರಿಕೊಂಡರು.

16. ಅವರು ಬಂದ ಒಂದು ವರ್ಷದೊಳಗೆ ಮತ್ತು ಸಭೆಯಲ್ಲಿದ್ದ ಸನ್ಯಾಸಿಗಳ ಸಂಖ್ಯೆ ಮೂರರಿಂದ ಇಪ್ಪತ್ತೊಂದಕ್ಕೆ ಏರಿತು. ಮತ್ತು ಹೆಚ್ಚು ಆಸಕ್ತಿದಾಯಕ ಸಂಗತಿಯೆಂದರೆ, ಸಭೆಗೆ ಪ್ರವೇಶಿಸಿದ ಹುಡುಗಿಯರು ಮಂಗಳೂರಿನ ಅತ್ಯಂತ ಗೌರವಾನ್ವಿತ ಮತ್ತು ಉತ್ತಮ ವಿದ್ಯಾವಂತ ಕುಟುಂಬಗಳ ಹುಡುಗಿಯರು.

17. ಅದೇ ಪುಟ. 16

18. ಯುರೋಪಿನಿಂದ ಸಹೋದರಿಯರಿಗೆ ನಿಯಮಿತವಾಗಿ ಭಗಿನಿಯರು ಬರದೇ ಇದ್ದ ಕಾರಣ, ಅವರು ತಮ್ಮ ಸಭೆಗೆ ಸ್ಥಳೀಯರನ್ನೇ ಆಯ್ದುಕೊಳ್ಳಲು ಪ್ರಾರಂಭಿಸಿದರು.

19. ಜೊವಾನ್ನಾ ಕೊಯೆಲ್ಹೋ (ಎಸ್.ಆರ್. ಕ್ಯಾಥರೀನ್) (1846–1909) ಆಂಥೋನಿ ಜಾನ್ ಕೊಯೆಲ್ಹೋ ಅವರ ಹಿರಿಯ ಮಗಳು. (ಮುನ್ಸಿಫ್ ಸ್ಥಾನಕ್ಕೆ ಏರಿದ ಬಂಟ್ವಾಳ ಕೊಯೆಲ್ಹೋ ಕುಟುಂಬದ ಮೊದಲಿಗ) ಇವರು ಕೊಂಕಣಿ ಸ್ತುತಿಗೀತೆಗಳನ್ನು ರಚಿಸಿದ ಕೀರ್ತಿಗೂ ಪಾತ್ರರಾಗಿದ್ದರು. ಅವರು ಪ್ರಮುಖ ಸದಸ್ಯರ ಸಮಿತಿಯ ನೇತೃತ್ವ ವಹಿಸಿದ್ದರು. ಮಂಗಳೂರು ಡಯಾಸಿಸ್‌ನ ಉಸ್ತುವಾರಿ ವಹಿಸಿಕೊಳ್ಳಲು ಯೇಸುವಿನ ಸಮಾಜವನ್ನು ಆಹ್ವಾನಿಸುವ ಕ್ರಮವನ್ನು ಚರ್ಚಿಸಲು ಭೇಟಿಯಾದ ಸಮುದಾಯ. ಅವರು ಕಾನ್ವೆಂಟ್‌ಗೆ ಸೇರ್ಪಡೆಯಾದ ಮೊದಲ ಮಂಗಳೂರಿನವರಲ್ಲಿ ಒಬ್ಬರಾದ ಸಿಸ್ಟರ್ಸ್ ಆಫ್ ಸೈಂಟ್ ಜೋಸೆಫ್ ಆಫ್ ದಿ ಅಪರಿಷನ್‌ಗೆ ಸೇರಿದರು. ಇದರ ಸಹೋದರಿಯರು 1872ರಲ್ಲಿ ಕಾರ್ಮೆಲೈಟ್ ತೃತೀಯ ಸಭೆ (ನಂತರ ಅಪೊಸ್ತೋಲಿಕ್ ಕಾರ್ಮೆಲ್ ಎಂದು ಕರೆಯಲ್ಪಡುತ್ತದೆ.) ಸ್ಥಾಪನೆಯಾಗುವವರೆಗೂ ಭಾರತದ ಪಶ್ಚಿಮ ಕರಾವಳಿಯಲ್ಲಿ ಹುಡುಗಿಯರ ಶಿಕ್ಷಣವನ್ನು ಪ್ರಾರಂಭಿಸಲಾಯಿತು. ಸೇಂಟ್ ಜೋಸೆಫ್ ಸಿಸ್ಟರ್ಸ್ ಸೇರ್ಪಡೆಯಾದ ಇತರ ಹುಡುಗಿಯರ ಅಪೊಸ್ತೋಲಿಕ್‌ಗೆ ಬದಲಾಯಿಸಿದರು. ಆದರೆ ಸೀನಿಯರ್ ಕ್ಯಾಥರಿನ್ ಹಳೆಯ ಆದೇಶದೊಂದಿಗೆ ಇದ್ದರು. ಅವರು ಮಲಬಾರಿನಲ್ಲಿ ಕೆಲವು ವರ್ಷಗಳ ಕಾಲ ಸ್ಕೋಲಾಸ್ಟಿಕ್ ಕೆಲಸದಲ್ಲಿ ಕಳೆದರು, ಆದರೆ ನಂತರ ಅನಾರೋಗ್ಯದಿಂದಾಗಿ ಮಂಗಳೂರಿಗೆ ಮರಳಿದರು– ಮತ್ತು ಜೆಪ್ಪುವಿನಲ್ಲಿರುವ ಸ್ತ್ರೀ ಅನಾಥರ ಆರೈಕೆ ಮತ್ತು ಬೋಧನೆಗೆ ತಮ್ಮ ಸಮಯವನ್ನು ವಿನಿಯೋಗಿಸಿದರು. (ಮೈಕಲ್ ಲೋಬೊ, “ ಡಿಸ್ಟಿಂಗ್ವಿಶ್ಡ್ ಮಂಗಳೂರು ಕ್ಯಾಥೊಲಿಕರು (1800–2000), ಕ್ಯಾಮೆಲೋಟ್ ಪಬ್ಲಿಕೇಶನ್, ಮಂಗಳೂರು, 2002,. (ಪುಟಗಳು 149–150)

20. "ಫ್ಲೋಸ್ ಕಾರ್ಮೆಲಿ", ಸಂಪುಟ XXV, ಅಕ್ಟೋಬರ್, 1969.

21. ಸೋದರಿ ಎಮ್. ಕ್ಸೇವಿಯರ್ ಎ.ಸಿ., 'ಎ. ವುಮೆನ್ ಟು ರಿಮೆಂಬರ್, ಬೆಂಗಳೂರು ಪು 46

22. ಸಭೆಯ ಸಂವಿಧಾನಗಳಿಗೆ ರೋಮಿನಿಂದ ಅಂಗೀಕೃತ ಅನುಮೋದನೆ ಪಡೆಯಲು ಮತ್ತು ಅದನ್ನು 1926ರಲ್ಲಿ ಡಯೋಸಿಸನ್ ಹಕ್ಕಿನಿಂದ ಫೊಂಟಿಫಿಶಲ್ ಹಕ್ಕಿನ ಸ್ಥಾನಮಾನಕ್ಕೆ ಏರಿಸಲು ಸಭೆಗೆ ಸಹಾಯ ಮಾಡಿದ ಮಂಗಳೂರಿನ ಬಿಷಪ್.

23. ಲ್ಯಾಟಿನ್ ಭಾಷೆಯಲ್ಲಿರುವ ಡೆಕ್ರೆಟಮ್ ಲಾಡಿ ಎಂದರೆ "ಹೊಗಳಿಕೆಯ ತೀರ್ಪು", ಇದು ಪವಿತ್ರ ಜೀವನ ಮತ್ತು ಪವಿತ್ರ ಹಕ್ಕಿನ ಚರ್ಚಿನ ಸಂಸ್ಥೆಯ ಸಮಾಜಗಳನ್ನು ಸ್ಥಾಪಿಸಲು ಪವಿತ್ರರು ನೀಡುವ ಅಧಿಕೃತ ಅಳತೆಯಾಗಿದೆ.

24. ಮೈಕೆಲ್ ಲೋಬೊ, ಡಿಸ್ಟಿಂಗ್ವಿಶ್ಡ್ ಮಂಗಳೂರು ಕ್ಯಾಥೋಲಿಕರು (1800–2000), ಮಂಗಳೂರು ಕ್ಯಾಥೋಲಿಕ್ ಸಮುದಾಯದ ಒಂದು ಐತಿಹಾಸಿಕ ಜೀವನ ಚರಿತ್ರೆಯ ಸಮೀಕ್ಷೆ, ಕ್ಯಾಮೆಲೋಟ್ ಪಬ್ಲಿಷರ್ಸ್, ಮಂಗಳೂರು, 2000, ಪುಟ 215.

25. ವಿಶೇಷವಾಗಿ ತರಬೇತಿಯ ಅವಧಿಯಲ್ಲಿರುವ ಧಾರ್ಮಿಕ ಸಹೋದರಿಯರಿಗೆ ಸ್ಥಳ ವಸತಿ.

26. (1891–1925) 1868 ರಲ್ಲಿ ಸಂತ ಗ್ರೆಗೊರಿಯ ನೈಟ್ ಹುಡ್ ಪಡೆದ ಮೊದಲ ಮಂಗಳೂರಿಗರು. ಮುಂದಿನ 60 ವರ್ಷಗಳ ಕಾಲ ಈ ಪದವಿಯನ್ನು ಯಾವುದೇ ಮಂಗಳೂರಿಗರು ಪಡೆದಿಲ್ಲ. ಅವರ ಕಾರ್ಯಗಳಲ್ಲಿ ಸಹಕರಿಸಲು ಅವರು ಒಬ್ಬ ಬ್ರಿಟಿಷ್ ಕಾರ್ಯದರ್ಶಿಯನ್ನು ಹೊಂದಿದ್ದರು. ಇದು ಬ್ರಿಟಿಷರು ಭಾರತೀಯರಿಂದ ಉದ್ಯೋಗ ಪಡೆದ ಒಂದು ಅಪರೂಪದ ಸಂಗತಿ.

27. ಅದೇ ಪುಟ 106

28. ಅದೇ ಪುಟ 173–174

ಅಧ್ಯಾಯ 4

ಕಾರ್ಮೆಲ್ ಮತ್ತು ಮಹಿಳಾ ಶಿಕ್ಷಣ

4.1 19ನೇ ಶತಮಾತನದಲ್ಲಿ ಮಹಿಳೆಯರ ಸ್ಥಿತಿ

4.2 ಕೆನರಾದಲ್ಲಿ ಮಹಿಳಾ ಶಿಕ್ಷಣ

4.3 ಸ್ಯೆಂಟ್ ಆಗ್ನೆಸ್ ಕಾಲೇಜು: ಒಂದು ಚಾರಿತ್ರಿಕ ಅಧ್ಯಯನ

4.4 ಶಿಕ್ಷಕ ತರಬೇತಿ ಕೇಂದ್ರ

4.5 ಸ್ಯೆಂಟ್ ಆನ್ಸ್ ಶಿಕ್ಷಕ ತರಬೇತಿ ಕಾಲೇಜು

4.6 ಇತರ ಶಿಕ್ಷಣ ಸಂಸ್ಥೆಗಳು

ಅಧ್ಯಾಯ 4

ಕಾರ್ಮೆಲ್ ಮತ್ತು ಮಹಿಳಾ ಶಿಕ್ಷಣ

4.1 19ನೇ ಶತಮಾತನದಲ್ಲಿ ಮಹಿಳೆಯರ ಸ್ಥಿತಿ

ಅನಾದಿ ಕಾಲದಿಂದ ಇಂದಿನವರೆಗೆ ಮಹಿಳೆಯರಿಗೆ ಜೀವನದಲ್ಲಿ ಯಾವುದೇ ಸ್ಥಾನಮಾನವಿಲ್ಲದಿದ್ದು ಪುರುಷರಿಗೆ ಹೋಲಿಸಿದಾಗ ಎಲ್ಲಾ ವಿಷಯಗಳಲ್ಲಿ ಕನಿಷ್ಠರಾಗಿದ್ದು ಅವರ ಸಲಹೆಗಳು ಪರಿಗಣನೆಗೆ ಯೋಗ್ಯವಿಲ್ಲದ್ದು ಎಂದು ತಿಳಿಯಲಾಗುತ್ತಿತ್ತು. ಅದಕ್ಕಿಂತಲೂ ಮುಖ್ಯವಾಗಿ ಶಿಕ್ಷಣ ಪಡೆಯದಂತೆ ಮತ್ತು ಉಪಯುಕ್ತ ನಾಗರೀಕರಾಗಿರದಂತೆ[1] ನಿರ್ಭಂದಿಸಲಾಗುತ್ತಿತ್ತು. ಇದಲ್ಲದೆ ಶಿಕ್ಷಣ, ಮಹಿಳೆಯರಲ್ಲಿ ಇರಬೇಕಾದ ಸಾಂಪ್ರದಾಯಿಕ ಗುಣಗಳನ್ನು ಕೆಡಿಸಿ, ಕುಟುಂಬವನ್ನು ಅಗೌರವದ ಸ್ಥಿತಿಗೆ ತರಬಹುದು ಎಂಬ ಭಯವಿತ್ತು. ಒಬ್ಬ ಶಿಕ್ಷಣ ಪಡೆದ ಹೆಣ್ಣು ಮಕ್ಕಳು ಶಿಸ್ತುಕ್ರಮಗಳಿಗೆ ಕಡಿಮೆ ವಿಧೇಯತೆ ತೋರಿಸಿ ಹೆತ್ತವರು ಆಯ್ಕೆ ಮಾಡುವ ಗಂಡನಿಗೆ[2] ಕಡಿಮೆ ವಿಧೇಯರಾಗುತ್ತಾರೆ ಎಂದು ನಂಬಲಾಗುತ್ತಿತ್ತು. ಹೆಣ್ಣು ಮಕ್ಕಳು ಶಾಲೆಗೆ ಹೆಚ್ಚಾಗಿ ಹೋಗಿರದಿದ್ದರೂ, ಎಲ್ಲರೂ ಅನಕ್ಷರಸ್ತರೆಂದು ಅರ್ಥವಲ್ಲ. "ಗಣ್ಯರ" ಮನೆಯ ಮಹಿಳೆಯರು ಮನೆಯಲ್ಲಿಯೇ ಖಾಸಗಿ ಶಿಕ್ಷಕರ ಮೂಲಕ ಕಲಿಯುತ್ತಿದ್ದರು. ಏಕೆಂದರೆ ಅಂದಿನ ಮಿಶನ್ ಶಾಲೆಗಳು ಭಾರತೀಯರನ್ನು ಮಹಿಳಾ ಶಿಕ್ಷಣದ ಕಡೆಗೆ ಹೆಚ್ಚು ಆಕರ್ಷಿಸಿಲಿಲ್ಲ. "ಗಣ್ಯರ" ಹಿಂದೂ ಕುಟುಂಬಗಳ ಮಕ್ಕಳನ್ನು ಮತಾಂತರ ಮಾಡಬಹುದೆಂಬ ಕಾರಣಕ್ಕೆ ಈ ಶಾಲೆಗಳಿಗೆ ಕಳುಹಿಸುತ್ತಿರಲಿಲ್ಲ. ಶಾಲೆಗೆ ಹೋಗಿರುವವರು ಒಂದೇ ಕ್ರೈಸ್ತರು, ಅನಾಥರು ಇಲ್ಲವೇ ಕೆಳವರ್ಗದ ಮತ್ತು ಬಡವರ ಕುಟುಂಬದ[3] ಮಕ್ಕಳಾಗಿದ್ದರು.

19ನೇ ಶತಮಾನದ ಪೂರ್ವಾರ್ಧದಲ್ಲಿ ವಿದೇಶಿ ಮಿಶನರಿಗಳು ಭಾರತದಲ್ಲಿ ಶಿಕ್ಷಣ ವ್ಯವಸ್ಥೆ ಯಾವ ರೀತಿಯಾಗಿದೆ ಎಂದು ಮೊದಲು ತಿಳಿದುಕೊಂಡರು. ಅವರು ಭಾರತೀಯ ಹೆಣ್ಣು ಮಕ್ಕಳಿಗೆ ಶಿಕ್ಷಣದ ಅಗತ್ಯವನ್ನು ಕಂಡುಕೊಂಡರು ಆದರೆ ತಮ್ಮ ದೇಶಗಳಲ್ಲಿ ಇರುವ ಶಿಕ್ಷಣ ಕ್ರಮಗಳಿಗಿಂತ ವಿಭಿನ್ನವಾದ ಶಿಕ್ಷಣ ಕ್ರಮವನ್ನು ಅಳವಡಿಸಬೇಕು ಎಂದು ಮನಗಂಡರು. ಯಾಕಂದರೆ ಇಲ್ಲಿಯ ಸಮಾಜ ಹೆಚ್ಚು ಸಂಪ್ರದಾಯವಾಗಿದ್ದು ಬೇರೆ ಬೇರೆ ತರಹದ ನಂಬಿಕೆ, ಆಚಾರವಿಚಾರಗಳು, ಸಂಪ್ರದಾಯಿಕವಾಗಿದ್ದುದರಿಂದ ಅದನ್ನು ಅತಿಕ್ರಮಿಸುವುದು ಕಷ್ಟವಾಗಿತ್ತು. ಇದರಿಂದಾಗಿ ಲಂಡನ್ ಬ್ರಿಟಿಷ್ ಸ್ಕೂಲ್ ಸೊಸೈಟಿ ಮೇರಿ ಏನ್ ಕುಕ್ ಎಂಬ ಶಾಲಾ ಮುಖ್ಯಸ್ಥೆಯನ್ನು ಕಳುಹಿಸುವ ನಿರ್ಧಾರ ಕೈಗೊಂಡು ಅವರು 1821ರಲ್ಲಿ ಕೋಲ್ಕತ್ತಾಗೆ ಬಂದರು. ಇವರು

ಭಾರತಕ್ಕೆ ಮಹಿಳಾ ಶಿಕ್ಷಣ ಯೋಜನೆಯನ್ನು ಸಾಕಾರಗೊಳಿಸುವುದಕ್ಕೆ ಬಂದ ಪ್ರಥಮ ಮಹಿಳಾ ಮಿಶನರಿ ಅನಿಸಿಕೊಂಡರು. ಅವರು ಚರ್ಚ್ ಮಿಶನರಿ ಸೊಸೈಟಿ (ಸಿ.ಎಮ್.ಎಸ್.) ಅಧೀನದಲ್ಲಿ ಕೋಲ್ಕತ್ತಾ ಮತ್ತು ಅದರ ಸುತ್ತಮುತ್ತಲಿನ ದೇಶಿಯ ಮಹಿಳಾ ಶಿಕ್ಷಣಕ್ಕಾಗಿ "ದಿ ಲೇಡೀಸ್" ಎಂಬ ಪ್ರಶಂಸನೀಯ ಹೆಸರನ್ನು ಹೊಂದಿದ ಒಂದು ಶಾಲೆಯನ್ನು ತೆರೆದರು. ಅವರು ಸಿ.ಎಮ್.ಎಸ್.ನ ರೆವೆ. ಐಸಾಕ್ ವಿಲ್ಸನ್ ಇವರನ್ನು ವಿವಾಹವಾಗಿ ಗಂಡ ಹೆಂಡತಿಯರಿಬ್ಬರೂ ಈ ಶಾಲೆಯನ್ನು 1828ರಲ್ಲಿ 58 ಹೆಣ್ಣುಮಕ್ಕಳೊಂದಿಗೆ ಸ್ಥಾಪಿಸಿದರು. 1836ರ ಸಮಯಕ್ಕೆ ಅವರು 30 ಹೆಣ್ಣು ಮಕ್ಕಳ ಶಾಲೆಯನ್ನು "ಗಣ್ಯ ಹಿಂದೂ ಹೆಣ್ಣುಮಕ್ಕಳಿಗಾಗಿ" ತೆರೆದು "ಗಣ್ಯ ಹಿಂದೂ ಪುರುಷರ" ಬೆಂಬಲ ಪಡೆದರು ಮತ್ತು ಬ್ರಾಹ್ಮಣ ಪಂಡಿತರನ್ನು ಇಲ್ಲಿ ಶಿಕ್ಷಕರಾಗಿ ನೇಮಿಸಿದರು. ಪಾಠಪಟ್ಟಿಯು ಓದುವುದು, ಬರೆಯುವುದು, ಅಕ್ಷರಜ್ಞಾನ ಮತ್ತು ಹೊಲಿಗೆ ವಿಷಯಗಳನ್ನೊಳಗೊಂಡಿತ್ತು.[4]

1820 ಮತ್ತು 1830ರಲ್ಲಿ ಮುಂಬಯಿ, ಮದರಾಸು ಮತ್ತು ಬೆಂಗಾಲ್ ಪ್ರೆಸಿಡೆನ್ಸಿಗಳ ಸರ್ಕಾರದಿಂದ ನಡೆಸಲ್ಪಟ್ಟ ದೇಶೀಯ ಸಮೀಕ್ಷೆಯಲ್ಲಿ ಪ್ರಾಥಮಿಕ ಶಾಲೆಗಳು ಮಾತ್ರವಲ್ಲದೆ ಉನ್ನತ ಕಲಿಯುವಿಕೆಯ ಶಾಲೆಗಳಲ್ಲಿ ಹಿಂದೂ ಮತ್ತು ಮುಸ್ಲಿಂ ಮಕ್ಕಳ ಸಂಖ್ಯೆಯಲ್ಲಿ ಸಂಪೂರ್ಣ ಶೂನ್ಯತೆಯನ್ನು ವ್ಯಕ್ತಪಡಿಸಿದರು. ಪಾಶ್ಚಿಮಾತ್ಯ ಮಿಶನರಿಗಳು ಮತ್ತು ಸಮಾಜ ಸುಧಾರಕರು ಸಕ್ರೀಯರಾಗಿದ್ದರೂ, ಈಸ್ಟ್ ಇಂಡಿಯಾ ಕಂಪೆನಿ 1857ರ ನಂತರ ತಮ್ಮ ಶಿಕ್ಷಣ ಕ್ರಮ ಭಾರತೀಯ ಧಾರ್ಮಿಕ ಮತ್ತು ಸಾಮಾಜಿಕ ವಿಚಾರಗಳೊಂದಿಗೆ ಸಂಘರ್ಷಕ್ಕೆ ಎಡೆಮಾಡಿಕೊಡಬಹುದು ಎಂಬ ಕಾರಣಕ್ಕೆ ಹೆಣ್ಣು ಮಕ್ಕಳ ಶಿಕ್ಷಣದ ವಿಷಯದಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳಲಿಲ್ಲ. ಆದುದರಿಂದ ಅವರು ಧಾರ್ಮಿಕ ತಟಸ್ಥತೆಯ ತತ್ವಗಳಿಗೆ ವಿರೋಧವಾಗಬಹುದು ಎಂಬ ಕಾರಣಕ್ಕೆ ಈ ವಿಷಯದಲ್ಲಿ ಕ್ರಮ ಕೈಗೊಳ್ಳಲು ಸರ್ಕಾರವು ಮುಂದಾಗಲಿಲ್ಲ.[5]

ಈ ನಿಟ್ಟಿನಲ್ಲಿ ಭಾರತೀಯ ಮಹಿಳೆಯ ಶಿಕ್ಷಣದ ಬಗ್ಗೆ ಮೊದಲು ಬೆಳಕು ಚೆಲ್ಲಿದವರು ಕ್ರೈಸ್ತ ಮಿಶನರಿಗಳು. ಇದು ಭಾರತೀಯ ನಾಗರಿಕ ವಿದ್ಯಾವಂತ ವರ್ಗದ ಜನರಿಗೂ ಆಕರ್ಷಣೆಗೆ ಕಾರಣವಾಯಿತು. ಆಧುನಿಕ ಶಿಕ್ಷಣ ಮಾತ್ರ ಮಹಿಳೆಯರ ಪರಿಸ್ಥಿತಿ ಮತ್ತು ಸ್ಥಾನಮಾನವನ್ನು ಸುಧಾರಿಸಲು ಸಾದ್ಯ ಎಂದು ಅರಿತು ಶಿಕ್ಷಣದ ಅಗತ್ಯತೆಯನ್ನು ಪ್ರತಿಪಾದಿಸಿದರು. ಸಮಾಜ ಸುಧಾರಕರು ಮಹಿಳಾ ಶಿಕ್ಷಣದ ಅಗತ್ಯತೆಯ ಬಗ್ಗೆ ಮಾತನಾಡಿರುವುದು ಮಾತ್ರವಲ್ಲದೆ ಬರವಣಿಗೆಯ ಮೂಲಕ ತಿಳಿಸಿ ಅದು ಹಿಂದೂ ಶಾಸ್ತ್ರಗಳಿಗೆ ವಿರುದ್ಧವಾದುದಲ್ಲ ಎಂದು ಎಚ್ಚರಿಸಿದರು. ಸಾಮೂಹಿಕ ಶಿಕ್ಷಣ ಮತ್ತು ಮಹಿಳಾ ಶಿಕ್ಷಣ ಒಂದೇ ಚೌಕಟ್ಟಿನಲ್ಲಿ ಪ್ರಾರಂಭಿಸುವುದು ಅಷ್ಟು ಸುಲಭದ ವಿಚಾರವಾಗಿರಲಿಲ್ಲ. ಏಕೆಂದರೆ ಸಾಮೂಹಿಕ ಶಿಕ್ಷಣದಲ್ಲಿ ಮುಖ್ಯವಾಗಿ ಎದುರಿಸಬೇಕಾದ ತೊಂದರೆಯೆಂದರೆ ಹಣದ ಅವಶ್ಯಕತೆ ಮತ್ತು ಕೆಲವೊಮ್ಮೆ ಶಿಕ್ಷಕರ ಕೊರತೆ. ಆದರೆ ಮಹಿಳಾ

ಶಿಕ್ಷಣದಲ್ಲಿ ಸಾಮಾಜಿಕ ಸಂಪ್ರದಾಯಗಳು ಮತ್ತು ಮನೋಭಾವನೆ ಹಾಗೂ ಭಾಷೆಯ ಬಳಕೆ ಇತ್ಯಾದಿಗಳನ್ನು ಪ್ರಶ್ನಿಸುವುದು ಕಷ್ಟವಾಗಿದ್ದರಿಂದ ಹೆಣ್ಣು ಮಕ್ಕಳು ಒಂದು ನಿಶ್ಚಿತ ಪ್ರಾಯದ ಬಳಿಕ ವಿದ್ಯಾಭ್ಯಾಸ ಮುಂದುವರಿಸುವುದು ಅಸಾಧ್ಯವಾಗಿತ್ತು.[6]

ಸರ್ ಚಾರ್ಲ್ಸ್ ವುಡ್ ಅವರು ತಮ್ಮ 1854ರ ಪ್ರಖ್ಯಾತ ಎಡುಕೇಶನ್ ಡಿಸ್‌ಪ್ಯಾಚ್ ಎಂಬ ಪುಸ್ತಕದಲ್ಲಿ: "ಭಾರತದಲ್ಲಿ ಮಹಿಳಾ ಶಿಕ್ಷಣದ ಪ್ರಾಮುಖ್ಯತೆಯನ್ನು ವಿವರಿಸುತ್ತಾ, ದೇಶೀಯರು ತಮ್ಮ ಹೆಣ್ಣು ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡಲು ಮುಕ್ತ ಮನಸ್ಸುಳ್ಳವರಾಗಿದ್ದಾರೆ ಎಂದು ಒಪ್ಪಿಕೊಳ್ಳುತ್ತಾರೆ". ಹೀಗೆ 1860ಯ ನಂತರ ಪ್ರಾರಂಭವಾದ ಮಹಿಳಾ ಶಿಕ್ಷಣ ಇತರ ಮಿಶನರಿ ಏಜೆನ್ಸಿಗಳಿಗೆ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಶಾಲೆಗಳನ್ನು ತೆರೆಯುವುದಕ್ಕೆ ಒಂದು ಮಾಧರಿಯಾಯಿತು.[7] ಮಹಿಳಾ ಶಿಕ್ಷಣದ ಬಗ್ಗೆ ಸಾರ್ವಜನಿಕವಾಗಿ ಪ್ರಚಾರ ಮಾಡಿದವರಲ್ಲಿಪಂಡಿತ ರಮಾಬಾಯಿ ಸರಸ್ವತಿ[8] (1858–1922) ಇವರು ಮೊದಲಿಗರು. ಇವರು ಮಹಿಳಾ ಶಿಕ್ಷಣಕ್ಕಾಗಿ ಅವಿಶ್ರಾಂತವಾಗಿ ಶ್ರಮಿಸಿದವರು. ಈ ನಿಟ್ಟಿನಿಂದ ವಿಧವೆಯರು, ನಿರ್ಗತಿಕ ಮಹಿಳೆಯರು, ಮತ್ತಿತರರಿಗೆ ಸಹಾಯ ಮಾಡುವ ಉದ್ದೇಶದಿಂದ "ಮುಕ್ತಿ" ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ನಂತರ ಬ್ರಹ್ಮ ಸಮಾಜ ಬಂಗಾಳದಲ್ಲಿ ಮಹಿಳಾ ಶಿಕ್ಷಣದ ಇದೇ ಸೇವೆಯನ್ನು ಮುಂದುವರಿಸಿತು. ಇದರ ನಾಯಕರು ಮಹಿಳಾ ಶಿಕ್ಷಣದ ಪ್ರಾಮುಖ್ಯತೆಯನ್ನು ಭಾಷಣಗಳ ಮೂಲಕ ತಿಳಿಸಿ ಮಹಿಳಾ ಶಿಕ್ಷಣಕ್ಕಾಗಿ 1862ರಲ್ಲಿ "ಬಂಧೋಧಿನಿ ಸಭಾ" ಎಂಬ ಸಂಘವನ್ನು ಸ್ಥಾಪಿಸಿ ಬಂಗಾಳ ಮತ್ತು ಇತರೆಡೆ 19ನೇ ಶತಮಾನದ ಅಂತ್ಯದಲ್ಲಿ ಮಹಿಳಾ ಶಿಕ್ಷಣದ ಉದ್ದೇಶ ಮತ್ತು ವಸ್ತು ವಿಷಯಗಳು ಎಲ್ಲಾ ಮೂಲಗಳ ಜನರಲ್ಲಿ ಹರಡಲು ಮುಂದಾಗಿತ್ತು.

ಒಂದು ಹಂತದಲ್ಲಿ ಮಹಿಳಾ ಶಿಕ್ಷಣದ ಬಗ್ಗೆ ಪ್ರಚಾರ ಮಾಡಲು ತೀವ್ರತರವಾದ ಪ್ರಯತ್ನಗಳು ನಡೆಯುತ್ತಿರುವಾಗ, ಅದೇ ಸಮಯದಲ್ಲಿ ಶಿಕ್ಷಣದ ಉದ್ದೇಶ ಕೇವಲ ಮಹಿಳೆಯರನ್ನು ವಿದ್ಯಾವಂತಳಾಗುವಂತೆ ಮಾತ್ರವಲ್ಲ ಬದಲಾಗಿ ಆದರ್ಶ ತಾಯಂದಿರು, ಸಹೋದರಿಯರು ಹಾಗೂ ಗಂಡಂದಿರಿಗೆ ಪ್ರಭುದ್ದ ಸಂಗಾತಿಯಾಗಿ ಪರಿವರ್ತಿಸುವುದು ಕೂಡಾ ಶಿಕ್ಷಣದ ಉದ್ದೇಶವಾಗಿತ್ತು. ಉದಾಹರಣೆಗೆ ಥಿಯೊಸೋಫಿಕಲ್ ಸೊಸೈಟಿ ಮುಕ್ತವಾಗಿ ಈ ದೋರಣೆಯನ್ನು ಪ್ರತಿಪಾದಿಸಿತು. ಮದರಾಸು ಪ್ರೆಸಿಡೆನ್ಸಿಗೆ ಅನ್ನಿ ಬೆಸೆಂಟ್ ಬೇಟಿಯಾದ ಸಂದರ್ಭದಲ್ಲಿ ತಮ್ಮ ಭಾಷಣದಲ್ಲಿ ಸ್ತ್ರೀತ್ವ ಆದರ್ಶಗಳು ಎಂದು ವಿವರಿಸುವ ಅರ್ಥ ಇದೆ.

ಮುಂಬಯಿ ಪ್ರೆಸಿಡೆನ್ಸಿಯಲ್ಲಿ ಧೋಂಡೊ ಕೇಶವ್ ಕಾರ್ವೆ ಅವರು 1890ರಲ್ಲಿ ಪೂನಾದಲ್ಲಿ ಹೆಣ್ಣು ಮಕ್ಕಳಿಗಾಗಿ ಬಹಳಷ್ಟು ಶಾಲೆಗಳನ್ನು ತೆರೆದರು. 1896ರಲ್ಲಿ ಇವರು ವಿಧವೆಯರಿಗಾಗಿ ಆಶ್ರಮವನ್ನು ತೆರೆದು ಕ್ರಮೇಣ ಇದು ಶಾಲೆಯಾಗಿ ಪರಿವರ್ತನೆಯಾಯಿತು. ಈ ಶಾಲೆಯ ಪಾಠಪಟ್ಟಿ ಯುವ ವಿಧವೆಯರನ್ನು ಉದ್ಯೋಗ ಹೊಂದಲು

ಮತ್ತು ಸ್ವಾವಲಂಬಿಗಳಾಗುವ ರೀತಿಯಲ್ಲಿ ತಯಾರಿಸುತ್ತಿತ್ತು. ಕಾರ್ವೆಯವರ ಪತ್ನಿಯ ತಂಗಿಯಾದ ಆನಂದಿಭಾಯಿ ಕಾರ್ವೆಯವರಿಗೆ ಶಾಲೆ ಬೆಳೆಯಲು ಮತ್ತು ವಿಸ್ತಾರಗೊಳ್ಳಲು ಸಹಾಯ ಮಾಡಿದರು. ಪಾರ್ವತಿಬಾಯಿ ಮಹಿಳಾ ಶಿಕ್ಷಣದ ದೊಡ್ಡ ಪ್ರತಿಪಾದನೆ ಮಾಡುವರಾಗಿದ್ದರು. ಅವರು ಮಹಿಳೆಯರಿಗೆ ಅವರ ಮನೆಗಳ ಉತ್ತಮ ನಿರ್ವಹಣೆ, ಮನೆಗಳನ್ನು ಸುಂದರವಾಗಿ ಮತ್ತು ಆರೋಗ್ಯಕರವಾಗಿ ಪರಿವರ್ತಿಸುವುದರ ಮೂಲಕ ಅವರ ಗಂಡಂದಿರು ಮನೆಯ ಕಡೆಗೆ ಆಕರ್ಷಿತರಾಗಿ ಹೊರಗೆ ಸಮಯ ಕಳೆಯುವುದನ್ನು ಕಡಿಮೆ ಮಾಡಲು ಅನುಕೂಲವಾಗುವಂತೆ ಅವರ ಶಿಕ್ಷಣದಲ್ಲಿ ಮನೆಗಳನ್ನು ಬೆಳೆಸುವುದಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಬೇಕೆಂದು ಬಯಸುತ್ತಿದ್ದರು. ಏಕೆಂದರೆ ಹೆಚ್ಚಿನ ಮಹಿಳೆಯರು ಆ ಸಂದರ್ಭದಲ್ಲಿ ಉದ್ಯೋಗ ಮಾಡುವುದಕ್ಕೆ ವಿರೋಧಿಸುತ್ತಿದ್ದರು. ಆದುದರಿಂದ ಮಹಿಳೆಯರನ್ನು ಉತ್ತಮ ತಾಯಂದಿರನ್ನಾಗಿಸಲು ಮಹಿಳಾ ಶಿಕ್ಷಣವನ್ನು ಒಂದು ರಾಷ್ಟ್ರೀಯ ಆಂದೋಲನವನ್ನು ಹುಟ್ಟು ಹಾಕಬಯಸಿದ್ದರು. ಆದುದರಿಂದ ಇದು ಮಹಿಳಾ ಶಿಕ್ಷಣವನ್ನು ಉತ್ತೇಜಿಸುವ ಭಾರತೀಯ ಸಮಾಜ ಸುಧಾರಕರ ಧರ್ಮಯುದ್ಧವಾಗಿತ್ತು.

4.2 ಕೆನರಾದಲ್ಲಿ ಮಹಿಳಾ ಶಿಕ್ಷಣ

1871ರಲ್ಲಿ ನಡೆದ ಪ್ರಥಮ ಜನಗಣತಿ ಪ್ರಕಾರ ಜಿಲ್ಲೆಯ ಜನಸಂಖ್ಯೆ 19, 39, 315. ಪ್ರಮುಖವಾಗಿ ಗಮನಿಸಬೇಕಾದ ಅಂಶ ಪುರುಷರಿಗಿಂತ ಮಹಿಳೆಯರ ಜನಸಂಖ್ಯೆ ಹೆಚ್ಚಾಗಿತ್ತು. ಉದ್ಯೋಗದ ನಿಮಿತ್ತ ಮತ್ತು ಪಟ್ಟಣದಲ್ಲಿರುವ ಶಿಕ್ಷಣ ಸವಲತ್ತುಗಳಿಗಾಗಿ ಜನಸಂಖ್ಯೆ ಹಳ್ಳಿಗಳಿಂದ ವಲಸೆಹೋಗಿ ಪಟ್ಟಣ ಸೇರುವುದು ಅಧಿಕವಾಗಿತ್ತು.[9]

ಕ್ರಾಂತಿ ಕೆ. ಫರಾಯಸ್ ರವರು ಹೇಳುವಂತೆ, ದೇಶದ ಇತರ ಭಾಗಗಳಿಗೆ ಹೋಲಿಸಿದರೆ ಕರಾವಳಿ ಜಿಲ್ಲೆಯವರೂ ಉತ್ತಮ ವಿನ್ಯಾಸದ ಮನೆಗಳನ್ನು ಹೊಂದಿದ್ದರು, ಮತ್ತು ದಕ್ಷಿಣದ ಇತರ ಪಟ್ಟಣಗಳಲ್ಲಿದ್ದ ಬಡತನ ಮತ್ತು ನಿಕೃಷ್ಟ ಪರಿಸ್ಥಿತಿ ಇವರಿಗೆ ಒದಗಿ ಬಂದಿರಲಿಲ್ಲ. ಕೆಥೋಲಿಕರ ಪ್ರತೀ ದೇವಾಲಯಗಳಲ್ಲಿ ಖಾಸಗೀ ವ್ಯಕ್ತಿಗಳಿಂದ ನಡೆಸಲ್ಪಡುತ್ತಿದ್ದು ಒಂದೇ ಪೋರ್ಚುಗೀಸ್ ಇಲ್ಲವೇ ದೇಶೀಯ ಕ್ರೈಸ್ತರ ವಿದ್ಯಾವಂತ ಹೆತ್ತವರಿಂದ ಸಹಾಯ ನೀಡಲ್ಪಡುತ್ತಿದ್ದ ಶಾಲೆಗಳು ಇದ್ದವು. ದೇಶೀಯ ಕ್ರೈಸ್ತರು ಕೆನರಾದಲ್ಲಿ 21,500ಕ್ಕೆ ಕಡಿಮೆ ಇಲ್ಲದಂತೆ ಉನ್ನತ ವರ್ಗಕ್ಕೆ ಸೇರಿದವರಾಗಿದ್ದು ಅವರು ಪೂರ್ವತಾ ಕೊಂಕಣ (ಗೋವಾ) ಪ್ರದೇಶಕ್ಕೆ ಸೇರಿದ್ದ ಬ್ರಾಹ್ಮಣರಾಗಿದ್ದರು

ಮಾತ್ರವಲ್ಲದೆ ಒತ್ತಾಯ ಪೂರ್ವಕವಾಗಿ ಪೋರ್ಚುಗೀಸರಿಂದ ಹಿಂದೆ ಕ್ರೈಸ್ತ ಧರ್ಮಕ್ಕೆ ಮಾತಾಂತರ ಮಾಡಲ್ಪಟ್ಟವರಾಗಿದ್ದರು.[10]

ಗೋವಾದ ಧರ್ಮಗುರುಗಳು ಕಲಿಸುತ್ತಿದ್ದ ಸ್ಥಿತಿವಂತ ಕುಟುಂಬಗಳ ಮಕ್ಕಳ ಶಾಲೆಗಳನ್ನು ಹೊರತು ಪಡಿಸಿದರೆ ಉತ್ತಮವಾಗಿ ಸಂಯೋಜಿಸಲ್ಪಟ್ಟ ಕೆಥೋಲಿಕ ಮಿಶನ್ ಶಾಲೆಗಳು ವಿರಳವಾಗಿದ್ದವು.[11] 19ನೇ ಶತಮಾನದ ಮೊದಲ ದಶಕಗಳಲ್ಲಿ ಪ್ರೊಟೆಸ್ಟಂಟರ ಮಿಶನ್ ಮಂಗಳೂರಿನಲ್ಲಿ ಹೆಣ್ಣು ಮಕ್ಕಳ ಶಿಕ್ಷಣವನ್ನು ಆರಂಭಿಸಿದರು.[12] ಇದು ಮೂಲತ: ಬ್ರಾಹ್ಮಣ ಹೆಣ್ಣು ಮಕ್ಕಳಿಗಾಗಿಸ್ಥಾಪಿತವಾಗಿತ್ತು.[13] 19ನೇ ಶತಮಾನದ ಮೊದಲ ಭಾಗದಲ್ಲಿ ಕೆಥೋಲಿಕ ಸಭೆಯಿಂದ ಮತ್ತು ಮಂಗಳೂರಿನ ಆಸಕ್ತ ಜನರಿಂದ ಹೆಣ್ಣು ಮಕ್ಕಳಿಗಾಗಿಯೇ (ಕೆಥೋಲಿಕ) ಶಾಲೆ ಆರಂಭಿಸುವ ಪ್ರಯತ್ನ ಬಹಳಷ್ಟು ಮಾಡಿದರೂ ಅದು ನಿಷ್ಪಲವಾಯಿತು. ಮೇ 24, 1857ರಂದು ಧರ್ಮಾಧ್ಯಕ್ಷರ ಅನುಮತಿ ಇಲ್ಲದೆ ಆರಂಭಗೊಂಡ ಹೊಸ ಶಾಲೆ ಮುಚ್ಚಲ್ಪಟ್ಟಿದ್ದು ಮಾತ್ರವಲ್ಲದೆ 26 ವಿದ್ಯಾರ್ಥಿಗಳು ಹಿಂದೆ ಕಳುಹಿಸಲ್ಪಟ್ಟರು ಇದು ಸೌತ್ ಕೆನರಾದಲ್ಲಿ ಮಹಿಳಾ ಶಿಕ್ಷಣದ ಮೊದಲ ಪ್ರಯತ್ನಕ್ಕೆ ಆದ ಹಿನ್ನಡೆ. ಬಿಷಪ್ ಮೈಕೆಲ್ ಆಂಟನಿ[14] ಇವರ ಅನುಮತಿ ಹೊಂದದಿರುವುದು ಮಾತ್ರವಲ್ಲದೆ ಕೆಥೋಲಿಕ ಶಿಕ್ಷಕಿ ಲಭ್ಯವಿಲ್ಲದೆ, ಒಬ್ಬ ಅನನುಭವಿ ಬ್ರಾಹ್ಮಣ ಶಿಕ್ಷಕರನ್ನು ನಿಯೋಜಿಸಲಾಗಿತ್ತು. ಶ್ರೀ ಎ. ಜೆ. ಸಲ್ಡಾನ[15] ಇವರು ತಮ್ಮ ಮನೆಯ ಮುಖ್ಯದ್ವಾರದಲ್ಲಿದ್ದ ಈ ಶಾಲೆಯ ಮುಖ್ಯ ಮೇಲ್ವಿಚಾರಕರಾಗಿ ಜವಾಬ್ದಾರಿಯನ್ನು ವಹಿಸಿಕೊಂಡಿದ್ದು. ಕೆಥೋಲಿಕ ವಿಧವೆ ಸಮಿತಿಯ ವಿನಂತಿಯ ಮೇರೆಗೆ ತರಗತಿಯ ಸಮಯದಲ್ಲಿ ಶಾಲೆಯ ಸಂರಕ್ಷಣೆಯ ಜವಾಬ್ದಾರಿ ವಹಿಸಿಕೊಂಡರು. ಬೆಂಗಳೂರಿನ ವಿಕಾರ್ ಅಪೋಸ್ತೊಲಿಕ್ ಆಗಿದ್ದ ಬಿಷಪ್ ಕಾರ್ಬೊನಿಯಾವ್ ಅವರು ಅನುಮೋದಿಸಿದ ಕನ್ನಡ ಪಾಠ ಪುಸ್ತಕಗಳನ್ನು ಉಪಯೋಗಿಸಲಾಗುತ್ತಿತ್ತು. ಧರ್ಮಾಧ್ಯಕ್ಷರು ಕೂಡಾ ಕೆಥೋಲಿಕ ಮಕ್ಕಳಿಗೆ ಹಿಂದೂ ಶಿಕ್ಷಕಿ ಕಲಿಸುವುದಕ್ಕೆ ವಿನಾಯತಿ ನೀಡಿದರು. ತದನಂತರ ಆ ದಿನಗಳಲ್ಲಿ ಮರೆತು ಹೋಗುತ್ತಿದ್ದ ಕಲೆಗಳಾಗಿದ್ದ ಕಸೂತಿ ಮತ್ತು ಹೊಲಿಗೆ ತರಬೇತಿಗಳನ್ನು ಈ ಶಾಲೆಗಳಲ್ಲಿ ಹೇಳಿಕೊಡಲಾಗುತ್ತಿತ್ತು.

ಬಿಷಪ್ ಮೈಕೆಲ್ ಆಂಟನಿ ಇವರು ನಂತರ ತಮ್ಮ ವಿಕಾರ್ ಜನರಲ್, ಫಾದರ್ ಆಂಡ್ರೂ ಅವರ ಗಂಡು ಮಕ್ಕಳ ಶಾಲೆಗಾಗಿ ಕ್ರಿಶ್ಚಿಯನ್ ಬ್ರದರ್ಸ್‌ಗಳನ್ನು ಮತ್ತು ಹೆಣ್ಣು ಮಕ್ಕಳ ಶಾಲೆಗಾಗಿ ಸೈಂಟ್ ಜೋಸೆಫ್ ಆಫ್ ದಿ ಅಪ್ಪಾರಿಶನ್‌ನ ಸಿಸ್ಟರ್‌ಗಳ ಸೇವೆಯನ್ನು ಪಡೆಯುವುದಕ್ಕಾಗಿ 1857ರಲ್ಲಿ ಫ್ರಾನ್ಸ್‌ಗೆ ಕಳುಹಿಸಿದರು. ಮಾರ್ಚ್ 13, 1859ರಂದು ಫಾದರ್ ಆಂಡ್ರೂ ಅವರು ಇಬ್ಬರು ಕಾರ್ಮೆಲೈಟ್ ಫಾಧರ್‌ಗಳಾದ ಜಾನ್ ಲೂಯಿಸ್ ಆಫ್ ದಿ ಹೋಲಿ ಫ್ಯಾಮಿಲಿ ಮತ್ತು ಅಥಾನಿಯಸ್ ಮೇರಿ ಆಫ್ ಜೀಸಸ್ ಮತ್ತು ಬ್ರದರ್‌ಗಳಾದ ಜಾನ್ ನೆಪೊಮುಸೀನ್ ರೆಫೆಯ್ಸ್ರ್, ಪಾಸ್ಟೋರಿಸ್ ಮತ್ತು ಬೆರ್ಚ್‌ಮನ್ಸ್ ಆಫ್ ಆಫ್ ದಿ ಇನ್‌ಸ್ಟಿಟ್ಯೂಟ್ ಆಫ್ ಸೈಂಟ್ ಜಾನ್ ಡೆ ಸೇಲ್ಸ್

ಇವರೊಂದಿಗೆ ಹಿಂತಿರುಗಿದರು. ಬ್ರದರ್‌ಗಳು ತಾವು ತಲಪಿದ ಸ್ವಲ್ಪ ಸಮಯದಲ್ಲೇ ಸೈಂಟ್ ಮೇರೀಸ್ ಇಂಗ್ಲೀಷ್ ಸ್ಕೂಲ್[16] ಇದನ್ನು ರುಸಾರಿಯೋ ದೇವಾಲಯದ ತಾತ್ಕಾಲಿಕ ಕ್ವಾರ್ಟರ್ಸ್‌ನಲ್ಲಿ ತೆರೆದರು. ನಂತರ ಬಿಷಪರು ಇದಕ್ಕಾಗಿ ವಿಶೇಷವಾಗಿ ರೂಪುರೇಖೆಗೊಳಿಸಿದ ಕಟ್ಟಡ ನಿರ್ಮಾಣ ಆರಂಭಿಸಿದರು. ಕಾಲಾನಂತರ ಬಿಷಪರು ಈ ಶಾಲೆಯನ್ನು ಇನ್ನೂ ಉನ್ನತ ಮಟ್ಟಕ್ಕೆ ಏರಿಸಲು ಆಶಿಸಿದರು ಆದರೆ ಆ ಸ್ಥಳವು ಸರಿಯಾದ ಕೇಂದ್ರ ಸ್ಥಳದಲ್ಲಿ ಇಲ್ಲವೆಂಬ ಕಾರಣಕ್ಕೆ ಜನರು ಇದನ್ನು ಆಕ್ಷೇಪಿಸಿದರು ಮತ್ತು ರೋಮ್‌ನ ಧರ್ಮಸಭೆಗೆ ಮೇಲ್ಮನವಿ ಮಾಡಿ ಬಾಕಿ ಇರುವ ಹಿನ್ನೆಲೆಯಲ್ಲಿ ಬಿಷಪರಿಗೆ ಆಗಸ್ಟ್ 31, 1860ರ ಅರ್ಜಿಯಂತೆ ಕೆಲಸವನ್ನು ತಡೆ ಹಿಡಿಯಲು ಸೂಚಿಸಿದರು. ಬ್ರದರ್‌ಗಳೂ ಕೂಡಾ ಶಾಲೆಯು ಆದಷ್ಟು ಕೇಂದ್ರ ಸ್ಥಳದಲ್ಲಿ ಇರಬೇಕೆಂಬುದಕ್ಕೆ ಪರವಾಗಿದ್ದರು. ಇದರ ಪರಿಣಾಮವಾಗಿ ಕ್ರಿಶ್ಚಿಯನ್ ಬ್ರದರ್ಸ್ 1868ರಲ್ಲಿ ಕೊಲಂಬೊಗೆ ತೆರಳಿದ್ದರಿಂದ ಶಾಲೆ ಮುಚ್ಚಲ್ಪಟ್ಟಿತು. ಹೀಗೆ ಹೆಣ್ಣು ಮಕ್ಕಳ ಶಾಲೆಯ ಎರಡನೆಯ ಪ್ರಯತ್ನಕ್ಕೂ ಹಿನ್ನಡೆಯಾಯಿತು.

ಫ್ರಾನ್ಸ್‌ನಿಂದ ಹೆಣ್ಣು ಮಕ್ಕಳ ಶಾಲೆಯ ಜವಾಬ್ದಾರಿ ವಹಿಸಿಕೊಳ್ಳಲು ಸಿಸ್ಟರ್ಸ್ ಆಫ್ ಸೈಂಟ್ ಜೋಸೆಫ್ ಆಫ್ ದಿ ಅಪಾರಿಶನ್ ಇವರನ್ನು ಕರೆತರಲು ತೆರಳಿದರು. ನಾಲ್ಕು ಫ್ರೆಂಚ್ ಭಗಿನಿಯರು ಮತ್ತು ಒಬ್ಬರು ಇಂಗ್ಲೀಷ್ ಭಗಿನಿ ಸೇರಿ ಒಟ್ಟು ಐದು ಭಗಿನಿಯರೊಂದಿಗೆ ಮಾಲ್ಟಾದಿಂದ ಮದರ್ ಮೆಕೆನ್ಸಿ ಭಾರತಕ್ಕೆ ಬ್ರದರ್ಸ್‌ಗಳೊಂದಿಗೆ ಬಂದರು. ಮದರ್ ಮೆಕೆನ್ಸಿ ಸಣ್ಣ ಬೋರ್ಡಿಂಗ್ ಹೋಮ್ ಮತ್ತು ಒಂದು ದೊಡ್ಡ ಅನಾಥಾಲಯ ಮಾತ್ರವಲ್ಲದೆ ಶಾಲೆಯನ್ನು "ದಿ ಬಂಗಲೋ" ಎಂದು ಕರೆಯಲ್ಪಡುವ ಕಟ್ಟಡದಲ್ಲಿ ತೆರೆದರು.

ಅಂದಿನ ದಿನಗಳಲ್ಲಿ ಮಂಗಳೂರು ಒಂದು ಮಿಲಿಟರಿ ಕೇಂದ್ರವಾಗಿದ್ದು ಐರೋಪ್ಯ ಕಮಾಂಡರ್‌ಗಳು ಮತ್ತು ಸಿವಿಲ್ ಆಫೀಸರ್‌ಗಳನ್ನೊಳಗೊಂಡ ಭಾರತದ ಎಲ್ಲಾ ಭಾಗಗಳ ಸಿಪಾಯಿಗಳನ್ನು ಹೊಂದಿದ ರೆಜಿಮೆಂಟನ್ನು ಹೊಂದಿದ್ದು ಇವರು ತಮ್ಮ ಮಕ್ಕಳನ್ನು ಕಾನ್ವೆಂಟ್ ಶಾಲೆಗೆ ಕಳುಹಿಸುತ್ತಿದ್ದರು. ಹೀಗೆ ಈ ಶಾಲೆ ಪ್ರಾರಂಭವಾಗುತ್ತಲೇ ಬೋರ್ಡರ್‌ಗಳಾಗಿ ಬಂದವರು ಇಂಗ್ಲೀಷ್ ವಿದ್ಯಾರ್ಥಿಗಳು ಬರಲಾಂಭಿಸಿದರು. ಈ ಶಾಲೆಯಲ್ಲಿ ಹೆಚ್ಚು ಇಂಗ್ಲಿಷ್ ಭಾಷೆಯು ಬಳಕೆಯಾಗುತ್ತಿದ್ದರಿಂದ ಶಿಕ್ಷಣಾಧಿಕಾರಿಗಳು ಮತ್ತು ಮಂಗಳೂರಿಗೆ ಭೇಟಿ ನೀಡಿದವರ ಪ್ರಶಂಸೆಯನ್ನು ಗಳಿಸುವಂತಾಯಿತು.[17]

ಏಳು ವರ್ಷಗಳ ವರೆಗೆ ಭಗಿನಿಯರಿಗೆ ಶಾಲೆ ಮತ್ತು ಅನಾಥಾಲಯ ನಡೆಸುವುದಕ್ಕೆ ಸಾಧ್ಯವಾದರೂ ಜೂನ್ 21, 1866 ರಂದು ಮಕ್ಕಳು ತರಗತಿಯಲ್ಲಿ ಜಪಮಾಲೆಯ ಪ್ರಾರ್ಥನೆಯಲ್ಲಿ ತೊಡಗಿದ್ದಾಗ ಚಾವಣಿ ಕುಸಿದು ಬಿದ್ದು ಒಬ್ಬ ಹೆಣ್ಣು ಮಗಳು ಸತ್ತು ಅನೇಕರು ಗಾಯಗೊಂಡರು. ಈ ದುರಂತದ ನಂತರ "ಈ ಬಂಗಲೋ" ಕೆಡವಲ್ಪಟ್ಟಿತು ಮತ್ತು ಪೂರ್ತಿ ಕೇಂದ್ರವನ್ನು ಬೇರೆಡೆಗೆ ಸ್ಥಳಾಂತರಿಸಿ ನಂತರ ತಾತ್ಕಾಲಿಕವಾಗಿ ಮುಚ್ಚಲಾಯಿತು.

1867ರಲ್ಲಿ ಸೈಂಟ್ ಜೋಸೆಫ್ ಆಫ್ ದಿ ಅಪಾರಿಷನ್‌ನ ಭಗಿನಿಯರು ಕಣ್ಣಾನೂರಿನ ಬಿಷಪರ ವಿನಂತಿಯ ಮೇರೆಗೆ ಮಂಗಳೂರಿನಿಂದ ಕಣ್ಣಾನೂರಿಗೆ ತೆರಳಿ ಹೆಣ್ಣು ಮಕ್ಕಳ ಶಾಲೆಯ ಜವಾಬ್ದಾರಿ ವಹಿಸಿಕೊಂಡರು.[18]

ಬಿಷಪ್ ಮೈಕೆಲ್ ಆಂಟನಿ ಇವರಿಗೆ ಹೆಣ್ಣು ಮಕ್ಕಳ ಶಿಕ್ಷಣದ ಜವಾಬ್ದಾರಿಗೆ ಭಗಿನಿಯರನ್ನು ಪಡೆಯಲು ಕಷ್ಟಸಾಧ್ಯವಾದುದರಿಂದ ಅವರು ತನ್ನ ಅಧೀನದಲ್ಲಿದ್ದ ಶಿಕ್ಷಣ ಸೇವೆಯನ್ನು ಮುನ್ನಡೆಸಲು ಕಾರ್ಮೆಲೈಟ್ ರಿಲೀಜಿಯಸ್ ಆಫ್ ಸೈಂಟ್ ಜೋಸೆಫ್ ಆಫ್ ದಿ ಅಪಾರಿಷನ್ ಎಂಬ ಸ್ವತಂತ್ರ ವರ್ಗವನ್ನು ರಚಿಸುವ ನಿರ್ಧಾರ ಕೈಗೊಂಡರು. ಈ ಭಗಿನಿಯರ ಹೊಸ ಸಂಸ್ಥೆಯು ಬಿಷಪ್ ಮೈಕೆಲ್ ಅವರಿಂದ ಸ್ಥಾಪಿಸಲ್ಪಟ್ಟು ಸಿಸ್ಟರ್ಸ್ ಆಫ್ ಸೈಂಟ್ ಜೋಸೆಫ್ ಆಫ್ ದಿ. ಅಪಾರಿಷನ್ ಇವರ ಅಧೀನದಲ್ಲಿದ್ದ ಅನಾಥರು ಮತ್ತು ಬೋರ್ಡಿಂಗ್‌ನಲ್ಲಿ ಇದ್ದವರು ಈ ಸಂಸ್ಥೆಗೆ ಸೇರಿಸಲ್ಪಟ್ಟರು ಮತ್ತು ಇವರಿಗೆ ಜೆಪ್ಪು ಸೆಮಿನರಿಯ ಇನ್ನೊಂದು ಪಾರ್ಶ್ವದಲ್ಲಿ ಆಶ್ರಯ ನೀಡಲಾಯಿತು. ಬಿಷಪರು ಸ್ವತಃ ಸೆಮಿನೆರಿಯ ಮತ್ತೊಂದು ಪಾರ್ಶ್ವದಲ್ಲಿ ವಾಸ್ತವ್ಯವಿದ್ದು ಸೆಮಿನರಿ ಮತ್ತು ಭಗಿನಿಯರ ಹೊಸ ಶಾಲೆಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು. ಅವರು ಪ್ರಥಮ ವರ್ಗದ ಭಗಿನಿಯರಾಗಿ ಪರಿಗಣಿಸಲ್ಪಟ್ಟರು, ಆದರೆ ಶಿಕ್ಷಣ ಸೇವೆಯಲ್ಲಿ ತೊಡಗಿಸಿಕೊಳ್ಳಲಿಕ್ಕಾಗುವಂತೆ ನಿಯಮಾವಳಿಗೆ ಬದಲಾವಣೆ ತರಲಾಯಿತು. ಉಳಿದಂತೆ ಇತರ ಕಾರ್ಮೆಲ್ ಸಭೆಯವರಿಗಿರತಕ್ಕ ನಿಯಮಗಳನ್ನೇ ಮುಂದುವರಿಸಲಾಯಿತು. ಒಂದು ಉಪ ಕಾನ್ವೆಂಟನ್ನು ತಲಚೇರಿಯಲ್ಲಿ ಸ್ಥಾಪಿಸಲಾಗಿದ್ದು ಮೂರನೇ ವರ್ಗದ ಕಾರ್ಮೆಲ್ ಸಭೆ (ಅಪೊಸ್ತೋಲಿಕ್ ಕಾರ್ಮೆಲ್ ಕಾಂಗ್ರಿಗೇಶನ್) ಬರುವ ವರೆಗೆ ಈ ಭಗಿನಿಯರು ತಮ್ಮ ಸೇವೆಯನ್ನು ಮಂಗಳೂರಿನಲ್ಲಿ ಮುಂದುವರಿಸಿದರು.

ಜನವರಿ 3, 1870ರಂದು ಪೋಪರು ಬಿಷಪ್ ಮಾರಿ ಎಫ್ರೆಮ್ ಇವರನ್ನು ಕೆನರಾದ ವಿಕಾರ್ ಅಪೊಸ್ತೋಲಿಕ್ ಆಗಿ ನೇಮಿಸಿದರು. ಬಿಷಪ್ ಮೈಕೆಲ್ ಅವರ ಸೇವೆ ಈ ಕ್ಷೇತ್ರದಲ್ಲಿ ನಿಲುಗಡೆಗೆ ಬಂತು ಆದರೆ ಈ ಮಧ್ಯೆ ಅವರು ಕಾಂಗ್ರಿಗೇಶನ್ ಆಫ್ ದಿ ಸೈಂಟ್ ಜೋಸೆಫ್ ಆಫ್ ಅಪಾರಿಷನ್ ಇವರನ್ನು ಕಲ್ಲಿಕೋಟೆಯಲ್ಲಿ ಒಂದು ಹೊಸ ಮನೆಯನ್ನು ತೆರೆಯಲು ಭಾರತಕ್ಕೆ ಸೇವಾ ನಿಯೋಗವನ್ನು ಕಳುಹಿಸಲು ಕೇಳಿಕೊಂಡರು. ಆದುದರಿಂದ 1861ರಲ್ಲಿ ಮದರ್ ವೆರೋನಿಕ ಬಿಷಪ್ ಮೈಕೆಲ್ ಆಂಟನಿ ವಿಕಾರ್ ಅಪೊಸ್ತೋಲಿಕ್ ಆಫ್ ಸೌತ್ ಕೆನರಾ ಎಂಡ್ ಮಲಬಾರ್ ಇವರ ವಿನಂತಿ ಮೇರೆಗೆ ಭಾರತಕ್ಕೆ ಕಳುಹಿಸಲ್ಪಟ್ಟರು. ಇವರು ಇಲ್ಲಿ ಉತ್ಸಾಹಿ ಫ್ರೆಂಚ್ ಕಾರ್ಮೆಲೈಟ್ ಆಗಿದ್ದು ಭಾರತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ತೊಡಗಿಸಿಕೊಂಡ ಫಾ। ಮಾರಿ ಎಫ್ರೆಮ್ ಇವರನ್ನು ಭೇಟಿಯಾದರು. ಮದರ್ ವೆರೋನಿಕರವರು ಇವರ ಮೆಚ್ಚತಕ್ಕ ಸೇವೆಯನ್ನು ನೋಡಿದ ಬಿಷಪರು ಮಂಗಳೂರಿನಲ್ಲಿ ಶಿಕ್ಷಣ ಸೇವೆಯನ್ನು ಸಲ್ಲಿಸಲು ಸಹಕಾರವನ್ನು ಕೇಳಿದರು, ಇದಕ್ಕೆ ಮದರ್ ವೆರೋನಿಕರವರು

ಸಂಪೂರ್ಣ ಸಹಕಾರದ ನೀಡುವುದಾಗಿ ಭರವಸೆ ನೀಡಿದರು. ಸುಧೀರ್ಘ ಬೇಟಿಯ ಬಳಿಕ ಅವರು ತನ್ನ ಸೈಂಟ್ ಜೋಸೆಫ್ ಆಫ್ ದಿ ಅಪಾರಿಶನ್ ಸೇವಾ ವರ್ಗವನ್ನು ತ್ಯಜಿಸಿ ಕ್ಲೊಯ್‌ಸ್ಟರ್ಡ್ ಕಾರ್ಮೆಲ್ ಆಫ್ ದಿ ಸೆಕೆಂಡ್ ಆರ್ಡರ್ (ಕಾರ್ಮೆಲ್ ಸಭೆಯ ಎರಡನೆಯ ವರ್ಗ) ಇದಕ್ಕೆ ಸೇರಿ ಬಳಿಕ ಥರ್ಡ್ ಆರ್ಡರ್ ಆಫ್ ಟೀಚಿಂಗ್ ಕಾರ್ಮೆಲೈಟ್ಸನ್ನು ಅವರ ಸೇವಾಬದ್ಧತೆಯನ್ನು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ತೊಡಗಿಸಿಕೊಳ್ಳಲು ರಚಿಸಿದರು.

16 ಜುಲೈ 1868ರಂದು ಪ್ರಾನ್ಸ್‌ನ ಬಯಾನ್‌ನಲ್ಲಿ ಹೊಸ ಸಭೆಯು ಆರಂಭವಾಯಿತು. ಇದರ ಆರಂಭ ಸಂಪೂರ್ತಿಯಾದ ಬಳಿಕ ಆಗಸ್ಟ್ 1870ರಲ್ಲಿ ಇವರು ಸಿಸ್ಟರ್ ಮೇರಿ ಡೆಸ್ ಏಂಜೆಸ್, ಮೇರಿ ಎಲಿಯಾಸ್ ಮತ್ತು ಮೇರಿ ಆಫ್ ಸೈಂಟ್ ಜೋಸೆಫ್ ಈ ಮೂವರು ಎ. ಸಿ. ಕಾರ್ಮೆಲೈಟ್ ಭಗಿನಿಯರನ್ನು ಕಳುಹಿಸಿ ಅವರು ಅಪೊಸ್ತೋಲಿಕ್ ಕಾರ್ಮೆಲ್ ಇನ್ ಇಂಡಿಯಾ ಇದರ ಕೇಂದ್ರ ಸಂಸ್ಥೆಯನ್ನೂ 1870ರಲ್ಲಿ ಮಂಗಳೂರಿನ ಸೈಂಟ್ ಆನ್ಸ್ ಕಾನ್ವೆಂಟನ್ನು ಸ್ಥಾಪಿಸಿದರು.

ಈ ಸಭೆಯು ಹೆಣ್ಣು ಮಕ್ಕಳ ಶಿಕ್ಷಣದ ಕೊರತೆ ಇರುವ ಸಂದರ್ಭದಲ್ಲಿ ಮಂಗಳೂರಿಗೆ ಆಗಮಿಸಿತು. ಮಹಿಳೆಯರು ಬಾಲ್ಯ ವಿವಾಹ ಲಿಂಗಬೇದ ಇತ್ಯಾದಿಗಳ ಬಲಿಪಶುಗಳಾಗಿರುವುದು ಮತ್ತು ಇದನ್ನು ಹೋಗಲಾಡಿಸಲು ಶಿಕ್ಷಣದ ಅವಶ್ಯಕತೆ ಇದೆ ಎಂದು ಮನಗಂಡರು. ಆದುದರಿಂದ ಈ ಮಹಿಳಾ ಮಿಶನರಿಗಳು ಹೆಣ್ಣು ಮಕ್ಕಳಿಗಾಗಿ ಬಹಳಷ್ಟು ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ಸಂಸ್ಥೆಗಳಿಗೆ ಕರಾವಳಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಅಡಿಪಾಯ ಹಾಕಿದರು.

4.3 ಸೈಂಟ್ ಆಗ್ನೆಸ್ ಕಾಲೇಜು – ಒಂದು ಚಾರಿತ್ರಿಕ ಅಧ್ಯಯನ

"ಪುರುಷರ ಶಿಕ್ಷಣಕ್ಕಿಂತ, ಮಹಿಳೆಯರ ಶಿಕ್ಷಣ ಜನರ ಶೈಕ್ಷಣಿಕ ಮತ್ತು ನೈತಿಕ ಪರಿವರ್ತನೆಗೆ ಹೆಚ್ಚಿನ ಪ್ರೇರಣೆ ನೀಡಿದೆ"– ಶ್ರೀ ಎಲ್. ಗಾರ್ತ್‌ವೈಟ್ (ಕೆನರಾ ಮತ್ತು ಮಲಬಾರ್ ಶಾಲೆಗಳ ಪರಿವೀಕ್ಷಣಾಧಿಕಾರಿ)

1920ರ ದಶಕ ಸಾಮಾಜಿಕ ಮತ್ತು ರಾಜಕೀಯ ಆಸಕ್ತಿಯ ವರ್ಷಗಳು. 1921ರಲ್ಲಿ ಮಹಾತ್ಮ ಗಾಂಧಿಯವರಿಂದ ಆರಂಭಗೊಂಡ ಅಸಹಕಾರ ಚಳವಳಿ ಮಹಿಳಾ ಶಿಕ್ಷಣ ಸಾರ್ವಜನಿಕ ವಿಷಯವಾಗುವುದಕ್ಕೆ ಆಸ್ಪದ ನೀಡಿದ ವರ್ಷವದು. "ಒಬ್ಬ ಹೆಣ್ಣಿಗೆ ನೀಡುವ ಶಿಕ್ಷಣ ಒಂದು ಕುಟುಂಬಕ್ಕೆ ಶಿಕ್ಷಣ ನೀಡಿದಂತೆ" ಎಂಬುದು ಸಮಾಜ ಸುಧಾರಕರ ಘೋಷ ವಾಕ್ಯವಾಗಿತ್ತು. ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ವಹಿಸಿದ ಪಾತ್ರವನ್ನು ಗುರುತಿಸಿ

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ತನ್ನ 1931ರ ಕರಾಚಿ ಕಾಂಗ್ರೆಸ್ ಅಧಿವೇಶನದಲ್ಲಿ ಅಂಗೀಕರಿಸಿದ ನ್ಯಾಯಬದ್ಧ ಹಕ್ಕುಗಳ ನಿರ್ಣಯದಲ್ಲಿ "ಎಲ್ಲಾ ನಾಗರಿಕರು ಯಾವುದೇ ಧರ್ಮ, ಜಾತಿ, ಪಂಗಡ ಇಲ್ಲವೇ ಯಾವುದೇ ಲಿಂಗದವರಾಗಿದ್ದರೂ ಕಾನೂನಿನ ದೃಷ್ಟಿಯಲ್ಲಿ ಸಮಾನರು ಮತ್ತು ಉದ್ಯೋಗ, ಕಛೇರಿ, ಅಧಿಕಾರ ಮತ್ತು ಗೌರವಗಳಿಗೆ ಸಮಾನ ಪಾತ್ರರು" ಎಂದು ಘೋಷಿಸಿತು. ಇದರ ಪರಿಣಾಮವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ, ಮಹಿಳಾ ಸಂಘಟನೆಗಳಲ್ಲಿ ಭಾಗವಹಿಸುವುದು ಮತ್ತು ಮಹಿಳಾ ಶಿಕ್ಷಣದ ಕುರಿತಾಗಿ ಇದ್ದ ಪೂರ್ವಾಗ್ರಹ ಪೀಡಿತ ವಿಚಾರಗಳು ಕಡಿಮೆಯಾದವು. ದೇಶದಲ್ಲಿ 1921–22ರ ಹೊತ್ತಿಗೆ 23,517 ಶಿಕ್ಷಣ ಸಂಸ್ಥೆಗಳು ಹೆಣ್ಣು ಮಕ್ಕಳಿಗಾಗಿ ಕಾರ್ಯ ನಿರ್ವಹಿಸುತ್ತಿದ್ದವು.

ಹೆಣ್ಣು ಮಕ್ಕಳಿಗಾಗಿ ಕಾಲೇಜು ಶಿಕ್ಷಣದ ಪ್ರಥಮ ಪ್ರಯತ್ನ 1870ರ ವೇಳೆಗೆ ಜಾನ್ ಇಲಿಯಟ್ ಬೆತುನ್ ಇವರಿಂದ ಪ್ರಾರಂಭವಾಯಿತು. ಕೋಲ್ಕತ್ತಾದಲ್ಲಿ 1879ರಲ್ಲಿ ಇವರು ಕಾಲೇಜೊಂದನ್ನು ಸ್ಥಾಪಿಸಿದರು. ಈ ಕಾಲೇಜು ಬೆತುನೆ ಕಾಲೇಜು ಎಂದು ಕರೆಯಲ್ಪಟ್ಟಿತು. ಕಾಲಾಂತರದಲ್ಲಿ ಆ ಹೊತ್ತಿಗಾಗಲೇ ಸಮಾಜ ಸುಧಾರಕರು ಮಹಿಳಾ ಶಿಕ್ಷಣದ ಜವಾಬ್ದಾರಿಯನ್ನು ತಾವೇ ವಹಿಸಿಕೊಂಡರು. ಹೀಗೆ ಬಂಗಾಳದ ವಿವಿಧ ಭಾಗಗಳಲ್ಲಿ 35ಕ್ಕಿಂತ ಹೆಚ್ಚು ಶಾಲೆಗಳು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಸುಧಾರಕರಿಂದ ಆರಂಭಗೊಂಡವು.[19] ಮದರಾಸು ಪ್ರೆಸಿಡೆನ್ಸಿಯಲ್ಲಿಯೂ ಸಹ ಮುಖ್ಯವಾಗಿ ಥಿಯೊಸೋಫಿಕಲ್ ಸೊಸೈಟಿಯ ಪ್ರಭಾವದಿಂದ ಹೆಣ್ಣು ಮಕ್ಕಳಿಗಾಗಿಯೇ ಶಾಲೆ ಮತ್ತು ಕಾಲೇಜುಗಳ ಸಂಖ್ಯೆ ಅಧಿಕ ಸಂಖ್ಯೆಯಲ್ಲಿ ಸ್ಥಾಪನೆಗೊಂಡವು.[20] ಮಂಗಳೂರಿನಲ್ಲೂ 1870ರ ನಂತರ ಯೇಸು ಸಭೆಯ ಆಗಮನದಿಂದ ಶಾಲೆ ಮತ್ತು ಕಾಲೇಜು ಶಿಕ್ಷಣ ಸಕ್ರೀಯಗೊಂಡಿತು. ಇದಕ್ಕೆ ಕಾರಣ ಮಂಗಳೂರು ಒಂದು ಮುಖ್ಯ ಪಟ್ಟಣವಾಗಿದ್ದು ಆದರೆ ಶೈಕ್ಷಣಿಕವಾಗಿ ಕಾರ್ಮೆಲೈಟರ ಅಧೀನದಲ್ಲಿ ಹೆಚ್ಚಿನ ಪ್ರಗತಿ ಕಂಡಿರಲಿಲ್ಲ. ಇಲ್ಲೊಂದು, ಅಲ್ಲೊಂದು ಎಂಬಂತೆ ಕೆಲವೇ ಶಾಲೆಗಳ ಹೊರತಾಗಿ ಇಲ್ಲಿ ಯುವಜನರಿಗಾಗಿ ಪೂರ್ಣಪ್ರಮಾಣದ ಕಾಲೇಜು ಇರಲಿಲ್ಲ. ಆದುದರಿಂದ ವಿದ್ಯರ್ಥಿಗಳು ಮದರಾಸಿಗೆ ಇಲ್ಲವೇ ಮುಂಬಯಿಗೆ ಈ ಉದ್ದೇಶಕ್ಕಾಗಿ ಹೋಗಬೇಕಾಗಿತ್ತು. ಮಂಗಳೂರಿನಲ್ಲಿ ಜೆಸ್ವಿಟರಿಂದ ನಡೆಸಲ್ಪಡುತ್ತಿದ್ದ ಕಾಲೇಜು ಇದ್ದರೂ ಅದು ಹುಡುಗರ ಕಾಲೇಜೆಂದು ಪ್ರಖ್ಯಾತವಾಗಿತ್ತು. ಹಾಗೂ ಇಲ್ಲಿ ಹೆಣ್ಣು ಮಕ್ಕಳಿಗೆ ಅವಕಾಶವನ್ನು ಕಲ್ಪಿಸಿರಲಿಲ್ಲ. ಹೀಗೆ ಹೆಣ್ಣುಮಕ್ಕಳಿಗೆ ಉನ್ನತ ವ್ಯಾಸಾಂಗಕ್ಕೆ ಅಡ್ಡಿಯಯಿತು. ಆದುದರಿಂದ ಹೆಣ್ಣು ಮಕ್ಕಳಿಗೆ ಇಂತಹ ಸಂದರ್ಭದಲ್ಲಿ ಈ ಕಾಂಗ್ರಿಗೇಶನ್ ಜಿಲ್ಲೆಯ ಸ್ಥಳೀಯ ಹೆಣ್ಣು ಮಕ್ಕಳಿಗಾಗಿ ಒಂದು ಕಾಲೇಜನ್ನು ಸ್ಥಾಪಿಸುವ ಆಲೋಚನೆ ಮಾಡಿತು.

ಮದರ್ ಅಲೋಯ್ಸಿಯಾ ಇವರ ನಾಯಕತ್ವದಲ್ಲಿ ಅಪೊಸ್ತೋಲಿಕ ಕಾರ್ಮೆಲ್ ಭಗಿನಿಯರು 1921ರಲ್ಲಿ ಇಂಟರ್‌ಮೀಡಿಯೇಟ್ ಆ್ಯಕ್ಟ್ ಪ್ರಕಾರ ಮದರಾಸು ಯುನಿವರ್ಸಿಟಿಗೆ ಸಂಯೋಜನೆಗೊಂಡ ಸೈಂಟ್ ಆಗ್ನೆಸ್ ಕಾಲೇಜನ್ನು ಆರಂಭಿಸಿದರು. ಇದು ಮಹಿಳೆಯರಿಗಾಗಿ ಮೊದಲ ಕೆಥೋಲಿಕ್ ಕಾಲೇಜು ಮಾತ್ರವಲ್ಲದೆ, ಪಶ್ಚಿಮ ಕರಾವಳಿಯಲ್ಲಿ ಮಹಿಳೆಯರಿಗಾಗಿ ಸ್ಥಾಪಿಸಿದ ಮೊದಲ ಕಾಲೇಜು ಹಾಗೂ ಸಂಪೂರ್ಣ ಭಾರತೀಯರಿಂದ ಖಾಸಗೀ ಆಡಳಿತದಲ್ಲಿ ನಡೆಸಲ್ಪಡುವ ಪ್ರಥಮ ಮಹಿಳಾ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮೂರು ವರ್ಷಗಳ ನಂತರ, 1924ರಲ್ಲಿ ಕಾಲೇಜು ಮದರಾಸು ವಿಶ್ವವಿದ್ಯಾಲಯದ ಗ್ರೂಪ್ V-B ರಂತೆ ನೋಂದಾಯಿತ ಪ್ರಥಮ ದರ್ಜೆ ಕಾಲೇಜಾಗಿ ಉನ್ನತೀಕರಣಗೊಂಡಿತು. ಇತಿಹಾಸ ಮತ್ತು ವಾಣಿಜ್ಯ ಹಾಗೂ ವಿಜ್ಞಾನ ಸಲಕರಣೆಗಳು ಪ್ರಥಮ ಹಂತದಲ್ಲಿ ಸೇರಿಸಲ್ಪಟ್ಟು 1944ರ ಹೊತ್ತಿಗೆ ಭೌತಶಾಸ್ತ್ರ, ಪ್ರಾಕೃತಿಕ ವಿಜ್ಞಾನ ಮತ್ತು 1945ರಲ್ಲಿ ಗಣಿತ ಇತ್ಯಾದಿ ವಿಷಯಗಳು ಸೇರಿಸಲ್ಪಟ್ಟಿತು. ಪದವಿ ಕೋರ್ಸ್‌ಗೆ 1937ರಲ್ಲಿ IV A ಮತ್ತು B ವಿಭಾಗಗಳು ಮತ್ತು ಗಣಿತ ಶಾಸ್ತ್ರವನ್ನೊಳಗೊಂಡ I-B ವಿಭಾಗ 1944ರಲ್ಲಿ ಸೇರಿಸಲ್ಪಟ್ಟಿತು.

ಹಿನ್ನೆಲೆ:

ಸೈಂಟ್ ಆಗ್ನೆಸ್ ಶಾಲೆಯ ಕಟ್ಟಲ್ಪಡುತ್ತಿರುವಾಗ ಮದರ್ ಅಲೋಯ್ಸಿಯಾರವರಿಗೆ ಮಹಿಳಾ ಕಾಲೇಜು ಸ್ಥಾಪನೆ ಅಷ್ಟೇ ಅಗತ್ಯವುಳ್ಳದ್ದು ಎಂದು ಮನವರಿಕೆಯಾಯಿತು. ಆದುದರಿಂದ ಕಾಲೇಜು ಸ್ಥಾಪನೆಗಾಗಿ ದ್ವಿ–ಯೋಜನೆ ಅವರ ಗುರಿಯಾಗಿತ್ತು. ಮೊದಲನೆಯದು ಉಡುಪಿ, ಕಲ್ಯಾಣಪುರ, ಬೆಳ್ತಂಗಡಿ ಮತ್ತು ಇತರ ನೆರೆಹೊರೆಯ ಪ್ರದೇಶಗಳ ಅಪೊಸ್ತೋಲಿಕ್ ಕಾರ್ಮೆಲ್ ಶಾಲೆಗಳಿಂದ ಆಂಗ್ಲ ಮಾಧ್ಯಮದಲ್ಲಿ ಉನ್ನತ ಶಿಕ್ಷಣ ಬಯಸಿ ಬರುವ ಯುವ ಮಹಿಳೆಯರ ಅವಶ್ಯಕತೆಗಳನ್ನು ಪೂರೈಸುವ ಯೋಜನೆ. ಎರಡನೆಯದು, ಹತ್ತಿರದಲ್ಲಿ ಮಹಿಳೆಯರಿಗೆ ಯಾವುದೇ ಕಾಲೇಜು ಇರಲಿಲ್ಲ ಮತ್ತು ಮಂಗಳೂರಿನ ಹುಡುಗಿಯರು ಮದರಾಸು ಇಲ್ಲವೇ ಮುಂಬಯಿಗೆ ಕಾಲೇಜು ಶಿಕ್ಷಣಕ್ಕಾಗಿ ಹೋಗುವ ಸಾಮರ್ಥ್ಯ ಹೊಂದಿರಲಿಲ್ಲ. ಈ ಸಂದರ್ಭಕ್ಕಾಗಿ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸುವ ಉದ್ದೇಶ ಅವರದ್ದಾಗಿತ್ತು. ಆದರೆ ಈ ಕೆಲಸ ದೊಡ್ಡ ಸವಾಲು ಆಗಿದ್ದರಿಂದ ಇಂತಹ ಯೋಜನೆಯನ್ನು ಬಿಟ್ಟು ಬಿಡುವುದು ಒಳಿತು ಎಂದುಕೊಂಡರು. ಇನ್ನೂ ಹೇಳಬೇಕೆಂದರೆ, ಅಲ್ಲಿ ಕಟ್ಟಡವಾಗಲಿ, ಇಲ್ಲವೇ ಸಲಕರಣೆಗಳು ಮತ್ತು ಕಾಲೇಜನ್ನು ನಡೆಸಲು ಅರ್ಹ ಸಿಬಂಧಿಗಳು ಲಭ್ಯವಿರಲಿಲ್ಲ. ಇನ್ನೂ ಕಠಿಣವಾದ ವಿಷಯವೆಂದರೆ ಬಹಳಷ್ಟು ಮೊತ್ತದ ಹಣವನ್ನು ಹೊಂದಿಸುವುದು ಮತ್ತು ವಿದ್ಯಾರ್ಥಿಗಳ ಲಭ್ಯತೆ. ಇದರ ಬಗೆಗಿನ ಆಲೋಚನೆ ಅತಂಕದ ಹಿಂಜರಿಕೆಯಾಗಿತ್ತು. ಆದರೆ ಮದರ್ ಅಲೋಯ್ಸಿಯಾ ಅವರು ಇದು ಒಂದು

ಬಹುದೊಡ್ಡ ಸಾಧನೆಯಾಗಬಹುದಾಗಿರುವುದರಿಂದ ಹೇಗಾದರೂ ಮಾಡಿ ಈ ಕನಸನ್ನು ನನಸಾಗಿಸಬೇಕು ಎಂದು ದೃಢ ನಿರ್ಧಾರ ಮಾಡಿದರು.

ಡಿ.ಪಿ.ಐ. ಆಗಿದ್ದ ಶ್ರೀ ಗ್ರೀವ್ಸ್ ಅವರು ಸೈಂಟ್ ಆನ್ಸ್ ಶಾಲೆಗೆ ಭೇಟಿ ನೀಡಿದಾಗ ಮದರ್ ಅಲೋಯ್ಸಿಯಾರವರು ಮಹಿಳಾ ಕಾಲೇಜಿನ ಆವಶ್ಯಕತೆಯ ಬಗ್ಗೆ ಅವರಿಗೆ ಮನದಟ್ಟು ಮಾಡಿದರು. ಬಿಷಪ್ ಪೌಲ್ ಪೆರಿನಿ ಎಸ್.ಜೆ. ಯು ಸಹಾ ಮಹಿಳೆಯರ ಉನ್ನತ ಶಿಕ್ಷಣಕ್ಕೆ ಉತ್ತೇಜನ ನೀಡಿದರು. ಧರ್ಮಗುರು ಮತ್ತು ಉದಾತ್ತ ದೃಷ್ಟಿಕೋನ ಹೊಂದಿದ್ದ ಫಾ। ಡೇನಿಸ್ ಫೆರ್ನಾಂಡಿಸ್ ಎಸ್.ಜೆ.[21] ಇವರು ಮದರ್ ಅಲೋಯ್ಸಿಯಾ ಇವರಿಗೆ ಮಾರ್ಗದರ್ಶನ ನೀಡಿದರು. ಶಿಕ್ಷಣ ಕ್ಷೇತ್ರದಲ್ಲಿದ್ದ ಸೈಂಟ್ ಅಲೋಶಿಯಸ್ ಕಾಲೇಜಿನ ಧರ್ಮಗುರುಗಳು ಮದರ್ ಅಲೋಯ್ಸಿಯಾ ಇವರ ಕಾಲೇಜು ತೆರೆಯುವ ಯೋಜನೆಯನ್ನು ಪ್ರೋತ್ಸಾಹಿಸಿದರು. ಆದರೆ ಕಾಲೇಜು ಸ್ಥಾಪನೆ ಅಷ್ಟು ಸುಲಭವಾಗಿರಲಿಲ್ಲ ಮತ್ತು ಸುತ್ತಮುತ್ತ ನಡೆಯುತ್ತಿದ್ದ ಘಟನೆಗಳು ಸ್ಥಾಪನೆಯ ನಿರೀಕ್ಷೆಗೆ ಪೂರಕವಾಗಿರಲಿಲ್ಲ. ಮದರ್ ಅಲೋಯ್ಸಿಯಾರವರು ಸಮಕಾಲೀನ ಅವಕಾಶಕ್ಕಾಗಿ ತಾಳ್ಮೆಯಿಂದ ಕಾಯುತ್ತಿದ್ದರು. "ಪ್ರೆಸೆಂಟೇಶನ್ ಭಗಿನಿಯರು" ದಕ್ಷಿಣ ಭಾರತದಲ್ಲಿ ಕೆಥೋಲಿಕ ಮಹಿಳಾ ಕಾಲೇಜನ್ನು ಸ್ಥಾಪಿಸಬೇಕೆಂಬ ಬಿಷಪರ ಮನವಿಯನ್ನು ಸ್ವೀಕರಿಸಲಿಲ್ಲ ಎಂದು ಮದರ್‌ಗೆ ತಿಳಿದುಬಂದಾಗ ಮತ್ತು ಬೇಟಿ ನೀಡಿದ ಧರ್ಮಗುರುವೊಬ್ಬರಿಂದ ಸರಕಾರ ಸ್ವತಃ ಒಂದು ಹೆಣ್ಣು ಮಕ್ಕಳ ಕಾಲೇಜನ್ನು ಕೊಚ್ಚಿನ್‌ನಲ್ಲಿ ಸ್ಥಾಪಿಸಲು ಅಲೋಚಿಸುತ್ತಿದೆ ಎಂದು ತಿಳಿದು ಬಂತು. ಈ ಮಧ್ಯೆ ಶಾಲೆಗಳ ಪರಿವೀಕ್ಷಕ ಅಧಿಕಾರಿಣಿ ಆಗಿದ್ದ ಮಿಸ್ ಲಾಜರಸ್, ಮದರ್ ಅಲೋಯ್ಸಿಯಾ ಇವರಿಗೆ ತನ್ನ ಆಲೋಚನೆಯನ್ನು ಕಾರ್ಯರೂಪಕ್ಕೆ ತರಲು ಇದು ಒಳ್ಳೆ ಸಮಯ ಎಂದು ತಿಳಿದು ಅವರಿಗೆ ಪತ್ರ ಬರೆದು –"ನೀವು ಸೈಂಟ್ ಆನ್ಸ್ ಹೈಸ್ಕೂಲನ್ನು ಯಾಕೆ ಕಾಲೇಜಾಗಿ ಉನ್ನತೀಕರಿಸಬಾರದು" ಎಂದು ಕೇಳಿದರು. ಇದಕ್ಕಿಂತಲೂ ಪ್ರೋತ್ಸಾಹದಾಯಕ ಅಂಶವೆಂದರೆ, ಡಿ.ಪಿ.ಐ. ಆಗಿದ್ದ ಶ್ರೀ ಲಿಟ್‌ಲ್ ಹೇಲ್ಸ್‌ರವರ ಮಂಗಳೂರಿಗೆ ನೀಡಿದ ಭೇಟಿದಾಗ ಇವರು ಇದಕ್ಕೆ ಆಕ್ಷೇಪ ಇಲ್ಲ ಎಂದು ಹೇಳಿರುವುದು ಮಾತ್ರವಲ್ಲದೆ ಮದರ್ ಅಲೋಯ್ಸಿಯರವರಿಗೆ ಅನುಸರಿಸಬೇಕಾದ ಕ್ರಮಗಳ ಬಗ್ಗೆಯೂ ಸಲಹೆ ನೀಡಿದರು. ಮತ್ತು ತಾನು ಸೆನೆಟ್ ಸದಸ್ಯನಾಗಿರುವುದರಿಂದ ನಿಮ್ಮ ಪರವಾಗಿ ಸೆನೆಟ್‌ಗೆ ಶಿಫಾರಸ್ಸು ಮಾಡುತ್ತೇನೆ ಎಂದರು. ಇವರು 1920ರಲ್ಲಿ ಬಿಷಪ್‌ರಿಗೆ ತಾತ್ಕಾಲಿಕವಾಗಿ ಕಿರಿಯ ಇಂಟರ್ ಮೀಡಿಯೇಟ್ ತರಗತಿಗಳನ್ನು ಮತ್ತು ತನ್ನ ಉದ್ದೇಶವನ್ನು ತಿಳಿಸಿದರು. ಇವರ ಈ ಉದ್ದೇಶ ಸಾರ್ವಜನಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಲಿಟ್‌ಲ್ ಹೇಲ್ಸ್‌ರವರು ಸೈಂಟ್ ಆನ್ಸ್ ಶಾಲೆಯ 6ನೇ ಫಾರ್ಮ್‌ನ ಹೆಣ್ಣು ಮಕ್ಕಳೊಡನೆ 'ನೀವು ಮುಂದೆ ಕಲಿಯುಬಯಸುತ್ತೀರೋ'? ಎಂದು ಪ್ರಶ್ನಿಸಿದಾಗ, 6 ಹೆಣ್ಣು ಮಕ್ಕಳು ಮಂಗಳೂರಿನಲ್ಲಿ ಅವಕಾಶ ಒದಗಿಸುವುದಾದರೆ ಮುಂದುವರಿಸುತ್ತೇವೆ ಎಂದು ಹೇಳಿದರು.

ಇದು ಮದರ್‌ರವರಿಗೆ ಸೈಂಟ್ ಆನ್ಸ್‌ನಲ್ಲಿ ಸಣ್ಣ ರೀತಿಯಲ್ಲಿ ತಮ್ಮ ಯೋಜನೆಯನ್ನು ಮುಂದುವರಿಯಲು ಧೈರ್ಯ ನೀಡಿತು. ಮೊದಲ ಇಂಟರ್‌ಮೀಡಿಯೇಟ್ ವಿದ್ಯಾರ್ಥಿಗಳಿಗೆ ಅಲ್ಲಿಯೇ ಸೈಂಟ್ ಅಲೋಶಿಯಸ್ ಕಾಲೇಜಿನ ಅತಿಥಿ ಉಪನ್ಯಾಸಕರಿಂದ ತರಬೇತಿ ನೀಡಲಾಯಿತು. ಕಟ್ಟಡದ ಕೆಲಸವೂ ಆಶ್ಚರ್ಯಕರ ವೇಗದಲ್ಲಿ ನಡೆದು ಅಕ್ಟೋಬರ್ 1920ರ ವೇಳೆಗೆ ಸಿದ್ಧವಾಯಿತು. ತಿರುಚಿನಾಪಳ್ಳಿಯ ಸೈಂಟ್ ಜೋಸೆಫ್ಸ್ ಕಾಲೇಜಿನ ಪ್ರಾಂಶುಪಾಲರಾದ ಫಾ। ಬೆಂಜಮಿನ್ ಇವರಿಂದ ಕಾಲೇಜ್ ಉದ್ಘಾಟಣೆಗೊಂಡಿತು. ಸಂಯೋಜನೆಗಾಗಿ ಮದರಾಸಿನ ಸೆನೆಟ್‌ಗೆ ವರದಿ ಮತ್ತು ಶಿಫಾರಸ್ಸಿನೊಂದಿಗೆ ಮಾರ್ಚ್ 4 ರಂದು ಸಲ್ಲಿಸಲ್ಪಟ್ಟು 5 ಮಾರ್ಚ್ 1921 ರಂದು ಮಂಜೂರು ಮಾಡಲಾಯಿತು.

ಮುಂದಿನ ಹೆಜ್ಜೆ ತರಬೇತಿ ಹೊಂದಿದ ಶಿಕ್ಷಕರ ಕೊರತೆಯನ್ನು ನೀಗಿಸುವುದು. ಮತ್ತು ವಿದ್ಯಾರ್ಥಿಗಳ ಅನ್ವೇಷಣೆ. ಮೊದಲನೆಯದು ಜೆಸ್ವಿಟ್ ಫಾದ್ರಿಗಳು[22] ಭಗಿನಿಯರನ್ನು ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ತರಬೇತಿಗಾಗಿ ಸೇರಿಸಿಕೊಂಡರು. ಮೊದಲನೇ ಉಪನ್ಯಾಸಕಿ ಮಿಸ್ ಬೀಯೆಲ್ ಅಗಿದ್ದು ಅವರು ಜೂನ್‌ನಲ್ಲಿ ಆಗಮಿಸಿ ಭಗಿನಿಯರು ಮತ್ತು ಇತರ ವಿದ್ಯಾರ್ಥಿಗಳು ಸೌಹಾರ್ಧತೆಯಿಂದ ಒಬ್ಬರಿಗೊಬ್ಬರು ಸಹಕರಿಸಿಕೊಂಡು ನಿಷ್ಠೆಯಿಂದ ಒಂದೇ ಉದ್ದೇಶಕ್ಕೆ ಕಾರ್ಯಾಚರಿಸುವ ಪರಂಪರೆಯನ್ನು ನಿರ್ಮಿಸಿದರು. ಕೊನೆಯ ಹೆಜ್ಜೆ ಈ ಎಲ್ಲಾ ಉದ್ದೇಶವನ್ನು ಪೂರೈಸುವ ಮಕ್ಕಳ ಅನ್ವೇಶಣೆ. ಪ್ರಾಥಮಿಕ ಹೆಜ್ಜೆಯಲ್ಲಿರುವ ಕಾಲೇಜಿಗೆ ನಿಧಾನವಾಗಿ "ಪೂರಕವಾಗುವ" ದೃಷ್ಟಿಯಿಂದ IV, V, VI ನೇ ಫಾರ್ಮ್‌ನ ಮಕ್ಕಳನ್ನು ಸೈಂಟ್ ಆನ್ಸ್‌ನಿಂದ ಸೈಂಟ್ ಆಗ್ನೆಸ್‌ಗೆ ಸ್ಥಳಾಂತರಿಸಲಾಯಿತು. ಇದು 5 ಜುಲೈ 1921 ರಂದು ಅಧಿಕೃತವಾಗಿ ಸೈಂಟ್ ಆನ್ಸ್‌ನಿಂದ ಸೈಂಟ್ ಆಗ್ನೆಸ್‌ಗೆ ಮದರ್ ಅಲೋಯ್ಸಿಯಾರವರ ನೇತೃತ್ವದಲ್ಲಿ ಮೆರವಣಿಗೆ ಹೋಗುವ ಮೂಲಕ ಜಾರಿಗೆ ಬಂದಿತು. ಹೀಗೆ ಕಾಲೇಜಿನ ಆರಂಭ ಕೇವಲ 6 ವಿದ್ಯಾರ್ಥಿಗಳು, 5 ಉಪನ್ಯಾಸಕರು ಮತ್ತು 7 ವಿಭಾಗಗಳೊಂದಿಗೆ ಪ್ರಾರಂಭವಾಯಿತು. ಶಿಕ್ಷಣದ ವಿಧಾನ ಎಷ್ಟು ಪರಿಣಾಮಕಾರಿಯಾಗಿತ್ತೆಂದರೆ, ವರುಷಗಳು ದಾಟಿದಂತೆ ಸುದ್ದಿ ಪಸರಿಸಿ ವಿದ್ಯಾರ್ಥಿಗಳ ಸಂಖ್ಯೆ ಅಭಿವೃದ್ಧಿಯಾಯಿತು. ಕಳೆದ 100 ವರ್ಷದ ಚರಿತ್ರೆಯಲ್ಲಿ ಇದರ ಶೈಕ್ಷಣಿಕ ಪರಿಶೀಲನೆ[23] ಮತ್ತು ವಿಶ್ವವಿದ್ಯಾಲಯದ ಚಿನ್ನದ ಪದಕ ಮತ್ತು ರ್‍ಯಾಂಕ್‌ಗಳು ನೂರಕ್ಕೆ ಮೀರಿವೆ.

ಅಂತೆಯೇ, ಕಿರಿಯ ಇಂಟರ್ ಮೀಡಿಯೇಟ್ ತರಗತಿಗಳು ಜೂನ್ 22, 1920ರಂದು ವಿಭಾಗ 1 – ಇಂಗ್ಲಿಷ್; ವಿಭಾಗ 2 – ಕನ್ನಡ, ಮಲಯಾಳಂ, ಫ್ರೆಂಚ್; ವಿಭಾಗ 3 – ಪ್ರಾಚೀನ ಮತ್ತು ಆಧುನಿಕ ಇತಿಹಾಸ ಹಾಗೂ ತರ್ಕಶಾಸ್ತ್ರದೊಂದಿಗೆ ಆರಂಭಗೊಂಡಿತು ಮತ್ತು ಇದನ್ನು ಬಿಷಪ್‌ರವರು ಸೈಂಟ್ ಆನ್ಸ್ ಗಾರ್ಡನ್ ಹೋಂನಲ್ಲಿ ಚಾಲನೆ ನೀಡಿದರು. ಆಗ ಮಿಸ್ ಮೇರಿ ಗ್ವೆಂಡೋಲೈನ್ ಐಸಾಕ್ಸ್ (ದಿವಂಗತ ಸಿಸ್ಟರ್ ಏಮ್ಮಿ ಎ.ಸಿ.)

ಅವರೊಂದಿಗೆ 8 ವಿದ್ಯಾರ್ಥಿಗಳನ್ನು ಒಳಗೊಂಡಿತ್ತು. ಇವರಿಗೆ ಉಪನ್ಯಾಸಕರು ಸೈಂಟ್ ಅಲೋಶಿಯಸ್ ಕಾಲೇಜಿನಿಂದ ಬರುತ್ತಿದ್ದರು. ಅಕ್ಟೋಬರ್ 1920ರಲ್ಲಿ, ಸೈಂಟ್ ಆಗ್ನೆಸ್‌ನಲ್ಲಿ ಹೈಸ್ಕೂಲ್ ಕಟ್ಟಡದಲ್ಲಿ ತಾತ್ಕಾಲಿಕವಾಗಿ ಕಾಲೇಜು ನಡೆಸಲು ಅನುಮತಿ ದೊರೆಯಿತು.

ಜನವರಿ 29, 1921ರಂದು ಮದರಾಸು ವಿಶ್ವವಿದ್ಯಾನಿಲಯ ಸಮಿತಿ ಕಾಲೇಜಿನ ಯೋಜಿತ ಕಟ್ಟಡ ಮತ್ತು ಮೈದಾನವನ್ನು ಪರಿಶೀಲಿಸಿತು. ಸಿಂಡಿಕೇಟ್‌ನ ಓರ್ವ ಸದಸ್ಯರಾಗಿದ್ದ, ಫಾ. ಬೆರ್ಟ್ರಮ್ ಎಸ್.ಜೆ. ಅವರ ಸಲಹೆಯಂತೆ ಮದರ್ ಅಲೋಯ್ಸಿಯಾರವರು ಸೆನೆಟ್‌ಗೆ ಹಣಕಾಸಿನ ವ್ಯವಸ್ಥೆ ಮತ್ತು ಸಿಬಂಧಿವರ್ಗದ ವಿವರಗಳನ್ನೊಳಗೊಂಡ ಒಂದು ವರದಿಯನ್ನು ತಯಾರಿಸಿದರು.

ಮಾರ್ಚ್ 4 ರಂದು ಸಂಯೋಜನೆಗಾಗಿ ಅರ್ಜಿಯನ್ನು ಸೆನೆಟ್‌ನ ಮುಂದೆ ಇರಿಸಲಾಯಿತು ಮತ್ತು ಅದನ್ನು ಸರಕಾರಕ್ಕೆ ಕಳುಹಿಸಲು ನಿರ್ಣಯ ಕೈಗೊಳ್ಳಲಾಯಿತು. ಶಾಲಾ ಪರಿವೀಕ್ಷರಾಗಿದ್ದ ಮಿಸ್ ಸಿ. ಡ್ರಿಸ್‌ಡೇಲ್, ಫಾ। ಡೆನಿಸ್ ಫೆರ್ನಾಂಡೆಸ್, ಫಾ। ಪಿ. ಸಿ. ರೊಜಾರಿಯೊ, ಫಾ। ಪ್ರೊಸೆರ್ಪಿಯೊ ಎಸ್.ಜೆ., ಬಿಷಪ್ ಪೆರಿನಿ ಎಸ್. ಜೆ., ಮತ್ತು ಸೈಂಟ್ ಆನ್ಸ್‌ನ ವಿದ್ಯಾರ್ಥಿಗಳು ಅವರ ಸುತ್ತ ನೆರೆದು ಯೋಜನೆಯ ಸಾಫಲ್ಯತೆಗಾಗಿ ಪ್ರಾರ್ಥಿಸಿದರು. ಬಹಳ ಕಾಲದವರೆಗೆ ನಿರೀಕ್ಷೆಯಲ್ಲಿದ್ದ ಸೈಂಟ್ ಆಗ್ನೆಸ್ ಕಾಲೇಜಿನ ದ್ವಿತೀಯ ದರ್ಜೆಯ ಕಾಲೇಜಾಗಿ ಸಂಯೋಜನಾ ಆದೇಶ ಕೊನೆಗೂ ಏಪ್ರಿಲ್ 14, 1921ರಂದು ದೊರೆಯಿತು. 1921ರಲ್ಲಿ ಕಾಲೇಜು ತರಗತಿಗಳು ಸೈಂಟ್ ಆನ್ಸ್, ಬೋಳಾರದಿಂದ ಬೆಂದೂರಿಗೆ ಸ್ಥಳಾಂತರಗೊಂಡಿತು. ವಿದ್ಯಾರ್ಥಿಗಳನ್ನು ಸೈಂಟ್ ಆನ್ಸ್‌ನಿಂದ 21 ಬಾಡಿಗೆಯ ಕುದುರೆಗಾಡಿಗಳ ಮೂಲಕ ಕರೆದುಕೊಂಡು ಬರಲಾಗಿದ್ದು ಬೋಳಾರದ ಶಾಲಾ ಗೇಟಿನಿಂದ ಶಿಕ್ಷಕರ ನೇತೃತ್ವದಲ್ಲಿ ಹೊಸ ಸ್ಥಳ – ಕ್ರೈಸ್ಟ್ ಹಾಲ್‌ಗೆ ಭವ್ಯವಾದ್ಯ ಘೋಷಗಳೊಡನೆ ಕರೆತರಲಾಯಿತು. ಬ್ಯಾಂಡ್ ತಂಡದ ಸ್ವರ ಈ ಪ್ರತಿಷ್ಠಿತ ಆರಂಭಕ್ಕೆ ಒಂದು ಕಳೆಯನ್ನೇ ಕೊಟ್ಟಿತು.

ಕಾಲೇಜಿನ ಔಪಚಾರಿಕ ಉದ್ಘಾಟನೆ 23 ಜುಲೈ, 1921ರಂದು ನೆರವೇರಿಸಲ್ಪಟ್ಟಿತು. ಸಂತ ಜೋಸೇಫರ ಉತ್ಸವ ದಿನದಂದು ಫಾ। ಪಿ. ಸಿ. ರೊಜಾರಿಯೊ ಎಸ್. ಜೆ.ರವರು ಈ ಒಂದು ಶ್ಲಾಘನೀಯ ಸಹಾಯಕ್ಕಾಗಿ ವಿಶೇಷ ಕೃತಜ್ಞತಾ ಬಲಿಪೂಜೆಯನ್ನು ಅರ್ಪಿಸಿದರು. ಸಾಯಂಕಾಲ ಇಂಟರ್ ಮೀಡಿಯೇಟ್ ಮತ್ತು ಹೈಸ್ಕೂಲ್ ಮಕ್ಕಳು ಮನರಂಜನಾ ಕಾರ್ಯಕ್ರಮ ನೀಡಿದರು. ಮಿಸ್ ವಾಯ್ಲೆಟ್ ಲೀಕ್ಸ್, ಮಹಿಳಾ ಪ್ರಾಂಶುಪಾಲರು ಹಿಂದಿನ ಸೈಂಟ್ ಆನ್ಸ್ ಶಾಲೆಯ ಸ್ಥಾಪನೆಯ ಕಿರು ಚರಿತ್ರೆಯನ್ನು ವಿವರಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಜಿಲ್ಲಾ ಕಲೆಕ್ಟರ್, ಶ್ರೀ ಎಲ್ಲೀಸ್ ಇವರು ಅಧ್ಯಕ್ಷತೆ ವಹಿಸಿ ಆಡಿದ ಮಾತುಗಳು ಸೇರಿದ್ದ ಜನಸ್ತೋಮ ಮಂಗಳೂರಿನಲ್ಲಿ ಕೆಥೋಲಿಕ ಸಂಸ್ಥೆಗಳು ಮಾಡಿದ ಕೆಲಸಗಳಿಗೆ ತಾವು ಕೃತಜ್ಞತಾ ಪೂರ್ವಕ ಋಣಿಗಳಾಗಿದ್ದೇವೆ ಎಂಬುದನ್ನು ನೆನಪಿಸಿತು.[24]

ಕಾಲೇಜಿನ ಸ್ಥಾಪನೆ ಮಹಿಳಾ ಶಿಕ್ಷಣದ ವಿಷಯದಲ್ಲಿ ಮದರ್ ಅಲೋಯ್ಸಿಯಾರವರ ಶ್ರೇಷ್ಠ ಸಾಧನೆ ಎಂದು ಪರಿಗಣಿಸಲಗುತ್ತದೆ. ಸೈಂಟ್ ಆಗ್ನೆಸ್ ಕಾಲೇಜಿನ[25] ಹೆಸರು ಉದ್ದಗಲಕ್ಕೂ, ಭಾರತದಾದ್ಯಂತ ಮತ್ತು ಹೊರದೇಶಗಳಲ್ಲಿಯೂ ಅಚ್ಚಳಿಯದೆ ಉಳಿದಿದೆ. ಸೈಂಟ್ ಆಗ್ನೆಸ್ ಕಾಲೇಜಿನಲ್ಲಿ ಕಲಿತ ಬಹಳಷ್ಟು ಪಧವೀದರರು ಶಿಕ್ಷಣ ಕ್ಷೇತ್ರವನ್ನು ಆಯ್ದುಕೊಂಡು ಮಹಿಳೆಯರಿಗಾಗಿ ತಮ್ಮದೇ ಶಾಲಾ ಕಾಲೇಜುಗಳನ್ನು ನಡಿಸುವವರಾದರು ಎಂಬುದು ಗಮನಿಸಬೇಕಾದ ವಿಷಯವಾಗಿದೆ. ಹಳೆ ವಿದ್ಯಾರ್ಥಿನಿಯೋರ್ವರು ಹೇಳುವಂತೆ –"ಒಂದು ವೇಳೆ ಸೈಂಟ್ ಆಗ್ನೆಸ್ ಇಲ್ಲದೇ ಹೋಗಿದ್ದರೆ ಮಂಗಳೂರು ಹೇಗಿರುತ್ತಿತ್ತು ಎಂಬುದನ್ನು ಇಂದು ನೆನಸಿಕೊಳ್ಳುವುದೂ ಕಠಿಣವೆನಿಸುತ್ತದೆ. ಆದುದರಿಂದ ಸ್ಥಾಪಕರ ಸಾಧನೆಯನ್ನು ಶ್ಲಾಘಿಸುವುದು ಒಳ್ಳೆಯದು, ಮಾತ್ರವಲ್ಲದೆ ಅಂದಿನ ಪರಿಸ್ಥಿತಿಯಲ್ಲಿ ಆಕೆ ಕಂಡ ಕನಸನ್ನು ಯೋಚಿಸುವುದೂ ಅಗತ್ಯವಾಗಿದೆ. ಭೌತಿಕವಾಗಿ ನಗರದ (ಮಂಗಳೂರಿನ) ಗಾತ್ರ ಮತ್ತು ಅದರ ಜನಸಂಖ್ಯೆ ಇಂದಿಗೆ ಹೋಲಿಸಿದರೆ ಅರ್ಧಕ್ಕಿಂತಲೂ ಕಡಿಮೆ ಇತ್ತು; ಇಂದಿನ ದಿನಗಳಲ್ಲಿ ಪರಿಸ್ಥಿತಿ ನಮಗೆ ಬೇಕೆಂಬಂತೆ ಇದ್ದರೆ, ರಾಜಕೀಯವಾಗಿ ಅದು ಸಂಪೂರ್ಣವಾಗಿ ಇಲ್ಲ ಎಂಬಂತ್ತಿತ್ತು; ಕಾರಣ ಟೈಫಾಯ್ಡ್‌ನಂತಹ ಮಾರಣಾಂತಿಕ ರೋಗಗಳು ಇದ್ದ ಸಮಯದಲ್ಲಿ ಡಾಮಾರು ರಸ್ತೆಗಳು, ವಿದ್ಯುತ್ ದೀಪ, ಶೌಚಾಲಯ ಸವಲತ್ತುಗಳು, ಕಾರುಗಳು, ವಿಮಾನಗಳು, ಇತ್ಯಾದಿ ಯಾವುದೂ ಲಭ್ಯವಿರಲಿಲ್ಲ."

ಅದು ಹೆಣ್ಣು ಮಕ್ಕಳಿಗೆ ಇನ್ನೂ ಪ್ರೌಢಾವಸ್ಥೆಗೆ ಬರುವಾಗಲೇ ಮದುವೆ ಮಾಡುವ ಕಾಲವಾಗಿತ್ತು. ಈ ಪರಿಸ್ಥಿತಿಯಲ್ಲಿ ಸೈಂಟ್ ಆಗ್ನೆಸ್ ಕಾಲೇಜನ್ನು ತೆರೆಯುವ ಮದರ್ ಅಲೋಯ್ಸಿಯಾರವರ ಉತ್ತಮ ಸ್ಥೈರ್ಯವಾಗಿತ್ತು ಮತ್ತು ಮುಂದಾಲೋಚನೆಯಿಂದ ಕೂಡಿತ್ತು ಎಂಬುದು ಮೆಚ್ಚುಗೆಗೆ ಯೋಗ್ಯವಾಗಿತ್ತು.

ಮೊದಲ ಇಪ್ಪತ್ತೈದು ವರ್ಷಗಳು (1921 – 1946)

ಸೈಂಟ್ ಆಗ್ನೆಸ್ ಕಾಲೇಜಿನ ಸ್ಥಾಪನೆಯು ಭಾರತದಲ್ಲಿ ಮಹಿಳಾ ಶಿಕ್ಷಣದ ಚರಿತ್ರೆಗೆ ಮೈಲಿಗಲ್ಲಾಗಿತ್ತು. ಸಣ್ಣ ಆರಂಭದಿಂದ ಕಾಲೇಜು ಭೌತಿಕವಾಗಿ ಮತ್ತು ತರಬೇತಿಯ ವಿಭಿನ್ನತೆಯಿಂದ ಬೆಳೆಯಲಾರಂಭಿಸಿದುದರಿಂದ ಹೊಸ ಕಟ್ಟಡದ ಅವಶ್ಯಕತೆ ಉಂಟಾಯಿತು. ಕಾಲೇಜಿನ ಆರಂಭದಲ್ಲಿ ಹೊಂದಿದ್ದ ಕಟ್ಟಡವು ಹೈಸ್ಕೂಲ್ ಮತ್ತು ಬೋರ್ಡಿಂಗ್ ಆಗಿ ರೂಪುಗೊಂಡ ಕಟ್ಟಡವಾಗಿತ್ತು. ಮಾರ್ಚ್ 1922ರಲ್ಲಿ ಮೊದಲ ತಂಡ ಇಂಟರ್ ಮೀಡಿಯೇಟ್ ಪಬ್ಲಿಕ್ ಪರೀಕ್ಷೆ ಬರೆಯಿತು. ಫಲಿತಾಂಶವು ಆಶಾದಾಯಕವಾಗಿತ್ತು. 3 ಮೊದಲ ದರ್ಜೆ, 4 ಎರಡನೇ ದರ್ಜೆಯಲ್ಲಿ ಪಾಸಾಗಿದ್ದು ಒಬ್ಬ ವಿದ್ಯಾರ್ಥಿನಿ ತರ್ಕಶಾಸ್ತ್ರದಲ್ಲಿ ಉನ್ನತ ಶ್ರೇಣಿ ಮತ್ತು ಸಿಸ್ಟರ್ ಬೆನೆಡಿಕ್ಟ

ಎ.ಸಿ.[26] ಇವರಿಗೆ ಇಂಗ್ಲೀಷ್ ಭಾಷೆಯ ಪ್ರಾವಿಣ್ಯತೆಗಾಗಿ "ಕೃಪಾಬಾಯಿ ಸತ್ಯನಾಥನ್ ಚಿನ್ನದ ಪದಕ" ದೊರೆಯಿತು. ಕಾಲೇಜಿನ ಪ್ರಾಂಶುಪಾಲರಾಗಿದ್ದ (1921–1934) ರೆವೆ। ಸಿಸ್ಟರ್ ಅನನ್ಸಿಯಾಟ ಎ.ಸಿ. ಯವರು ಶ್ರದ್ಧಾ ಮನೋಭಾವನೆಯ ಸಹೋದ್ಯೋಗಿಗಳ ಸಹಕಾರದಿಂದ ಕಾಲೇಜನ್ನು ಉತ್ತಮ ಸಂಸ್ಕೃತಿಯುಳ್ಳ ಸುಸಜ್ಜಿತ ಪ್ರಥಮ ದರ್ಜೆ ಕಾಲೇಜಾಗಿ ಬೆಳೆಸಿದರು ಮತ್ತು ಉತ್ತಮ ಮಾರ್ಗದರ್ಶಿಯಾದರು. ಇವರು ಪ್ರಾಂಶುಪಾಲರ ಹುದ್ದೆ ಸ್ವೀಕರಿಸಿದಾಗ ಪ್ರಥಮ ಪಧವಿ ಪೂರ್ವದಲ್ಲಿ 15 ಮತ್ತು ಎರಡನೇ ಪಧವಿಪೂರ್ವದಲ್ಲಿ 9 ವಿದ್ಯಾರ್ಥಿಗಳಿದ್ದರು. ಪ್ರಾಂಶುಪಾಲೆ ವಯೊಲೆಟ್ ಲೀಕ್ಸ್, ಮಿಸ್ ಬೀಯೆಲ್, ಮಿಸ್ ಬ್ರಿಡ್ಜೆತ್ ಸಲ್ದಾನ, ಸಿಸ್ಟರ್ ಯೂಜಿನ್, ಸಿಸ್ಟರ್ ತೆದೋಸಿಯ, ಸಿಸ್ಟರ್ ಮೇರಿ ಆಗ್ನೆಸ್ ಮತ್ತು ಶ್ರೀ ಸುಬ್ಬರಾವ್ ಇವರು ಪ್ರಥಮ ಸಿಬ್ಬಂದಿಗಳಾಗಿದ್ದರು.

ಕಾಲೇಜಿಗೆ ಸೇರ್ಪಡೆ ಹೆಚ್ಚಾದಂತೆ ಕಟ್ಟಡಗಳ ಅವಶ್ಯಕತೆ ಉಂಟಾಯಿತು. ಆರಂಭದಲ್ಲಿ ಇದ್ದ ಕಟ್ಟಡವನ್ನು ಶಾಲೆ ಮತ್ತು ಬೋರ್ಡಿಂಗ್‌ಗೆ ಉಪಯೋಗವಾಗುವಂತೆ ಪರಿವರ್ತಿಸಲಾಯಿತು. ಲೈಬ್ರೆರಿ ಮತ್ತು ರೀಡಿಂಗ್ ರೂಂಗಳು ಎರಡು ಬ್ಯಾಡ್‌ಮಿಂಟನ್, ಒಂದು ಟೆನ್ನೀಸ್ ಕೋರ್ಟ್‌ಗಳಿಗೆ ಮತ್ತು ಗೇಮ್ಸ್ ಮತ್ತು ಸ್ಪೋರ್ಟ್ಸ್‌ಗಳಿಗೆ ಅವಕಾಶ ಮಾಡಲಾಗಿತ್ತು. ಅಂದು ಕಾಲೇಜು ಕಟ್ಟಡದ ವೆಚ್ಚ 1.5 ಲಕ್ಷ ಆಗಿತ್ತು. 11 ಎಕರೆ ಮೂಲ ಸ್ಥಳ ರೂ.28,000/- ಕ್ಕೆ ಕೊಂಡುಕೊಳ್ಳಲಾಗಿದ್ದು ಹೆಚ್ಚುಮಟ್ಟಿಗೆ 2/3 ಅಂಶ ಕಾಲೇಜು ಕಟ್ಟಡಕ್ಕೆ ಮತ್ತು ಕಾನ್ವೆಂಟ್‌ಗೆ ಉಪಯೋಗಿಸಲ್ಪಟ್ಟಿತು, ಮತ್ತು ಉಳಿದ ಸ್ಥಳ ಪ್ರೈಮರಿ, ಮಿಡ್ಲ್ ಮತ್ತು ಹೈಸ್ಕೂಲ್‌ಗೆ ಸೀಮಿತವಾಗಿತ್ತು.

ಬಿ.ಎ. ತರಗತಿಯ ಆರಂಭ ಇಂಟರ್‌ಮೀಡಿಯೇಟ್ ಯೋಜನೆ ಸ್ಥಾಪಿಸಲು ನಾಂಧಿಯಾಯಿತು. ಜನವರಿ 1924ರಲ್ಲಿ ಸಿಸ್ಟರ್ ಅನನ್ಸಿಯಾಟ ಇವರು ಕಾಲೇಜಿಗೆ ೫ಗಿ ನೇ ಗುಂಪಿನ ಅನುಸಾರ ಚರಿತ್ರೆ ಮತ್ತು ವಾಣಿಜ್ಯ ಶಾಸ್ತ್ರವನ್ನೊಳಗೊಂಡ ಬಿ.ಎ. ಡಿಗ್ರಿ ಪಧವಿಗೆ ಮಾನ್ಯತೆ ಪಡೆಯಲು ಪ್ರಯತ್ನಿಸಿದರು. ಜುಲೈ 2, 1924ರಂದು ಜೂನಿಯರ್ ಬಿ.ಎ. ತರಗತಿ ಉದ್ಘಾಟಿಸಲ್ಪಟ್ಟಿತು ಮತ್ತು ಇದಕ್ಕೆ ಸೇರಿಸಲ್ಪಟ್ಟ ಎಲ್ಲಾ 15 ವಿದ್ಯಾರ್ಥಿಗಳು ಸೈಂಟ್ ಆನ್ಸ್ ಇಂಟರ್‌ಮೀಡಿಯೆಟ್ ತರಗತಿಯಲ್ಲಿ ತಯಾರಾದವರು ಆಗಿದ್ದರು. ಬಿ.ಎ. ಪಧವಿಗೆ ಭಾಗ 1ರಲ್ಲಿ – ಇಂಗ್ಲೀಷ್, ಭಾಗ 2ರಲ್ಲಿ– ಕನ್ನಡ/ಫ್ರೆಂಚ್/ ಮಲಯಾಳಂ ಮತ್ತುಭಾಗ 3–ರಲ್ಲಿ ಚರಿತ್ರೆ ಮತ್ತು ವಾಣಿಜ್ಯ ಶಾಸ್ತ್ರ ಒಳಗೊಂಡಿತ್ತು. ಕಾಲೇಜು ಸಂಸ್ಥೆಗೆ ಸೈಂಟ್ ಆನ್ಸ್ ಕಾನ್ವೆಂಟ್‌ನ ಸಂಭಂದವಿದ್ದು ಅದೇ ಹೆಸರು ಗೊಂದಲಕ್ಕೆ ಕಾರಣವಾದುದರಿಂದ ಕಾಲೇಜಿಗೆ ಪುನರ್ ನಾಮಕರಣ ಅಗತ್ಯವೆಂದು ಕಂಡು ಬಂತು. ಫೆಬ್ರವರಿ 19, 1924ರಂದು ಕಾಲೇಜಿಗೆ "ಸೈಂಟ್ ಆಗ್ನೆಸ್ ಕಾಲೇಜು"ಎಂದು ಹೊಸ ಹೆಸರು ನೀಡಲು ವಿಶ್ವವಿದ್ಯಾಲಯದ ಅನುಮೋದನೆ ಪಡೆಯಲಾಯಿತು. ಅದೇ ವರ್ಷ ಸೈಂಟ್ ಆಗ್ನೆಸ್ ಕಾಲೇಜು ದಕ್ಷಿಣ ಭಾರತದಲ್ಲಿ ಮೊದಲ

ಮಹಿಳಾ ಪ್ರಥಮ ದರ್ಜೆ ಕಾಲೇಜಾಗಿ ಪರಿವರ್ತನೆಯಾಯಿತು. 1935ರಲ್ಲಿ ಸೀನಿಯರ್ ಬಿ.ಎ. ತರಗತಿ ವಿಭಾಗವನ್ನು ಪ್ರಾರಂಭಿಸಲಾಯಿತು. ಪ್ರಾವಿನ್ಸ್‌ನ ನಿರ್ದೇಶಕರ ಕೈಯಲ್ಲಿ ಕಾಲೇಜು ಅಭಿವೃದ್ಧಿಯನ್ನು ಕಂಡಿತು. ಇದಕ್ಕೆ ಪೂರಕವೆಂಬಂತೆ ಬಿ.ಎ. ಪಧವಿ ಪರೀಕ್ಷೆಯಲ್ಲಿ ಒಬ್ಬಾಕೆ ವಿದ್ಯಾರ್ಥಿನಿ ಉತ್ತೀರ್ಣಗೊಂಡವಳಲ್ಲಿ ಮೊದಲಿಗಳಾಗಿದ್ದಳು ಮಾತ್ರವಲ್ಲದೆ ಇಬ್ಬರು ಮೊದಲ ದರ್ಜೆಯಲ್ಲಿ ಪಾಸಾಗಿ ವಿಭಾಗ I ಮತ್ತು IIರಲ್ಲಿ ಪ್ರೆಸಿಡೆನ್ಸಿಯಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದ್ದಳು. ಅವಳಿಗೆ 'ಸರ್ ಹೆನ್ರಿ ಸ್ಟೋನ್ ಮೆಡಲ್' ದೊರೆತಿರುವುದು ಮಾತ್ರವಲ್ಲದೆ 'ಕಾರ್ಡೋರ್ಝು' ಮತ್ತು 'ಟೋಡ್‌ಹಂಟರ್' ಬಹುಮಾನಗಳು ದೊರೆತವು. ಬಿ.ಎ. ತರಗತಿ ಇನ್ನೊಬ್ಬಾಕೆ 'ಗ್ರಿಗ್ ಸ್ಮಾರಕ', ಡಾ। ಟಿ.ಎನ್.ನಾಯರ್ ಮತ್ತು 'ಅಕ್ಕಮ್ಮ ಗರಿ ಮೆಡಲ್'ಗಳನ್ನು ಗಳಿಸಿದಳು.

ಜನವರಿ 20ರಿಂದ ಜನವರಿ 22, 1925ರ ವರೆಗೆ ಮೂರು ದಿನ ಪ್ರಪ್ರಥಮ ಬಾರಿಗೆ "ಕಾಲೇಜು ದಿನಾಚರಣೆ" ನಡೆಸಲ್ಪಟ್ಟಿತು. ಜನವರಿ 1926ರಲ್ಲಿ ಕಾಲೇಜು ಸಿಬ್ಬಂಧಿ ಮತ್ತು ವಿದ್ಯಾರ್ಥಿಗಳಲ್ಲಿ ಆಧ್ಯಾತ್ಮಿಕ ವ್ಯಕ್ತಿತ್ವ ಪ್ರತಿನಿಧೀಕರಿಸುವ ಸಮವಸ್ತ್ರ ಜಾರಿಗೆ ತಂದಿತು. ಅದು ಸೈಂಟ್ ಆಗ್ನೆಸ್ ಜತೆಗೆ ಒಂದು ತಾಳೆಮರ ಮತ್ತು ಕುರಿಮರಿಯ ಚಿತ್ರವನ್ನೊಳಗೊಂಡಿದ್ದು ಕೆಳಗೆ "Deus Fortitudo Mea" –"God is My Strength." ಎಂದು ಬರೆಯಲಾಗಿತ್ತು.[27] ಈ ಧ್ಯೇಯವಾಕ್ಯ ಕಾಲೇಜಿನ ಸಿಬ್ಬಂದಿ, ಮತ್ತು ವಿದ್ಯಾರ್ಥಿಗಳಿಗೆ ಒಂದು ಆದರ್ಶವನ್ನು ನೀಡಿ ದೇವರಲ್ಲಿ ನಂಬಿಕೆ, ಶಾರೀರಿಕ ಸಾಮರ್ಥ್ಯ ಮತ್ತು ನೈತಿಕತೆಯನ್ನು ಕೊಡುವಂತದ್ದಾಗಿತ್ತು. ಕಾಲೇಜಿನ ಈ ಧೇಯವಾಕ್ಯ ಈ ಕಾಲೇಜಿಗೆ ಬಂದು ಹೋದ ವಿದ್ಯಾರ್ಥಿಗಳಿಗೆ ಪಾರಂಪರಿಕವಾಗಿ ಮಾರ್ಗದರ್ಶಕವಾಯಿತು. ಹಾಗೂ ಇದುವೇ ಕಾಲೇಜಿನ ಲಾಂಛನವಾಯಿತು

ಅಪೊಸ್ತೋಲಿಕ್ ಕಾರ್ಮೆಲೈಟ್ ಸಂಸ್ಥೆಗಳು ಅವಿಶ್ರಾಂತವಾಗಿ ಮಹಿಳಾ ಶಿಕ್ಷಣಕ್ಕೆ ಪ್ರಾಧಾನ್ಯತೆ ನೀಡುತ್ತಿರುವಾಗ, ದೇಶದಾದ್ಯಂತ ಮಹಿಳ ಶಿಕ್ಷಣಕ್ಕೆ ಪ್ರಾಧಾನ್ಯತೆ ನೀಡುವ ಬಗ್ಗೆ ದ್ವನಿಗಳು ಕೇಳಿಬಂದವು. ಉಧಾಹರಣೆಗಾಗಿ, ಅಖಿಲ ಭಾರತ ಮಹಿಳಾ ಶಿಕ್ಷಣ ಸಮ್ಮೇಳನ ತನ್ನ ಪ್ರಥಮ ಸಭೆಯನ್ನು ಜನವರಿ 1927ರಲ್ಲಿ ಪುಣೆಯಲ್ಲಿ ನಡೆಸಿತು. ಇದರಲ್ಲಿ ಬಹಳಷ್ಟು ಸಂಖ್ಯೆಯ ಸಮಾಜ ಸುಧಾರಕರು, ವೃತ್ತಿ ಶಿಕ್ಷಣ ಪರಿಣಿತರು ಭಾಗವಹಿಸಿದ್ದರು. ಮಹಿಳೆಯರಿಗೆ ಉತ್ತಮ ಶಿಕ್ಷಣಕ್ಕೆ ಸಂಭಂದಿಸಿದಂತೆ ಬಹಳಷ್ಟು ನಿರ್ಧಾರಗಳನ್ನು ಕೈಗೊಳ್ಳಲಾಯಿತು. ಹೆಚ್ಚಿನ ಪ್ರತಿನಿಧಿಗಳು ವ್ಯಕ್ತಿಗತ ಸಂಪೂರ್ಣ ಅಭಿವೃದ್ಧಿಯನ್ನು ಪ್ರತಿನಿಧೀಕರಿಸುವ ಶಿಕ್ಷಣಕ್ಕೆ ಒತ್ತು ನೀಡಿದರು. ಅದೇ ವೇಳೆ ಅವರು ಹೆಣ್ಣುಮಕ್ಕಳಿಗೆ ತಾಯ್ತನದ ವಿಶೇಷತೆ, ಮನೆಯನ್ನು ಆಕರ್ಶಕವಾಗಿ ಇಡುವುದು ಮತ್ತು ಇತರರಿಗೆ ಹೇಗೆ ಸಹಾಯಕರಾಗಿರುವುದು ಎಂಬ ಪಾಠವನ್ನು ಅಳವಡಿಸಲು ಸೂಚಿಸಿದರು. ಮಾತ್ರವಲ್ಲದೆ ಅವರು ನೈತಿಕ ಮತ್ತು ದೈಹಿಕ ಶಿಕ್ಷಣದ ಬಗ್ಗೆ ಒತ್ತು ನೀಡಿದರು. ಪ್ರಥಮ ಸಮ್ಮೇಳನ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅಡ್ಡಿಯಾಗುವ ಬಾಲ್ಯ

ವಿವಾಹಕ್ಕೆ ಖಂಡನೆ ವ್ಯಕ್ತಪಡಿದರು. ಮತ್ತು ಮಂಗಳೂರಿನ ಕಾಲೇಜಿನಲ್ಲಿದ್ದ ಭಗಿನಿಯರು ಜನರ ಮನಸ್ಸಿನಲ್ಲಿ ಬದಲಾವಣೆ ತರಲು ಮತ್ತು ಮಹಿಳಾ ಶಿಕ್ಷಣದ ಅಗತ್ಯತೆಯನ್ನು ಜನರಲ್ಲಿ ಮೂಡಿಸಲು ಅದೇ ಸಮಯದಲ್ಲಿ ಪ್ರಯತ್ನಪಟ್ಟರು.

1929ರಲ್ಲಿ ಕಾಲೇಜಿಗೆ ಪದವಿ ತರಗತಿಯಲ್ಲಿ ಫ್ರೆಂಚ್, ಕನ್ನಡ ಮತ್ತು ಮಲಯಾಳಂ ಸೇರ್ಪಡೆಗೊಳಿಸಲು ಅನುಮತಿ ದೊರೆಯಿತು. 1933ರಲ್ಲಿ ಇತರ ವಿಜ್ಞಾನ ಪಾಠಗಳ ಜತೆಗೆ ಸಸ್ಯಶಾಸ್ತ್ರ ಒಂದು ಐಚ್ಚಿಕ ಪಾಠವಾಗಿ ಸೇರ್ಪಡೆಗೊಂಡಿತು. 1934ರಕ್ಕು ಮದರ್ ಎಮ್. ತೆದೋಸಿಯಾ[28] ಕಾಲೇಜಿನ ಪ್ರಾಂಶುಪಾಲೆಯಾಗಿ ನೇಮಕಗೊಂಡರು. ಅವರ ನಾಯಕತ್ವದಲ್ಲಿ ಕಾಲೇಜು ಕಟ್ಟಡಗಳ ವಿಸ್ತರಣೆಗೊಂಡು ಅಭಿವೃದ್ಧಿಯನ್ನು ಕಂಡಿತು. 1935ರಲ್ಲಿ ಕಾಲೇಜಿನಲ್ಲಿ 100 ವಿದ್ಯಾರ್ಥಿಗಳು ಪಟ್ಟಿಯಲ್ಲಿದ್ದು, 100ನೇ ವಿದ್ಯಾರ್ಥಿನಿ ಕು। ಪಾರ್ವತಿ ಆಗಿದ್ದು ಈ ಸಂದರ್ಭವನ್ನು ಆಚರಿಸಲು ಕಾಲೇಜಿಗೆ ರಜೆ ಘೋಷಿಸಲಾಯಿತು.

ಸಂಸ್ಥೆಯ ಅಭಿವೃದ್ಧಿಯಲ್ಲಿ ಇನ್ನೊಂದು ಮೈಲಿಗಲ್ಲು ಇಂಟರ್‌ಮೀಡಿಯೇಟ್ ಕೋರ್ಸ್‌ನಲ್ಲಿ ಹೊಸ ಎರಡು ಐಚ್ಚಿಕ ಪಾಠಗಳು, ಅಂದರೆ ನ್ಯಾಚುರಲ್ ಸೈಯನ್ಸ್ ಮತ್ತು ಗಣಿತಶಾಸ್ತ್ರ, ಇವುಗಳಿಗೆ ಮಾನ್ಯತೆ 1936ರಲ್ಲಿ ದೊರೆಯಿತು. ವಿಜ್ಞಾನ ವಿಭಾಗಕ್ಕೆ ವಿದ್ಯಾರ್ಥಿಗಳಿಂದ ಬೇಡಿಕೆ ಹೆಚ್ಚಾಗುತ್ತಿದ್ದುದು ಒಂದು ವಿಶೇಷತೆ.[29] ಕಾಲೇಜು ಸಂಪೂರ್ಣ ಮಟ್ಟದ ವಿಜ್ಞಾನ ಕೋರ್ಸುಗಳನ್ನು ಹೊಂದಿಕೊಳ್ಳಲು ಪ್ರಯತ್ನ ನಡೆಯಿತು. 1939ರಲ್ಲಿ ರಸಾಯನ ಶಾಸ್ತ್ರಕ್ಕೆ ಮತ್ತು 1942ರಲ್ಲಿ ಭೌತಶಾಸ್ತ್ರಕ್ಕೆ ಮನ್ನಣೆ ದೊರೆಯಿತು. ಇದರಿಂದ ಹೆಣ್ಣು ಮಕ್ಕಳಿಗೆ ವೈದ್ಯಕೀಯ ವೃತ್ತಿಗೆ ಸೇರುವ ಅವಕಾಸ ಲಭಿಸಿದಂತಾಯಿತು. ಮಹಿಳಾ ಕಾಲೇಜಿನಲ್ಲಿ ದೈಹಿಕ ಶಿಕ್ಷಣವನ್ನು ಕಡ್ಡಾಯವಾಗಿ ನೀಡಬೇಕೆಂದು ಒತ್ತಡ ಬಂದುದರಿಂದ ಸೈಂಟ್ ಆಗ್ನೆಸ್‌ನಲ್ಲಿ ಸಣ್ಣ ಮಟ್ಟದಲ್ಲಿ ಜಿಮ್ ಸ್ಥಾಪಿಸಲಾಯಿತು. ರಿಂಗ್ ಎಸೆತ, ತೂಗುಯ್ಯಾಲೆ, ಮುಂತಾದವುಗಳು ವಿದ್ಯಾರ್ಥಿಗಳಿಗೆ ಆರೋಗ್ಯಕರ ದೈಹಿಕ ಅಭ್ಯಾಸ ನೀಡುತ್ತಿದ್ದುದು ಮಾತ್ರವಲ್ಲದೆ ಅಂದಿನ ದಿನಗಳಲ್ಲಿ ಹೆಣ್ಣುಮಕ್ಕಳಿಗೆ ಬೇಕಾಗಿದ್ದ ಶಕ್ತಿ ಮತ್ತು ಆತ್ಮಸ್ಥೈರ್ಯ ನೀಡುವಂತಾದ್ದಾಗಿತ್ತು.

ಹೊಸ ವಿಷಯಗಳ ಸೇರ್ಪಡೆಯಿಂದ ಕಾಲೇಜು ಮಾತ್ರವಲ್ಲದೆ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳ ಉಂಟಾಗುವುದಕ್ಕೆ ಕಾರಣವಾಯಿತು.[30] ಇದರಿಂದಾಗಿ 1939ರಲ್ಲಿ ಮೇಲ್ಮಹಡಿಯಲ್ಲಿ ಹಾಸ್ಟೆಲ್ ಮತ್ತು ಒಂದು ಸಭಾಂಗಣ, ಮತ್ತು ನೆಲಮಹಡಿಯಲ್ಲಿ ತರಗತಿಗಳಿಗೆ ಹೊಸ ಕಟ್ಟಡ ವಿಭಾಗ ನಿರ್ಮಾಣದ ಅವಶ್ಯಕತೆ ಉಂಟಾಯಿತು. 1942ರಲ್ಲಿ ಪುನಃ ಭೌತಶಾಸ್ತ್ರ ಮತ್ತು ನೈಸರ್ಗಿಕ ಜ್ಞಾನ ತರಗತಿಗಳಿಗಾಗಿ ಹೊಸ ವಿಭಾಗದ ವಿಸ್ತರಣೆ ಅಗತ್ಯತೆ ಕಂಡು ಬಂತು. ದಿವಾನ್ ಬಹದೂರ್ ಪಿ. ಸಿ. ಲೋಬೊ[31] ಇವರು 1942ರಲ್ಲಿ ತರಗತಿಗಳನ್ನು ನಡೆಸಲು ಕಟ್ಟಡವೊಂದನ್ನು ರಚಿಸಿ ದಾನವಾಗಿತ್ತರು. ಇದು ಮುಂದೆ ಹೋಮ್ ಸೈಯನ್ಸ್ ಬ್ಲಾಕ್ ಎಂದು

ಕರೆಯಲ್ಪಟ್ಟಿತು. 1942–43ರಲ್ಲಿ ಕಾಲೇಜು ರಸ್ತೆಯ ಇನ್ನೊಂದು ಬದಿಯಲ್ಲಿ ಆಟದ ಮೈದಾನಕ್ಕಾಗಿ ಒಂದು ಸ್ಥಳವನ್ನು ಪಡೆದುಕೊಂಡಿತು. 1943ರಲ್ಲಿ ಸಿಸ್ಟರ್ ಎಮ್. ಫಿಡೆಲಿಸ್ ಎ.ಸಿ. ಅವರು ಕಾಲೇಜಿನ ಪ್ರಾಂಶುಪಾಲೆ ಆದರು. ವಿಶ್ವವಿದ್ಯಾಲಯವು ಹೀಗೆ ಕಾಲೇಜಿನ ಏಳಿಗ ಮತ್ತು ಜನಪ್ರೀಯತೆಯನ್ನು ಕಂಡು ಗಣಿತಶಾಸ್ತ್ರ ಮತ್ತು ಬಿ.ಎ. ತರಗತಿಯಲ್ಲಿ ಸಂಸ್ಕೃತ ಹಾಗೂ ಇಂಟರ್ ಮೀಡಿಯೆಟ್ ವಿಭಾಗದಲ್ಲಿ ಹೋಮ್ ಸೈಯನ್ಸ್ ಮತ್ತು ಸಂಸ್ಕೃತ ಅಳವಡಿಕೆಗೆ ಮನ್ನಣೆ ನೀಡಿತು. ಮುಂದೆ ಪದವಿ ಮಟ್ಟದಲ್ಲಿ ಬಿ.ಎಸ್ಸಿ ತರಗತಿಯಲ್ಲಿ ಹೋಮ್ ಸೈಯನ್ಸ್ ಸೇರಿಸಿಕೊಳ್ಳಲಾಯಿತು. ಉಪ ಕುಲಪತಿಯವರು ಕಾಲೇಜಿಗೆ ಭೇಟಿ ನೀಡಿ ಹೌಸ್‌ಹೋಲ್ಡ್ ಆರ್ಟ್ಸ್ ಬಗ್ಗೆ ಸಂತುಷ್ಟರಾಗಿ ಇಂಟರ್ ಮೀಡಿಯೇಟ್ ತರಗತಿಯಲ್ಲಿ ಒಂದು ಪಾಠವಾಗಿ ಸೇರಿಸಲು ಪಾಠಪಟ್ಟಿ ತಯಾರಿಸುವಂತೆ ಕೇಳಿಕೊಂಡರು. ಮನೆವಾರ್ತೆಯ ವಿಷಯವು ಹೀಗೆ ಅಗತ್ಯವುಳ್ಳ ವಿಷಯವಾಯಿತು. ಜೂನ್ 1945ರಲ್ಲಿ ಈ ತರಬೇತಿಯಿ 15 ವಿದ್ಯಾರ್ಥಿಗಳೊಡನೆ ಚಾಲನೆಗೆ ಬಂತು. ಈ ತರಬೇತಿಯು ವಿದ್ಯಾರ್ಥಿಗಳನ್ನು ಮನೆ ನಿರ್ವಹಣೆ, ಆದರ್ಶ ಪತ್ನಿ ಮತ್ತು ತಾಯಿಯಂದಿರಾಗಲು ತಯಾರುಗೊಳಿಸಿತು.

1921–1924ರ ಪ್ರಥಮ ಮೂರು ವರ್ಷಗಳು ಪರಿಣಾಮಕಾರಿಯಲ್ಲದ ಸಮಯವಾಗಿ ಪರಿಗಣಿಸಲ್ಪಟ್ಟರೂ ಅದು ಸಂಸ್ಥೆಯ ಬಾಲ್ಯಸ್ಥಿತಿಯಾಗಿದ್ದು ಕಾಲೇಜು ಅಭಿವೃದ್ಧಿ ಹೊಂದುವುದಕ್ಕೆ ತಯಾರಿಕೆಯ ಸಮಯವಾಗಿತ್ತು. 1925ರ ಒಂದು ನಿರ್ಧಿಷ್ಟ ಘಟನೆ, ಅದು ಶಿಕ್ಷಣ ಸಚಿವರಾಗಿದ್ದ ಗೌರವಾನ್ವಿತ ಶ್ರೀ ಎ. ಪಿ. ಪತ್ರಾವೋ ಅವರ ಭೇಟಿ. ಗೌರವಾನ್ವಿತ ಸಚಿವರು ತಮ್ಮ ಭಾಷಣದಲ್ಲಿ ತಾನು ಮನ್ನಣೆ ನೀಡುವುದಕ್ಕೆ ಆರಿಸಿಕೊಂಡ ಕಾಲೇಜುಗಳಲ್ಲಿ ಸೈಂಟ್ ಆಗ್ನೆಸ್ ಕಾಲೇಜು, ಮೊದಲ ಮಹಿಳಾ ಕಾಲೇಜಾಗಿದೆ ಎಂದು ಪ್ರಶಂಸಿದರು.

1926–1927ರ ಒಂದು ನೆನಪಿಡತಕ್ಕ ಘಟನೆ ಭೇಟಿದಾರರ ಪುಸ್ತಕದಲ್ಲಿ ಬರೆಯಲ್ಪಟ್ಟ ಕಾಲೇಜಿಗೆ ಭೇಟಿ ನೀಡಿದ ಗೌರವಾನ್ವಿತ ವಿಸ್‌ಕೌಂಟೆಸ್ ಗೋಶೆನ್[32] ಈ ಕೆಳಗಿನ ಅನುಭವಗಳನ್ನು ವ್ಯಕ್ತಪಡಿಸುತ್ತಾರೆ.

"I was delighted with the warmth of the welcome accorded to me by the sisters and by the students of the College. The programme of Music was most charming. I feel sure that the girls, when they leave, in gratitude for the kindness they have received, and the opportunity for study which have been afforded to them, will ever endeavor to spread the spiritual and intellectual influence with which they have been inspired."

ಅದುವರೆಗೆ ಕೊಡಲ್ಪಡುತ್ತಿದ್ದ ಬಂಗಾರ ಪದಕ ಸ್ಮರಣಿಕೆಯ ಹೊರತಾಗಿ ಆ ವರ್ಷದಲ್ಲಿ ಬಹುಮಾನ ನೀಡುವ ಒಂದು ಕ್ರಮದ ಉದ್ಘಾಟನೆಯಾಯಿತು. ಆರ್ಥಿಕ ಮತ್ತು ತಾರ್ಕಿಕ ದೃಷ್ಟಿಯಿಂದ ಆಡಳಿತ ಮಂಡಳಿ ಈ

ಬಹುಮಾನ ನೀಡುವ ಕ್ರಮವನ್ನು ಅಳವಡಿಸಿಕೊಳ್ಳುವುದು ಉತ್ತಮ ಎಂದು ಕಂಡುಕೊಂಡಿತು. ಮಂಗಳೂರಿನ ಸಾರ್ವಜನಿಕರು, ಸ್ನೇಹಿತರು ಮತ್ತು ಹಿತೈಷಿಗಳು ಈ ಬಹುಮಾನ ನಿಧಿಗಾಗಿ ಹಣ ಸಂಗ್ರಹಣೆಯ ಮನವಿಗೆ ಉತ್ತಮ ಸ್ಪಂದನೆ ನೀಡಿದರು. ಇದಲ್ಲದೆ ವಾರ್ಷಿಕ ದೇಣಿಗೆಗಳು, ಕೊಡುಗೆಗಳನ್ನೂ ಕೂಡಾ ಈ ಬಹುಮಾನ ಯೋಜನೆಗೆ ಉಪಯೋಗಿಸಿಕೊಳ್ಳಲಾಯಿತು.

1929–30ರಲ್ಲಿ ಒಂದು ಏಕೈಕ ಚರಿತ್ರಾರ್ಹ ಘಟನೆ ಕಾಲೇಜು ಸಭಾಂಗಣದಲ್ಲಿ ಜಿಲ್ಲಾ ಕಲೆಕ್ಟರ್‌ರವರಿಂದ ನಡೆಸಲ್ಪಟ್ಟ "ದರ್ಬಾರ್"ನಲ್ಲಿ ರೆವೆರೆಂಡ್ ಮದರ್ ಎಲೋಯ್ಸಿಯಾರವರಿಗೆ 'ಕೈಸರ್–ಇ–ಹಿಂದ್ ಗೋಲ್ಡ್ ಮೆಡಲ್' ನೀಡಿ ಗೌರವಿಸಲಾಗಿತ್ತು.[33] ಈ ದರ್ಬಾರ್‌ನಲ್ಲಿ ಭಾಗಿಯಾಗಿದ್ದ ಸಿಬ್ಬಂಧಿ ಮತ್ತು ವಿದ್ಯಾರ್ಥಿಗಳಿಗೆ ಅವಿಸ್ಮರಣೀಯವಾಗಿತ್ತು.

ಗೌರವಾನ್ವಿತ ಧರ್ಮಾಧ್ಯಕ್ಷ, ರೈಟ್ ರೆವೆ, ಡಾ. ವಿ, ಆರ್. ಫೆರ್ನಾಂಡೆಸ್, ಆಗಸ್ಟ್ 1932ರಲ್ಲಿ ಕಾಲೇಜಿಗೆ ಭೇಟಿ ನೀಡಿದರು. ಭೇಟಿದಾರರ ಪುಸ್ತಕದಲ್ಲಿ ಅವರು :

"I found a delightful atmosphere altogether. The students looked healthy, lively, happy and cheerful. The Professors are in close touch with the students and freely mix with them. I was treated to a high-grade disputation in Christian Doctrine, which was carried on in a lively manner, yet methodically with great self-control. This is an evidence of the discipline maintained in the lecture rooms. I was very much pleased. And I could not help asking the students to invite me to a similar disputation at some future date" ಎಂದು ಬರೆದರು.

ಮದರಾಸು ಸರಕಾರದ ಗೃಹ ಇಲಾಖೆಯ ಸದಸ್ಯರಾಗಿದ್ದ ಶ್ರೀ ಪನೀರ್ ಸೆಲ್ವಮ್‌ರವರು 1935ರ ತನ್ನ ಭೇಟಿಯ ದಾಖಲೆಯಲ್ಲಿ ಹೀಗೆ ಬರೆಯುತ್ತಾರೆ. ಭಗಿನಿಯರು ಶಿಕ್ಷಣ ತಜ್ಞರು ಪಶ್ಚಿಮ ಕರಾವಳಿಯಲ್ಲಿ ಮಾಡಿರುವ ಅಭಿವೃದ್ಧಿ ಪ್ರಯತ್ನಗಳಿಗೆ ಪ್ರಶಂಸೆಯನ್ನು ವ್ಯಕ್ತ ಪಡಿಸಿ ಈ ಕಾಲೇಜು ಪೂರ್ವ ಕರಾವಳಿಗೂ ಈ ಕೊಡುಗೆಯನ್ನು ವಿಸ್ತರಿಸಬಹುದು ಎಂದು ಆಶಾಭಾವನೆ ವ್ಯಕ್ತ ಪಡಿಸಿರುತ್ತಾರೆ.

ಕಾಲೇಜಿನ ಹಳೆವಿದ್ಯಾರ್ಥಿನಿಯಾದ ಮಿಸ್ ಇ. ಕೆ. ಲೀಲಾ (ಎಂ.ಎ., ಎಲ್.ಟಿ.) ಅವರು ವಿಶ್ವವಿದ್ಯಾಲಯದ ಎಕ್ಸ್‌ಟೆನ್ಷನ್ ಬೋರ್ಡ್ ಕಮಿಟಿಯ ಮನವಿಯನ್ನು ಪರಿಗಣಿಸಿ "ಮಕ್ಕಳ ಶಿಕ್ಷಣ"ದ ಬಗ್ಗೆ ಭಾಷಣ ಮಂಡಿಸಿದರು. ಇದು ಮಂಗಳೂರಿನ ಚರಿತ್ರೆಯಲ್ಲಿಯೇ 1935ರಲ್ಲಿ ಮಹಿಳೆಯೊಬ್ಬರಿಂದ ಮಹಿಳಾ ಕಾಲೇಜಿನಲ್ಲಿ ನಡೆಸಲ್ಪಟ್ಟ ವಿಶ್ವ ವಿದ್ಯಾಲಯ ವಿಸ್ತರಣಾ ಪ್ರಥಮ ಭಾಷಣವಾಗಿತ್ತು. ಮಾತ್ರವಲ್ಲದೆ ಇದು ಕಾರ್ಯಪ್ರವೃತ್ತಿಗೆ ಪ್ರಮುಖ

ಸಾಕ್ಷಿಯಾಗಿದ್ದು ನಗರದ ಶಿಕ್ಷಿತ ಮಹಿಳೆಯರಿಂದ ಕುತೂಹಲಕಾರಿಯಾದ ಸಹಕಾರ ಸಿಗುವುದಕ್ಕೆ ಪೂರಕ ಎಂದು ಕಾಲೇಜು ಆಶಾಭಾವನೆ ಹೊಂದಿತ್ತು. ಎರಡನೇ ವಿಶ್ವವಿದ್ಯಾಲಯ ವಿಸ್ತರಣಾ ಭಾಷಣ ಕಾಲೇಜಿನಿನಲ್ಲಿ ಬೇಗಮ್ ಸುಲ್ತಾನ ಮೀರ್ ಅಮೀನುದ್ದೀನ್ ಇವರಿಂದ 1936ರಲ್ಲಿ "Modern Civilization" ಎಂಬ ಪ್ರಸ್ತಾಪದ ಮೇಲೆ ನೀಡಲ್ಪಟ್ಟಿತು. ಈ ಎರಡೂ ಭಾಷಣಗಳು ತರ್ಕಬದ್ಧ ಅಲೋಚನೆಗಳು ಮತ್ತು ವ್ಯಕ್ತಪಡಿಸುವಿಕೆಯಂತೆ ಹರಿದು ಬಂತು ಮತ್ತು ಭಾಷಣಕಾರರು ಒಂದು ತಾಸಿನಷ್ಟು ನೆರೆದಿದ್ದ ಪ್ರೇಕ್ಷಕರ ಮನಸ್ಸನ್ನು ಕುತೂಹಲಕಾರಿಯಾಗಿ ಆಲಿಸುವುದಕ್ಕೆ ಹಿಡಿದಿಟ್ಟರು.

ಕಾಲೇಜು ಪ್ರಾಂತೀಯ ಸಂಸ್ಕೃತಿಯನ್ನು ತನ್ನದೇ ರೀತಿಯಲ್ಲಿ ಪ್ರೋತ್ಸಾಹಿಸಿತು. ಆರೋಗ್ಯಕರ ಬೆಳವಣಿಗೆಯನ್ನು ರೂಪಿಸಿ ಅದನ್ನು ನಿರ್ವಹಿಸುವುದಕ್ಕೆ ಪ್ರಯತ್ನ ಮಾಡಿತ್ತಾ ಬಂತು. ಇದು ಮುಂದುವರಿದು ಮಂಗಳೂರು ಧರ್ಮಪ್ರಾಂತ ಕೆಥೋಲಿಕ ಮಹಿಳಾ ಸಮ್ಮೇಳನ ನಡೆಸುವುದಕ್ಕೆ ಕಾಲೇಜಿನ ಸಭಾಂಗಣವನ್ನು ನೀಡಿ ಕೆಥೋಲಿಕ ಧರ್ಮಪ್ರಾಂತ್ಯದ ಆಶೋತ್ತರಗಳಿಗೆ ಸ್ಪಂದಿಸುವ ಉದ್ಧೇಶದೊಂದಿಗೆ ಮಂಗಳೂರಿನ ಮಹಿಳೆಯರಿಗಾಗಿ ಕಾರ್ಯ ನಿರ್ವಹಿಸುವಿಕೆಯನ್ನು ಪ್ರದರ್ಶಿಸುವಲ್ಲಿ ಸಾಕ್ಷಿಯಾಯಿತು. ಸಮ್ಮೇಳನದಲ್ಲಿ ಬಹಳಷ್ಟು ಮಹಿಳಾ ಭಾಷಣಕಾರರು ಅಪೊಸ್ತೋಲಿಕ ಕಾರ್ಮೆಲ್ ಶಾಲೆಗಳ ಮತ್ತು ಕಾಲೇಜುಗಳ ಹಳೆ ವಿದ್ಯಾರ್ಥಿನಿಯರೇ ಆಗಿದ್ದರು ಎನ್ನುವುದು ಹೆಮ್ಮೆಪಡುವ ವಿಷಯವಾಗಿತ್ತು. ಮುಂದಿನ ದಿನಗಳಲ್ಲಿ ಕಾಲೇಜಿನ ಅಭಿವೃದ್ಧಿಗೆ ಸಹಕಾರ ನೀಡುವುದಾಗಿ ಆಶ್ವಾಸನೆ ನೀಡಿದರು ಈ ಕಾಲೇಜು 1936–37ರಲ್ಲಿ ಕಾಲೇಜು ಯೂನಿಯನ್‌ನ್ನು ಉದ್ಘಾಟಿಸಿತು ಮತ್ತು ಇದು ಕಾಲೇಜಿನ ಎಲ್ಲಾ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವ ಜವಾಬ್ದಾರಿ ವಹಿಸಿಕೊಂಡಿತು. ಈ ಸಂಸ್ಥೆ ವಿದ್ಯಾರ್ಥಿಗಳಿಗೆ ತಮ್ಮ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಮತ್ತು ಮುಂದೆ ಇದು ವಿದ್ಯಾರ್ಥಿಗಳಿಗೆ ತಮ್ಮ ವೃತ್ತಿ ಜೀವನವನ್ನು ಕಂಡುಕೊಳ್ಳುವಲ್ಲಿ ಸಹಾಯಕವಾಯಿತು.

ಶಾಲಾ ಮಂತ್ರಿಮಂಡಲ ಮಾತ್ರವಲ್ಲದೆ ಇತರ ಕೆಲವು ಸಂಘಟನೆಗಳನ್ನೂ ಮಕ್ಕಳಲ್ಲಿರುವ ಸಾಮಾರ್ಥ್ಯವನ್ನು ಬೆಳಕಿಗೆ ತರಲು ಸಹಾಯಕವಾಗುವಂತೆ ಸಮರ್ಥ ಸಿಬ್ಬಂಧಿ ವರ್ಗದವರ ಮಾರ್ಗದರ್ಶನದಲ್ಲಿ ಸಂಘಟಿಸಲಾಗಿತ್ತು. ಉದಾಹರಣೆಗೆ ಸಾಹಿತ್ಯ ಮತ್ತು ಚರ್ಚೆ, ಚರಿತ್ರಾ ಸಂಘ, ನಾಟಕ ಸಂಘ, ಆಟೋಟ ಸಂಘ, ಪ್ರಕೃತಿ ಜ್ಞಾನ, ಮಲಯಾಳಂ, ಕನ್ನಡ ಇತ್ಯಾದಿ.

1939ರಲ್ಲಿ ಕಾಂಗ್ರೆಸ್‌ನಿಂದ ನೇಮಿಸಲ್ಪಟ್ಟ ರಾಷ್ಟ್ರೀಯ ಪ್ಲಾನಿಂಗ್ ಸಮಿತಿ ಸಂಘಟಿತ ಸಮಾಜದಲ್ಲಿ ಗಂಡಸರಿಗೆ ಸರಿಸಮಾನವದ ಸ್ಥಿತಿ ಹೆಂಗಸರಿಗೂ ಇರಬೇಕೆಂಬುದಕ್ಕೆ ಠರಾವು ಅಂಗೀಕರಿಸಿತು. ಭಾರತೀಯ ನೇಶನಲಿಸ್ಟ್ ಲೀಡರ್ಸ್ ಟೈಮ್ಸ್ ಕೂಡ ಮಹಿಳಾ ಶಿಕ್ಷಣ ದೇಶದ ಬೆಳವಣಿಗೆಗೆ ಅವಶ್ಯಕವಾಗಿದೆ ಎಂಬುದನ್ನು ಘೋಷಿಸಿತು.

ಸೈಂಟ್ ಆಗ್ನೆಸ್ ಕಾಲೇಜಿನ ಪೂರ್ವ ಚರಿತ್ರೆಯಲ್ಲಿ ಬಹುಮಾನ ವಿತರಣ ದಿನದಂದು ಒಬ್ಬ ಮಹಿಳೆ ಅಧ್ಯಕ್ಷರ ಆಸನವನ್ನು ಅಲಂಕರಿಸಿರುವುದು ಕಂಡು ಬರುವುದಿಲ್ಲ. 2 ಜನವರಿ 1938ರಂದು ನಡೆದ ಕಾಲೇಜಿನ ವಾರ್ಷಿಕೋತ್ಸವ ದಿನದಂದು ಮಹಿಳಾ ಶಿಕ್ಷಣದ ಉತ್ಸಾಹಿ ಪ್ರಾಯೋಜಕ ಬೇಗಮ್ ಸುಲ್ತಾನ ಮೀರ್ ಅಮೀರುದ್ದೀನ್ ಅವರು ಅಧ್ಯಕ್ಷರ ಆಸನ ಅಲಂಕರಿಸಿದ ಪ್ರಥಮ ಮಹಿಳೆ ಎನಿಸಲ್ಪಟ್ಟರು.

ಹೀಗೆ ಪಾಠ ಪ್ರವಚನಗಳ ಹೊರತಾಗಿ ವಿದ್ಯಾರ್ಥಿಗಳು ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗುವಂತೆ ತರಬೇತಿ ನೀಡಲಾಗುತ್ತಿತ್ತು. ಪ್ರತೀ ಸಂದರ್ಭದಲ್ಲೂ ಒಂದಲ್ಲ ಒಂದು ವಿಧದ ನೈತಿಕತೆಯನ್ನು ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತಿತ್ತು, ಉದಾಹರಣೆಗೆ "ಮಿಶನ್ ವೀಕ್" 1939, "ಚಾರಿಟಿ ಬಿಗಿನ್ಸ್ ಅಟ್ ಹೋಮ್" ಇತ್ಯಾದಿಗಳನ್ನು ನಡೆಸಲಾಗುತಿತ್ತು.

ಅಂದಿನ ಹಾಸ್ಟೆಲ್ ವಾಸಿಗಳು ತಮ್ಮ ವಿರಾಮದ ಸಮಯದಲ್ಲಿ ಕಥೆ ಕಾದಂಬರಿಗಳನ್ನು ರಚಿಸುವ ಅವಕಾಶ ಒದಗಿ ಬಂದುದರಿಂದ ಸಾಹಿತ್ಯದ ಕಡೆಗೆ ಹೆಚ್ಚು ಒಲವನ್ನು ತೋರಿಸಿದರು. "The Magical Threshold," ಎಂಬ 1939ರಲ್ಲಿ ಪ್ರಕಟಗೊಂಡ ವಾರ್ಷಿಕ ಸಂಚಿಕೆಯಲ್ಲಿ ಅವರ ಸಾಹಿತ್ಯದ ತುಣುಡು ಅವಲೋಕಿಸಲು ಸಿಗುತ್ತವೆ.

2ನೇ ಜಾಗತಿಕ ಮಹಾಯುದ್ಧದ ಸಮಯದಲ್ಲಿ ಸೈಂಟ್ ಆಗ್ನೆಸ್ ಕಾಲೇಜಿನ ವಿಧ್ಯಾರ್ಥಿಗಳು ನಾಗರಿಕರಲ್ಲಿ ಜನಜಾಗೃತಿ ಮೂಡಿಸಿರುವುದು ಹೆಮ್ಮೆಯ ವಿಷಯ. ಹಸಿವಿನಿಂದ ಬಳಲುವವರಿಗೆ ಶಿಕ್ಷಣ ನೀಡುವುದು ಅಸಾಧ್ಯ ಎಂಬುದು ಸಾರ್ವಜನಿಕವಾಗಿ ಅಂಗೀಕರಿಸಲ್ಪಟ್ಟ ವಿಷಯವಾಗಿತ್ತು. ಅಂತೆಯೇ 1941–42ರಲ್ಲಿ "ಹಸಿದವರಿಗೆ ಒಂದು ಊಟವನ್ನು ಉಳಿಸಿ" ಎಂಬ ಯೋಜನೆ ಅನೇಕ ಬಡಮಕ್ಕಳಿಗೆ ನೆರವಾಯಿತು. ಹಳೆ–ಆಗ್ನೆಶಿನಿಯರು ತಮ್ಮ ಕೈಲಾದ ದೇಣಿಗೆಯನ್ನು ಇದಕ್ಕೆ ನೀಡಿದರು. ಪ್ರಯೋಜನ ಹೊಂದಿದವರೂ ಹೆಚ್ಚಿನ ಬಡ ವಿದ್ಯಾರ್ಥಿಗಳ ಕಷ್ಟಕ್ಕೆ ನೆರವಾಗಲು ಮುಂದೆ ಬಂದರು. ಪ್ರತಿಯೊಬ್ಬರೂ ಹುಡುಗಿಯರು ಮತ್ತು ಮಹಿಳೆಯರ ಶಿಕ್ಷಣ ಮತ್ತು ವ್ಯಕ್ತಿಗತ ಜೀವನದ ಅಭಿವೃದ್ಧಿಯ ಬಗ್ಗೆ ಅತೀವ ಬದ್ಧತೆಯನ್ನು ವ್ಯಕ್ತಪಡಿಸಿದರು. ಆದುದರಿಂದ ಭಗಿನಿಯರು ಸ್ಥಳೀಕ ಸಂಸ್ಕೃತಿಯ ಧ್ಯೇಯೋದ್ಧೇಶಗಳನ್ನು ಅಳವಡಿಸಿಕೊಂಡು ಆ ಸಮಯದಲ್ಲಿ ಅವರು ಸಾಕ್ಷಿಯಾದ ಸಮಕಾಲೀನ ಘಟನೆಗಳಿಂದ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದಕ್ಕೆ ಪ್ರಾಶಸ್ತ್ಯ ನೀಡಿದರು.

1946ರಲ್ಲಿ ಕಾಲೇಜಿಗೆ ಅಂದಿನ ಮದರಾಸು ಪ್ರಾಂತದ ಗವರ್ನರ್‌ರವರ ಪತ್ನಿ ಗೌರವಾನ್ವಿತ ಲೇಡಿ ನೈ ಇವರ ಭೇಟಿ. ಅವರು ಕಾಲೇಜಿನ ಚಟುವಟಿಕೆಗಳನ್ನು ಕುತೂಹಲದಿಂದ ನೋಡಿ ಸಂಸ್ಥೆ ನಿರ್ವಹಿಸುತ್ತಿರುವ ಕೆಲಸಕ್ಕೆ

ಪ್ರಶಂಸೆ ವ್ಯಕ್ತಪಡಿಸಿದರು. 1946ರಲ್ಲಿ ನಡೆದ ಕಾಲೇಜಿನ ರಜತ ಮಹೋತ್ಸವಕ್ಕೂ ಸಾಕ್ಷಿಯಾಗಿದ್ದರು. ಜಿಲ್ಲೆಯ ಎಲ್ಲಾ ಭಾಗಗಳಿಂದ ಮತ್ತು ಹೊರಗಿನ ಹೆಚ್ಚಿನ ಮಕ್ಕಳು ಕಾಲೇಜಿಗೆ ಸೇರ್ಪಡೆಯಾಗತೊಡಗಿದರು. 1946-47ರ ಸಮಯಕ್ಕೆ ವಿದ್ಯಾರ್ಥಿಗಳ ಸಂಖ್ಯೆ 28,196ಕ್ಕೆ ಏರಿತ್ತು. ವಿವಿಧ ಸಂಸ್ಥೆಗಳಿಗೆ ಸೇರ್ಪಡೆಗೊಂಡ ಹೆಣ್ಣುಮಕ್ಕಳ ಸಂಖ್ಯೆ ಈ ವರ್ಷಗಳಲ್ಲಿ 14,24,422 ರಿಂದ 42,97,785 ಆಗಿತ್ತು.

ಸೈಂಟ್ ಆಗ್ನೆಸ್ ಕಾಲೇಜಿನ ಗುರಿ ಕೇವಲ ಹೆಣ್ಣು ಮಕ್ಕಳು ಉನ್ನತ ಶಿಕ್ಷಣ ಹೊಂದುವುದಾಗಿರಲಿಲ್ಲ. ಬದಲಾಗಿ ಅಲ್ಲಿ ತರಬೇತಿ ಹೊಂದಿದ ಮಕ್ಕಳು ಉತ್ತಮ ಪತ್ನಿಯರು ಮತ್ತು ತಾಯಿಯರಾಗಿ, ನಿಷ್ಠೆಯುಳ್ಳ ಶಿಕ್ಷಕರು ಮತ್ತು ಉದಯೋನ್ಮುಖ ಮಹಿಳೆಯಾಗಿ ಹೊರಹೊಮ್ಮಬೇಕು ಎನ್ನುವುದಾಗಿತ್ತು. ಈ ಸಮಯದಲ್ಲಿ ಕಾಲೇಜಿನ ಹಳೆ ವಿದ್ಯಾರ್ಥಿಗಳು ಕೇವಲ ಭಾರತ ಮತ್ತು ವಿದೇಶದಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿರುವುದಲ್ಲದೆ ಬಡವರ, ಕೆಳವರ್ಗದ ಮತ್ತು ಕಡಿಮೆ ಸೌಕರ್ಯವಿರುವ ಹೆಣ್ಣುಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸತೊಡಗಿದ್ದರು.

ಸ್ಥಾಪಾನಾ ದಿನಗಳಿಂದಲೂ, ಅಂದರೆ 1921ರಿಂದ ಕಾಲೇಜು ಕೆಥೋಲಿಕ ವಿದ್ಯಾರ್ಥಿಗಳಿಗೆ ಧಾರ್ಮಿಕ ಶಿಕ್ಷಣವನ್ನೂ ನೀಡಲಾಗುತ್ತಿತ್ತು. ಪ್ರತಿನಿತ್ಯ ನಡೆಸಲ್ಪಡುತ್ತಿದ್ದ ಧಾರ್ಮಿಕ ಮತ್ತು ನೀತಿಶಾಸ್ತ್ರದ ಪಾಠಗಳು ಅವರ ಧಾರ್ಮಿಕ ಮತ್ತು ನೈತಿಕ ಬೆಳವಣಿಗೆಗೆ ಸಹಾಯಕವಾಯಿತು. ವಾರಕ್ಕೊಮ್ಮೆ ನಡೆಯುತ್ತಿದ್ದ ಗುಂಪು ಅಭ್ಯಾಸ ಆಳವಾದ ಧಾರ್ಮಿಕ ಜ್ಞಾನ ಹೆಚ್ಚಿಸಿಕೊಳ್ಳಲು ಸಹಾಯ ಮಾಡಿತು. "Student Missionary League" ಸಂಸ್ಥೆಯು ಒಂದು ಪರಿಣಾಮಕಾರಿಯಾದ ವಿಭಾಗವಾಗಿದ್ದು ನಿರಂತರ ಧಾರ್ಮಿಕ ಪಾಠಗಳನ್ನು ಏರ್ಪಡಿಸುವ ಮೂಲಕ ಅಪೊಸ್ತೊಲಿಕ್ ಕಾರ್ಯಕ್ರಮಗಳನ್ನು ನವೀಕರಿಸುವಲ್ಲಿ ಸಹಾಯಕವಾಯಿತು. ಅದು ಕಾಲೇಜಿನ ಬಡ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಪುಸ್ತಕ, ಮಧ್ಯಾಹ್ನದ ಊಟ ಇತ್ಯಾದಿಗಳನ್ನು ನೀಡುವುದಕ್ಕೆ ಪ್ರಾಶಸ್ತ್ಯ ನೀಡಿತು.

ಕಾಲೇಜು ಇತರ ಧರ್ಮೀಯ ವಿದ್ಯಾರ್ಥಿಗಳ ನೈತಿಕ ಮತ್ತು ಧಾರ್ಮಿಕ ಅಭಿವೃದ್ಧಿಗೆ ಸರಿಸಮಾನವಾದ ಪ್ರಾಮುಖ್ಯತೆಯನ್ನು ನೀಡಿತು. ನೀತಿ ಪಾಠ ಜೀವನದ ದಿನಂಪ್ರತಿ ಕಾರ್ಯ ಚಟುವಟಿಕೆಗಳ ಒಂದು ಭಾಗವಾಗಿತ್ತು. ಕಾಲೇಜಿನ ಧ್ಯೇಯೋದ್ದೇಶ ವಿದ್ಯಾರ್ಥಿಗಳನ್ನು ಆತ್ಮೀಕ ಅಭಿವೃದ್ಧಿಯ ಜತೆಗೆ ನಂಬಿಕೆ ಹುಟ್ಟಿಸುವುದು ಮತ್ತು ಅದೇ ವೇಳೆ ಸಮಾಜದ ಅವಶ್ಯತೆಗಳನ್ನು ಪೂರೈಸುವುದಕ್ಕಾಗಿ ವಿವಿಧ ಕ್ಲಬ್‌ಗಳನ್ನು ಮತ್ತು ಸಂಸ್ಥೆಗಳನ್ನು ಸ್ಥಾಪಿಸುವುದಾಗಿತ್ತು. ಉದಾಹರಣೆಗೆ, ಸಮಾಜ ಸೇವಾ ಸಮಿತಿ, ಉತ್ತಮ ಸಾಹಿತ್ಯ ಸಮಿತಿ, ಕಲಿಕೆಯ ಕ್ಲಬ್‌ಗಳು, ವಿದ್ಯಾರ್ಥಿಗಳ ಮಿಶನರಿ ಲೀಗ್ ಇತ್ಯಾಧಿಗಳು, ಪುಸ್ತಕ, ಸ್ಟೇಶನರಿಗಳು, ಬಟ್ಟೆ ಇವುಗಳನ್ನು ಸಂಗ್ರಹಿಸಿ ಬಡವರಿಗೆ ಹಂಚುವುದರಲ್ಲಿ ಪರಿಣಾಮಕಾರಿಯಾದ ಕೆಲಸ ಮಾಡುತ್ತಿದ್ದವು. ಇವರು ಉತ್ತಮ ಪುಸ್ತಕ ಮತ್ತು ನಿಯತಕಾಲಿಕಗಳನ್ನು ಜನಸ್ನೇಹಿ ಮಾಡುವಲ್ಲಿ ಮತ್ತು ಕಾಲೇಜು ವಿದ್ಯಾರ್ಥಿಗಳನ್ನು ಸಾಮಾಜಿಕ ಮತ್ತು

ಆರ್ಥಿಕ ತೊಂದರೆಗಳನ್ನು ಅಧ್ಯಯನ ಮಾಡುವುದಕ್ಕೆ ಸಹಾಯ ಮಾಡಿತು. ಇದರಿಂದಾಗಿ ಹೆಣ್ಣುಮಕ್ಕಳು ನಗರದ ಪರಿಸ್ಥಿತಿ ಹೇಗಿದೆ ಮತ್ತು ಅದು ಎದುರಿಸುವ ವಿಧವಿಧವಾದ ಸಾಮಾಜಿಕ ತೊಂದರೆಗಳೇನು ಎಂದು ಕಂಡುಕೊಳ್ಳುವುದಕ್ಕೆ ಇದು ಕಾರಣವಾಯಿತು.

ಸೆಪ್ಟೆಂಬರ್ 1942ರಂದು ಕ್ರೈಸ್ತ ಧಾರ್ಮಿಕ ಮುಖ್ಯಸ್ಥರು ಕಾಲೇಜಿನಲ್ಲಿ ದರಿಸುವ ಉಡುಪುಗಳ ನಿಯಮದ ಬಗ್ಗೆ ಕಟ್ಟುನಿಟ್ಟಿನ ತಡೆ ಪಾಲಿಸಬೇಕೆಂದು ಆದೇಶ ಹೊರಡಿಸಿದರು. ಸೈಂಟ್ ಆಗ್ನೆಸ್ ಕಾಲೇಜಿನ 60 ವಿದ್ಯಾರ್ಥಿಗಳು "The Modesty League" ಎಂಬ ಹೆಸರಿನ ಒಂದು ಸಂಘ ಸ್ಥಾಪಿಸಿ ಮೊಣಗಂಟಿನ ಮೇಲಿನ ಸಣ್ಣ ಸ್ಕರ್ಟ್, ತೋಳುರಹಿತ ಮೇಲುಡುಗೆ, ಪಾರದರ್ಶಕ ಬಟ್ಟೆಗಳು, ಇತ್ಯಾಧಿಗಳನ್ನು ತ್ಯಜಿಸುವ ನಿರ್ಧಾರ ಕೈಗೊಂಡರು, ಬದಲಾಗಿ ಉದ್ದವಾದ ಸ್ಕರ್ಟ್‌ಗಳು, ತೋಳುಗಳುಳ್ಳ ಮೇಲುಡುಗೆ, ಕುತ್ತಿಗೆ ಮುಚ್ಚುವ ಬಟ್ಟೆಗಳು ಮತ್ತು ಪಾರದರ್ಶಕವಲ್ಲದ ಬಟ್ಟೆಗಳಿಗೆ ಬದಲಿಸಿಕೊಂಡರು.

ಕಲಿಕೆಯ ಕ್ರಮವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಹಿಂದಿನಿಂದ ನಡೆದು ಬಂದ "ಕಲಿಸುವುದು-ಕಲಿಯುವುದು" ಈ ಕಲಿಕಾ ವಿಧಾನವನ್ನು ತೊಡೆದುಹಾಕಿ ಹೊಸ ಕ್ರಮಗಳನ್ನು ಅಳವಡಿಸುವುದಕ್ಕೆ ಕ್ರಮ ಕೈಗೊಳ್ಳಲಾಯಿತು. ಇದಕ್ಕಾಗಿ ಆಯೋಜಿಸಿದ "The Literary and Debating Society" ಸಂಸ್ಥೆ ನಿರಂತರವಾಗಿ ಸೇರಿ ಚರ್ಚೆಗಳನ್ನು ನಡೆಸುತ್ತಿದ್ದರು ಮತ್ತು ಅತಿಥಿ ಭಾಷಣಕಾರರನ್ನು ಕರೆಸಿ ಭಾಷಣ ಏರ್ಪಡಿಸುತ್ತಿದ್ದರು. ನಾಟಕ ಸಂಘ, ಬಹುಮಾನ ವಿತರಣಾ ದಿನ, ತಾಯಂದಿರ ದಿನ, ಪ್ರಾಂಶುಪಾಲರ ದಿನ ಆಯೋಜನೆ ಮತ್ತು ಮನರಂಜನಾ ಕಾರ್ಯಕ್ರಮ ಹಾಗೂ ಉತ್ತಮ ನಾಟಕ, ಸಂಗೀತ ಕಾರ್ಯಕ್ರಮಗಳನ್ನೂ ಆಯೋಜಿಸಿತು.

ಚರಿತ್ರೆಯನ್ನು ಬೋಧಿಸುವುದು ಪಾಠಪಟ್ಟಿಯ ಒಂದು ಭಾಗವಾಗಿದ್ದು, ಜಿಲ್ಲೆಯ ಮತು ಹೊರಗಿನ ಚರಿತ್ರಾರ್ಹ ಸ್ಥಳಗಳಿಗೆ, ಮುಖ್ಯವಾಗಿ ಮೂಡಬಿದ್ರಿ, ಕಾರ್ಕಳ, ಕಾಸರಗೋಡು, ಬೇಕಲಕೋಟೆ, ಕಣ್ಣಾನೂರು, ಬೇಲೂರು, ಹಳೇಬೀಡು ಮುಂತಾದ ಅನೇಕ ಸ್ಥಳಗಳಿಗೆ ಪ್ರವಾಸ ಏರ್ಪಡಿಸುವಿಕೆ ಕಾರ್ಮೆಲ್ ಶಿಕ್ಷಣದ ಕ್ರಮವನ್ನಾಗಿಸಿಕೊಂಡರು. ತರಗತಿಯ ಒಳಗಿನ ಕಾರ್ಯಚಟುವಟಿಕೆಗಳ ಹೊರತಾಗಿ ವಿದ್ಯಾರ್ಥಿಗಳ ದೈಹಿಕ ಬೆಳವಣಿಗೆಯೂ ಕಾಲೇಜಿನ ಚಟುವಟಿಕೆಯ ಒಂದು ಭಾಗವಾಗಿತ್ತು. ಅಂದಿನ ದಿನಗಳಲ್ಲಿ ಕ್ರೀಡೆ ಕೇವಲ ಹುಡುಗರಿಗೆ ಮೀಸಲಾಗಿತ್ತು. ಕಪ್‌ಗಳು, ಟ್ರೋಫಿಗಳು ಕಾದಿರದಿದ್ದರೂ ವಿದ್ಯಾರ್ಥಿನಿಯರಿಗೆ ಶಾಲಾ ಮೈದಾನದಲ್ಲಿ ಆಡಲು ಸ್ವತಂತ್ರತೆ ಇತ್ತು. ಬ್ಯಾಡ್‌ಮಿಂಟನ್, ಟೆನ್ನಿಸ್, ಶಟಲ್‌ಕಾಕ್, ಟೆನ್ನಿಕೋಯ್ಟ್ ಮತ್ತು ನೆಟ್‌ಬಾಲ್ ಇತ್ಯಾದಿ ಆಟೋಟಗಳ ಮೂಲಕ ಹೆಣ್ಣು ಮಕ್ಕಳು ಆಡಿ ಸಂತೋಷ ಪಡುತ್ತಿದ್ದರು. "The Sports Club" ತುಂಬಾ ಸ್ಪರ್ಧೆಗಳನ್ನು ಕ್ಯಾಂಪಸ್‌ನ ಒಳಗೆ ಏರ್ಪಡಿಸಲಾಗುತಿತ್ತು. ಯಾಕಂದರೆ ಸ್ಪರ್ಧೆಗಾಗಿ ಸೈಂಟ್

ಅಲೋಶಿಯಸ್ ಕಾಲೇಜಿನ ಹೊರತಾಗಿ ಬೇರೆ ಸಹ ಕಾಲೇಜುಗಳಿರಲಿಲ್ಲ. ಸ್ಪೋರ್ಟ್ಸ್ ಕ್ಲಬ್‌ನ ಒಂದು ವಿಶೇಷತೆ ಎಂದರೆ, ಅಂದಿನ ದಿನಗಳಲ್ಲಿ ಮರೆತು ಹೋಗುತ್ತಿದ್ದ ಅಪರೂಪದ ಆಟಗಳನ್ನು ಆಡಿಸುವುದು, ಉದಾಹರಣೆಗೆ ಗ್ರೀಕ್ ಮತ್ತು ರೋಮನ್ನರ ಮೇಜಿನ ಮೇಲೆ ಆಡುವ ಪ್ರಾಚೀನ ಎಳೆಯುವ ಆಟ (draughts). ಇದನ್ನು ಇಬ್ಬರು ವ್ಯಕ್ತಿಗಳು ಒಂದು ಚೆಸ್ ಬೋರ್ಡ್ ತರದ ಬೋರ್ಡ್‌ನಲ್ಲಿ ಆಡುತ್ತಿದ್ದರು., ಹಲ್ಮ ಎಂಬ ಚಿಕ್ಕ ಮನುಷ್ಯರಂತಿರುವ ಬೊಂಬೆಗಳ ಮೂಲಕ ಚೆಕ್‌ಬೋರ್ಡ್‌ನಲ್ಲಿ ಆಡುವ ಆಟ, ಇತ್ಯಾದಿ. ಮಹಿಳೆಯರ ಅಂತರ್ ವಿಭಾಗ ವಿಶ್ವವಿದ್ಯಾಲಯ ಟೂರ್ನಮೆಂಟ್‌ನ ಬ್ಯಾಡ್‌ಮಿಂಟನ್‌ನಲ್ಲಿ ವಿದ್ಯಾರ್ಥಿಗಳು ಮದರಾಸು ವಿಶ್ವವಿದ್ಯಾಲಯದ ಮಹಿಳಾ ಕಾಲೇಜುಗಳಲ್ಲಿ ಪ್ರಥಮ ಸ್ಥಾನವನ್ನು ಗಳಿಸಿತು. 1954ರಲ್ಲಿ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಅಂತರ್ ಕಾಲೇಜು ಟೂರ್ನಮೆಂಟ್‌ನಲ್ಲಿ ಪ್ರಥಮ ಪ್ರವೇಶ ಮಾಡಿದರು. 1956ರಲ್ಲಿಯೇ ಕಾಲೇಜು ಪ್ರಥಮ ಬಾರಿಗೆ ಅಂತರ್-ಕಾಲೇಜು ಪಶ್ಚಿಮ ಝೋನ್‌ನ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಭಾಗವಹಿಸಿ ಕಾಲೇಜು ಚಾಂಪಿಯನ್‌ಶಿಪ್ ಪಡೆಯಿತು. ಇದು ಕಾಲೇಜಿನ ಹವ್ಯಾಸಿ ಆಟಗಾರರಿಗೆ ಸ್ಫೂರ್ತಿಯಾಯಿತು.

1967ರಲ್ಲಿ ಕಾಲೇಜು ಅಂತರ್‌ಕಾಲೇಜು ಟೇಬಲ್ ಟೆನ್ನಿಸ್ ಟೂರ್ನಮೆಂಟ್‌ನಲ್ಲಿ ಪ್ರಥಮ ಭಾರಿಗೆ ಭಾಗವಹಿಸಿ ಮಣಿಪಾಲದ ಕೆ.ಎಂ.ಸಿ. ಕಾಲೇಜಿನಲ್ಲಿ ನಡೆದ ಪ್ರತೀ ಮ್ಯಾಚ್‌ನಲ್ಲಿ ವಿದ್ಯಾರ್ಥಿಗಳು ಅತ್ಯುನ್ನತ ಗೌರವ ಪಡೆದರು. ಸುನಂದ ರೈ ಇವರು ಇಂದೋರ್‌ನಲ್ಲಿ ಜರಗಿದ ಅಂತರ್-ಯುನಿವರ್ಸಿಟಿ ಖೋ-ಖೋ ಪಂದ್ಯಾವಳಿಯಲ್ಲಿ ಮೈಸೂರು ರಾಜ್ಯವನ್ನು ಪ್ರತಿನಿಧಿಸಿ ಭಾಗವಹಿಸಲು ಆಯ್ಕೆಯಾದರು. ಈಕೆ ವಿಶ್ವ ವಿದ್ಯಾಲಯ ಮಟ್ಟದಲ್ಲಿ ಖೋ-ಖೋ ಆಟಕ್ಕೆ ಸೌತ್ ಕೆನರಾ ಜಿಲ್ಲೆಯಿಂದ ಆಯ್ಕೆಯಾದ ಪ್ರಥಮ ಸ್ಪರ್ಧಿ. ಸೌತ್ ಕೆನರಾ ಜಿಲ್ಲೆಯ ಜೆಸ್ಸಿ ಪಾಯ್ಸ್ ಮೈಸೂರು ರಾಜ್ಯವನ್ನು ಏಳನೇ ಆಲ್ ಇಂಡಿಯಾ ಓಪನ್ ನ್ಯಾಶನಲ್ ಮೀಟ್‌ನಲ್ಲಿ ಪ್ರತಿನಿಧಿಸಿದ ಪ್ರಥಮ ಮಹಿಳೆ ಮತ್ತು ಈಕೆ 1968ರಲ್ಲಿ ಬೆಂಗಳೂರಿನಲ್ಲಿ ನಡೆದ ಕೂಟದಲ್ಲಿ ಎರಡನೇ ಸ್ಥಾನವನ್ನು ಗಳಿಸಿದರು. ಇನ್ನೂ ಒಬ್ಬ ವಿದ್ಯಾರ್ಥಿನಿ, ವೇದಾವತಿ ಶೆಟ್ಟಿ ಕಟಕ್‌ನಲ್ಲಿ ಜರಗಿದ ಆಲ್ ಇಂಡಿಯಾ ಅಂತರ್-ವಿಶ್ವವಿದ್ಯಾಲಯದ ಕ್ರೀಡಾ ಕೂಟದಲ್ಲಿ ಭಾಗವಹಿಸಿ 400 ಮೀಟರ್ ಓಟದಲ್ಲಿ ಎರಡನೇ ಸ್ಥಾನ ಗಳಿಸಿದ ಮೈಸೂರಿ ವಿಶ್ವವಿದ್ಯಾಲಯದ ಏಕೈಕ ಮಹಿಳಾ ಅಥ್ಲೆಟ್ ಆಗಿದ್ದರು.

ಸೈಂಟ್ ಆಗ್ನೆಸ್ ಕಾಲೇಜು ಅಥ್ಲೆಟ್‌ಗಳು ಜಿಲ್ಲಾ ಆಯ್ಕೆ ಸ್ಪರ್ಧೆ, ರಾಜ್ಯಮಟ್ಟದ ಸ್ಪರ್ಧೆ, ಪ್ರಜಾಪ್ರಭುತ್ವ ದಿನಾಚರಣೆ ಆಟೋಟ, ಮತ್ತು 1970ರಲ್ಲಿ ಬೆಂಗಳೂರಿನಲ್ಲಿ ಜರಗಿದ ರಾಜ್ಯ ಅಂತರ್-ವಿಶ್ವವಿದ್ಯಾಲಯ ಅಥ್ಲೆಟ್ ಮೀಟ್‌ನಲ್ಲಿ ಉನ್ನತ ಸ್ಥಾನ ಗಳಿಸಿದರು.

ರಾಷ್ಟ್ರೀಯ ಚಳವಳಿಯ ಸಮಯದಲ್ಲಿ ಆದ ಕನ್ನಡ ಭಾಷೆಯ ಪರವಾದ ಕೂಗಿನಿಂದಾಗಿ ಭಾಷಾವಾರು ರಾಜ್ಯಗಳ ಸ್ಥಾಪನೆಗೆ ರಾಜ್ಯದಲ್ಲಿ ಚಳವಳಿ ಆರಂಭವಾದ ಸಮಯ. ಪ್ರಾಥಮಿಕ ಹಂತದಲ್ಲಿ, ಶಿಕ್ಷಣ ಮಾಧ್ಯಮ ಬದಲಾವಣೆಯಿಂದ ಪ್ರಾಂತೀಯ ಭಾಷೆ ಮೊದಲ ಭಾಷೆಯಾಗಿ ಪರಿಗಣಿತವಾದುದರಿಂದ ದೇಶದಲ್ಲಿ ಮಿಶನರಿಗಳ ಸೇವೆಗೆ ಒಂದು ತಡೆ ಉಂಟಾಯಿತು. ಇದರಿಂದಾಗಿ ಕೆಥೋಲಿಕೇತರ ಹೆಣ್ಣು ಮಕ್ಕಳು ನಾಯಕತ್ವ ವಹಿಸಿ ಈ ವೇದಿಕೆಯನ್ನು ಉಪಯೋಗಿಸಿ ಅವರ ಅಭಿಪ್ರಾಯಗಳನ್ನು ಲೇಖನ, ಪದ್ಯ, ಸಣ್ಣಕತೆ ಮೂಲಕ ಕೃತಿಗಿಳಿಸಿ ಅವು ಸಮಕಾಲೀನ ಸಮಾಜದ ಪುನರ್ ನಿರ್ಮಾಣಕ್ಕೆ ಸಾಧನವಾಯಿತು. ಆ ಸಮಯವು ಹೆಣ್ಣುಮಕ್ಕಳನ್ನು ಇಂಟರ್‌ನೆಟ್ ಅಥವಾ ದೂರದರ್ಶನ ಇಂತಹ ಆಧುನಿಕ ತಂತ್ರಜ್ಞಾನಗಳ ಮೂಲಕ ಅವಕಾಶ ನೀಡುವ ಸಮಯವಾಗಿರದೆ ಇದ್ದುದರಿಂದ, ಪುಸ್ತಕಗಳೇ ದೇಶದಲ್ಲಿ ಮತ್ತು ವಿದೇಶದಲ್ಲಿ ನಡೆಯುವ ಆಗುಹೋಗುಗಳನ್ನು ತಿಳಿದುಕೊಳ್ಳುವುದಕ್ಕೆ ಸಾಧನವಾಗಿತ್ತು.

ಕಾಲೇಜು ಕೇವಲ ಪ್ರತಿಭಾನ್ವಿತ ಕಾಲೇಜು ಎಂಬುದಕ್ಕೆ ಹೆಸರುವಾಸಿಯಾಗಿರಲಿಲ್ಲ, ಬದಲಾಗಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಮೊದಲ 25 ವರ್ಷಗಳಲ್ಲಿ (1925–1946) ಬಂದ ಫಲಿತಾಂಶಗಳು, ನಿರಂತರವಾಗಿ ಬಿ.ಎ. ಪಧವಿ ಮತ್ತು ಇಂಟರ್‌ಮೀಡಿಯೇಟ್ ಪರೀಕ್ಷೆಗಳು ಇದರಲ್ಲಿ ಸರ್ವೆಸಾಮನ್ಯ ಇಂಟರ್‌ಮೀಡಿಯೇಟ್‌ನಲ್ಲಿ 76%, ಬಿ.ಎ. ಪಧವಿಯ ವಿಭಾಗ I, II III ರಲ್ಲಿ ಕ್ರಮವಾಗಿ 89%, 93% ಮತ್ತು 86% ಕಾರಣವಾಗಿತ್ತು. ವಿದ್ಯಾರ್ಥಿಗಳು ಬಹಳಷ್ಟು ವಿಶ್ವವಿದ್ಯಾಲಯ ಪದಕಗಳನ್ನು ಮತ್ತು ಬಹುಮಾನಗಳನೂ ಪಡೆದಿದ್ದರು.

ಸಭೆಯ ಸ್ಥಾಪಕ ಭಗಿನಿಯರು ಜನರನ್ನು ಶಿಕ್ಷಣ ಸೇವೆಯ ಸಹಭಾಗಿಗಳನ್ನಾಗಿ ಮಾಡುವ ಮೂಲಕ ಮತ್ತು ಹಳೆ ವಿದ್ಯಾರ್ಥಿಗಳನ್ನೂ ಸೇರಿಸಿಕೊಂಡುದರಿಂದ ಜನರೊಂದಿಗೆ ಬಲವಾದ ಸಂಭಂದವನ್ನು ಬೆಳೆಸಿಕೊಂಡಿದ್ದರು. ಸೈಂಟ್ ಆಗ್ನೆಸ್ ಕೂಡಾ "Agnesian Association" ಎಂಬ ಹಳೆ ವಿದ್ಯಾರ್ಥಿಗಳ ಸಂಘವೊಂದನ್ನು ರಚಿಸಿತ್ತು. ಈ ಆಗ್ನೆಶೀನಿಯರು ಬಡ ವಿದ್ಯಾರ್ಥಿಗಳ ಏಳಿಗೆಗಾಗಿ ಹಣ ಸಂಗ್ರಹ ಮಾಡುತ್ತಿದ್ದುದು ಮಾತ್ರವಲ್ಲದೆ ಅವರು Literary and Debating Society. ಮೀಟಿಂಗ್‌ಗಳಲ್ಲಿ ಸಕ್ರೀಯ ಪಾತ್ರ ವಹಿಸುತ್ತಿದ್ದರು.

ದೇಶ ಸ್ವಾತಂತ್ರ್ಯಗೊಂಡ ನಂತರ, ಶಿಕ್ಷಣ ಕೂಡಾ ತೀವ್ರ ಬೆಳವಣಿಗೆಯನ್ನು ಕಂಡಿತು. ಸ್ವಾತಂತ್ರ್ಯದ ಮುಂದಿನ ಎರಡು ಶತಮಾನಗಳು ಸೈಂಟ್ ಆಗ್ನೆಸ್ ಕಾಲೇಜಿಗೆ ಪ್ರಗತಿಯ ವರ್ಷಗಳು. ಯಾಕಂದರೆ 1947 ರಲ್ಲಿ ರೆವೆ. ಮದರ್ ಜೊಸೆಫಿನ್ ಎ.ಸಿ. ಇವರಿಗೆ ಶಿಕ್ಷಣ ರಂಗದಲ್ಲಿ ಶ್ರೇಷ್ಠ ಸೇವೆಗಾಗಿ Kaiser-I-Hind Silver Medal ಪ್ರಶಸ್ತಿ ದೊರೆಯಿತು.

ಸ್ವಾತಂತ್ರ್ಯನಂತರ ವಿದ್ಯಾರ್ಥಿಗಳನ್ನು ಸಾಮಾಜಿಕವಾಗಿ ತೀರಾ ಆಗತ್ಯತೆಯುಳ್ಳ ವಿಷಯಗಳಿಗೆ ಸ್ಪಂದಿಸಲು ನಿಯೋಜನೆ ಮಾಡಲಾಗಿತ್ತು. ತರಗತಿ ಸಮಯದ ಬಳಿಕ ವಿದ್ಯಾರ್ಥಿಗಳನ್ನು ಸಮಾಜದ ಬಡಜನರ ಮಧ್ಯೆ ಸಾಮಾಜಿಕ ಸೇವೆಗೆ ಪ್ರೋತ್ಸಾಹ ನೀಡಲಾಗುತ್ತಿತ್ತು. ಹೀಗೆ ಕಾಲೇಜಿನ "ಸೋಶಿಯಲ್ ಸರ್ವಿಸ್ ಲೀಗ್" 1948ರಲ್ಲಿ ಹುಟ್ಟಿಕೊಂಡಿತು. ಈ ಲೀಗ್ ವರ್ಷದಿಂದ ವರ್ಷಕ್ಕೆ ವಿಭಿನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಕೆಲವೇ ವರ್ಷಗಳಲ್ಲಿ ತನ್ನ ಚಟುವಟಿಕೆಗಳಲ್ಲಿ ಸಂಸ್ಥೆಯ ಕೈಕೆಲಸಗಾರರಿಗಾಗಿ ರಾತ್ರಿ ಶಾಲೆಯನ್ನು ನಡೆಸಲು ಪ್ರಾರಂಭಿಸಿತು. ಅಳಪೆ, ಗುರುಪುರ, ಕಾವೂರು, ಮರ್ಕರಹಿಲ್, ಜೆಪ್ಪು, ಪಡೀಲ್ ಮತ್ತು ಅತ್ತಾವರ ಗ್ರಾಮಗಳನ್ನು ಗ್ರಾಮೀಣ ಅಭಿವೃದ್ಧಿ ಯೋಜನೆಗಳಿಗಾಗಿ ದತ್ತು ಪಡೆಯಲಾಗಿದ್ದು ಊಟೋಪಚಾರದ ವಸ್ತುಗಳ ಸಂಗ್ರಹಣೆ ಮತ್ತು ಬಡವರಿಗೆ ಅದನ್ನು ಹಂಚುವುದು, ಬಡ ಮಕ್ಕಳಿಗಾಗಿ ಕ್ರಿಸ್ಮಸ್ ಕಾರ್ಯಕ್ರಮವನ್ನು ಆಯೋಜಿಸುವುದು, ಕಂಕನಾಡಿ ಆಸ್ಪತ್ರೆಯ ಕುಷ್ಠರೋಗಿಗಳಿಗೆ ವೈದ್ಯಕೀಯ ಸಹಾಯ ಇಂತಹ ಸೇವೆಯ ಮೂಲಕ ಇತರರ ಅಗತ್ಯತೆಗಳಿಗೆ ಸಂಸ್ಥೆ ಸ್ಪಂದಿಸಿತು. ಇದಲ್ಲದೆ ಲೀಗ್ ಅತಿಥಿ ಭಾಷಣಗಳನ್ನು ಆಯೋಜಿಸಿ, ಪರಿಹಾರ ನಿಧಿಗೆ ದೇಣಿಕೆ ನೀಡಿರುವುದಲ್ಲದೆ ರಾಜ್ಯ ಸಮಾಜ ಸೇವಕರ ಸಮ್ಮೇಳನದಲ್ಲಿ ಭಾಗವಹಿಸಿತು. ಸದಸ್ಯರ ಸ್ವಯಂಸೇವೆಯ ಮೂಲಕ ಸಿಬ್ಬಂಧಿ ವರ್ಗ ಮತ್ತು ವಿದ್ಯಾರ್ಥಿಗಳು ಮಂಗಳೂರಿನ ಹರಿಜನ ಮತ್ತು ಭಂಗಿ ಕಾಲೊನಿಗಳಲ್ಲಿ ಮಾತ್ರವಲ್ಲದೆ ಸೈಂಟ್ ಆಂಟನೀಸ್ ಪುವರ್ ಹೋಮ್ಸ್, ಫಾ। ಮುಲ್ಲರ್ಸ್ ಆಸ್ಪತ್ರೆ ಮತ್ತು ಮೂಡಬಿದ್ರಿಯ ನಿರ್ಮಲಾ ರೆಸ್ಕ್ಯೂ ಹೋಮ್, ಮೂಡಬಿದ್ರಿಯ ಸರಕಾರಿ ಕ್ಷಯರೋಗ ಆರೋಗ್ಯ ಕೇಂದ್ರ, ಮಂಗಳೂರಿನ ಬಾಲಿಕಾಶ್ರಮ ಮತ್ತು ಸ್ಟೆಲ್ಲ ಮೇರಿ ಅನಾಥಾಲಯ, ಉಳ್ಳಾಲ ಇಲ್ಲಿ ನೆಮ್ಮದಿ, ಉಪಶಮನ ಮತ್ತು ಸಂಭ್ರಮದ ವಾತಾವರಣ ನಿರ್ಮಿಸಿದರು.

ಸೈಂಟ್ ಆಗ್ನೆಸ್ ಕಾಲೇಜು 1949ರಲ್ಲಿ ಇತರ ಸಭೆಯ ಭಗಿನಿಯರಿಗೆ ಅವರದೇ ಸಭೆ ಮತ್ತು ಸಂಸ್ಥೆಯನ್ನು ಸ್ಥಾಪಿಸಲು ಪ್ರೇರೇಪಿಸಿತು.[36] 1950ಯಲ್ಲಿ ಕಾಲೇಜಿಗೆ ಭಾವಾನಗರದ ಮಹಾರಾಣಿಯ ಭೇಟಿ ಕಾಲೇಜು ಸಾಕ್ಷಿಯಾಗಿತ್ತು. ಆಕೆ ಸೈಂಟ್ ಆಗ್ನೆಸ್ ಕಾಲೇಜಿನಲ್ಲಿ ನೀಡುತ್ತಿದ್ದ ಶಿಕ್ಷಣ ವಿಧಾನದಿಂದ ಪ್ರಭಾವಿತರಾದರು. ಇದಕ್ಕೆ ಕಾಕತಾಳೀಯವೆಂಬಂತೆ ರಾಜಕೀಯವಾಗಿಯೂ ಪ್ರತೀ ಮೂಲೆಗಳಿಂದ ಮಹಿಳಾ ಶಿಕ್ಷಣದ ಪ್ರಸರಣಕ್ಕೆ ಕರೆ ಬಂದಿತ್ತು.[37]

ಸೈಂಟ್ ಆಗ್ನೆಸ್ ಕಾಲೇಜಿಗೆ 1955ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು[38] ಅವರ ದಕ್ಷಿಣ ಭಾರತ ಪ್ರವಾಸದಲ್ಲಿ ಸಂದರ್ಭದಲ್ಲಿ ಬೇಟಿಯಾಗಿದ್ದರು. ಮದರ್ ಜನರಲ್ ಮತ್ತು ಮದರ್ ಸುಪೀರಿಯರ್ ಅವರ ಜತೆಗೂಡಿ ಕಾಲೇಜು ಹಾಲ್‌ಗೆ ಪ್ರವೇಶಿಸುವಾಗ ಸಾವಿರಾರು ಮಂದಿಯ ಗಟ್ಟಿಯಾದ ಜಯಕಾರ ಮತ್ತು ಹೃದಯ ತುಂಬಿದ

"ನಮಸ್ತೆ" ಮೂಲಕ ಅವರನ್ನು ಸ್ವಾಗತಿಸಲಾಯಿತು. ಅವರ ಭಾಷಣದಿಂದ ಶಿಕ್ಷಣ ಪ್ರಾಮುಖ್ಯತೆ ಮತ್ತು ಅವರು ಭಾರತ ಮಾತೆಗಾಗಿ ನಿಷ್ಠೆಯಿಂದ ದುಡಿಯಲು ನೀಡಿದ ಕರೆಯಿಂದ ಮಕ್ಕಳು ಪ್ರಭಾವಿತರಾದರು. 1956ರ "ರಾಜ್ಯಗಳ ಮರುವಿಂಗಡನಾ ಕಾನೂನು" ಕಾಲೇಜಿನ ಮೇಲೆ ವಿಭಿನ್ನ ಪರಿಣಾಮ ಬೀರಿತು. ಅದುವರೆಗೆ ಮದರಾಸು ರಾಜ್ಯದ ಭಾಗವಾಗಿದ್ದ ಸೌತ್ ಕೆನರಾ ಜಿಲ್ಲೆಯನ್ನು ಹಿಂದಿನ ಅರಸರ ಸಾಮ್ರಾಜ್ಯವಾಗಿದ್ದ ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. ಇದರ ಪರಿಣಾಮವಾಗಿ ವಿಶ್ವವಿದ್ಯಾಲಯದ ಮಾನ್ಯತೆಯ ಬದಲಾವಣೆ ಮಾಡಬೇಕಾದ ಅಗತ್ಯತೆ ಬಂತು. ಜೂನ್ 1956ರಲ್ಲಿ ಸೈಂಟ್ ಆಗ್ನೆಸ್ ಕಾಲೇಜು ಒಂದು ವರ್ಷದ ಸ್ನಾತಕೋತ್ತರ ಸೋಶಿಯಲ್ ಸರ್ವಿಸ್ ಡಿಪ್ಲೋಮಾ ಕೋರ್ಸನ್ನು ಮದರಾಸು ವಿಶ್ವವಿದ್ಯಾಲಯದ ಮಾನ್ಯತೆಯಲ್ಲಿ ಆರಂಭಿಸಿತು. ಈ ಕೇಂದ್ರ ಅಮೆರಿಕನ್ ಮಹಿಳೆ, ಮಿಸ್ ಮರಿಯ ಫ್ರಾನ್ಸಿಸ್ ಯೆಸಸ್ ಇವರ ನಿರ್ದೇಶನದಲ್ಲಿ ಕಾರ್ಯ ನಿರ್ವಹಿಸಿತು. ಒಂದು ವರ್ಷದ ಪರಿಶೀಲನೆಯ ಬಳಿಕ ಒಂದು ವರ್ಷದ ಸ್ನಾತಕೋತ್ತರ ತರಬೇತಿ ಔದ್ಯೋಗಿಕ ನೆಲೆಯಲ್ಲಿ ಸೂಕ್ತವಲ್ಲ ಎಂದು ನಿರ್ಧಾರಕ್ಕೆ ಬರಲಾಯಿತು. ಆದುದರಿಂದ 1957ರಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ವರ್ಕ್ ಒಂದನ್ನು ಸಂಪೂರ್ಣ ಪರಿಷ್ಕೃತ ಪಾಠಪಟ್ಟಿಯೊಂದಿಗೆ ಸೋಶಿಯಲ್ ವರ್ಕ್‌ನಲ್ಲಿ ಎರಡು ವರ್ಷದ ಸ್ನಾತಕೋತ್ತರ ಔದ್ಯೋಗಿಕ ತರಭೇತಿಯನ್ನು ಯೋಜಿಸಲಾಯಿತು. 9 ವಿದ್ಯಾರ್ಥಿಗಳು ಈ ತರಬೇತಿಗೆ ಸೇರಿದರು. ಪ್ರತಿಯೊಬ್ಬರೂ "People's Participation in Community Projects", "Socio - Economic Surveys," "Harijan Welfare" and "Muslim Illiteracy." ಇಂತಹ ವಿಶೇಷ ವಿಷಯಗಳ ಬಗ್ಗೆ ಸಂಶೋಧನಾ ಕೆಲಸಗಳನ್ನು ಮಾಡಿದರು. ವೆನ್‌ಲಾಕ್ ಮತ್ತು ಲೇಡಿಗೋಷನ್ ಈ ಎರಡು ಸರಕಾರಿ ಆಸ್ಪತ್ರೆಗಳು ಕೂಡಾ ಇವರ ಕಲಿಯುವಿಕೆಗೆ ಸೇರಿಸಲ್ಪಟ್ಟವು. ಮುಸ್ಲಿಂ ಸಮುದಾಯದಿಂದ 1956ರಲ್ಲಿ ತೆರೆಯಲ್ಪಟ್ಟ ಸಮುದಾಯ ಕೇಂದ್ರವು ಸೋಶಿಯಲ್ ಸರ್ವಿಸ್ ಏಜೆನ್ಸಿಯಾಗಿ ನೋಂದಾವಣೆಗೊಂಡು

ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ವರ್ಕ್ 1956ರಲ್ಲಿ ಸ್ಥಾಪನೆಗೊಂಡು ಕರ್ನಾಟಕ ವಿಶ್ವವಿದ್ಯಾಲಯದಿಂದ ಮೈಸೂರು ವಿಶ್ವವಿದ್ಯಾಲಯಕ್ಕೆ ನೊಂದಾವಣೆ ಬದಲಾಗಬೇಕಾದುದರಿಂದ 1959ರಲ್ಲಿ ಮುಚ್ಚಲ್ಪಟ್ಟಿತು. ವಿಶ್ವವಿದ್ಯಾಲಯದ ನಿಭಂದನೆಗಳನು ಅನುಸರಿಸಬೇಕಾದುದರಿಂದ ಮತ್ತು ವಿಶ್ವವಿದ್ಯಾಲಯದಲ್ಲಿ ಈ ಕೋರ್ಸ್‌ಗೆ ಅವಕಾಶವಿಲ್ಲದ ಕಾರಣ ಹೋಮ್ ಸಯನ್ಸ್ ವಿಭಾಗವೂ ಸ್ಥಗಿತಗೊಂಡಿತು. 1956ರಲ್ಲಿ ಹೊಸ ಶಿಕ್ಷಣ ಯೋಜನೆಯನ್ವಯ ಪದವಿ ಕೋರ್ಸ್‌ಗೆ "ಬಿ" ವಿಭಾಗದಲ್ಲಿ ಜಾಗತಿಕ ಚರಿತ್ರೆ ಲಾಜಿಕ್‌ಮತ್ತು ಹೌಸ್‌ಹೋಲ್ಡ್ ಆರ್ಟ್ಸ್ ಜತೆಗೆ ಸೈಕೋಲಜಿ ಮತ್ತು ಜಿಯೋಗ್ರಫಿ ವಿಷಯಗಳು ಸೇರಿಸಲ್ಪಟ್ಟವು.

1957ರಲ್ಲಿ ಕಾಲೇಜಿಗೆ ಮದರಾಸು ವಿಶ್ವವಿದ್ಯಾಲಯದಿಂದ ಮೈಸೂರು ವಿಶ್ವವಿದ್ಯಾಲಯಕ್ಕೆ ನೋಂದಣಿ ಮಾಡಿಕೊಳ್ಳಬೇಕೆಂಬ ಆದೇಶ ಬಂದುದರಿಂದ ತುಂಬಾ ಬದಲಾವಣೆ ಉಂಟಾಯಿತು. ವಿಶ್ವವಿದ್ಯಾಲಯದಿಂದ ಕಮಿಷನ್ ಕಳುಹಿಸಲ್ಪಟ್ಟು ಅವರು ಕಾಲೇಜಿನ ಗುಣಮಟ್ಟದ ಬಗ್ಗೆ ಸಂತೃಪ್ತಿಗೊಂಡುದರಿಂದ ಆರ್ಟ್ಸ್, ಸೈಯನ್ಸ್ ಮತ್ತು ಹೋಮ್ ಸೈಯನ್ಸ್ ವಿಭಾಗದಲ್ಲಿ ಮೂರು ವರ್ಷದ ಪದವಿ ಕೋರ್ಸ್ ಮತ್ತು ಸೋಶಿಯಲ್ ವರ್ಕ್‌ನಲ್ಲಿ ಎರಡು ವರ್ಷದ ಸ್ನಾತಕೋತ್ತರ ತರಗತಿ ತೆರೆಯಲು ಅನುಮತಿ ದೊರೆಯಿತು. ಹೀಗೆ 1956 ರಿಂದ 1958ರ ವರೆಗೆ ಈ ಬದಲಾವಣೆಗಳಿಂದ, ಕಾಲೇಜು ಮದರಾಸು, ಕರ್ನಾಟಕ ಮತ್ತು ಮೈಸೂರು ಈ ಮೂರು ವಿಶ್ವವಿದ್ಯಾಲಯಗಳ ಅಧೀನದಲ್ಲಿ ಕೆಲಸ ಮಾಡಬೇಕಾಯಿತು.

1958ರಲ್ಲಿ ಶ್ರೀಮತಿ ದುರ್ಗಾಬಾಯಿ ದೇಶ್‌ಮುಖ್ ಅವರ ಅಧ್ಯಕ್ಷತೆಯಲ್ಲಿ ಮಹಿಳಾ ಶಿಕ್ಷಣವನ್ನು ನಿಭಾಯಿಸಲೆಂದೇ ಒಂದು ಸಮಿತಿಯನ್ನು ರಚಿಸಲಾಯಿತು. ರಾಜ್ಯ ಸರಕಾರಗಳಿಗೆ ಮಹಿಳೆಯರ ಶಿಕ್ಷಣ ಪ್ರಗತಿಗಾಗಿ ಹೆಚ್ಚಿನ ಆಸಕ್ತಿ ತೋರಿಸಲು ಮತ್ತು ಸ್ವಯಂಸೇವಾ ಸಂಘಗಳು ಮತ್ತು ಸಾರ್ವಜನಿಕರ ಸಹಕಾರ ಪಡೆಯಲು ಸೂಚನೆ ನೀಡಲಾಗಿತ್ತು. ಮಹಿಳೆಯರ ಶಿಕ್ಷಣಕ್ಕೆ ಸಂಭಂದಿಸಿದಂತೆ ಇರುವ ಸಾಂಪ್ರಾದಾಯಿಕ ಅಡ್ಡಿಗಳನ್ನು ತೊಡೆದುಹಾಕಲು ಒಂದು ಅಭಿಯಾನ ಕೈಗೊಳ್ಳಲು, ಮಹಿಳಾ ಶಿಕ್ಷಕಿಯರ ನೇಮಕಾತಿ, ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶಾಲೆಗಳು, ಅಗತ್ಯ ಬಿದ್ದಲ್ಲಿ ಉಚಿತ ಪುಸ್ತಕ, ಬರವಣಿಗೆಯ ಸಲಕರಣೆಗಳು, ಸಮವಸ್ತ್ರ ಮತ್ತು ಹೆಣ್ಣು ಮಕ್ಕಳಿಗಾಗಿ ಹಾಸ್ಟೆಲ್ ರಚಿಸಲು ಸಲಹೆ ನೀಡಲಾಯಿತು. 1958 ಮಾರ್ಚ್‌ನಲ್ಲಿ ಮದರ್ ತೆದೋಸಿಯ ಎ.ಸಿ.ಯವರು ಎರಡನೇ ಅವಧಿಗೆ ಕಾಲೇಜಿನ ಪ್ರಾಂಶುಪಾಲೆಯಾದರು. ಕಾಲೇಜು ಯೂನಿಯನ್ ಗ್ರಾಂಟ್ ಕಮಿಷನ್ ಅನುದಾನದಿಂದ ಭೌತಶಾಸ್ತ್ರ, ಮತ್ತು ರಸಾಯನ ಶಾಸ್ತ್ರ ಮುಂತಾದ ಬಿ.ಎಸ್ಸಿ. ಕೋರ್ಸ್‌ಗಳನ್ನು ನಡೆಸಲು ಕಟ್ಟಡ ರಚಿಸಲಾಯಿತು ಮತ್ತು 1959ರ ಹೊತ್ತಿಗೆ ಉಪನ್ಯಾಸಕರ ಕೊಠಡಿ ಮತ್ತು ಲ್ಯಾಬೊರೇಟರಿಗಳು ಉಪಯೋಗಕ್ಕೆ ಸಿದ್ಧವಾದವು. ಕಾನ್ವೆಂಟ್‌ನ ಹಿಂಬದಿಯ ಮೈದಾನ ಸಮತಟ್ಟುಗೊಳಿಸಿ ಮಕ್ಕಳ ಆಟದ ಮೈದಾನವಾಗಿ ಪರಿವರ್ತಿಸಲಾಯಿತು. ಈ ಹೊಸ ಮೈದಾನ ದೈಹಿಕ ಶಿಕ್ಷಣ ಕಾರ್ಯಗಳಿಗೆ ಸಮಂಜಸ ಸ್ಥಳವಾಗಿದ್ದು ಅಂತರ್ ಕಾಲೇಜು ಟೂರ್ನಮೆಂಟ್‌ಗಳು ಜರಗಿದವು.

ಮದರ್ ಕಾರ್ಮೆಲಿಟ ಎ.ಸಿ.[39] ಇವರು 1960ರಲ್ಲಿ ಕಾಲೇಜಿನ ಪ್ರಾಂಶುಪಾಲೆ ಆಗಿ ನೇಮಕಗೊಂಡರು. ಅದೇ ವರ್ಷ "ಜ್ಞಾನ ವಿಭಾಗದಲ್ಲಿ – ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರ ಈ ನಾಲ್ಕು ಮುಖ್ಯ ವಿಷಯಗಳನ್ನು ಮಾತ್ರವಲ್ಲದೆ – ಇತಿಹಾಸ, ಪೌರನೀತಿ ಮತ್ತು ಮನಃಶಾಸ್ತ್ರ ಈ ಮೂರು ಮಾನವಶಾಸ್ತ್ರಕ್ಕೆ ಸಂಭಂದಿಸಿದ ವಿಷಯಗಳನ್ನು ಸೇರಿಸಿಕೊಳ್ಳಲಾಯಿತು.

ಸಿಸ್ಟರ್ ಸ್ಕೊಲೇಸ್ಟಿಕಾ ಎ.ಸಿ. ಯವರು 1963ರಲ್ಲಿ ಸೈಂಟ್ ಆಗ್ನೆಸ್ ಕಾಲೇಜಿನ ಪ್ರಾಂಶುಪಾಲೆಯಾಗಿ ನೇಮಕಗೊಂಡರು. ಅವರ ನಾಯಕತ್ವದಲ್ಲಿ ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ವಿಭಾಗಳು 1965ರಲ್ಲಿ ಯು.ಜಿ.ಸಿ. ಸಹಾಯಯದಿಂದ ಕಟ್ಟಲ್ಪಟ್ಟವು.

1961–1962ರಲ್ಲಿ ಕಾಲೇಜಿಗೆ ಭೇಟಿ ನೀಡಿದ ಗಣ್ಯರಲ್ಲಿ ಶ್ರೀಮತಿ ವಾಯ್ಲೆಟ್ ಆಳ್ವ, ಡೆಪ್ಯುಟಿ ಯೂನಿಯನ್ ಹೋಮ್ ಮಿನಿಸ್ಟರ್ ಮತ್ತು ಆಕೆಯ ಪತಿ ಲೋಕಸಭಾ ಸದಸ್ಯರಾಗಿದ್ದ ಶ್ರೀ ಜೋಕಿಮ್ ಆಳ್ವ ಇವರಾಗಿದ್ದರು.[40] ಈ ಇಬ್ಬರೂ ಮುಖ್ಯ ವ್ಯಕ್ತಿಗಳು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ ಅವರನ್ನು ತಮ್ಮ ಭಾರತೀಯ ಮಹಿಳಾತತ್ವದ ಆದರ್ಶಗಳನ್ನು ಬೆಳೆಸಿಕೊಳ್ಳುವುದರ ಮೂಲಕ ತಾಯ್ನಾಡಿಗೆ ಹೆಮ್ಮೆ ತರುವ ಕೆಲಸ ಮಾಡಬೇಕೆಂದು ಕರೆಕೊಟ್ಟರು.

ಮುಂದಿನ ವರ್ಷದಲ್ಲಿ ದೇಶವು ಇಂಡೋ–ಚೈನಾ ಯುದ್ಧಕ್ಕೆ ಸಾಕ್ಷಿಯಾದಾಗ, ಸೈಂಟ್ ಆಗ್ನೆಸ್‌ನ ವಿದ್ಯಾರ್ಥಿಗಳು ಚೀನೀಯರ ದಾಳಿಯ ವಿರುದ್ಧ ಪ್ರತಿಭಟನೆ ನಡೆಸಿದರು. ವಿದ್ಯಾರ್ಥಿಗಳು ಶಾಂತಿ–ಯಾತ್ರೆ ನಡೆಸಿ ಮತ್ತು ಪುರಭವನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿ ದೊಡ್ಡ ಮೊತ್ತದ (ರೂ.13,000/–) ಹಣವನ್ನು ದೇಶೀಯ ಡಿಫೆನ್ಸ್ ಫಂಡ್ ("Jawahar's Fund")ಗೆ ಒಂದುಗೂಡಿಸಿದರು. ಸೋಶಿಯಲ್ ಸರ್ವೀಸ್ ಲೀಗ್‌ನ ಸದಸ್ಯರು ಮನೆ ಮನೆಗೆ ಹೋಗಿ ಹಣ ಮತ್ತು ಹಳೆ ಬಟ್ಟೆಗಳನ್ನು ಯುದ್ಧಭಾದಿತ ಕುಟುಂಬಗಳಿಗಾಗಿ ಸಂಗ್ರಹಿಸಿದರು.

1964ರಲ್ಲಿ ಸೈಂಟ್ ಆಗ್ನೆಸ್ ಕಾಲೇಜು ನೇಶನಲ್ ಸರ್ವೀಸ್ ಲೀಗ್ ಸ್ಥಾಪನೆಯ ಮೂಲಕ ಮುಂದಿನ ಪರಿಣಾಮವನ್ನು ಅರಿಯದ ಒಂದು ದೊಡ್ಡ ವೇದಿಕೆ ನಿರ್ಮಾಣ ಮಾಡಿತು. ಬಹಳ ಹುರುಪಿನಿಂದ ಅರ್ಜಿ ಫಾರ್ಮ್‌ಗಳು ತುಂಬಿಸಲ್ಪಟ್ಟು 200 ಹೆಣ್ಣುಮಕ್ಕಳು ಎನ್.ಸಿ.ಸಿ. ಕೇಡೆಟ್‌ಗಳಾಗಿ ನೋಂದಾವಣೆಗೊಂಡರು. ತುಂಬಾ ಸಮಯದ ವರೆಗೆ ಸಮವಸ್ತ್ರ ನೀಡದಿರುವುದರಿಂದ ವಿದ್ಯಾರ್ಥಿಗಳು ಸೀರೆಗಳೊಂದಿಗೆ ಪಥಚಲನ ನಡೆಸಲು ಕಷ್ಟಪಟ್ಟರು. ಸಾರ್ವಜನಿಕ ಪೆರೇಡ್‌ಗಳಲ್ಲೂ ಸಮವಸ್ತ್ರವಿಲ್ಲದ್ದರಿಂದ ಭಾಗವಹಿಸಲು ಆಗಲಿಲ್ಲ. ಜೂನ್ 1965ರಲ್ಲಿ ಕೆಡೆಟ್‌ಗಳಿಗೆ ಸಮವಸ್ತ್ರ ನೀಡಲಾಯಿತು. ಕಾಲೇಜಿನ ಪ್ರಥಮ ಎನ್.ಸಿ.ಸಿ. ಆಫೀಸರ್, ಲೆಫ್ಟಿನೆಂಟ್ ಮಿಸ್ ಐಲೀನ್ ಲೋಬೊ ಇವರು 1,200 ಕೆಡೆಟ್‌ಗಳಿಗೆ ತರಬೇತುಗೊಳಿಸಲು ನೇಮಕವಾಗಿದ್ದು ಎನ್.ಸಿ.ಸಿ.ಯ ಮುಖ್ಯ ಧ್ಯೇಯವಾಗಿರುವ ಶಿಸ್ತು ಕಾಪಾಡಿಕೊಳ್ಳುವ ಪ್ರಾಮುಖ್ಯತೆಯನ್ನು ಕಲಿಸಿದರು. ಕೆಡೆಟ್‌ಗಳು ಸ್ವಾತಂತ್ರ್ಯ ದಿನಾಚರಣೆ, ಪ್ರಜಾಪ್ರಭುತ್ವ ದಿನ ಮತ್ತು ಎನ್.ಸಿ.ಸಿ. ದಿನದ ಪೆರೇಡ್‌ನಲ್ಲಿ ಭಾಗವಹಿಸಿದರು. ಅವರು ರಾಜ್ಯಪಾಲರ ಗೌರವ ಪ್ರತಿಷ್ಠೆ ಪಡೆದರು. ಇದು ಮಾತ್ರವಲ್ಲದೆ ಅವರು ಗ್ಲೈಡಿಂಗ್, ಏರೋ ಮೋಡೆಲಿಂಗ್, ಶೂಟಿಂಗ್ ಮತ್ತು ಫೈರಿಂಗ್‌ನಲ್ಲೂ ಭಾಗವಹಿಸಿದರು. ಅವರ ಸ್ವಯಂ ಸೇವಾ ಮನೋಭಾವ ಅವರು ಸ್ವಯಂ

ರಕ್ತದಾನ ಶಿಭಿರ ಮಾಡುವಲ್ಲಿ ತೋರಿಬಂದಿತು. ಅವರು ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವುದು ಮಾತ್ರವಲ್ಲದೆ ಇವರಲ್ಲಿ ಅನೇಕ ಮಂದಿ ರಾಜ್ಯ ಮಟ್ಟಡ ವಿವಿಧ ಕ್ಯಾಂಪ್‌ಗಳಲ್ಲಿ ಭಾಗವಹಿಸಲು ಆಯ್ಕೆಗೊಂಡರು.

ಸೈಂಟ್ ಆಗ್ನೆಸ್ ಕಾಲೇಜಿನ ಚರಿತ್ರೆಯಲ್ಲಿ ಪ್ರಥಮ ಬಾರಿಗೆ 1967ರಲ್ಲಿ "Planning Forum" ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಶ್ರೀ ಟಿ. ಎ. ಪೈ ಅವರಿಂದ ಉದ್ಘಾಟಿಸಲ್ಪಟ್ಟು ಅದು ಭಾರತದಲ್ಲಿದ್ದ ಆಹಾರ ಸಮಸ್ಯೆಗೆ ಒಂದು ಉನ್ನತ ಪಾರಿಹಾರಿಕ ಯೋಜನೆಯನ್ನು ಮುಂದಿಟ್ಟಿತು[41] ಮತ್ತು ಅದನ್ನು ಪ್ರಾಯೋಜಿಸಲು ಹಸಿವಿನಿಂದ ಬಳಲುತ್ತಿರುವ ಸ್ವಂತ ಜನರಿಗೆ ಪರಿಹಾರ ನೀಡುವ ಬಗ್ಗೆ ಸೂಚಿಸಿದರು. ವಾರಕ್ಕೊಮ್ಮೆ ವಿದ್ಯಾರ್ಥಿಗಳಿಗೆ ಸೆಮಿನಾರ್‌ಗಳನ್ನು ಏರ್ಪಡಿಸಿ ಅಲ್ಲಿ ಭಾಷಣ ಮತ್ತು ಬರಹದ ಮೂಲಕ ಸಂಭಂದಿತ ವಿಷಯಗಳನ್ನು ತಿಳಿಸಲಾಗುತ್ತಿತ್ತು. ಇತರ ಕಾಲೇಜುಗಳ ಸಹಕಾರದೊಂದಿಗೆ ಅಂತರ್ ಕಾಲೇಜು ಜಂಟಿ ಅಧಿವೇಶನಗಳನ್ನು ಆಯೋಜಿಸಲಾಗಿತ್ತು. ಈ ಸಂಸ್ಥೆ ತನ್ನ ಕೆಲಸವನ್ನು ಹರಿಜನ ಕಾಲೋನಿಯಲ್ಲಿ ಕಾರ್ಯಚಟುವಟಿಕೆಗಳ ಕೇಂದ್ರ ಸ್ಥಾಪಿಸಿ ಅದರ ಮೂಲಕ ಸಾಕ್ಷರತೆ ಮತು ಗ್ರಾಮೀಣ ಸೇವಾ ತರಗತಿಗಳನ್ನು ಮತ್ತು ನಾಗರಿಕತೆಯ ತರಬೇತಿಯನ್ನು ಆಯೋಜಿಸುತ್ತಿದ್ದರು. ಸೈಂಟ್ ಆಗ್ನೆಸ್ ಕಾಲೇಜಿನ Planning Forum ಸೌತ್ ಕೆನರಾ ಜಿಲ್ಲೆಯ ಸಾಮಾಜಿಕ-ಆರ್ಥಿಕ ಸರ್ವೆ ನಡೆಸಿ ಜಿಲ್ಲೆಯ ಯೋಜನೆಯನ್ನು ಆಯೋಜಿಸಲು ಉಪಯುಕ್ತವಾಯಿತು.

1969ರಲ್ಲಿ ಪದವಿ ಪೂರ್ವ ವಿಭಾಗದಲ್ಲಿ ಕಾಲೇಜು ವಾಣಿಜ್ಯಶಾಸ್ತ್ರವನ್ನು ಆರಂಭಿಸಿತು ಮತ್ತು ಮುಂದುವರಿದು ಕಾಲೇಜು ವಿಭಾಗಕ್ಕೂ ವಿಸ್ತರಿಸಿತು. ಹಾಸ್ಟೆಲ್ ಸೌಲಭ್ಯಕ್ಕಾಗಿ ಬೇಡಿಕೆ ಹೆಚ್ಚಾದುದರಿಂದ 1969ರಲ್ಲಿ ಮೂರು ಮಹಡಿಗಳ ಹಾಸ್ಟೆಲ್ ಕಟ್ಟಡ ಕಟ್ಟುವ ಅವಶ್ಯಕತೆ ಬಂದೊದಗಿತು. ಹೊಸ ಹಾಸ್ಟೆಲ್ ಕಟ್ಟಡ 1970ರಲ್ಲಿ ಪೂರ್ತಿಗೊಂಡು 240 ವಿದ್ಯಾರ್ಥಿಗಳಿಗೆ ಸ್ಥಳಾವಕಾಶವಾಯಿತು. ಹಳೆ ಹಾಸ್ಟೆಲ್ ಕಟ್ಟಡವನ್ನು ಕಾಲೇಜು ಪಧವಿ ವಿಭಾಗದಲ್ಲಿ ವಾಣಿಜ್ಯಶಾಸ್ತ್ರ ವಿಭಾಗ ಸೇರ್ಪಡೆಗೊಂಡು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳವಾದುದರಿಂದ ತರಗತಿ ಕೊಠಡಿಗಳ ಅವಶ್ಯಕತೆಗಾಗಿ ಉಪನ್ಯಾಸ ಕೊಠಡಿಗಳಾಗಿ ಉಪಯೋಗಿಸಲು ತೆಗೆದುಕೊಂಡಿತು. ಒಂದು ಬಯಲು ರಂಗಮಂಟಪವನ್ನೂ ಸ್ವರ್ಣ ಮಹೋತ್ಸವ ಆಚರಣೆಗಾಗಿ ನಿರ್ಮಾಣ ಮಾಡಲಾಯಿತು. 1970 ಕಾಲೇಜು ಆವರಣದಲ್ಲಿ ಬುದ್ಧಿ ಮಾಂದ್ಯ ಮಕ್ಕಳಿಗಾಗಿ ಯೋಜನಾ ಶಾಲೆಯನ್ನು ವಿಶೇಷವಾಗಿ ತರಬೇತು ಹೊಂದಿದ ಸಿಸ್ಟರ್ ಒಬ್ಬರ ನಾಯಕತ್ವದಲ್ಲಿ ಕಾಣುವಂತಾಯ್ತು. ಇದರಿಂದಾಗಿ ದೇಶದಾದ್ಯಂತ ಸಾಕ್ಷರತೆ ಮತ್ತು ಸಾಮಜಿಕ ಪುನರ್ವಸತಿಯ ಬಗ್ಗೆ ಎಚ್ಚರಗೊಳ್ಳಲು ಉತ್ತಮ ಸ್ಪಂದನೆ ತೋರಿಬಂದಿತು.

1970 ಮಂಗಳೂರಿನ ಅಪೊಸ್ತೋಲಿಕ್ ಕಾರ್ಮೆಲ್ ಸಭೆಯ ಶತಮಾನೋತ್ಸವ ವರ್ಷವಾಗಿತ್ತು. ಮತ್ತು ಮುಂದಿನ ವರ್ಷ 1971 ಸೈಂಟ್ ಆಗ್ನೆಸ್ ಕಾಲೇಜಿನ ಸ್ವರ್ಣ ಮಹೋತ್ಸವವಾಗಿತ್ತು.[42] ಈ ವೇಳೆಗೆ ಕಾಲೇಜು

ಅದರ ಗುಣಮಟ್ಟ ಮತ್ತು ಪ್ರವೀಣತೆಯಿಂದಾಗಿ ಶ್ರೇಷ್ಠ ಸಂಸ್ಥೆಯೆಂಬ ಛಾಪು ಮೂಡಿಸಿತ್ತು. ಅಲ್ಲದೆ ಈ ಸಂಸ್ಥೆಯು ವಿದ್ಯಾರ್ಥಿಗಳ ವಿಭಿನ್ನ ಅವಶ್ಯಕತೆಗಳನ್ನು ಅಂದರೆ ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರೋತ್ಸಾಹದಾಯಕವಾಗಿತ್ತು. ಅದೇ ವರ್ಷ ಅಪೊಸ್ತೋಲಿಕ್ ಕಾರ್ಮೆಲ್‌ನ ಸುಪೀರಿಯರ್ ಜನರಲ್ ಮತು ಸೈಂಟ್ ಆಗ್ನೆಸ್ ಕಾಲೇಜಿನ ಹಿಂದಿನ ಎರಡು ಅವಧಿಯ (1934-43 ಮತ್ತು 1958-59) ಪ್ರಾಂಶುಪಾಲೆ ಆಗಿದ್ದ ಮದರ್ ತೆದೋಸಿಯಾ ಇವರಿಗೆ ಭಾರತದ ರಾಷ್ಟ್ರಪತಿ, ಡಾ। ರಾಜೇಂದ್ರ ಪ್ರಸಾದ್ ಇವರು ರಾಷ್ಟ್ರಪತಿ ಭವನದಲ್ಲಿ ಆಯೋಜಿಸಿದ್ದ ವರ್ಣರಂಜಿತ ಕಾರ್ಯಕ್ರಮದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅವರು ನೀಡಿದ ವಿಶಿಷ್ಠ ಕೊಡುಗೆಗಾಗಿ "ಪದ್ಮಶ್ರೀ" ಪಧವಿ ಪ್ರಧಾನ ಮಾಡಿದರು.

ಕಾಲೇಜಿನ ಸ್ವರ್ಣ ಮಹೋತ್ಸವ ಸೈಂಟ್ ಆಗ್ನೆಸ್ ಕಾಲೇಜು ಮೈದಾನದಲ್ಲಿ ಮೂರು ದಿನಗಳ ಕಾಲ ಜರಗಿತು. ಸಮಾರಂಭವನ್ನು ಸೌತ್ ಕೆನರಾ ಜಿಲ್ಲೆಯ ಮುನಿಸಿಪಲ್ ಕಮಿಶನರ್‌ರವರ ಪತ್ನಿ, ಶ್ರೀಮತಿ ಕೆಲ್ವಾಡಿ ಇವರು ಉದ್ಘಾಟಿಸಿದರು. ಫೆಬ್ರವರಿ 13ರಿಂದ 15ರ ವರೆಗೆ ಶಿಕ್ಷಣ ವಸ್ತು ಪ್ರದರ್ಶನ ನಡೆಸಲಾಗಿದ್ದು 10,500 ಜನರು ಸೈಂಟ್ ಆಗ್ನೆಸ್‌ಗೆ ಅಂದಿನ ದಿನಗಳಲ್ಲಿ ಆಗಮಿಸಿ ಅತ್ಯಾಕರ್ಷಕ ವಿಜ್ಞಾನ, ಕಲಾ ಸೌಂಧರ್ಯ, ಚರಿತ್ರೆಯ ತೊಂದರೆಗಳು, ಕಾಲೇಜಿನ ಕಾರ್ಯಚಟಿಕೆಯಲ್ಲಿ ಹಾಸುಹೊಕ್ಕಾಗಿರುವ ವಿಚಾರಗಳನ್ನು ಸ್ವಯಂ ವೀಕ್ಷಿಸಿದರು. ಹಳೆ ವಿದ್ಯಾರ್ಥಿಗಳಲ್ಲಿ ಉತ್ಕೃಷ್ಠರೆಂದು ಪರಿಗಣಿತರಾದ ಶ್ರೀಮತಿ ಒಕ್ಟೇವಿಯಾ ಅಲ್ಬುಕರ್ಕ್ ಇವರನ್ನು ವಸ್ತು ಪ್ರದರ್ಶನದ ಉದ್ಘಾಟನೆಗಾಗಿ ಆಹ್ವಾನಿಸಲಾಗಿತ್ತು.[43]

ಕಾರ್ಮೆಲ್‌ನ ಶತಮಾನೋತ್ಸವ ಸ್ಮಾರಕವಾಗಿ ಬುದ್ಧಿಮಾಂದ್ಯ ಮಕ್ಕಳ ಶಾಲೆಯನ್ನು ಸ್ಥಾಪಿಸಲಾಯಿತು. ಬಳಿಕ ಇದು ವಿಶೇಷ ಶಾಲೆ ಎಂಬುದಾಗಿ ಮಿನಿಸ್ಟ್ರಿ ಆಫ್ ಸೋಶಿಯಲ್ ವೆಲ್‌ಫೇರ್‌ನಿಂದ ನೋಂದಾವಣೆಗೊಂಡಿತು. ಈಗ ಈ ಶಾಲೇ ಉನ್ನತ ಮಟ್ಟಕ್ಕೇರಿದ್ದು ಅದರ ಅಧೀನತೆಯಲ್ಲಿ ಅನೇಕ ಸಂಸ್ಥೆಗಳನ್ನು ನಡೆಸುತ್ತಿದೆ. ಅದೇ ದಿನ ಪದ್ಮ ವಿಭೂಷಣ ಟಿ. ಎ. ಪೈ ಇವರ ಅಧ್ಯಕ್ಷತೆಯಲ್ಲಿ, ವೇದಿಕೆಯಲ್ಲಿ ಅಪೊಸ್ತೋಲಿಕ ಕಾರ್ಮೆಲ್‌ನ ಮದರ್ ಜನರಲ್ ಸಿಸ್ಟರ್ ತೆದೋಸಿಯಾ, ಬಿಷಪ್ ರೆವೆ, ಡಾ। ಬಾಸಿಲ್ ಡಿ'ಸೋಜ, ಗೌರವಾನ್ವಿತ ಹಳೆ ವಿದ್ಯಾರ್ಥಿಗಳು ಮತ್ತು ಪ್ರಭಾರ ಪ್ರಾಂಶುಪಾಲೆ, ಸಿಸ್ಟರ್ ನೊಯೆಲೈನ್ ಎ.ಸಿ. ಇವರ ಉಪಸ್ಥಿತಿಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಅಧ್ಯಕ್ಷರು ಮಿಶನರಿ ಸಂಸ್ಥೆಗಳು ದಕ್ಷಿಣ ಭಾರತಕ್ಕೆ ಕೊಟ್ಟಿರುವ ಶ್ರೇಷ್ಠ ಕೊಡುಗೆಗಳನ್ನು ವಿಸ್ತಾರವಾಗಿ ವಿವರಿಸುತ್ತಾ ಪಧವಿ ಶಿಕ್ಷಣ ಪ್ರತಿಷ್ಠೆಗೆ ಮಾತ್ರ ಸೀಮಿತವಾಗಿದ್ದು ಬದುಕು ರೂಪಿಸಿಕೊಳ್ಳುವುದಕ್ಕೆ ಪೂರಕವಾಗಿರುವುದರಿಂದ ಮುಂದಿನ ದಿನಗಳಲ್ಲಿ ಈಗಿನ ಶಿಕ್ಷಣ ಪದ್ಧತಿ ಬದಲಾಗಬೇಕು ಎಂದು ಎಚ್ಚರಿಗೆ ನೀಡಿದರು.

ಸ್ವರ್ಣ ಮಹೋತ್ಸವದ ಬಳಿಕ ಕಾಲೇಜು ಪುನಃ ಉತ್ತಮ ಬೆಳವಣಿಗೆಯ ಲಕ್ಷಣಗಳನ್ನು ತೋರಿತು. ಅದು ಸಂಸ್ಥೆಯ ಎರಡನೇ ಹಂತದ ವಿಸ್ತರಣೆ ಮತ್ತು ಅಭಿವೃದ್ಧಿಯಾಗಿತ್ತು. ಉನ್ನತ ಶಿಕ್ಷಣದ ದೃಷ್ಟಿಕೋನದಿಂದ ವಿಶಿಷ್ಟ ಅಭಿವೃದ್ಧಿಗಳನ್ನು ಮಾಡಲಾಯಿತು. ತೀವ್ರತರದ ಪ್ರಗತಿಯನ್ನು ಶೈಕ್ಷಣಿಕವಾಗಿ ಮಾತ್ರವಲ್ಲದೆ ಸಹಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು. ಸಮಾನತೆಯತ್ತ ಮಹಿಳಾ ಸ್ಥಾನಮಾನ ಸಮಿತಿ 1971ರ ಜನಗಣತಿಯಲ್ಲಿ 15–25ರೊಳಗಿನ 68% ಹೆಣ್ಣುಮಕ್ಕಳು, 15 ರಿಂದ ಮೇಲ್ಪಟ್ಟ 87% ಮಹಿಳೆಯರು ಅನಕ್ಷರಸ್ತರಾಗಿದ್ದಾರೆ ಎಂಬುದನ್ನು ಕಂಡುಕೊಂಡಿತು. ಹೊರಗಿನ ಏಜೆನ್ಸಿಗಳ ಸಹಯೋಗದೊಂದಿಗೆ ಪಠ್ಯಕ್ರಮ ಅಭಿವೃದ್ಧಿ, ಸಮುದಾಯ ಸೇವಾ ಯೋಜನೆಗಳು 100 ವರ್ಷ ಹಳೆಯ ಕಾಲೇಜು, 150 ವರ್ಷ ಹಳೆಯ ಮಹಿಳಾ ಸಭೆ ಆಕಾಶದೆತ್ತರದ ಗುರಿಯನ್ನು ಮುಂದಿಟ್ಟುಕೊಂಡು ಕೈಸ್ತ ಮೌಲ್ಯಗಳು ಮತ್ತು ಶ್ರೇಷ್ಠ ಸಂಪ್ರದಾಯಗಳನ್ನು ಬೇರೂರಿಸಿ ಸುಧಾರಣಾ ಕಾರ್ಯಗಳನ್ನು ಮಾಡಿತು.

4.5 ಸೈಂಟ್ ಆನ್ಸ್ ಶಿಕ್ಷಕರ ತರಬೇತಿ ಸಂಸ್ಥೆ

"I Have always felt that the true textbook for a pupil is his teacher" – M. K. Gandhi

1854ರ ಸರ್ ಚಾರ್ಲ್ಸ್ ವುಡ್ಸ್ ಡಿಸ್‌ಪ್ಯಾಚ್ ದೇಶದಲ್ಲಿ ಶಿಕ್ಷಣ ಕ್ರಮಕ್ಕೆ ಮೂಲವಾಗಿ ಮುಂದುವರೆಯಬೇಕು ಎಂದು ಆದೇಶ ಬಂದ ನಂತರ ಶಿಕ್ಷಣದ ಕ್ಷೇತ್ರದಲ್ಲಿ ಬಹಳಷ್ಟು ಬದಲಾವಣೆಗಳು ಬರಲಾರಂಭಿಸಿದವು. ನಿರಂತರ ವಿದ್ಯಾರ್ಥಿವೇತನ ನೀಡುವ ಯೋಜನೆಯನ್ನೂ ಬುದ್ಧಿವಂತ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುವುದಕ್ಕೆ ಸ್ಥಾಪಿಸಲಾಯಿತು ಮತ್ತು ಖಾಸಗೀ ಪ್ರಯತ್ನದಿಂದ ಸ್ಥಾಪಿತವಾದ ಶೈಕ್ಷಣಿಕ ಸಂಸ್ಥೆಗಳಿಗೆ ಸರಕಾರದ ನಿಧಿಯಿಂದ ಸಹಾಯಧನ ನೀಡಲಾಗುತ್ತಿತ್ತು. ಸಮುದಾಯ ಶಿಕ್ಷಣ, ಸ್ಥಾನಿಕ ಭಾಷೆಯ ಪಠ್ಯಕ್ರಮ ಅಭಿವೃದ್ಧಿ ಮತ್ತು ಶಿಕ್ಷಕರ ತರಬೇತಿಗೆ ಪ್ರಾಧಾನ್ಯತೆ ನೀಡಲಾಯಿತು. ಪ್ರತೀ ಜಿಲ್ಲೆಯಲ್ಲಿ ಕೇವಲ ಉತ್ತಮ ಸ್ಥಿತಿಯುಳ್ಳವರು ಮಾತ್ರವಲ್ಲ ಎಲ್ಲರಿಗೂ ಉನ್ನತ ಶಿಕ್ಷಣದ ಅವಕಾಶ ದೊರೆಯುವಂತೆ ಮಾಡಬೇಕು ಎಂಬ ಉದ್ದೇಶವನ್ನು ಶಾಲೆಗಳು ಹೊಂದಿರಬೇಕು ಮತ್ತು ಆ ಮೂಲಕ ಸಮಾನಕ್ಕೆ ಪ್ರಯೋಜನಕಾರಿ ಸದಸ್ಯರಾಗಿ ಮೂಡಿ ಬರಬೇಕು ಎಂದು ಆದೇಶಿಸಿತು.[44]

ಹೀಗಿರುವಾಗ ಮದರಾಸು ಪ್ರೆಸಿಡೆನ್ಸಿಯ ಶೈಕ್ಷಣಿಕ ವಿಭಾಗ ಬಹಳಷ್ಟು ತಡವಾಗಿ ಕೇವಲ ಎಸ್.ಎಸ್.ಎಲ್.ಸಿ. ಸರ್ಟಿಫಿಕೇಟ್ ಶಿಕ್ಷಕರ ತರಬೇತಿ ಪಡೆಯಲು ಅವಕಾಶ ನೀಡಲಿಲ್ಲ. ಇದಕ್ಕೆ ಕನಿಷ್ಠ ಪದವಿ

ಹೊಂದಿದವರಾಗಿರಬೇಕು. ಮಂಗಳೂರಿನಲ್ಲಿ ಹೈಸ್ಕೂಲ್ ಶಿಕ್ಷಣ ಪಡೆದ ಅನೇಕ ಹೆಣ್ಣು ಮಕ್ಕಳು ಇದ್ದರು, ಆದರೆ ಪಶ್ಚಿಮ ಕರಾವಳಿಯ ಅವರ ಜೀವನ ಸ್ಥಿತಿ ಅವರು ಪದವಿ ಕಲಿಕೆಗಾಗಿ ಮದರಾಸಿಗೆ ಹೋಗುವಂತಿರಲಿಲ್ಲ. ಈ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡುವ ಉದ್ದೇಶದಿಂದ ಮದರ್ ಅಲೋಯ್ಸಿಯಾರವರು ಸೈಂಟ್ ಆಗ್ನೆಸ್ ಕಾಲೇಜು ಸ್ಥಾಪಿಸಲು ನಿರ್ಧರಿಸಿದರು ಮತ್ತು ಹೆಣ್ಣು ಮಕ್ಕಳನ್ನು ಕೇವಲ ಉತ್ತಮ ಪತ್ನಿಯರಾಗಿ ಮಾತ್ರವಲ್ಲ ಆದರೆ ಅವರು ಶಿಕ್ಷಣದ ಮೂಲಕ ಸಮರ್ಥರಾಗಿ ಒಂದು ಉದ್ಯೋಗವನ್ನು ಹೊಂದಿ ಅವರನ್ನು ಸಮಕ್ಷತೆಗೆ ನಡೆಸುವ ಉದ್ದೇಶದಿಂದ ಈ ಪ್ರಯತ್ನ ಮಾಡಿದರು. ಅವರು ಭಾರತದ ಪಶ್ಚಿಮ ಕರಾವಳಿಯಲ್ಲಿ ಮೊದಲ ಮಹಿಳಾ ಕಾಲೇಜನ್ನು ಸ್ಥಾಪಿಸುವುದರ ಮೂಲಕ ಇದನ್ನು ಸಾಧಿಸಿದರು ಮತ್ತು ಇದರ ಮೂಲಕ ವರ್ಷಂಪ್ರತಿ ಸಾವಿರಾರು ಪಧವೀದರರನ್ನು ತಯಾರುಗೊಳಿಸಿದರು. ಇದರ ಹಿರಿಮೆ ಈ ಹೆಣ್ಣು ಮಕ್ಕಳಿಗೆ ಜ್ಞಾನಾರ್ಜನೆ ಮಾಡಿಸಿ, ನುರಿತ ಸಿಬ್ಬಂದಿ, ಆಂಗ್ಲ ಭಾಷೆಯ ಪ್ರವೀಣತೆ ಮತ್ತು ಮುಂದೆ ಶಿಕ್ಷಕ ವೃತ್ತಿಯನ್ನು ಆಯ್ದುಕೊಂಡ ವಿದ್ಯಾರ್ಥಿಗಳಿಗೆ ಆದರ್ಶ ಪಾತ್ರರಾಗಿ ವಿದ್ಯಾರ್ಥಿಗಳನ್ನು ರೂಪಿಸಿದ ಕೀರ್ತಿ ಅಂದಿನ ಶಿಕ್ಷಕರಿಗೆ ಸಲ್ಲುತ್ತದೆ

ಯಾವ ರೀತಿ ಶಿಕ್ಷಕರ ತರಬೇತಿ ಭಾರತದಾದ್ಯಂತ ಬೆಳೆಯಿತೆಂಬುದನ್ನು ಗಮನಿಸುವಾಗ, 19ನೇ ಶತಮಾನದಲ್ಲಿ ಪ್ರಥಮವಾಗಿ ಇಂಗ್ಲೀಷ್ ಶಿಕ್ಷಣ ಪಡೆದ ಸಮಾಜ ಸುಧಾರಕರು ಮುಖ್ಯವಾಗಿ ಅವಗಣಿಸಲ್ಪಟ್ಟ ಮಹಿಳೆಯರಿಗೆ ಮತ್ತು ಇತರ ಹಿಂದುಳಿದ ಸಮುದಾಯದವರಿಗೆ ಶಿಕ್ಷಣ ಪ್ರಸರಣೆಯ ಅಗತ್ಯವನ್ನು ಮನಗಂಡರು. 1871ರಲ್ಲಿ ಕೇಶುಬ್ ಚಂದ್ರ ಸೇನ್ ಇವರು ಇಂಗ್ಲೇಂಡ್‌ನಿಂದ ಹಿಂತಿರುಗಿದ ಬಳಿಕ ಭಾರತೀಯ ರಿಫಾರ್ಮ್ ಅಸೋಸಿಯೇಶನ್ ಸಹಕಾರದೊಂದಿಗೆ ರಾಷ್ಟ್ರೀಯ ಮಹಿಳಾ ಸಾಮಾನ್ಯ ಶಾಲೆ ಆರಂಭಿಸಿದರು. ಇದು ಹೆಣ್ಣು ಮಕ್ಕಳ ಪ್ರಾಥಮಿಕ ಶಾಲೆಯೊಂದಿಗೆ ಮಹಿಳಾ ಶಿಕ್ಷಕರ ತರಬೇತಿ ಶಾಲೆಯಾಗಿತ್ತು. ಮೊದಲ ಸರಕಾರಿ ಶಿಕ್ಷಕ ತರಬೇತಿ ಶಾಲೆ 8 ಮಂದಿ ವಿದ್ಯಾರ್ಥಿಗಳೊಂದಿಗೆ, ಅದೂ ಅನಕ್ಷರಸ್ತರಾಗಿದ್ದ ವಿಧವೆಯವರಿಗಾಗಿ, 1870ರಲ್ಲಿ ಪೂನಾದಲ್ಲಿ ಸ್ಥಾಪಿಸಲ್ಪಟ್ಟಿತು.

ಇತರರೊಂದಿಗೆ ಮಹಿಳಾ ಶಿಕ್ಷಕರ ಅಗತ್ಯತೆಯನ್ನು ಮನಗಂಡ, ಮೇರಿ ಕಾರ್ಪೆಂಟರ್ ಮಹಿಳಾ ಶಿಕ್ಷಣ ಹೊತ್ತು ಬಂದ ತನ್ನ 1866ರ ಭಾರತ ಭೇಟಿಯ ಸಂದರ್ಭದಲ್ಲಿ ಹೀಗೆ ಹೇಳುತ್ತಾರೆ – *"The grand obstacle to the improvement of Female schools and to the extension of them, is the universal want of female teachers"* ಅವರು ಮಿಶನ್ ಶಾಲೆಗಳ ಹೊರತಾಗಿ, ತರಬೇತಿ ಹೊಂದಿದ ಮಹಿಳಾ ಶಿಕ್ಷಕರು ಕಡಿಮೆ ಇರುವುದನ್ನು ನೋಡಿ ಮಹಿಳಾ ಶಿಕ್ಷಕರ ತರಬೇತಿ ಶಾಲೆಗಳನ್ನು ಆರಂಭಿಸುವ ಅಗತ್ಯತೆಯನ್ನು ಕಂಡುಕೊಳ್ಳುತ್ತಾರೆ.

ಹಿನ್ನೆಲೆ:

1871ರಲ್ಲಿ ಮದರ್ ಮೇರಿ ಡೆಸ್ ಏಂಜೆಸ್‌ರವರು ಸೈಂಟ್ ಆನ್ಸ್ ಕಾನ್ವೆಂಟ್‌ನ ಸುಪೀರಿಯರ್ ಆಗಿ ನೇಮಕಗೊಂಡ ಬಳಿಕ, 1873ರಲ್ಲಿ ಮೇರಿ ಪಿಯೋ ರೊಸಾರಿಯೊ (ಬಳಿಕ ಮದರ್ ಅಲೋಯ್ಸಿಯಾ) ಇವರು ಮೊದಲ ಸ್ವಯಂಸೇವಕಿಯಾಗಿ ನೇಮಕಗೊಂಡರು. ಇನ್ನೂ 15ರ ಹರೆಯದ ಬಾಲಕಿಯಾಗಿದ್ದು ಸಿಸ್ಟರ್ಸ್ ಆಫ್ ಸೈಂಟ್ ಜೋಸೆಫ್ ಕ್ಯಾನನೂರಿನ ಕಾನ್ವೆಂಟ್‌ನಲ್ಲಿ ಬೋರ್ಡರ್ ಆಗಿದ್ದಾಗ ಮೇರಿ 5 ವರ್ಷಗಳ ಕಾಲ ತರಗತಿಯಲ್ಲಿ ಉನ್ನತ ದರ್ಜೆಯನ್ನು ಪಡೆದು ಈ ಮಧ್ಯೆ ಖಾಸಗಿಯಾಗಿ ಮಿಡ್ಲ್ ಸ್ಕೂಲ್ ಗ್ರೇಡ್ ಶಿಕ್ಷಕ ತರಬೇತಿ ಪರೀಕ್ಷೆ ಬರೆದರು. ಶಾಲಾ ಪರಿವೀಕ್ಷಕರಾದ ಮಿಸ್ ಕೇರೊಮ್ ಇವರು ಮೇರಿ ಒಬ್ಬ ಹುಟ್ಟು ಶಿಕ್ಷಕಿ ಎಂದು ತಿಳಿದುಕೊಂಡು ಕೂಡಲೇ ಮಂಗಳೂರಿನ ಸೈಂಟ್ ಆನ್ಸ್ ಸ್ಕೂಲ್‌ನಲ್ಲಿ ಶಿಕ್ಷಕ ತರಬೇತಿ ವಿಭಾಗವನ್ನು ತೆರೆಯಲ್ಲು ಶಿಫಾರಸ್ಸು ಮಾಡಿದರು. ಸರಕಾರದ ಸಹಾಯದಿಂದ ಅಪೊಸ್ತೊಲಿಕ್ ಕಾರ್ಮೆಲ್‌ರವರಿಗೆ ಮಹಿಳೆಯರ ಶಿಕ್ಷಣ ಮತ್ತು ಶಿಕ್ಷಕ ತರಬೇತಿಯನ್ನು ಪ್ರಾರಂಭಿಸಲು ದಾರಿಯಾಯಿತು.

ಮದರ್ ಅಲೋಯ್ಸಿಯಾರವರು ಇದರ ಜವಾಬ್ದಾರಿಗೆ ನೇಮಕಗೊಂಡರು. ಹೀಗೆ ಸೈಂಟ್ ಆನ್ಸ್ ಶಿಕ್ಷಕ ತರಬೇತಿ ಶಾಲೆ 1890ರಲ್ಲಿ 7 ವಿದ್ಯಾರ್ಥಿಗಳೊಂದಿಗೆ ಆರಂಭವಾಯಿತು. ಇತರ ಇಬ್ಬರು ಭಗಿನಿಯರೊಂದಿಗೆ ಅವರು ಮದರಾಸಿನ ಪ್ರೆಸಿಡೆನ್ಸಿ ಟ್ರೈನಿಂಗ್ ಶಾಲೆಯಲ್ಲಿ ಶಿಕ್ಷಕ ತರಬೇತಿಯನ್ನು ಪಡೆದು ಅಂತಿಮವಾಗಿ ಪ್ರೆಸಿಡೆನ್ಸಿಗೆ ಪ್ರಥಮವಾಗಿ ಹೊರಹೊಮ್ಮಿದರು. ಸಂಪೂರ್ಣವಾಗಿ ತನ್ನ ಕೆಲಸಕ್ಕೆ ಪರಿಪಕ್ವವಾಗಿ ಅವರು ತರಗತಿಯನ್ನು ಪ್ರವೇಶಿಸಿದರು. 1892ರಲ್ಲಿ ಶ್ರೀ ಗಾರ್ತ್‌ವೈಟ್ ಎಂಬ ಶಾಲಾ ಪರಿವೀಕ್ಷಕರು ಸೈಂಟ್ ಆನ್ಸ್‌ನ ತರಬೇತಿ ವಿಭಾಗವನ್ನು ಬಲವಾಗಿ ಶಿಫಾರಸ್ಸು ಮಾಡಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್, ಮದರಾಸು ಇವರಿಂದ ಮೆಮೋ ನಂ. 10162 ದಿನಾಂಕ 27–6–1892ರಂತೆ ಶಾಶ್ವತ ಮಾನ್ಯತೆ ಪಡೆಯಿತು. ಶಿಕ್ಷಣ ಕೇವಲ ಉಪಧ್ಯಾಯ ಶಿಕ್ಷಣ ಮಾತ್ರವಾಗಿರದೆ ಇನ್ನೂ ಹೆಚ್ಚಿನ ಅನುಭವವನ್ನು ಹೊಂದುವದಾಗಿತ್ತು. ಅವರ ನಿಷ್ಠೂರದ ಸೂಚನೆಗಳು, ಮೃದು ಟೀಕೆಗಳು, ಅತೀವ ಉತ್ಸಾಹಭರಿತ ತರಬೇತಿ ಅವರ ಕಲಿಕೆಯ ಸಮಯದಲ್ಲಿ ಮಾತ್ರವಲ್ಲ ನಂತರದ ದಿನಗಳಲ್ಲೂ ಅವರು ಕಲಿಸಿದ ಪ್ರತಿಯೊಬ್ಬ ಶಿಕ್ಷಕರಿಗೂ ಉತ್ತಮ ಗುಣಮಟ್ಟದ ಶಿಕ್ಷಕರಾಗಿ ಮಾರ್ಪಡಿಸಲು ಕಾರಣವಾಯಿತು. ಸಿಸ್ಟರ್ ಅಲೋಯ್ಸಿಯಾ ತರಬೇತಿ ಶಿಕ್ಷಕಿ ಮಾತ್ರವಲ್ಲದೆ ಸಂಸ್ಥೆಯ ಮುಖ್ಯ ಶಿಕ್ಷಕಿ ಹಾಗೂ ಶಾಲಾ ಶಿಕ್ಷಕಿಯಾಗಿದ್ದರು. ಅವರು ಹಲವು ವರ್ಷಗಳ ತಮ್ಮ ಸೇವೆಯಲ್ಲಿ ಹೆಣ್ಣುಮಕ್ಕಳನ್ನು ಶಿಕ್ಷಣ ರಂಗದಲ್ಲಿ ತರಬೇತುಗೊಳಿಸಿದರು ಮಾತ್ರವಲ್ಲದೆ ಅವರ ಗುಣನಡತೆಯನ್ನು ರೂಪಿಸುವಲ್ಲಿ ಯಶಸ್ವಿಯಾದರು.

ಸೈಂಟ್ ಆನ್ಸ್ ಟ್ರೈನಿಂಗ್ ಶಾಲೆಯ ಶಿಕ್ಷಣ ಸಮೂಹ ಕೆಲಸ ಕಾರ್ಯಕ್ಕೆ ಮತ್ತು ಮುಖ್ಯಸ್ಥರಿಗೆ ಜಂಟಿ ಸಹಾಯಕರಾಗಿ ಸೇವೆ ಸಲ್ಲಿಸಲು ಹೃದಯವಂತಿಕೆ, ಹೊಂದಿರುವ ಅನೇಕ ನಿಷ್ಠಾವಂತರು ಕೈಜೋಡಿಸಿದರು. ಶಿಕ್ಷಕ ತರಬೇತಿ ವಿಭಾಗವು ಹೈಯರ್ ಎಲಿಮೆಂಟರಿ ಮತ್ತು ಸೆಕೆಂಡರಿ ಈ ಎರಡೂ ಗ್ರೇಡ್‌ನ ಶಿಕ್ಷಕರ ತರಭೇತಿಗೆ ಅವಕಾಶ ನೀಡಿತು. ಹೀಗೆ ಕೇವಲ ತರಬೇತಿ ವಿಭಾಗದ ಸಹಾಯಕರಲ್ಲದೆ ಸೈಂಟ್ ಆನ್ಸ್ ಶಾಲೆಯ ಸಿಬ್ಬಂದಿ ವರ್ಗದವರೂ ಶಿಕ್ಷಕ ತರಬೇತು ಹೊಂದುವವರಿಗೆ ಮಾರ್ಗದರ್ಶನ ಮತ್ತು ಸಹಾಯ ನೀಡಿದರು. ತರಬೇತು ಪಡೆಯಲು ಭಾರತದ ಎಲ್ಲಾ ಭಾಗಗಳಿಂದಲೂ ಮತ್ತು ಹಲವಾರು ಆಂಗ್ಲೊ-ಇಂಡಿಯನ್ ಅಭ್ಯರ್ಥಿಗಳೂ ಇದ್ದರು.

ಪ್ರಾರಂಭದ ದಿನಗಳಲ್ಲಿ ತರಬೇತಿ ಶಾಲೆ ಅನೇಕ ಏಳು ಬೀಳುಗಳನ್ನು ಎದುರಿಸಬೇಕಾಯಿತು. ಮುಖ್ಯವಾಗಿ ಕನ್ನಡವು ಶಿಕ್ಷಣದ ಮಾಧ್ಯಮವಾಗಿರಬೇಕೆಂಬ ಇಲಾಖೆಯ ಕಾನೂನು ತೊಡಕುಗಳನ್ನು ಅನುಭವಿಸಿದ್ದರಿಂದ ಎಲಿಮೆಂಟರಿ ಟ್ರೈನಿಂಗ್ ವಿಭಾಗವನ್ನು ಮುಚ್ಚಬೇಕಾಯಿತು. ಮುಂದಿನ ವರ್ಷಗಳಲ್ಲಿ ಅಭಿವೃದ್ಧಿಯಾಗುತ್ತಾ ಮುನ್ನಡೆಯಿತು. 1941ರ ಶಾಲಾ ಪರಿವೀಕ್ಷಕರ ಅವರ ವರದಿ:

"This Institution with a great tradition continues to maintain a high standard of efficiency sending forth Teachers who render invaluable services in the Department of Education. A special feature of the school is the all-round cultural Training which the pupil-teachers receive and the spirit of harmony and enthusiasm which does animate the staff", ಎಂಬ ಮಾತುಗಳ ಮೂಲಕ ದೃಢ ಪಡಿಸುತ್ತದೆ.

ಜುಲೈ 3, 1943ರಲ್ಲಿ ಕನ್ನಡವನ್ನು ಕಲಿಕಾ ಮಾಧ್ಯಮವಾಗಿ ಪರಿಗಣಿಸಲಾಯಿತು ಮತ್ತು ಸಮಾನಾಂತರವಾಗಿ ಜೂನಿಯರ್ ಟ್ರೈನಿಂಗ್ ತರಗತಿಯನ್ನು ಪ್ರಾರಂಭಿಸಲಾಯಿತು. ಈ ಹಿಂದೆ ಹೈಸ್ಕೂಲು ವಿಭಾಗ ಮತ್ತು ಟ್ರೈನಿಂಗ್ ವಿಭಾಗವನ್ನು ಒಂದೇ ಮುಖ್ಯಸ್ಥರು ನಡೆಸುತ್ತಿರುವಲ್ಲಿ ಈಗ ಟ್ರೈನಿಂಗ್ ವಿಭಾಗಕ್ಕೆ ಪ್ರತ್ಯೇಖ ಮುಖ್ಯ ಶಿಕ್ಷಕರನ್ನು ನೇಮಿಸಲಾಯಿತು. 1959ರಲ್ಲಿ ಡೆಪ್ಯುಟಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರು ಟ್ರೈನಿಂಗ್ ಶಾಲೆಯನ್ನು ಪರಿಶೀಲಿಸಿ ಶಿಕ್ಷಣ ಇಲಾಖೆಯಿಂದ ಅನುಮತಿ ಬರುವ ವರೆಗೆ ಮುಂದಿನ ವರ್ಷದಿಂದ ಪ್ರಥಮ TSLC ತರಗತಿಯನ್ನು ಮುಂದುವರಿಸದಂತೆ ನಿರ್ದೇಶನ ನೀಡಿದರು.

ಈ ಮಧ್ಯೆ, ಶಿಕ್ಷಣ ಇಲಾಖೆ ಶಿಕ್ಷಕರ ತರಬೇತಿಗಾಗಿ, ಅಂದರೆ ಪೂರ್ವ ಸಿದ್ದತಾ ತರಬೇತಿ ವಿಧಾನ ಎಂಬ ಹೊಸ ಪಾಠಪಟ್ಟಿಯ ಬಗ್ಗೆ ಯೋಜನೆ ರೂಪಿಸುತ್ತಿತ್ತು. ಆದುದರಿಂದ ಆಡಳಿತ ಮಂಡಳಿ ಸದ್ಯ ಇದ್ದ ಟೀಚರ್ಸ್

ಟ್ರೈನಿಂಗ್ ಸ್ಕೂಲನ್ನು ಶಿಕ್ಷಕರ ಪೂರ್ವ ಸಿದ್ದತಾ ತರಬೇತಿ ಶಾಲೆಯಾಗಿ 1960ರಲ್ಲಿ ಪರಿವರ್ತಿಸಿತು. ಸಿಸ್ಟರ್ ಪ್ಯಾಟ್ರಿಕ್‌ರವರನ್ನು ಧಾರವಾಡದಲ್ಲಿ 9 ತಿಂಗಳ ಬೇಸಿಕ್ ಎಡುಕೇಶನ್ ತರಬೇತಿಗೆ ಕಳುಹಿಸಲಾಯಿತು, ತದನಂತರ ಟಿ.ಸಿ.ಎಚ್ ಎಂಬ ಒಂದು ವರ್ಷದ ತರಬೇತಿಯನ್ನು ಮೈಸೂರು ರಾಜ್ಯದ ಶಿಕ್ಷಣ ಇಲಾಖೆಯ ಪಾಠಪಟ್ಟಿಯಂತೆ ಜಾರಿಗೆ ತರಲಾಯಿತು. 1966ರಲ್ಲಿ ಒಂದು ವರ್ಷ ಅವಧಿಯ ಬೇಸಿಕ್ ಟ್ರೈನಿಂಗ್ ಕೋರ್ಸ್ ಮುಂದುವರಿಸಲ್ಪಟ್ಟು 2 ವರ್ಷದ ಅವಧಿಯ ತರಬೇತಿಯಾಯಿತು. ಹೊಸ ಪಾಠಪಟ್ಟಿ ಯನ್ನು ಹೈಸ್ಕೂಲ್ ಶಿಕ್ಷಣದ ಭಾಗದೊಂದಿಗೆ ಮತ್ತು ಎರಡನೇ ವರ್ಷದಲ್ಲಿ ವೃತ್ತಿಪರ ಪಾಠಗಳನ್ನು ಇದಕ್ಕೆ ನಿಗದಿ ಪಡಿಸಲಾಯಿತು.

ಟ್ರೈನಿಂಗ್ ಶಾಲೆಯು ಸರಕಾರದಿಂದ ಮದರಾಸು ಪ್ರೆಸಿಡೆನ್ಸಿಯ ಅಧೀನತೆಯಲ್ಲಿ 50% ಅನುದಾನ ಪಡೆಯುತ್ತಿತ್ತು. 1956ರಲ್ಲಿ ರಾಜ್ಯಗಳ ಪುನರ್‌ವಿಂಗಡಣೆಯಾದಾಗ, ಅದೇ ಅನುದಾನವನ್ನು 1971ರ ವರೆಗೆ ಮೈಸೂರು ಸರಕಾರವು ಮುಂದುವರೆಸಿತು, ನಂತರ ಟೀಚರ್ಸ್ ಟ್ರೈನಿಂಗ್ ಶಾಲೆಗಳ ಶಿಕ್ಷಕರಿಗೆ ನೇರವಾಗಿ ಸಂಬಳ ಪಾವತಿಸುವ ಕ್ರಮ ಜಾರಿಗೆ ಬಂತು. ಮದರ್ ತೆದೋಸಿಯಾರವರು ಅಪೋಸ್ತೊಲಿಕ ಕಾರ್ಮೆಲ್‌ನ ಮದರ್ ಸುಪೀರಿಯರ್ ಆಗಿದ್ದಾಗ ಬೇಸಿಕ್ ಟ್ರೈನಿಂಗ ಶಾಲೆ ಮತ್ತು ಹಾಸ್ಟೆಲ್ ಒಂದೇ ಮಹಡಿಯ ಕಟ್ಟಡದಲ್ಲಿ ನಡೆಸಬಹುದು ಎಂಬ ಉದ್ದೇಶದಿಂದ ಹೊಸ ಕಟ್ಟಡಗಳಿಗೆ MISEREOR ರಿಂದ ನೆರವು ಪಡೆದುಕೊಂಡರು. 1981ರಲ್ಲಿ ಒಂದು ಮಹಡಿಯ ಕಟ್ಟಡ CEBEMO ನೆರವಿನಿಂದ ಮತ್ತು ಹೆಚ್ಚಿನ ನೆರವು MISEREOR ನಿಂದ ದೊರಕಿಸಿಕೊಂಡು ನಿರ್ಮಿಸಲಾಯಿತು

ಶಿಕ್ಷಣ ಇಲಾಖೆಯಿಂದ ಎಲ್ಲಾ ಪ್ರೈಮರಿ ಟ್ರೈನಿಂಗ್ ಶಾಲೆಗಳಿಗೆ "Teacher's Training Institute" (TTI) ಎಂದು ಹೆಸರು ಬದಲಾಯಿಸಿಕೊಳ್ಳಬೇಕೆಂದು ಸೂಚನೆ ಬಂದುದರಿಂದ 1976ರಲ್ಲಿ Basic Training School ಎಂಬ ಹೆಸರನ್ನು ಬದಲಾಯಿಸಲಾಯಿತು. 1960ರಿಂದ 1975ರ ವರೆಗೆ ಟ್ರೈನಿಂಗ್ ಶಾಲೆ ಕಡ್ಡಾಯವಾಗಿ ವಸತಿ ಶಾಲೆಯಾಗಿರಬೇಕಾಗಿದ್ದುದು ಶಾಲೆಯ ಕ್ರಮನಿಯಮಗಳು ಬದಲಾದುದರಿಂದ ಶಾಲೆಯಲ್ಲಿ ವಸತಿ ಬಯಸುವುದು ಐಚ್ಛಿಕವಾಯಿತು. ಟ್ರೈನಿಂಗ್ ವಿಭಾಗ ಆರಂಭವಾದ ದಿನದಿಂದ ಇಲ್ಲಿ ತರಬೇತು ಪಡೆದ ಶಿಕ್ಷಕರು ಭಾರತದ ಮೂಲೆ ಮೂಲೆಗಳಿಗೂ ಮಾತ್ರವಲ್ಲದೆ ವಿದೇಶಗಳಿಗೂ ತೆರಳಿದರು. ಈ ಸಂಸ್ಥೆ ಎಲ್ಲಾ ಧರ್ಮೀಯರ ಶಿಕ್ಷಣ ಅಗತ್ಯತೆಗಳನ್ನು ಪೂರೈಸಿದು ದಕ್ಷಿಣ ಭಾರತದಲ್ಲಿ ಪ್ರಥಮ ಎಂಬ ಹೆಗ್ಗಳಿಕೆ ಪಾತ್ರವಾಗಿದೆ.

ಅಂದಿನ ದಿನಗಳಲ್ಲಿ ಇಲ್ಲಿನ ಶಿಕ್ಷಣ ವಿಧಾನದಿಂದ ಮತ್ತು ತರಬೇತಿ ಹೊಂದಿದ ಹೆಚ್ಚಿನವರು ಜಿಲ್ಲೆಯಾದ್ಯಂತ ಅಪೊಸ್ತೊಲಿಕ್ ಕಾರ್ಮೆಲ್ ಸಂಸ್ಥೆಯಲ್ಲಿ ಶಿಕ್ಷಕ ವೃತ್ತಿಯಲ್ಲಿ ತೊಡಗಿದ್ದುದರಿಂದ ಈ ಸಂಸ್ಥೆಯಲ್ಲಿ

ಸೇರ್ಪಡೆಗೊಳ್ಳುವುದು ಒಂದು ಹೆಮ್ಮೆಯ ವಿಷಯವಾಗಿತ್ತು. ಮಿಸ್ ಮೇರಿ ಎಂ. ಬ್ರಿಟ್ಟೋ ಈ ಸಂಸ್ಥೆಯ ಹಳೆ ವಿದ್ಯಾರ್ಥಿನಿ ಅವಳ ತರಬೇತಿಯ ಕಾಲದ ನೆನಪುಗಳನ್ನು ಬಿಚ್ಚಿ ಹೀಗೆ ವಿವರಿಸುತ್ತಾರೆ

"I had always entertained a keen desire to dedicate my life, to the service of a Teacher from Childhood days. I even conducted classes in the verandah of my home, with imaginary pupil. Soon after my completion of 6th Form at St. Agnes High School, I applied for the Secondary Training at St. Ann's Training School, and my joy knew no bounds when I heard that I had been granted a seat. I lost no time to have the admission form duly filled, with the medical fitness certificate. I joined the Training class on the due date, and found that we were a happy band of 40 students. We had Sr. Philomena, as our Training Mistress, along with Sr. Aimee and Sr. Claudia to handle subjects like Administration and English. How can I ever forget her, especially when she coached me for long dramas like "The School of Sorrow"- "Hound of Heaven" and Folk Songs like Misery Farm.Mr. P. Venkat Rao was Mathematics and Science method Teacher. A tall lanky gentlemen with pleasant cheerful face-full of wit and humour. Mr Ramappa was a cricketer cum drawing Instructor. Mr. Vajra Alfred the Coach who trained the students for Throw-ball, Net-Ball, Inter-school Tournaments. There were also 2 religious teachers, Rev. Fr. Sylvester Menezes and Rev. Fr. E.L.Mathias, who guided for the spiritual needs and good ideal honest teachers.. Their guidance helped me to impart valuable teaching to my students during the long tenure of service of 33 years 4 months from 1943 to 1976"[45] , ಎಂದು ಇಲ್ಲಿನ ಶಿಕ್ಷಣ ವಿಧಾನವನ್ನು ಹೊಗಳುತ್ತಾರೆ.

ಇನ್ನೊಬ್ಬ ಹಳೆ ವಿದ್ಯಾರ್ಥಿನಿ ಶ್ರೀಮತಿ ವೇಡ ಸಿಲ್ವ (ಹಳೆ ವಿದ್ಯಾರ್ಥಿನಿ 1948–1950) ಹೇಳುತ್ತಾರೆ:

"I consider my training days as some of the brightest of my life. How thrilling it is, to recollect those 2 years of training. At that time when education was a rare opportunity and when people were surrounded by ignorance and backwardness the Apostolic Carmel nuns managed to spread its light through this Training Institute. Those were the days where there was inadequate transport. The teaching staff was quite competent and the teaching sessions were quite absorbing. There were varieties of cultural activities and various literary activities, group discussions, work experience which kept the students very busy. The training was strict and at the same time enabled me to develop myself as a teacher in Rosario Primary School and St. Ursula Primary School and I selected this noble profession as a challenge and a livelihood. I am grateful to the members of the staff, - Sr. Philomena, Sr. Gabrielle, Sr. Dorothy.

ಶಿಕ್ಷಕ ತರಬೇತಿ ವಿಭಾಗದಲ್ಲಿ ಅಪೊಸ್ಟೊಲಿಕ್ ಕಾರ್ಮೆಲ್‌ನ ಸೇವೆ ಇತರ ಪ್ರದೇಶಗಳಿಗೂ ಬೇರೆ ಬೇರೆ ರೀತಿಯಲ್ಲಿ ಹಬ್ಬಿತು. 1941ರಲ್ಲಿ ಅಂಗ್ಲ ಮಾಧ್ಯಮದೊಂದಿಗೆ ಕಣ್ಣಾನೂರಿನ ಸೈಂಟ್ ಥೆರೆಸಾಸ್ ಆಂಗ್ಲೊ-ಇಂಡಿಯನ್ ಟ್ರೈನಿಂಗ್ ಶಾಲೆ ಮದರ್ ಜೊಸೆಫಿನ್‌ರವರಿಂದ ಸ್ಥಾಪಿಸಲ್ಪಟ್ಟಿತು. ಇದು ಆರಂಭದಿಂದಲೂ ಶಿಕ್ಷಕರನ್ನು ಉನ್ನತವಾಗಿ ತರಬೇತು ನೀಡಿ ಎಲ್ಲೆಡೆ ಕಳುಹಿಸುವಲ್ಲಿ ನಿರತವಾಗಿತ್ತು.

1942ರಲ್ಲಿ ಒಟ್ಟಪಾಳಂನಲ್ಲಿ of Lady Immaculate Convent of the Apostolic Carmel ಆವರಣದಲ್ಲಿ Lady SankaranNair Teacher's Training Institute ಎಂಬ ಸಂಸ್ಥೆ ಮಲಯಾಳಂ ಮಾಧ್ಯಮದಲ್ಲಿ ಸ್ಥಾನೀಯ ಭಾಷೆಯು ಶಿಕ್ಷಣ ಮಾಧ್ಯಮವಾಗಿರಬೇಕು ಎಂಬ ಸರಕಾರದ ಶಿಕ್ಷಣ ನೀತಿಯಾಗಿದ್ದುದರಿಂದ ಆರಂಭವಾಯಿತು. ಅರಂಭದಿಂದಲ್ಲೂ ಈ ಸಂಸ್ಥೆಗಳು ಉತ್ತಮ ಕೆಲಸವನ್ನು ನಿರ್ವಹಿಸುತ್ತಿದ್ದುದರಿಂದ ಪ್ರಶಂಸೆಯನ್ನು ವ್ಯಕ್ತ ಪಡಿಸಿ ಪ್ರಧಾನ ಕಾರ್ಯದರ್ಶಿ ಮತ್ತು ಕೇಂದ್ರ ಸರಕಾರದ ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ಸಹಕಾರ ಇಲಾಖೆಯ ಗೌರವಾನ್ವಿತ ಸಚಿವೆಯಾಗಿದ್ದ ಶ್ರೀಮತಿ ಮನೋರಮಾ ಮದ್ವರಾಜ್‌ರವರು ಹೀಗೆ ಹೇಳುತ್ತಾರೆ:

"The high percentage of literacy in Dakshina Kannada District can be attributed to the main role played by the Catholic and Christian educational institutions; and St. Ann's Teachers Training Institute for Women, Mangalore, has served in the educational sphere in a unique way by training teachers of exemplary caliber who have raised our District to the level of highly advanced District in the State and the West Coast of India"

ಕಮಿಷನರ್ ಫಾರ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಆಗಿದ್ದ ಶ್ರೀ ಎಂ. ಎಲ್. ಚಂದ್ರಕೀರ್ತಿ ಐ.ಎ.ಎಸ್. ರವರು ಶತಮಾನೋತ್ಸವ ಸಮಾರಂಭದಲ್ಲಿ *"This Training Institute has been pioneering in the field of education for the past 100 years. This is a remarkable and appreciable achievement"* ಎಂದು ಹೇಳುತ್ತಾರೆ.

ಈ ಸಂಸ್ಥೆ ಕೇವಲ ಪ್ರತಿಷ್ಠಿತ ಶಿಕ್ಷಕರನ್ನು ತಯಾರು ಮಾಡಿರುವುದಲ್ಲ, ನೂರಾರು ಬ್ಯಾಚ್‌ನ ಯುವ ಮಹಿಳೆಯರನ್ನು ಪರಿಣಾಮಕಾರಿ ಶಾಲಾ ಶಿಕ್ಷಕರಾಗಿ ದೇಶದಾದ್ಯಂತ ಸೇವೆ ಸಲ್ಲಿಸಲು ಮಾತ್ರವಲ್ಲದೆ ಉತ್ತಮ ತಾಯಂದಿರನ್ನು, ಉತ್ತಮ ಪತ್ನಿಯರನ್ನು ಮತ್ತು ವಿವಿಧ ಧಾರ್ಮಿಕ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸತಕ್ಕ ಭಗಿನಿಯರನ್ನು ತಯಾರಿಸಿದೆ. 100 ವರ್ಷಗಳಿಗಿಂತಲೂ ಅಧಿಕ ಈ ಸಂಸ್ಥೆ 3,300 ಶಿಕ್ಷಕರನ್ನು ತರಬೇತುಗೊಳಿಸಿ ಅವರು ಈಗ ದೇಶದ ಮತ್ತು ವಿದೇಶದ ವಿವಿಧ ಭಾಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಸಂಸ್ಥೆಯ ಸಾಧನೆ

ಕೇವಲ ಬಹಳಷ್ಟು ಕಾಲ ಏಳಿಗೆಗಾಗಿ ನಿರಂತರ ಅಭಿವೃದ್ಧಿಯನ್ನು ಪಡೆದಿರುವುದಲ್ಲ ಬದಲಾಗಿ ವಿವಿಧ ಹಂತಗಳಲ್ಲಿ ಬದಲಾಗುತ್ತಿರುವ ಅಗತ್ಯತೆಗಳಿಗೆ ಅನುಸಾರವಾಗಿ ಬದಲಾವಣೆ ಮಾಡಿಕೊಂಡು ಮುಂದುವರಿದಿರುವುದೇ ಆಗಿದೆ.

4.6 ಸೈಂಟ್ ಆನ್ಸ್ ಕಾಲೇಜ್ ಆಫ್ ಎಡುಕೇಶನ್

ಶಿಕ್ಷಣ ಅಪೋಸ್ತೊಲಿಕ್ ಸಭೆ ಎಂದು ಮುಖ್ಯ ನಿಯೋಗವಾಗಿದ್ದುದರಿಂದ, ಶಿಕ್ಷಕರ ತರಬೇತಿ ಯಾವಾಗಲೂ ಅವರ ಒಂದು ವಿಶೇಷ ನಿಯೋಜಿತ ಸೇವೆಯಾಗಿತ್ತು. ಈ ಕಾರಣದಿಂದ ಅವರು ಆ ಒಂದೇ ಸಂಸ್ಥೆಗೆ ಸೇವೆಯನ್ನು ಸೀಮಿತಗೊಳಿಸಲಿಲ್ಲ. ಸೈಂಟ್ ಆನ್ಸ್ ಶಾಲಾ ವಠಾರದಲ್ಲಿಯೇ, 1943ರಲ್ಲಿ ಪದವಿ ಶಿಕ್ಷಕರ ತರಬೇತಿಯ ಹೊಸ ವಿಭಾಗವನ್ನೂ ಆರಂಭಿಸಿದರು. ಮದರ್ ಜೊಸೆಫಿನ್ ಇದರ ಯೋಜನಾ ಕರ್ತರಾಗಿದ್ದರು ಮತ್ತು ಸಿಸ್ಟರ್ ಗೆರ್ಟ್ರೂಡ್‌ರವರ ಸಹಕಾರದೊಂದಿ ದಿವಂಗತ ಸಿಸ್ಟರ್ ಕ್ಲಾರಿಸ್ಸಾ[46] ಇದರ ಪ್ರಾರಂಭಕ್ಕೆ ಕಾರಣರಾಗಿದ್ದು ಇವರು ತರಬೇತುಗೊಳಿಸಿದ ಪ್ರಥಮ ಪಥವೀಧರರಲ್ಲಿ ಮತ್ತೆ ಸಭೆಗೆ ಸೇರ್ಪಡೆಗೊಂಡ ಸಿಸ್ಟರ್ ಬೆರೆನೈಸ್, ಸಿಸ್ಟರ್ ಕೇರೊಲ್ ಮತ್ತು ಸಿಸ್ಟರ್ ವೆಲೇರಿಯಾ ಇವರಾಗಿದ್ದರು.

ಹಿನ್ನೆಲೆ:

ಮದರಾಸು ವಿಶ್ವವಿದ್ಯಾಲಯದ ಉಪ ಕುಲಪತಿಗಳಾಗಿದ್ದ ಹಾಗೂ ನಂತರ ಮುದಲಿಯರ್ ಶಿಕ್ಷಣ ಕಮಿಷನ್ (1952–1983) ಇದರ ಅಧ್ಯಕ್ಷರಾಗಿದ್ದ ಡಾ। ಲಕ್ಷಣ್‌ಸ್ವಾಮಿ ಮುದಲಿಯರ್, ಉನ್ನತ ಅಧಿಕಾರಿಗಳೊಡನೆ ಸೈಂಟ್ ಆನ್ಸ್‌ಗೆ 5 ಮಾರ್ಚ್ 1943ರಂದು ಭೇಟಿ ನೀಡಿದಾಗ ಸೈಂಟ್ ಆನ್ಸ್ ಟ್ರೈನಿಂಗ್ ಕಾಲೇಜಿನ ಇಲಾಖಾ ಸಂಯೋಜನೆಗೆ ಪರಿಶೀಲನಾ ಸಮಿತಿಯ ಅಧ್ಯಕ್ಷರಾಗಿ ಹೀಗೆ ಉದ್ಘರಿಸುತ್ತಾರೆ: “If your secondary trained teachers are so good, how much better your graduate trained teachers will be!”, ಮದರಾಸು ಪಟ್ಟಣದ ಹೊರಗೆ, ಪಶ್ಚಿಮ ಕರಾವಳಿಯುದ್ದಕ್ಕೂ ಮದರಾಸು ಪ್ರೆಸಿಡೆನ್ಸಿಯ ಅಧೀನದ ಟ್ರೈನಿಂಗ್ ಕಾಲೇಜುಗಳಲ್ಲಿ ಈ ಟ್ರೈನಿಂಗ್ ಕಾಲೇಜು ಖಾಸಗೀ ಟ್ರೈನಿಂಗ್ ಕಾಲೇಜುಗಳಲ್ಲಿ ಮತ್ತು ಮೈಸೂರು ಹಾಗೂ ಬೆಳಗಾಂನಲ್ಲಿರುವ ಸರಕಾರಿ ಟ್ರೈನಿಂಗ್ ಕಾಲೇಜುಗಳ ನಂತರ ಪ್ರಥಮ ಕಾಲೇಜು ಮತ್ತು ಮಹಿಳೆಯರ ತರಬೇತಿಯ ಒಂದೇ ಕಾಲೇಜು ಆಗಿದೆ.[47]

ಸೈಂಟ್ ಆನ್ಸ್ ಕಾಲೇಜ್ ಆಫ್ ಎಜುಕೇಶನ್‌ನ ಚರಿತ್ರೆ 1943ರಲ್ಲಿ ಆರಂಭವಾಗಿಲ್ಲ. 1927ರ ಪೂರ್ವದಲ್ಲಿಯೇ ಮಹಿಳೆಯರಿಗೆ ಪಧವಿ ಟ್ರೈನಿಂಗ್ ಕಾಲೇಜು ಆರಂಭಿಸುವ ಯೋಚನೆ ಇಂದಿನ ಅಪೊಸ್ತೋಲಿಕ್ ಕಾರ್ಮೆಲ್‌ನ ಸುಪೀರಿಯರ್ ಜನರಲ್ ಆಗಿದ್ದ, ಮದರ್ ಜೊಸೆಫಿನ್‌ರವರಿಗಿದ್ದು ಅವರು ಮದರಾಸಿನ ಶಿಕ್ಷಣ ನಿರ್ದೇಶಕರಿಗೆ ಅರ್ಜಿ ಸಲ್ಲಿಸಿದ್ದರು. ಸೌತ್ ಕೆನರಾದಲ್ಲಿ ಮಹಿಳಾ ಶಿಕ್ಷಣವನ್ನು 1870ರಲ್ಲಿ ಅಪೊಸ್ತೋಲಿಕ್ ಕಾರ್ಮೆಲ್ ಹಮ್ಮಿಕೊಂಡಿದ್ದು, ಪ್ರೈಮರಿ ಶಿಕ್ಷಣಕ್ಕೆ ಶಿಕ್ಷಕರ ತರಬೇತಿ ಸಂಸ್ಥೆ 1890ರಲ್ಲಿ ಸ್ಥಾಪಿಸಲ್ಪಟ್ಟಿತು, ಪ್ರೈಮರಿ ಮತ್ತು ಹೈಸ್ಕೂಲು ಶಿಕ್ಷಣ ಸೌತ್ ಕೆನರಾದಿಂದ ದೇಶದ ಇತರ ಭಾಗಗಳು ಮತ್ತು ಸಿಲೋನ್‌ಗೆ ಪಸರಿಸಿತು. ಒಂದು ಪ್ರಥಮ ದರ್ಜೆ ಕಾಲೇಜು, ಅಂದರೆ, ಸೈಂಟ್ ಆಗ್ನೆಸ್ ಕಾಲೇಜು 1921ರಲ್ಲಿ ಸ್ಥಾಪನೆಯಾಯಿತು. ಹೆಚ್ಚುತ್ತಿರುವ ಪ್ರೌಢ ಶಾಲೆಗಳಿಗೆ ನಿರ್ಭಂದಗಳಿಂದ ಮಹಿಳೆಯರು ತರಬೇತಿಗಾಗಿ "ದೂರದ" ಮದರಾಸಿಗೆ ಹೋಗಲು ಅಸಾಧ್ಯವಾದುದರಿಂದ ತರಬೇತು ಹೊಂದಿದ ಶಿಕ್ಷಕರ ಅಗತ್ಯತೆ ಕಂಡು ಬಂತು. ನಮ್ಮ ಕಾಲೇಜಿನ ಬರೀ ಪಧವೀದರರು ಇತರ ಶಿಕ್ಷಕರೊಂದಿಗೆ ಹೈಸ್ಕೂಲಿಗೆ ಪಾಠ ನಡೆಸಲು ಲಭ್ಯವಿದ್ದರು ಎಂದು ಮನಗಂಡರು. ಆದರೆ ಸರಕಾರದಿಂದ ಈ ಪ್ರಯತ್ನಕ್ಕೆ ಹಿನ್ನೆಡೆಯಾಯಿತು.

ಕೊನೆಗೆ, 1943ರ ಆರಂಭದಲ್ಲಿ D.P.I ಆಗಿದ್ದ Mr. Statham ಅವರು ಮಂಗಳೂರು ನಗರದಲ್ಲಿದ್ದಾಗ ಒಂದು ಅವಕಾಶ ಒದಗಿ ಬಂತು. ಅವರು ಟ್ರೈನಿಂಗ್ ಕಾಲೇಜನ್ನು ನೋಡಿ, ಅಗತ್ಯತೆಯನ್ನು ಮನಗಂಡರು. ವಿಶ್ವವಿದ್ಯಾಲಯ ಕಮಿಷನ್ ಭೇಟಿ ನೀಡಿ 4 ಏಪ್ರಿಲ್ 1943 ರಂದು ಶಿಫಾರಸ್ಸನ್ನು ಒಳಗೊಂಡ ವರದಿ ಸಲ್ಲಿಸಿದ್ದರಿಂದ ಔಪಚಾರಿಕ ಅನುಮತಿ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ರವರಿಂದ ನೀಡಲ್ಪಟ್ಟಿತು. ಇದನ್ನು ತಂತಿ ಸಂದೇಶದ ಮೂಲಕ 2 ಜೂನ್ 1943ರಂದು ಫಾ। ಜೆರೋಮ್ ಡಿ'ಸೋಜ ಎಸ್.ಜೆ., ಇವರು ನೀಡಿದರು.

ಹೀಗೆ 1 ಜುಲೈ 1943ರಂದು ಉದ್ಘಾಟನೆಯನ್ನು ವಿಶೇಷ ಪ್ರಾರ್ಥನಾ ಕೂಟದೊಂದಿಗೆ ನೆರವೇರಿಸಲಾಯಿತು. ತರಗತಿಯನ್ನು ಪ್ರಸ್ತುತ ಹೈಸ್ಕೂಲ್‌ನ ಸೈಯನ್ಸ್ ಬ್ಲಾಕ್‌ನಲ್ಲಿ ಔಪಚಾರಿಕವಾಗಿ ಉದ್ಘಾಟಿಸಿದ ಮಂಗಳೂರಿನ ಧರ್ಮಾಧ್ಯಕ್ಷರಾಗಿದ್ದ ರೈಟ್ ರೆವೆ. ಡಾ। ವಿಕ್ಟರ್ ಫೆರ್ನಾಂಡಿಸ್ ಅವರ ಮಾತುಗಳು ಮಂಗಳೂರಿನ ಮಹಿಳೆಯರಿಗೆ ಮತ್ತು ಅಪೋಸ್ತೋಲಿಕ್ *ಕಾರ್ಮೆಲಿಗರಿಗೆ ಅಚ್ಚಳಿಯದೆ ಉಳಿಯುವ ಗೌರವವಾಗಿದೆ. ಅವರು ಟ್ರೈನಿಂಗ್ ಕಾಲೇಜನ್ನು ಉದ್ಘಾಟಿಸುತ್ತಾ:*

"....Womenhood was always subject to man. The Catholic Church emancipated woman and raised her up to the level of man. But while women made progress in Western Countries, the Indian Women are still in the background... We, men (the Rev. Fr. Rector of St. Aloysius College, here), may feel a little envious that women have secured this institution before the men; but we don't

envy you. On the contrary, we congratulate you because you have gone ahead of us." ಪ್ರಶಂಸೆಯ ಮಾತುಗಳನ್ನಾಡಿದರು.

ಸಾರ್ವಜನಿಕರಿಗೆ ಅವಕಾಶ ನೀಡಲ್ಪಟ್ಟಾಗ ಪ್ರಕಟಣೆ ನೀಡದೆ 47 ಅರ್ಜಿಗಳು ಬಂದವು. ಅದರಲ್ಲಿ ಕೇವಲ 20 ಅಭ್ಯರ್ಥಿಗಳನ್ನು L.T (Licentiate in Teaching) ಪದವಿಗೆ ಮದರಾಸು ವಿಶ್ವವಿದ್ಯಾಲಯದ ಪಧವಿ ತರಗತಿಗೆ ಆಯ್ಕೆ ಮಾಡಲಾಯಿತು. ಇದು ಅಭಿವೃದ್ಧಿಯಾಗಿ ಪ್ರಸ್ತುತ 100 ಅಭ್ಯರ್ಥಿಗಳನ್ನು ಸೇರಿಸಿಕೊಳ್ಳಲಾಗುತ್ತಿದೆ. ಕಳೆದ 76 ವರ್ಷಗಳ ಅವಧಿಯಲ್ಲಿ 5,000 ವಿದ್ಯಾರ್ಥಿಗಳು ಈ ಸಂಸ್ಥೆಯಿಂದ ಹೊರಬಂದಿದ್ದಾರೆ. ನಂತರ 1950ರಲ್ಲಿ L.T. ಪದವಿ B.T (Bachelor of Teaching) ಪದವಿಯಾಗಿ ಬದಲಾಗಿ 1957ರಲ್ಲಿ ರಾಜ್ಯ ಮರುವಿಂಗಡನೆಯಿಂದಾಗಿ ಕಾಲೇಜು ಮೈಸೂರು ವಿಶ್ವವಿದ್ಯಾಲಯದ ಅಧೀನತೆಗೆ ಬಂದಿತು ಹಾಗೂ ಪದವಿ B.Ed ಎಂದು ಪರಿಗಣಿತವಾಯಿತು. ಅಂತೆಯೇ ಶಾಲೆಯ ಹೆಸರೂ "Saint Ann's College of Education". ಎಂದು ಬದಲಾಯಿಸಲ್ಪಟ್ಟಿತು. 1974ರಲ್ಲಿ ಕರ್ನಾಟಕ ಸರಕಾರದಿಂದ ಕಾಲೇಜಿಗೆ ಶಾಶ್ವತ ಮಾನ್ಯತೆ ದೊರೆಯಿತು. 1980 ರಿಂದ ಮಂಗಳೂರು ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದುದರಿಂದ ಈ ಕಾಲೇಜು ಕೂಡಾ ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿತು. ಸ್ವರ್ಣ ಮಹೋತ್ಸವದ ಆರಂಭದ ದಿನದಲ್ಲಿ ಕಾಲೇಜು ಒಂದು ಹೆಜ್ಜೆ ಮುಂದೆ ಹೋಗಿ M.Ed Course ಅಳವಡಿಸುವುದರೊಂದಿಗೆ ಸ್ನಾತಕೋತ್ತರ ಶಿಕ್ಷಕ ತರಬೇತಿ ಕಾಲೇಜು ಆಗಿ ಪರಿವರ್ತನೆ ಹೊಂದಿತು. ಸಿಸ್ಟರ್ ಎಂ. ಕ್ಲಾರಿಸ್ಸಾ ಎ.ಸಿ. ಅವರು ಕಾಲೇಜಿನ ಪ್ರಥಮ ಪ್ರಾಂಶುಪಾಲೆಯಾಗಿದ್ದರು.

ಕಾಲೇಜು ಇಂದಿನ ಹಂತಕ್ಕೆ ಏರಲು ಸೇವೆ ಸಲ್ಲಿಸಿದ ಪ್ರಾಂಶುಪಾಲರುಗಳ ಪ್ರೀತಿಯುತ ಸೇವೆ, ನಾಯಕತ್ವ ಮತ್ತು ದಿಟ್ಟತನದಿಂದ ಸಾಧ್ಯವಾಗಿದೆ. 1943-44ರ ಸಾಲಿನ ಸಿಬ್ಬಂದಿಗಳಲ್ಲಿ ಪ್ರೊ ಬಿ. ಭವಾನಿ ರಾವ್ ಇವರೂ ಕಾರಣರಾಗಿದ್ದು ಇವರು ಕೇವಲ ರಾಷ್ಟ್ರೀಯ ಮಟ್ಟದಲ್ಲಿ ಹೆಸರಾಂತ ಶಿಕ್ಷಣ ತಜ್ಞರಾಗಿರದೆ NCERT ಮತ್ತು ಬೇರೆ ಬೇರೆ ರಾಷ್ಟ್ರೀಯ ಶಿಕ್ಷಣ ಫೋರಂಗಳಲ್ಲಿ ಈ ಸಂಸ್ಥೆಯ ಶಿಕ್ಷಣ ಮಟ್ಟದ ಕುರಿತಾಗಿ ಪ್ರಶಂಸೆ ಮಾಡುತ್ತಾ ಕಾಲೇಜಿನ ರಾಯಭಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಮಿಸ್ ಆನಿ ಪಿಂಟೋ ಕಾಲೇಜು ಆರಂಭಿಸಿದ ದಿನದಿಂದಲೂ 1976ರಲ್ಲಿ ರೀಡರ್ ಇನ್ ಎಡುಕೇಶನ್ ಆಗಿ ನಿವೃತ್ತರಾಗುವ ವರೆಗೆ 23 ವರ್ಷ ಸೇವೆ ಸಲ್ಲಿಸಿದ್ದರು. ಮಿಸ ಜೆಸ್ಸಿ ವಾಸ್ ಕ್ಲರ್ಕ್ ಆಗಿ ಆರಂಭದ ದಿನಗಳಿಂದಲೂ ಸೇವೆ ಸಲ್ಲಿಸಿ 1988ರಲ್ಲಿ ನಿವೃತ್ತರಾಗುವ ವರೆಗೆ ಹೆಡ್ ಕ್ಲರ್ಕ್ ಆಗಿ ಸೇವೆ ಸಲ್ಲಿಸಿದರು.

ಸೆಕೆಂಡರಿ ಎಜುಕೇಶನ್ ಕಮಿಶನ್ ನ ಶಿಫಾರಸ್ಸಿನಂತೆ 1952–53ರಲ್ಲಿ ಟ್ರೈನಿಂಗ್ ಕಾಲೇಜುಗಳು ಸೇವೆಯನ್ನೊಳಗೊಂಡ ತರಬೇತಿ ಹೊಂದಿರಬೇಕಾಯಿತು. The All India Council for Secondary Education ಈ ಕಾಲೇಜನ್ನು ವಿಸ್ತೃತ ಸೇವೆಯ ವಿಭಾಗವಾಗಿ ಪರಿಗಣಿಸಿ 1966ರಲ್ಲಿ ಮೈಸೂರು ರಾಜ್ಯದ ಸೌತ್ ಕೆನರಾ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಚಿತ್ರದುರ್ಗ ಈ ನಾಲ್ಕು ಜಿಲ್ಲೆಗಳ ಸೆಕೆಂಡರಿ ಶಾಲೆಗಳ ಸೇವೆ ನಿರ್ವಹಿಸುವ ಜವಾಬ್ದಾರಿ ವಹಿಸಿತು. ಈ ಕಾಲೇಜು ದೇಶದ 52 ಆಯ್ದ ಕೇಂದ್ರಗಳಲ್ಲಿ ಒಂದಾಗಿದ್ದು ಕೇಂದ್ರ ಸರಕಾರ ಮತ್ತು ಫೋರ್ಡ್ ಫೌಂಡೇಶನ್‌ನ ಧನ ಸಹಾಯ ಮತ್ತು Technical Co-operation Mission of the United States of Americaದ ನೆರವೂ ದೊರೆಯಿತು. ಈ ಕಾರ್ಯಕ್ರಮದ ಉದ್ದೇಶವೇನೆಂದರೆ ಬದಲಾಗದ ಕಠಿಣ ಸ್ಥಿತಿಯಿಂದ ಸಂಪ್ರದಾಯಪಾಲಕ ಕ್ರಮಗಳನ್ನು ಕಾಯ್ದುಕೊಳ್ಳುವುದಾಗಿದೆ.

ಹಳೆ ವಿದ್ಯಾರ್ಥಿಗಳ ಒಕ್ಕೂಟವನ್ನು 1967ರಲ್ಲಿ ಕಾಲೇಜಿನ ರಜತ ಮಹೋತ್ಸವದ ಸ್ಮರಣೆಗಾಗಿ ಸ್ಥಾಪಿಸಲಾಯಿತು. "ಅಲುಮ್ನೈ ಡೇ" ಆಚರಣೆಯಂದು ಹೊರತಂದ ವಾರ್ತಾಪತ್ರಿಕೆ ಪ್ರಸ್ತುತ ವಾರ್ಷಿಕ ಪತ್ರಿಕೆಯಾಗಿದೆ. "St. Ann's Journal of Education" ಇದು ಹೊಸ ಆವಿಷ್ಕಾರಗಳನ್ನು ಮತ್ತು ದೂರದರ್ಶಿತ್ವದ ತಿಳುವಳಿಕೆಯನ್ನು ಪ್ರಕಾಶಗೊಳಿಸುವ ಸಾಧನವಾಗಿದೆ. ಸ್ವರ್ಣ ಮಹೋತ್ಸವದ ಒಂದು ಮುಖ್ಯ ಕಾರ್ಯಕ್ರಮ ರಜತ ಮಹೋತ್ಸವ ಹಳೆ ವಿದ್ಯಾರ್ಥಿಗಳ ಸಮ್ಮಿಲನ ಇದು ಭಾರತದಾದ್ಯಂತ ಮತ್ತು ಪ್ರಪಂಚದ ವಿವಿಧ ಖಂಡಗಳಲ್ಲಿ ಹರಡಿರುವ ವಿವಿಧ ಶೈಕ್ಷಣಿಕ ಸಂಸ್ಥೆಗಳು ಮತ್ತು ಶೈಕ್ಷಣಿಕ ಇಲಾಖೆಗಳಲ್ಲಿ ಉನ್ನತ ಹುದ್ದೆಯಲ್ಲಿ ಮತ್ತು ಇತರ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಹಳಷ್ಟು ಹಳೆವಿದ್ಯಾರ್ಥಿಗಳನ್ನು ಒಂದುಗೂಡಿಸಿತು. ಹಳೆ ವಿದ್ಯಾರ್ಥಿಗಳಲ್ಲಿ 600ಕ್ಕೂ ಅಧಿಕ ವಿವಿಧ ಸಭೆಯಲ್ಲಿ ಸೇವೆ ಸಲ್ಲಿಸುತ್ತಿರುವ ಧಾರ್ಮಿಕ ಭಗಿನಿಯರಿದ್ದಾರೆ. ಈ ಸಭೆಗಳಲ್ಲಿ ಇಂದು ಮುಖ್ಯಸ್ಥರಾಗಿರುವವರು ಇಲ್ಲಿನ ಹಳೆ ವಿದ್ಯಾರ್ಥಿಗಳು.

1951ರಲ್ಲಿ ಕಾಲೇಜು ಹೈಸ್ಕೂಲ್ ಬ್ಲಾಕ್‌ನಿಂದ ಸರಕಾರದ ಅನುದಾನದಿಂದಾಗಿ ಪ್ರತ್ಯೇಖ ಕಟ್ಟಡಕ್ಕೆ ಸ್ಥಳಾಂತರಗೊಂಡಿತು. 1944ರಲ್ಲಿ ರಾಜ್ಯ ಸರಕಾರವು 44 ಸೆಂಟ್ಸ್ ಸ್ಥಳ ಕೊಂಡುಕೊಳ್ಳಲೂ ಕೂಡ ಹಣಕಾಸು ನೀಡಿತು. 1960ರಲ್ಲಿ ಹೆಚ್ಚುವರಿ ತರಗತಿ ನಿರ್ಮಾಣಕ್ಕಾಗಿ ಮತ್ತು ನೀರಿನ ಟ್ಯಾಂಕ್ ನಿರ್ಮಾಣಕ್ಕಾಗಿ ಗಉಉಅ ಅನುದಾನ ನೀಡಿತು. ಹೆಚ್ಚುತ್ತಿರುವ ಮಕ್ಕಳ ಸಂಖ್ಯೆಯನ್ನು ಮನಗಂಡು ಮೇಲ್ಮಹಡಿಯ ಎರಡು ತರಗತಿಗಳ ಮದ್ಯದ ಗೋಡೆಯನ್ನು ಉಪನ್ಯಾಸದ ದೊಡ್ಡ ಹಾಲ್ ಆಗಿ ಪರಿವರ್ತಿಸಲು ತೆರವುಗೊಳಿಸಲಾಯಿತು. 1972ರಲ್ಲಿ UGC ಅನುದಾನದಿಂದ Open-air theatre-cum- NRSC ನಿರ್ಮಾಣ ಮಾಡಲಾಗಿದ್ದು ಎಲ್ಲಾ ವಿಭಾಗಗಳ ಹೆತ್ತವರ ದಿನದ ಆಚರಣೆಯನ್ನು ಈ ತೆರೆದ ರಂಗ ಮಂಟಪದಲ್ಲಿ ನಡೆಸಲಾಗುತ್ತಿತ್ತು. USA ಯಲ್ಲಿ ಮುಖ್ಯ

ಕಛೇರಿ ಹೊಂದಿರುವ The United Board for Christian Higher Education in Asia ಸಂಸ್ಥೆ ಈ ಕಾಲೇಜನ್ನು ಭಾರತದ 16 ಆಯ್ದ ಕಾಲೇಜುಗಳಲ್ಲಿ ಒಂದಾಗಿ ಅಭಿವೃದ್ಧಿ ಯೋಜನೆಗೆ ಸಹಾಯ ಮಾಡಲು ಆರಿಸಿಕೊಂಡಿತು.

ಮೈಸೂರಿನ ಶ್ರೀಮತಿ ಶಶಿಕಲ ಎಂಬ ಉಪನ್ಯಾಸಕಿ ಕಾಲೇಜಿನ ಬಗ್ಗೆ ಅವರ ಅಭಿಪ್ರಾಯಗಳನ್ನು ಹೀಗೆ ವ್ಯಕ್ತ ಪಡಿಸುತ್ತಾರೆ: *"As a new comer in Mangalore meeting Sr. Vincenza (Lecturer 1966-73, Principal 1973-89) was a blessing. Meeting her and talking to her made me feel at home and the place seemed to be so familiar. She filled me with strength and confidence. A person ever ready to plan and research pertaining to the subjects related to Education. When I found myself much younger to the students in age, the simple advice given to me by the principal was to be humble as to teach as if very little students of stand 3 were sitting in right in front of you. Perfectionist by nature, active as a squirrel. Time sense was one of the key factors of the nuns. They were always punctual and dedicated to whatever task at their disposal."*[48]

ಸೈಂಟ್ ಆನ್ಸ್ ಕಾಲೇಜ್ ಆಫ್ ಎಜುಕೇಶನ್ ತನ್ನ 1943ರ ಸ್ಥಾಪನೆಯ ದಿನದಿಂದ ಒಂದು ಪುಸ್ತಕವನ್ನು ರಚಿಸಿದ್ದು ಹೊರಹೋಗುವ ವಿದ್ಯಾರ್ಥಿಗಳಿಗೆ ನೀಡಿ ಅವರಿಂದ "The Autograph" ಪಡೆಯುತ್ತಿದ್ದರು. ಇತರ ಪುಸ್ತಕಗಳಂತೆ ಯಾರಾದರೂ ಕಡಿಮೆ ಕುತೂಹಲದಿಂದ ಚರಿತ್ರೆಯ ಬಗ್ಗೆ ಈ ಪುಸ್ತಕದಲ್ಲಿ ದೃಷ್ಟಿ ಹರಿಸಿದಲ್ಲಿ ಅದು ಮಕ್ಕಳ ಚರಿತ್ರೆ ಮತ್ತು ಹೆಣ್ಣುಮಕ್ಕಳ ಟಿಪ್ಪಣಿಯನ್ನು ಹೊಂದಿದೆ ಎಂದು ಅನಿಸಬಹುದು. ಆದರೆ ಒಬ್ಬ ಅನ್ವೇಷಕ ಮಾತ್ರ ಈ ಪುಸ್ತಕದ ಮಹತ್ವವನ್ನು ಅರಿಯಬಲ್ಲ. ಈ ಸಂಸ್ಥೆಯ ಚರಿತ್ರೆಯ ಅಧ್ಯಯನದ ಸಮಯದಲ್ಲಿ ನನ್ನಲ್ಲಿ ಮೂಡಿದ ಪ್ರಶ್ನೆ ಯಾವ ರೀತಿ ಈ ಸಂಸ್ಥೆ ಇತರ ಆಧುನಿಕ ಸಂಸ್ಥೆಗಳಿಂದ ಭಿನ್ನವಾಗಿದೆ? ಎಂಬುದಾಗಿ ಯಾಕೆ ದೇಶದ ವಿವಿಧ ಭಾಗಗಳಿಂದ ಮಾತ್ರವಲ್ಲದೆ ವಿದೇಶಗಳಿಂದಲೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ಸೇರ್ಪಡೆ ಬಯಸುತ್ತಾರೆ ಇತ್ಯಾದಿಗಳು ಸ್ಪಷ್ಟವಾಗಿತ್ತು.

ದಾಖಲೆಗಳಂತೆ, 1943ರಲ್ಲಿ ಆದ ಸೇರ್ಪಡೆ ಕೇವಲ 20, ಇದರಲ್ಲಿ 4 ಮಂದಿ ಹಿಂದುಗಳು ಮತ್ತು ಉಳಿದವರು ಕೆಥೋಲಿಕರು. ಆಗ ತೆಗೆದಿರುವ ಗ್ರೂಪ್ ಫೋಟೋದಲ್ಲಿ ಅಲ್ಲಿ ಕಲಿಯುತ್ತಿದ್ದ ಬೇರೆ ಸಭೆಯ ಭಗಿನಿಯರು ಅಪರೂಪದಲ್ಲಿ ತಮ್ಮ ಫೋಟೋ ತೆಗೆಯಲು ಅನುಮತಿ ಪಡೆದಿದ್ದರು. ಈ ನಿರ್ಭಂದವನ್ನು 1960ರಲ್ಲಿ ತೆಗೆದು ಹಾಕಲಾಯಿತು. ಅಂದಿನ ವಿದ್ಯಾರ್ಥಿಗಳು ಪ್ರತಿಷ್ಠಿತ ಕುಟುಂಬಗಳಿಂದ ಬಂದವರಾಗಿದ್ದರು ಮತ್ತು ಕೆಲವರು ಹಾಸ್ಟೆಲ್‌ನಲ್ಲಿ ಉಳಿದುಕೊಂಡರು. ಇಲ್ಲಿ ಶಿಕ್ಷಣ ಪಡೆದ ಹೆಣ್ಣುಮಕ್ಕಳು ಮಂಗಳೂರಿನ ಗೌಡ ಸಾರಸ್ವತ ಬ್ರಾಹ್ಮಣ

ಸಮುದಾಯದಿಂದ ಬಂದವರಾಗಿದ್ದರು. ಅವರು ಒಂದೋ ಸೈಂಟ್ ಆಗ್ನೆಸ್ ಕಾಲೇಜಿನ ವಿದ್ಯಾರ್ಥಿಗಳಾಗಿದ್ದರು ಇಲ್ಲವೇ ಇತರ ಮಿಶನರಿ ಕಾಲೇಜು ಮತ್ತು ಪ್ರೆಸಿಡೆನ್ಸಿಯ ಶಾಲೆಗಳಿಂದ ಬಂದವರಾಗಿದ್ದರು.

1944ರಲ್ಲಿಯೂ ವಿದ್ಯಾರ್ಥಿಗಳ ಸಂಖ್ಯೆ 20 ಆಗಿದ್ದು ಅದರಲ್ಲಿ 4 ಮಂದಿ ಹಿಂದುಗಳಾಗಿದ್ದರು. 3 ವಿವಾಹಿತ ಮಹಿಳೆಯರು, ಬಂಟ್ವಾಳದ ಎಚ್. ಸುಶೀಲ ಪ್ರಭು, ಮಂಗಳೂರಿನ ಕಮಲಾ ಬಾಯಿ ಮತ್ತು ತಿರುಚಿನಾಪಳ್ಳಿಯ ಮೇರಿ ಪ್ರಕಾಶಂ ಮೇಲ್ಮಟ್ಟದ ಅಂಕಗಳನ್ನು ಗಳಿಸಿದ್ದರು. ಅಂದಿನ ಕಾಲದಲ್ಲಿ ವಿವಾಹ ಮಹಿಳೆಯರ ಶಿಕ್ಷಣಕ್ಕೆ ಅಂತ್ಯ ಎಂದು ಪರಿಗಣಿಸಲಾಗಿತ್ತು ಮತ್ತು ಮಹಿಳೆಯರಿಗೆ ಉನ್ನತ ಶಿಕ್ಷಣಕ್ಕೆ ಅವಕಾಶ ನೀಡಲಾಗುತ್ತಿರಲಿಲ್ಲ. ಇಲ್ಲಿ ಶಿಕ್ಷಣ ಹೊಂದಿದ ವಿದ್ಯಾರ್ಥಿಗಳು ಸೈಂಟ್ ಆಗ್ನೆಸ್, ಕಪಿತಾನಿಯೋ ಸೆಕೆಂಡರಿ ಟ್ರೈನಿಂಗ್ ಸ್ಕೂಲ್, ಕೆನರಾ ಹೈಸ್ಕೂಲ್ (ಮಂಗಳೂರು), ಹೋಲಿ ರೋಸರಿ ಹೈಸ್ಕೂಲ್ (ಗೋವಾ), ಸೈಂಟ್ ಮೇರೀಸ್ ಸ್ಕೂಲ್ (ಗೋವಾ) ಇಲ್ಲಿ ಶಿಕ್ಷಣ ವೃತ್ತಿಯನ್ನು ಆಯ್ದುಕೊಂಡರು

1945ರಲ್ಲಿ 62ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಸೇರ್ಪಡೆಗಾಗಿ ಅರ್ಜಿ ಸಲ್ಲಿಸಿದ್ದು 20 ಮಂದಿ ಮಾತ್ರ ಸೇರ್ಪಡೆಗೆ ಅರ್ಹತೆ ಪಡೆದರು, ಇವರಲ್ಲಿ 6 ಮಂದಿ ಹಿಂದುಗಳು ಉಳಿದವರು ಕಥೋಲಿಕ್ ಸಮುದಾಯದವರು. ಈ ವರ್ಷ ಒಬ್ಬಾಕೆ ಬಂಟ ಸಮುದಾಯದವರು ಮತ್ತು ಇನ್ನೋಬ್ಬಾಕೆ ನೇಕಾರ ಸಮುದಾಯದವರು ಉನ್ನತ ಶಿಕ್ಷಣವನ್ನು ಬಯಸಿದವರಾಗಿದ್ದರು. ಉಪ್ಪಿನಂಗಡಿಯ ಬಿ. ಶಾರದ ಇವರು ಬಂಟ್ ಸಮುದಾಯದವರಾಗಿದ್ದು ಒಂದು ಲ್ಯಾಂಡ್ ಲಾರ್ಡ್ ಹಾಗೂ ಸೈಂಟ್ ಆಗ್ನೆಸ್‌ನ ಹಳೆ ವಿದ್ಯಾರ್ಥಿನಿಯ ಮಗಳಾಗಿದ್ದಳು. ಈಕೆ ಸೈಂಟ್ ಆನ್ಸ್ ಕಾಲೇಜಿನಿಂದ ತೇರ್ಗಡೆ ಹೊಂದಿದ ಪ್ರಥಮ ಬಂಟ್ ಮಹಿಳೆ ಎಂಬ ಖ್ಯಾತಿ ಹೊಂದಿದಳು. ಬಳಿಕ ಆಕೆ ಮದರಾಸಿನ ಕ್ವೀನ್ಸ್ ಮೇರಿ ಮಹಿಳಾ ಕಾಲೇಜಿನಲ್ಲಿ ಶಿಕ್ಷಕಳಾಗಿ ಸೇವೆ ಸಲ್ಲಿಸಿದಳು. ಉಡುಪಿಯ ಕೆ. ರಾಧಾ ಬಾಯಿ ನೇಕಾರ ಸಮುದಾಯಕ್ಕೆ ಸೇರಿದ ಮೊದಲ ವಿದ್ಯಾರ್ಥಿನಿಯಾಗಿದ್ದು ಈ ಕಾಲೇಜಿನಿಂದ ಉತ್ತೀರ್ಣರಾದರು.

1946ರಲ್ಲಿ 27 ವಿದ್ಯಾರ್ಥಿಗಳು ತರಗತಿಯಲ್ಲಿದ್ದು, ಅವರಲ್ಲಿ 6 ಮಂದಿ ಹಿಂದುಗಳು, ಉಳಿದ ಕಥೋಲಿಕ್ ವಿದ್ಯಾರ್ಥಿಗಳಲ್ಲಿ 8 ಮಂದಿ ಅಪೊಸ್ತೊಲಿಕ್ ಕಾರ್ಮೆಲ್ ಸಭೆಯ ಭಗಿನಿಯರಾಗಿದ್ದರು. ಈ ವರ್ಷದಲ್ಲಿ ವಿದ್ಯಾರ್ಥಿನಿಯರಲ್ಲಿ ಒಬ್ಬರಾಗಿದ್ದ ಈವ್ಲಿನ್ ಪಿರೇರಾ ಮುಂದೆ ಕರ್ನಾಟಕ ಸರಕಾರದ ಆಹಾರ ಮತ್ತು ನಾಗರಿಕ ಪೂರೈಕೆಯ ಗೌರವಾನ್ವಿತ ಸಚಿವೆಯಾಗಿದ್ದರು (1972).

1947ರಲ್ಲಿ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ 20ರಿಂದ 30ಕ್ಕೆ ಏರಿತು, 120 ಅರ್ಜಿಗಳಿದ್ದರೂ ಭಗಿನಿಯರು ಆಯ್ಕೆಮಾಡಿ 30 ಉತ್ತಮ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದರು. 8 ವಿದ್ಯಾರ್ಥಿನಿಯರು ಹಿಂದುಗಳಾಗಿದ್ದು ಉಳಿದವರು ಕಥೋಲಿಕ್ ಸಮುದಾಯದವರಾಗಿದ್ದರು. ಈ ವರ್ಷದಲ್ಲಿ ಒಬ್ಬಾಕೆ ಬಿ.ಎಡ್ ಶಿಕ್ಷಣಕ್ಕೆ ಶ್ರೇಷ್ಠ ಕೊಡುಗೆ ನೀಡುವಷ್ಟು ಪ್ರೌಢಿಮೆ ಹೊಂದಿದ್ದರು. ಅವರೇ ಅತ್ತಾವರದ ಬಟ್ಟೆ ವ್ಯಾಪಾರಸ್ತರು ಮತ್ತು "WINA".[49] ಸಂಸ್ಥೆಯ ಸ್ಥಾಪಕರ ಮಗಳಾದ ಶ್ರೀಮತಿ ಜೆಸ್ಸಿ ಟೆಲ್ಲಿಸ್. ಸ್ಥಾಪನೆಯಾದ 4 ವರ್ಷಗಳ ಒಳಗೆ ಈ ಕಾಲೇಜು ಹೆಚ್ಚು ಹೆಚ್ಚು ವಿದ್ಯಾರ್ಥಿಗಳ ಸೇರ್ಪಡೆಯನ್ನು ಕಂಡಿತು, ಮುಖ್ಯವಾಗಿ ನ್ಯಾಯವಾದಿಗಳ, ವೈದ್ಯರುಗಳು, ಕಾಫಿ ಪ್ಲಾಂಟರ್‌ಗಳ, ಭೂ ಒಡೆಯರು, ಸರಕಾರಿ ಕೆಲಸಗಾರರ, ಪೋಲೀಸ್ ಆಫೀಸರುಗಳು, ಜಿಲ್ಲಾ ಕಲೆಕ್ಟರುಗಳ ಮಕ್ಕಳಾಗಿದ್ದರು. ಹೆಚ್ಚಿನ ಹಿಂದೂ ವಿದ್ಯಾರ್ಥಿಗಳು ಬಳಿಕ ಕೆನರಾ ಹೈಸ್ಕೂಲ್‌ನಲ್ಲಿ ಶಿಕ್ಷಕರಾಗಿ ನೇಮಕಗೊಂಡರು.

150 ಅಭ್ಯರ್ಥಿಗಳು 1949ರಲ್ಲಿ ಸೇರ್ಪಡೆಗಾಗಿ ಕಾದಿದ್ದು, ಇವರಲ್ಲಿ ಕೇವಲ 26 ಮಂದಿಯನ್ನು ಆಯ್ಕೆ ಮಾಡಲಾಯಿತು. ಈ ವರ್ಷದಲ್ಲಿ ಒಬ್ಬಾಕೆ ಹೆಸರಾಂತ ವಿದ್ಯಾರ್ಥಿನಿಯಾಗಿದ್ದವರೇಭಗಿನಿ ಸಿಸ್ಟರ್ ಜೊಸೆಫಿನ್. 1950ರ ನಂತರ ಉನ್ನತ ಶಿಕ್ಷಣದ ಅಪೇಕ್ಷೆ ಹೆಚ್ಚಾದುದರಿಂದ ಅಧಿಕ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಯಿತು. 1953ರಲ್ಲಿ ವಿದ್ಯಾರ್ಥಿಗಳ ಸಂಖ್ಯೆ 27, 1955ರಲ್ಲಿ 55 ವಿದ್ಯಾರ್ಥಿಗಳು ತರಗತಿಯಲ್ಲಿದ್ದರು, 1961ರಲ್ಲಿ 48 ಮತ್ತು ಅದು 1970ರಲ್ಲಿ 40ರಿಂದ 80ಕ್ಕೆ ಏರಿತು.

ಹೀಗೆ ಮಂಗಳೂರು ನಗರದಲ್ಲಿ, ಅಪೋಸ್ತೊಲಿಕ್ ಕಾರ್ಮೆಲ್ ಕಾಂಗ್ರಿಗೇಶನ್‌ನ 15 ಶಿಕ್ಷಣ ಸಂಸ್ಥೆಗಳಿದ್ದವು. ಇವುಗಳಲ್ಲಿ ಹಳೆಯದು 1870ರಲ್ಲಿ ಸ್ಥಾಪಿತವಾಗಿದ್ದು 150 ವರ್ಷಗಳಿಂದ ಮಂಗಳೂರಿನಲ್ಲಿ ಜ್ಞಾನವೃದ್ಧಿಯ ವಾತಾವರಣವನ್ನು ನಿರ್ಮಿಸಿದೆ. ಮಹಿಳಾ ಶಿಕ್ಷಣ ಅವರಿಗೆ ಸಾಕ್ಷರತೆಗಿಂತ ಜೀವನದ ಮೌಲ್ಯಗಳನ್ನು ಕಲಿಸಿ ಹೆಣ್ಣು ಮಗುವಿನ ಸಂಪೂರ್ಣ ಬೆಳವಣಿಗೆಗಾಗಿ ಸೇವೆ ಸಲ್ಲಿಸಿದೆ.

ಸೈಂಟ್ ಆನ್ಸ್ ಗರ್ಲ್ಸ್ ಸ್ಕೂಲ್, ಮಂಗಳೂರು

ಅಪೋಸ್ತೊಲಿಕ ಕಾರ್ಮೆಲ್ ಭಗಿನಿಯರು ಬರುವುದಕ್ಕೆ ಮುಂಚೆ ಈ ಶಾಲೆ ಕಾರ್ಮೆಲೈಟ್ ಬಿಷಪ್ ಮೈಕೆಲ್ ಆಂಟನಿರವರಿಂದ ಆಹ್ವಾನಿಸಲ್ಪಟ್ಟ ಸೈಂಟ್ ಜೋಸೆಫ್ ಆಫ್ ಅಪಾರಿಶನ್‌ನ ಭಗಿನಿಯರ ಕಾಂಗ್ರಿಗೇಶನ್‌ನಿಂದ ನಡೆಸಲ್ಪಡುತ್ತಿತ್ತು. ಈ ಶಾಲೆಯು ಮಂಗಳೂರು ಬಂದರಿನಿಂದ ಸುಮಾರು ಅರ್ಧ ಕಿಲೋಮೀಟರ್ ದೂರದಲ್ಲಿದ್ದ "The Bungalow," ಎಂದು ಕರೆಯಲ್ಪಡುತ್ತಿದ್ದ ಅಂದಿನ ದಿನದಲ್ಲಿ ದೊಡ್ಡ ಕಟ್ಟಡವೆಂದು ಪರಿಗಣಿಸಲ್ಪಟ್ಟಿದ್ದ

ವಿಶಾಲ ಕಟ್ಟಡದಲ್ಲಿ ನಡೆಸಲ್ಪಡುತ್ತಿತ್ತು. ಶಾಲೆ ಮತ್ತು ಕಾನ್ವೆಂಟಿಗೆ ಬಿಷಪರು ಸೈಂಟ್ ಆನ್ಸ್ ಎಂದು ನಾಮಕರಣ ಮಾಡಿದರು. ಭಗಿನಿಯರು ಜಿಲ್ಲೆಗೆ ಮೊದಲನೆಯದೆಂದು ಪರಿಗಣಿತವಾಗಿದ್ದ ಸಣ್ಣ ಶಾಲೆಯನ್ನು ಉತ್ತಮವಾಗಿ ನಡೆಸುತ್ತಿದ್ದರೂ 21 ಜೂನ್ 1866ರಂದು ಕಟ್ಟಡವು ಕುಸಿದುಬಿತ್ತು. ಆದುದರಿಂದ ಬಿಷಪರು ಬೋರ್ಡಿಂಗ್ ಮಕ್ಕಳನ್ನು ಮತ್ತು ಭಗಿನಿಯರನ್ನು ಶಾಲೆಗೆ ಸಮೀಪದಲ್ಲಿದ ಜೆಪ್ಪು ಎಂಬ ಸ್ಥಳದ ಬೇರೆ ಕಟ್ಟಡಕ್ಕೆ ಸ್ಥಳಾಂತರ ಮಾಡಿದರು. ಈ ಭಗಿನಿಯರು 1867ರಲ್ಲಿ ಕಣ್ಣಾನೂರಿಗೆ ತೆರಳಿದ್ದು ಬಿಷಪ್ ಮೈಕೆಲ್ ಆಂಟನಿಯವರಿಂದ ಸ್ಥಾಪಿಸಲ್ಪಟ್ಟ ಕಾಂಗ್ರಿಗೇಶನ್‌ನ ಕಾರ್ಮೆಲೈಟ್ ಟೆರಿಟರಿ ಸಿಸ್ಟರ್ಸ್‌ಗಳು ಈ ಜಬಾಬ್ದಾರಿಯನ್ನು ವಹಿಸಿಕೊಂಡರು. ಮತ್ತು ಒಂದು ಸಾಮಾನ್ಯ 2 ಅಂತಸ್ತುಗಳ ಕಟ್ಟಡವು ಈ ಭಗಿನಿಯರ ವಾಸಕ್ಕಾಗಿ ಕಟ್ಟಲ್ಪಟ್ಟು ಇವರು "The Little Red School" ಎಂದು ಕರೆಯಲ್ಪಡುತ್ತಿದ್ದ ಒಂದು ಕಿರಿಯ ಶಾಲೆಯನ್ನು ನಡೆಸುತ್ತಿದ್ದರು. 1870ರಲ್ಲಿ, ಮೂವರು ಸ್ಥಾಪಕರಲ್ಲಿ ಒಬ್ಬರಾದ ಮದರ್ ವೆರೋನಿಕಾರಿಂದ ತರಬೇತು ಹೊಂದಿದ ಸಿಸ್ಟರ್ ಎಲಿಯಾಸ್ ಎಂಬವರು ಲಿಟ್‌ಲ್ ರೆಡ್ ಸ್ಕೂಲ್‌ನ ಜವಾಬ್ದಾರಿ ವಹಿಸಿಕೊಂಡರು. ಈ ಐರಿಷ್ ಭಗಿನಿಯ ನಿಸ್ವಾರ್ಥ ಮತ್ತು ಪ್ರತಿಷ್ಠೆಯುಳ್ಳ ಸೇವೆ ಅಪೊಸ್ತೊಲಿಕ್ ಕಾರ್ಮೆಲ್ ಸಿಸ್ಟರ್ಸ್‌ರವರ ಶಿಕ್ಷಣ ಸೇವೆಯ ದೀರ್ಘ ಚರಿತ್ರೆಯನ್ನು ಮಂಗಳೂರಿನಲ್ಲಿ ಆರಂಭಿಸಿ ನಂತರ ಭಾರತದಾದ್ಯಂತ ಹಾಗೂ ವಿದೇಶಗಳಿಗೆ ಹಬ್ಬುವಂತೆ ಮಾಡಿದರು.

1874ರಲ್ಲಿ ಹೊಸ ಕಟ್ಟಡ ನಿರ್ಮಾಣವಾಗುವುದರೊಂದಿಗೆ ಸೈಂಟ್ ಆನ್ಸ್ ಶಾಲೆಯು ತೀವ್ರ ಅಭಿವೃದ್ಧಿಯನು ಕಂಡು ವಿದ್ಯಾರ್ಥಿಗಳ ಸಂಖ್ಯೆಯ ಅಭಿವೃದ್ಧಿಯ ಜತೆಗೆ ಪ್ರಶಂಸೆಯನ್ನೂ ಹೆಚ್ಚಿಸಿಕೊಂಡಿತು. ಏಪ್ರಿಲ್ 1878ರಲ್ಲಿ ಶಾಲಾ ಪರಿವೀಕ್ಷಕರಾದ (inspector of Schools) ಶ್ರೀ ಎಲ್. ಗಾರ್ತ್‌ವೈಟ್ *"The St. Ann's Girl's School has always been favorably reported on by me. Its usefulness is unquestionable and is well thought of by all classes of the community in Mangalore. The nuns who teach on the staff have set a most laudable example by passing the literary tests for a Teacher's certificate"* ಎಂಬ ಶಿಫಾರಸ್ಸು ಪತ್ರ ನೀಡಿದರು.

ಈ ಮಧ್ಯೆ ಸೌತ್ ಕೆನರಾ ಮಿಶನ್ ಪ್ರಪಂಚಾದ್ಯಂತ ಶಿಕ್ಷಣ ತಜ್ಞರೆಂದು ಹೆಸರುಗಳಿಸಿದ ಜೆಸ್ವಿಟ್ (ಯೇಸು ಸಭೆಯವರ) ಕೈಗೆ ಒಪ್ಪಿಸಲ್ಪಟ್ಟಿತು. ಮುಂಬಯಿಯ ಸೈಂಟ್ ಮೇರೀಸ್ ಕಾಲೇಜಿನ ರೈಟ್ ರೆವೆ. ಫಾ। ಅರ್ಬನ್ ಸ್ಟೇನ್ ಎಸ್. ಜೆ. ಇವರು ಸೈಂಟ್ ಆನ್ಸ್ ಗರ್ಲ್ಸ್ ಹೈಸ್ಕೂಲ್‌ನ ಮ್ಯಾನೇಜರ್ ಆಗಿ 1879ರಲ್ಲಿ ನೇಮಕಗೊಂಡರು. ಶಾಲೆಗಳು ಸರಕಾರದಿಂದ ಸಂಬಳ ಪಾವತಿಗೆ ಒಳಪಟ್ಟಿತು. ಕಾನ್ವೆಂಟ್‌ಗೆ ಸೇರಿದಂತೆ ಒಂದು ಅನಾಥಾಲಯ (ಸಂಪೂರ್ಣ ಸೈಂಟ್ ಆನ್ಸ್ ಸ್ಕೂಲ್ ನೆರವಿನಿಂದ ನಡೆಸಲ್ಪಡುತ್ತಿದ್ದು 3 ಮಂದಿ ಹಿರಿಯ ಭಗಿನಿಯರು ಪ್ರೆಸಿಡೆನ್ಸಿ

ಸ್ಕೂಲ್ ಆಫ್ ಮಿಸ್ಟ್ರೆಸ್‌ನಿಂದ 1888ರಲ್ಲಿ ಪರೀಕ್ಷೆಯಲ್ಲಿ ಪ್ರಥಮ ಧರ್ಜೆಯಲ್ಲಿ ಉತ್ತೀರ್ಣರಾಗಿ ಅದರಲೂ ಒಬ್ಬರು ತೇರ್ಗಡೆ ಹೊಂದಿದವರಲ್ಲಿ ಪ್ರಥಮರಾಗಿ ಉತ್ತೀರ್ಣರಾಗಿ ಸೇರ್ಪಡೆಯಾದ ಬಳಿಕ 1890ರಲ್ಲಿ ಸರಕಾರದಿಂದ ಸಾಮಾನ್ಯ ತರಬೇತಿ ಶಾಲೆಯಾಗಿ ಅನುಮೋದನೆಗೊಂಡಿತು. ಈ ಶಾಲೆ ಬಳಿಕ 1924ರಲ್ಲಿ ಬೆಂದೂರಿನಲ್ಲಿರುವ ಸೈಂಟ್ ಆಗ್ನೆಸ್ ಸ್ಕೂಲ್‌ಗೆ ಸ್ಥಳಾಂತರಗೊಂಡು ಅದಕ್ಕಾಗಿ ಎರಡು ಮಹಡಿಗಳ ಸುಂದರವಾದ ಕಟ್ಟವು ರೂ.10,000/- ವೆಚ್ಚದಲ್ಲಿ ನಿರ್ಮಾಣಗೊಂಡು ಅದರಲ್ಲಿ ಮೂರನೇ ಒಂದಂಶ ಸರಕಾರದ ಅನುದಾನದಿಂದ ಭರಿಸಲಾಯಿತು.

1884-1888ರಲ್ಲಿ ಸಂಸ್ಥೆಯು ಹೈಸ್ಕೂಲ್ ಆಗಿ ಭಡ್ತಿ ಹೊಂದಿ ಸರಕಾರದ ಮಾನ್ಯತೆ ಹೊಂದಿ ಪ್ರೆಸಿಡೆನ್ಸಿಯ ಇತರ ಸಂಸ್ಥೆಗಳ ಸಾಲಿನಲ್ಲಿ ಪರಿಗಣಿತವಾಯಿತು. ಮೊದಲ ಮೆಟ್ರಿಕ್ ಪರೀಕ್ಷೆಯಲ್ಲಿ ಲೂಯಿಸ್ಸಾ ಕೊಯೆಲ್ಲೊ[50] ಇವರು ಪ್ರೆಸಿಡೆನ್ಸಿ ಮಟ್ಟದಲ್ಲಿ ಮೊದಲ ರ್‍ಯಾಂಕ್ ಗಳಿಸಿರುವುದಕ್ಕೆ "ಕೃಪಾಬಾಯಿ ಸತ್ಯನಾಥನ್" ಬಂಗಾರದ ಪದಕ ಗಳಿಸಿದರು.

ದಿನಾಂಖ 12 ಜುಲೈ 1886ರ ವರದಿಯಲ್ಲಿ ಪರಿವೀಕ್ಷಕರಾದ ಶ್ರೀ ಮಾರ್ಸ್‌ಡಿನ್ ಅವರು ದಾಖಲಿಸಿರುವಂತೆ 1885ರ ವರ್ಷ ಸೈಂಟ್ ಆನ್ಸ್ ಹೈಸ್ಕೂಲ್ ಶಿಕ್ಷಣ ಮೌಲ್ಯ ಮತ್ತು ಮಟ್ಟದಲ್ಲಿ ಅಭಿವೃದ್ದಿಯ ವರ್ಷ ಎಂದು ದಾಖಲಾಯಿತು.

"I have always noticed that accuracy and method were conspicuous in all the written exercises. The English spoken in this school is better, both as to pronunciation and idioms, than I have heard in any schools in South Kanara. The Catholics have a large and flourishing institution which has just reached the grade of a High school, for the higher education of their girls, in addition to a primary school. Generally in discipline and tone the school could not do better. I have not seen another school so well managed, not one where all the subjects were also well taught as at St. Ann's. It really forms a Training school for all the other Catholic girls' school on the West coast" ಎಂಬುದು ವರದಿಯಲ್ಲಿ ಅವರ ಮಾತುಗಳಾಗಿದ್ದವು.

1885ರಲ್ಲಿ ಸೈಂಟ್ ಆನ್ಸ್ ಕೆನರೀಸ್ ಸ್ಕೂಲ್ ಆರಂಭವಾಯಿತು ಮತ್ತು 1887ರಲ್ಲಿ ಡೊಂಗರಕೇರಿಗೆ ಸ್ಥಳಾಂತರಿಸಲ್ಪಟ್ಟು "The Victoria Caste Girl's School"[51] ಎಂದು ಮರುನಾಮಕರಣಗೊಂಡಿತು. ಸೈಂಟ್ ಆನ್ಸ್ ಹೈಸ್ಕೂಲ್ ಮದರ್ ಅಲೋಯ್ಸಿಯಾರವರ ಮುಂದಾಳತ್ವದಲ್ಲಿ ಬೆಳವಣಿಗೆ ಹೊಂದುತ್ತಾ ಬಂತು. ಸ್ವಲ್ಪ ಕಾಲದ ಬಳಿಕ ಹೈಸ್ಕೂಲಿಗೆ ಹೊಸ ಕಟ್ಟಡ ಕಟ್ಟಲ್ಪಟ್ಟಿತು. ನೆಲಮಹಡಿಯಲ್ಲಿ ಒಂದು ಪೋರ್ಟಿಕೋ, ಒಂದು

ತರಬೇತಿ ತರಗತಿ ಮತ್ತು I, II, III, ವರ್ಗಗಳ ಒಂದು ಮಾದರಿ ಶಾಲೆ; ಮೊದಲ ಮಹಡಿಯಲ್ಲಿ 1ರಿಂದ 6 ತರಗತಿಗಳು ಒಳಗೊಂಡಿದ್ದವು. ಮೊದಲ ಜೂನಿಯರ್ ಇಂಟರ್‌ಮೀಡಿಯೆಟ್ ತರಗತಿಯು ಸೈಂಟ್ ಆನ್ಸ್ ಕ್ಯಾಂಪಸ್‌ನಲ್ಲಿ ಒಂದು ಸಣ್ಣ ಮನೆಯಲ್ಲಿ 1920ರಲ್ಲಿ ಆರಂಭವಾಗಿ ಮುಂದೆ ಸೈಂಟ್ ಆಗ್ನೆಸ್ ಕಾಲೇಜ್ ಆಗಿ ಪರಿವರ್ತಿತವಾಯಿತು. 1921ರಲ್ಲಿ ಸೈಂಟ್ ಆನ್ಸ್‌ನ ಆಡಳಿತದಲ್ಲಿ ಒಂದು ತೀವ್ರವಾದ ತಿರುವು ಉಂಟಾಯಿತು. ಮೇಲಿನ ಮೂರು ತರಗತಿಗಳು, ಅಂದರೆ Form IV, V ಮತ್ತು VI ತರಗತಿಗಳು ಬೆಂದೂರ್‌ನ ಸೈಂಟ್ ಆಗ್ನೆಸ್‌ಗೆ ನಿರಂತರ ಮಕ್ಕಳ ಸೇರ್ಪಡೆಗಾಗಿ ಸ್ಥಳಾಂತರಗೊಂಡಿತು. ಇದರಿಂದ ಸೈಂಟ್ ಆನ್ಸ್ ತನ್ನ ತಾಯಿ ಸಂಸ್ಥೆಯ ಒಂದು ಭಾಗ ಕಳಚಿ ಹೋಯಿತು ಎಂಬ ಭಾವನೆಗೆ ಒಳಗಾಯಿತು. 1934ರಲ್ಲಿ ಪ್ರಶಂಸಾತ್ಮಕವಾದ ಅಭಿವೃದ್ಧಿಯೊಂದಿಗೆ ಸೈಂಟ್ ಆನ್ಸ್ ಗರ್ಲ್ಸ್ ಹೈಸ್ಕೂಲ್ ಆಗಿ ಮೇಲ್ದರ್ಜೆಗೇರಿತು. ವಿದ್ಯಾರ್ಥಿಗಳಿಗೆ ಸೈಯನ್ಸ್ ವಿಷಯಗಳ ಕಲಿಕೆಯ ಅಗತ್ಯತೆಗಾಗಿ 1944ರಲ್ಲಿ ಶಾಲೆಯಲ್ಲಿ ಸೈಯನ್ಸ್ ಕ್ಲಬ್ ಆರಂಭಿಸಲಾಯಿತು. "ಕ್ಯೂ" club ಎಂದು ಕರೆಯಲ್ಪಡುತ್ತಿದ್ದ ವಿಭಾಗವು ಮೋಡೆಲ್ ತಯಾರಿ, ಸ್ಪೆಸಿಮೆನ್ ಒಟ್ಟುಗೂಡಿಸುವಿಕೆ, ಶಿಕ್ಷಣಕ್ಕೆ ಹೊಸ ಆವಿಷ್ಕಾರಗಳ ಸೃಷ್ಟಿ ಇತ್ಯಾದಿಗಳನ್ನು ಮಾಡುತ್ತಿತ್ತು. Bharath Girls Guidesನ ಕರ್ನಾಟಕ ವಿಭಾಗದ ಒಂದು ತುಕಡಿಯನ್ನು 1953ರಲ್ಲಿ ಸ್ಥಾಪಿಸಲಾಯಿತು. ಸೈಂಟ್ ಆನ್ಸ್ ಹೈಸ್ಕೂಲ್‌ನ ಗರ್ಲ್ಸ್ ಗೈಡ್‌ಗಳನ್ನು ರಾಷ್ಟ್ರಪತಿ ಎವಾರ್ಡ್‌ಗೆ ಗೈಡ್ ಕ್ಯಾಪ್ಟನ್‌ಗಳ ಮಾರ್ಗದರ್ಶನದಲ್ಲಿ ವಾರ್ಷಿಕವಾಗಿ ತರಬೇತು ಗೊಳಿಸಲಾಗುತ್ತಿತ್ತು. ಅವರು ರಾಜ್ಯ ಮಟ್ಟದ ಮತ್ತು ರಾಷ್ಟ್ರ ಮಟ್ಟದ ಕ್ಯಾಂಪ್‌ಗಳಲ್ಲಿ ಭಾಗವಹಿಸಬೇಕಾಗಿತ್ತು.

ಸ್ಥಾಪಕರ ಕೆಲಸಗಳಿಗೆ ಪೂರಕವಾಗಿ ವಿದ್ಯಾರ್ಥಿಗಳ ಹೆತ್ತವರು ಸಂಸ್ಥೆ ಮತ್ತು ಅದರ ಕೆಲಸ ಕಾರ್ಯಗಳಲ್ಲಿ ಕೈಜೋಡಿಸುವುದಕ್ಕಾಗಿ 1959ರಲ್ಲಿ ಸೈಂಟ್ ಆನ್ಸ್ ಹೈಸ್ಕೂಲ್‌ನ "Parents Teachers Association" ಸ್ಥಾಪಿಸಲ್ಪಟ್ಟಿತು ಮತ್ತು ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಹೆತ್ತವರು ಮತ್ತು ಶಿಕ್ಷಕರು ಕಾರ್ಯ ನಿರ್ವಹಿಸುವಂತಾಯಿತು. 1961ರಲ್ಲಿ ಜಿಲ್ಲೆಯ ಹೆಸರಾಂತ ಶಾಲೆಗಳಿಗೆ ಗೌರವಾರ್ಪಣೆಯ ವಿಶಿಷ್ಟ ಸಂದರ್ಭದಲ್ಲಿ ಸೈಂಟ್ ಆನ್ಸ್ ಇವುಗಳಲ್ಲಿ ಒಂದಾಗಿದ್ದು ಹೈಯರ್ ಸೆಕೆಂಡರಿ ಸ್ಕೂಲ್ ಆಗಿ ಭಡ್ತಿ ಹೊಂದಿತು. ಆದುದರಿಂದ XI ತರಗತಿಯನ್ನು 1964ರಲ್ಲಿ ಆರಂಭಿಸಲಾಯಿತು. ಹೊಸ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬದಲಾವಣೆಗಳಿಗೆ ಅನುಸಾರವಾಗಿ ಮಹಿಳಾ ಶಿಕ್ಷಣಕ್ಕೆ ತನ್ನ ಕೊಡುಗೆ ನೀಡಿತು. ವಿದ್ಯಾರ್ಥಿಗಳ ಸಂಖ್ಯೆ ಮತ್ತು ಅನುದಾನ ಹೆಚ್ಚಳದಿಂದಾಗಿ ಯುವ ಮಹಿಳೆಯರ ತರಬೇತಿಗೆ ಹೋಮ್ ಸೈಯನ್ಸ್ ಪಾಠವನ್ನು ಹೌಸ್ ಕೀಪಿಂಗ್ ಕಲಾ ಶಿಕ್ಷಣಕ್ಕೆ ಸೇರಿಸಲಾಯಿತು. 1966ರಲ್ಲಿ ತರಗತಿಗಳಲ್ಲಿ ಹೆಚ್ಚುವರಿ ವಿದ್ಯಾರ್ಥಿಗಳಿದ್ದು ಸ್ಥಳಾವಕಾಶ

ಕೊರತೆ ಇದ್ದುದರಿಂದ ರಕ್ಷಕ–ಶಿಕ್ಷಕ ಅಸೋಸಿಯೇಶನ್‌ನವರು ಹೊಸ ಶಾಲಾ ಕಟ್ಟಡ ನಿರ್ಮಾಣಕ್ಕೆ ಶಿಫಾರಸ್ಸು ಮಾಡಿದರು. ಈ ಉದ್ದೇಶಕ್ಕಾಗಿ ಪ್ರತ್ಯೇಖ ಮೂಲಧನವನ್ನು 1988ರಲ್ಲಿ ಪ್ರಾರಂಭಿಸಲಾಯಿತು.

1964ರಿಂದ 1991ರ ವರೆಗೆ Department of Public Instruction, Bangalore ನಿಂದ 1991ರ State Level "Best Hindi Teacher Award"ಗಳಿಸಿದ ಶ್ರೀಮತಿ ಮುಕ್ತ ಬಾಯಿ ಬೇಟ್ಸ್, ಎಮ್.ಎ. ಬಿ.ಎಡ್. ರಂತಹ ಉತ್ತಮ ಶಿಕ್ಷಕರಿದ್ದುದರಿಂದ ಬಹಳ ಬೇಗನೆ ಉತ್ತಮ ಹೆಸರು ಗಳಿಸಿತು. 1956–57ರಲ್ಲಿ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ 590 ಆಗಿತ್ತು. ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಾ ಬಂತು. ಅ ವರ್ಷದುದ್ದಕ್ಕೂ ಶಾಲೆಯಲ್ಲಿ ಅನೇಕ ಕಾರ್ಯಕ್ರಮಗಳು ಜರಗಿದವು. ವಿವಿಧ ಸಂಸ್ಥೆಗಳಲ್ಲಿ ಮತ್ತು ಕ್ಲಬ್‌ಗಳಲ್ಲಿ ಉದಾಹರಣೆಗೆ ವಾರ ಪತ್ರಿಕೆ ಪ್ರಕಟಿಸುತ್ತಿದ್ದ "Karnataka Sangha" ದಂತಹ ಸಂಘಗಳಲ್ಲಿ ವಿದ್ಯಾರ್ಥಿಗಳು ಸಕ್ರೀಯವಾಗಿ ಭಾಗವಹಿಸಿದ್ದರು.

ಅನೇಕ ಆರೋಗ್ಯ ಕ್ಯಾಂಪ್‌ಗಳನ್ನು ಮುಖ್ಯವಾಗಿ ಮಲೇರಿಯಾ, ಫೈಲೇರಿಯಾ ಇತ್ಯಾಧಿಗಳ ತಡೆಗಟ್ಟುವಿಕೆಗಾಗಿ ಸಂಗೀತ, ಭಾಷಣ, ನಾಟಕ, ಪೋಸ್ಟರ್‌ಗಳು ಮತ್ತು ಚಲನಚಿತ್ರ ಪ್ರದರ್ಶಿಸುವ ಮೂಲಕ ಶಾಲೆಯಲ್ಲಿ ಮತ್ತು ಹೊರಗೆ ಆಯೋಜಿಸಾಗಿತ್ತು. 1978ರಿಂದ 1981ರವರೆಗೆ ಶಾಲೆಯ ಮುಖ್ಯ ಶಿಕ್ಷಕಿಯಾಗಿದ್ದ ಸಿಸ್ಟರ್ ವರ್ಜಿಲಿಯ ಇವರಿಗೆ ಶಿಕ್ಷಣ ಸೇವೆಗಾಗಿ ಸರಕಾರದ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ದೊರಕಿತು. ಹೆಣ್ಣುಮಕ್ಕಳು ತಯಾರಿಸಿ ನೀಡಿದ ಸೈಯನ್ಸ್ ಮಾಡೆಲ್‌ಗಳು 1978–1980ರಲ್ಲಿ ದೆಹಲಿ ಮತ್ತು ಮುಂಬಯಿಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಸೈಯನ್ಸ್ ವಸ್ತುಪ್ರದರ್ಶನಕ್ಕೆ ಆಯ್ಕೆಗೊಂಡವು.

ಲೇಡಿ ಹಿಲ್ ವಿಕ್ಟೋರಿಯಾ ಹೆಣ್ಣುಮಕ್ಕಳ ಪ್ರೌಢ ಶಾಲೆ, ಉರ್ವಾ

1885ರ ಹಿಂದೆ ಅಪೊಸ್ಟೋಲಿಕ ಕಾರ್ಮೆಲ್ ಕಾಂಗ್ರಿಗೇಶನ್‌ನ ಮೊದಲ ಸುಪೀರಿಯರ್ ಜನರಲ್ ಆಗಿದ್ದ ಮದರ್ ಮೇರಿ ಡೆಸ್ ಆಂಜ್ ಇವರು ತನ್ನ ದೂರದರ್ಶಿ ಆಲೋಚನೆಯಂತೆ ಮಂಗಳೂರಿನ ಹಿಂದೂ ಬಾಂಧವರ ಮನವಿಯನ್ನು ಪರಿಗಣಿಸಿ ಜಾತಿ ಎಂಬ ಸಂಕೋಲೆಯನ್ನು ಭೇದಿಸಿ ಅವರ ಧರ್ಮದ ಹೆಣ್ಣು ಮಕ್ಕಳಿಗೆ ಶಾಲೆಯೊಂದನ್ನು ತೆರೆಯುವ ಪ್ರಯತ್ನಕ್ಕೆ ಕೈಹಾಕಿದರು. 10 ವರ್ಷ ಪ್ರಾಯದ ಬಳಿಕ ಮೇಲ್ವರ್ಗದ ಜಾತಿಯ ಹೆಣ್ಣು ಮಕ್ಕಳಿಗೆ ಮುಂದೆ ಕಲಿಯುವ ಅವಕಾಶ ಇಲ್ಲದ್ದರಿಂದ, ಭಗಿನಿಯರು 6ರಿಂದ 10ವರ್ಷದ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವತ್ತ ಗಮನ ಹರಿಸಿದರು ಮತ್ತು ಆ ಮೂಲಕ ಅವರ ಹೆತ್ತವರು ಮುಂದೆಯೂ ಸ್ವಲ್ಪ ಕಾಲ

ಅವರಿಗೆ ವಿದ್ಯೆ ಮುಂದುವರಿಸಲು ಅವಕಾಶ ನೀಡುಬಹುದು ಎಂಬುದು ಅವರ ಆಲೋಚನೆಯಾಗಿತ್ತು. ಶೀಘ್ರದಲ್ಲಿ ಇವರು ಮದರಾಸು ವಿಶ್ವವಿದ್ಯಾಲಯದ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಹಾಜರಾಗುವುದರ ಮೂಲಕ ವಿಶ್ವವಿದ್ಯಾಲಯ ಪ್ರಶಸ್ತಿಗಳನ್ನು ಗಳಿಸಬಹುದು ಎಂಬ ಆಶ್ವಾಸನೆಯನ್ನು ನೀಡಿದರು. ಈ ದೂರಾಲೋಚನೆ ಹೆಣ್ಣುಮಕ್ಕಳಿಗೆ ಒಂದು ಪ್ರೌಢ ಶಿಕ್ಷಣ ಸಂಸ್ಥೆಯ[52] ಅಗತ್ಯತೆಗೆ ನಾಂದಿಯಾಯಿತು. ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇವರ ಪ್ರೋತ್ಸಾಹದಿಂದ ಮದರ್ ಮೇರಿ ಡೆಸ್ ಆಂಜ್ 19 ಮಾರ್ಚ್ 1885ರಂದು ಈಗಿನ ಸೈಂಟ್ ಆನ್ಸ್ ಶಾಲೆಯ ಪಕ್ಕದಲ್ಲಿರುವ ಆವರಣದಲ್ಲಿ ಒಂದು ಎಲಿಮೆಂಟರಿ ಶಾಲೆಯನ್ನು ತೆರೆದರು. ಈ ಅನಿಶ್ಚಿತ ಶಾಲೆ ಸೈಂಟ್ ಆನ್ಸ್ ಕೆನರೀಸ್ ಸ್ಕೂಲ್ ಎಂದು ಕರೆಯಲ್ಪಟ್ಟಿದ್ದು, ಆರಂಭದಿಂದ ಭಗಿನಿಯರಿಂದ ನಡೆಸಲ್ಪಡುತ್ತಿದ್ದು ಕಥೋಲಿಕ್ ಸಮುದಾಯಕ್ಕೆ ಸೀಮಿತವಾಗಿತ್ತು. ಸ್ವಲ್ಪ ಸಮಯದ ನಂತರ ಹೆಚ್ಚು ಅನುಕೂಲಕರ ಸ್ಥಳವೊಂದನ್ನು ಡೊಂಗರಕೇರಿಯಲ್ಲಿ ಪಡೆದುಕೊಂಡು ಒಂದು ಹೊಸ ಕಟ್ಟಡ ನಿರ್ಮಾಣವಾಯಿತು. ಈ ಶಾಲೆ 38 ವಿದ್ಯಾರ್ಥಿಗಳಿಂದ ಆರಂಭವಾಯಿತು. 1887ರಲ್ಲಿ ರಾಣಿ ವಿಕ್ಟೋರಿಯಾರವರ ಸ್ವರ್ಣ ಮಹೋತ್ಸವ ವರ್ಷವಾಗಿದ್ದು ಶಾಲೆ ಹೊಸ ಸ್ಥಳಕ್ಕೆ ಸ್ಥಳಾಂತರಗೊಂಡು ವಿಕ್ಟೋಟಿಯಾ ಹೆಣ್ಮಕ್ಕಳ ಶಾಲೆ ಎಂದು ಪುನರ್ ನಾಮಕರಣಗೊಂಡಿತು. ಶಾಲೆ ಶೀಘ್ರವಾಗಿ ಅಭಿವೃದ್ಧಿಗೊಂಡು 1889ರಲ್ಲಿ ಲೋವರ್ ಸೆಕೆಂಡರಿ ಅಥವಾ ಮಿಡ್ಲ್ ಸ್ಕೂಲ್ ಎಂಬುದಾಗಿ ಸರಕಾರದ ಮಾನ್ಯತೆ ಪಡೆಯಿತು. 1892ರಲ್ಲಿ ಆಂಗ್ಲ ಭಾಷೆಯು ಕಲಿಕೆಯ ಮಾಧ್ಯಮವಾಯಿತು.

ಹತ್ತು ವರ್ಷಗಳೊಳಗೆ, ಆ ಪರಿಸರದ ಜನಸಂಖ್ಯೆ ದಟ್ಟಣೆಯಾಯಿತೆಂದರೆ ಆ ಶಬ್ದಮಾಲಿನ್ಯದ ಪ್ರದೇಶದಲ್ಲಿ ಶಾಲೆ ಮುಂದುವರಿಸುವುದಕ್ಕೆ ಅಲ್ಲಿನ ಸ್ವಾಸ್ಥ್ಯ ಪರಿಸ್ಥಿತಿ ಪೂರಕವಾಗಿರಲಿಲ್ಲ. 1920ರಲ್ಲಿ ಮದರ್ ಅಲೋಯ್ಸಿಯಾ ಉರ್ವಾದಲ್ಲಿ ವಿಸ್ತಾರವಾದ ಕಟ್ಟಡ ನಿರ್ಮಾಣಕ್ಕೆ ಉಪಯೋಗಿಸಿದರು. ಸ್ವರ್ಣ ಮಹೋತ್ಸವ ಸ್ಮಾರಕವಾಗಿ (19 ನವೆಂಬರ್ 1870 ಸ್ಥಾಪಿಸಲ್ಪಟ್ಟ ಸಂಸ್ಥೆ) ಲೇಡಿ ಹಿಲ್ ಕಾನ್ವೆಂಟ್ ನಿರ್ಮಾಣಕ್ಕೆ 2 ಅಕ್ಟೋಬರ್ 1920 ರಂದು ಶಿಲಾನ್ಯಾಸ ಮಾಡಲಾಯಿತು. ಉದ್ಘಾಟನೆ ಮತ್ತು ಪ್ರತಿಷ್ಠಾಪನೆ 25 ಮಾರ್ಚ್ 1921ರಂದು ಎನನ್ಸಿಯೇಶನ್ ಅಫ್ ಅವರ್ ಲೇಡಿ ಹಬ್ಬದಂದು ಬಿಷಪ್ ಪೌಲ್ ಪೆರಿನಿ ಅವರಿಂದ ನಡೆಯಿತು. ಆದುದರಿಂದ ಎನನ್ಸಿಯೇಶನ್ ಕಾನ್ವೆಂಟ್‌ನ ಹೆಸರಿನ ಕಾನ್ವೆಂಟ್ "Lady hill Convent" ಎಂದೇ ಪರಿಚಿತವಾಗಿ ಸ್ಥಾಪನೆಯಾಯಿತು.

ಶಾಲೆ 27 ಮಾರ್ಚ್ 1921ರಂದು ತೆರೆಯಲ್ಪಟ್ಟಿತು. ಉರ್ವಾ ಪ್ಯಾರಿಶ್‌ನ ಪಾದ್ರಿಯಾದ ರೆವೆ. ಎ. ಜೆ. ಡಿ'ಸೋಜ ಇವರು ಲೇಡಿ ಆಫ್ ಮೌಂಟ್ ಕಾರ್ಮೆಲ್‌ಗೆ ಪ್ರತಿಷ್ಠಿತವಾದ ಶಾಲೆಗೆ 30 ಆಗಸ್ಟ್ 1922ರಂದು ಶಿಲಾನ್ಯಾಸಗೈದರು. ಡೊಂಗರಕೇರಿಯ ವಿಕ್ಟೋರಿಯಾ ಕಾನ್ವೆಂಟ್ ಗರ್ಲ್ಸ್ ಸ್ಕೂಲ್‌ನ ಎಲ್ಲಾ ಪೀಠೋಪಕರಣಗಳು

ಉರ್ವಾದ ಶಾಲೆಗೆ 9ರಿಂದ 11 ಜನವರಿ 1923ರಲ್ಲಿ ಸ್ಥಳಾಂತರಗೊಂಡಿತು. ಮೊದಲ ಭಗಿನಿಯರ ಸಮಾಜದ ಸಿಸ್ಟರ್ ಫ್ರಾನ್ಸೆಸ್, ಸಿಸ್ಟರ್ ಇಗ್ನೇಶಿಯಾ ಮತ್ತು ಸಿಸ್ಟರ್ ಡೋರತಿ ಶಿಕ್ಷಣ ಬೆಳಕನ್ನು ಬೆಳಗಿದರು.

ಕ್ರಮಾನುಗತವಾಗಿ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಬೆಳವಣಿಗೆ ಹೊಂದಿರುವುದು ಮಾತ್ರವಲ್ಲ ಕೀರ್ತಿಯನ್ನೂ ಗಳಿಸಿ 10 ನವೆಂಬರ್ 1933 ರಂದು ಡಿ.ಡಿ.ಪಿ.ಐ. ಅವರಿಂದ ಶಾಶ್ವತ ಅನುಮೋದನೆಯನ್ನು ಪಡೆಯಿತು ಮಾತ್ರವಲ್ಲದೆ 1942ರಲ್ಲಿ ಶಾಲೆಯು ಪ್ರೌಢ ಶಾಲೆಯಾಗಿ ಭಡ್ತಿಹೊಂದಿತು ಅಲ್ಲದೆ 1943ರಲ್ಲಿ ಮೊದಲ ಬ್ಯಾಚ್‌ನ 28 ಮಕ್ಕಳು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾದರು. ಇದೇ ಸಮಯದಲ್ಲಿ ರೂ. 35ರ ಬಡ ವಿದ್ಯಾರ್ಥಿಗಳ ನಿಧಿ ಸ್ಥಾಪನೆಯಾಯಿತು.

1946ರಲ್ಲಿ III ಫಾರ್ಮ್‌ನ ವರೆಗೆ ಕನ್ನಡ ಮಾಧ್ಯಮಕ್ಕೆ ಪರಿವರ್ತನೆ ಹೊಂದಿತು. ಮುಂದಿನ ವರ್ಷ ಸಂಸ್ಥೆಯ ಬೆಳ್ಳಿ ಮಹೋತ್ಸವ ಆಗಿದ್ದು ಅದೇ ವರ್ಷದಲ್ಲಿ 4ನೇ ಫಾರ್ಮ್‌ನ ವರೆಗೆ ಆಂಗ್ಲ ಮಾಧ್ಯಮ ಮುಂದುವರಿಸಲು ಅನುಮೋದನೆ ದೊರಿಯಿತು. ಹೆಣ್ಣು ಮಕ್ಕಳನ್ನು ಮುಂದಾಳತ್ವಕ್ಕೆ ಪ್ರೋತ್ಸಾಹಿಸುವ ದೃಷ್ಟಿಯಿಂದ 1952ರಲ್ಲಿ "Girl Guiding" ಮತ್ತು 1955ರಲ್ಲಿ "Junior Red cross movement" ಗಳನ್ನು ಸ್ಥಾಪಿಸಲಾಯಿತು. ಹಳೆ ವಿದ್ಯಾರ್ಥಿಗಳ ಸಂಘವೂ ಸ್ಥಾಪಿಸಲ್ಪಟ್ಟಿತು. 1960ರಲ್ಲಿ ಪಾರ್ವತಿ ಆಚಾರ್ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ (Madras- Karnataka) ಮೊದಲ ರ್‍ಯಾಂಕ್ ಗಳಿಸಿದರು ಮತ್ತು ಮಿಸ್ ನಿರ್ಮಲಾ ಬಾಳಿಗಾ 4ನೇ ರ್‍ಯಾಂಕನ್ನು ಪಡೆದರು.

ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದ್ದಂತೆ 75 ವರ್ಷಗಳ ಕಾಲ ಸಾವಿರಾರು ಹಳೆ ವಿದ್ಯಾರ್ಥಿಗಳಿಗೆ ಶಿಕ್ಷಣ ಕೇಂದ್ರವಾಗಿದ್ದ ಹಳೆ ಕಟ್ಟಡವನ್ನು ಕೆಡವಲಾಯಿತು. ವಿದ್ಯಾರ್ಥಿಗಳ ಎಲ್ಲಾ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ಹೊಸ ಶಾಲಾ ಬ್ಲಾಕ್ ಅನ್ನು ನಿರ್ಮಿಸುವ ನಿರ್ಧಾರ ಕೈಗೊಳ್ಳಲಾಯಿತು. ಶಾಲಾ ಪಥವೀದರರು ಅಥವಾ ಹಳೆ ವಿದ್ಯಾರ್ಥಿಗಳು ಅಪೊಸ್ತೊಲಿಕ್ ಸಂಸ್ಥೆಗಳ ಆಪತ್ತಿನಲ್ಲಿ ಸಂಸ್ಥೆಯ ಬೆಳವಣಿಗೆಗೆ ಆಶೀರ್ವಾದದಾಯಕವಾಗಿದ್ದರು. ಅವರು ಹೊಸ ಕಟ್ಟಡ ನಿರ್ಮಾಣಕ್ಕೆ ನಿಧಿ ಸಂಗ್ರಹಣೆಯ ಮೂಲಕ ಕೊಡುಗೆಗಳನ್ನು ನೀಡಿರುವುದು ಮಾತ್ರವಲ್ಲ ತಮ್ಮ ಸಂಸ್ಥೆಯೊಡನೆ ಸಂಪರ್ಕವಿರಿಸಿಕೊಳ್ಳುವುದರಿಂದ ದೂರ ಸರಿಯಲಿಲ್ಲ. ಉದಾಹರಣೆಗಾಗಿ ಲೇಡಿ ಹಿಲ್ ವಿಕ್ಟೋರಿಯಾ ಪ್ರೌಢ ಶಾಲೆಯ ಹೊಸ ಕಟ್ಟಡ ನಿರ್ಮಾಣ ಯೋಜನೆ ರೂ. 88 ಲಕ್ಷ ವೆಚ್ಚದಲ್ಲಿ ಅಂದಾಜುಗೊಂಡಾಗ ಇದು ದೊಡ್ಡ ಮೊತ್ತವಾಗಿದ್ದು, ಅಂದಿನ ಉರ್ವಾ ಚರ್ಚ್‌ನ ಧರ್ಮಗುರು ರೆವೆ. ಫಾ। ಜಾನ್ ಡಿ'ಸೋಜ ಮೊದಲ ಹಂತದಲ್ಲಿ ಹಳೆ ವಿದ್ಯಾರ್ಥಿಗಳಿಂದ ಹಣ ಸಂಗ್ರಹಿಸಲು ಸಹಾಯ ಮಾಡಿದರು. ಈ ವಿದ್ಯಾರ್ಥಿಗಳು ದಾರಾಳವಾಗಿ ಕೊಡುಗೆ ನೀಡಿದರು ಮತ್ತು ಸಂಸ್ಥೆಯ ಪ್ಲಾಟಿನಂ ಜುಬಿಲಿ ಆಚರಣೆಯಲ್ಲಿ

(ಜನವರಿ 14, 1996) ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದರು. 83 ವರ್ಷ ಪ್ರಾಯದ ಹಳೆ ವಿದ್ಯಾರ್ಥಿಯೊಬ್ಬರು ಮಾತನಾಡಿ ತಮ್ಮ ಮಾತೃ ಶಿಕ್ಷಣ ಸಂಸ್ಥೆಯ ಪ್ರೀತಿಯ ಬಗ್ಗೆ ವಿವರಿಸಿದರು. ಸಿಸ್ಟರ್ ಬೆನಿಟಾರವರು ಮಾತನಾಡಿ ಯಾವ ರೀತಿ ಹಳೆ ವಿದ್ಯಾರ್ಥಿಗಳ ಸಂಘವು ಈ ದಿನದ ವರೆಗೆ ಸಕ್ರೀಯವಾಗಿದೆ ಎಂದು ತಿಳಿಸಿದರು.

ಸೈಂಟ್ ಆಗ್ನೆಸ್ ಇಂಗ್ಲಿಷ್ ಪ್ರೈಮರಿ ಸ್ಕೂಲ್

ಕಳೆದ ಶತಮಾನದ ಆರಂಭದಲ್ಲಿ ಸೈಂಟ್ ಆನ್ಸ್ ಹೈಸ್ಕೂಲ್, ಬೋಳಾರ ಮತ್ತು ಇತರ ಎರಡು ವಿಭಾಗೀಯ ಶಾಲೆಗಳಾದ ಮಿಲಾಗೆಸ್ ಮತು ಡೊಂಗರಕೇರಿಯ ವಿಕ್ಟೋರಿಯಾ ಹೆಣ್ಮಕ್ಕಳ ಶಾಲೆಗಳು ಹೆಣ್ಣು ಮಕ್ಕಳಿಗೇ ಸೀಮಿತವಾಗಿ ಜಿಲ್ಲೆಯಲ್ಲಿ ಶಿಕ್ಷಣ ಪ್ರಧಾನ ಮಾಡಿದ ಸಂಸ್ಥೆಗಳಾಗಿದ್ದು ಆಂಗ್ಲ ಮಾಧ್ಯಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿತ್ತು. ಶಿಕ್ಷಣ ಪ್ರಸಾರದ ಅಗತ್ಯತೆ, ಪ್ರಾಮುಖ್ಯವಾಗಿ ಮಂಗಳೂರು ನಗರದ ಅಂಚಿನ ಪ್ರದೇಶದ ಜನರಿಗೆ ಪ್ರಾಮುಖ್ಯವೆಂದು ಪರಿಗಣಿಸಲ್ಪಟ್ಟಿತು. 4 ವರ್ಷಗಳ ಸ್ಥಳ ಹುಡುಕಾಟ ನಡೆದು 1914ರಲ್ಲಿ ಮದರ್ ಅಲೋಯ್ಸಿಯಾ ಬೆಂದೂರಿನ ಸೈಂಟ್ ಆಗ್ನೆಸ್ ಕಾಲೇಜಿನ ಪರಿಸರವನ್ನು ಕಂಡುಕೊಂಡರು. ಈ ಬೆಂದೂರು ಪ್ರದೇಶ "ಬೆಂದ–ಊರು" ("Benda- Uru" or "burnt place") ಕರಾವಳಿ ನಗರದ ಕಂಕನಾಡಿ ಮತ್ತು ಕದ್ರಿಯ ಮಧ್ಯ ಭಾಗದಲ್ಲಿ ಇರುತ್ತದೆ. ಸೈಂಟ್ ಆಗ್ನೆಸ್ ಕಾನ್ವೆಂಟ್ ಮತ್ತು ಹೈಸ್ಕೂಲ್‌ಗಾಗಿ ಕೊಂಡುಕೊಂಡ ಈ ಸ್ಥಳ "ಮುಳಿಹುಲ್ಲು" ಪ್ರದೇಶವೆಂದು ಕರೆಯಲ್ಪಡುತ್ತಿದ್ದು ಪ್ರದೇಶವೆಲ್ಲಾ ಹುಲ್ಲಿನಿಂದ ತುಂಬಿತ್ತು. ಸಮತಟ್ಟು ಇಲ್ಲದ ಪ್ರದೇಶವಾಗಿದ್ದು ಕಾಡು ಹುಲ್ಲು ಬೆಳೆದಿದ್ದು ಕೆಲ ಸಮಯ ಕಾಡು ಪ್ರಾಣಿಗಳು ಈ ಪ್ರದೇಶದಲ್ಲಿ ತಿರುಗಾಡುತ್ತಿದ್ದುದು ಕಾಣಬರುತ್ತಿತ್ತು. ಸೈಂಟ್ ಆನ್ಸ್ ಶಾಲೆ ಎಲ್ಲಾ ಸಿಬ್ಬಂಧಿವರ್ಗ 1913ರಲ್ಲಿ ಈ ಸ್ಥಳಕ್ಕೆ ಭೇಟಿ ನೀಡಿದಾಗ ಮೊದಲ ನೋಟಕ್ಕೆ ಈ ಪ್ರದೇಶ, ಮನೆ ನಿರ್ಮಾಣಕ್ಕೆ, ಕೈತೋಟ ಮತ್ತು ಬಾವಿ ನಿರ್ಮಾಣಕ್ಕೆ ಯೋಗ್ಯ ಎಂದು ಕಂಡು ಬಂತೇ ವಿನಹ ಶಾಲೆ ನಿರ್ಮಾಣಕ್ಕೆ ಸೂಕ್ತವಲ್ಲ ಎಂಬ ಅಭಿಪ್ರಾಯವಾಯಿತು. ಇದು ಬೇರೆ ಬೇರೆ 16 ಮಂದಿಗೆ ಒಳಪಟ್ಟಿದ್ದು ಎಲ್ಲರನ್ನೂ ಪ್ರತ್ಯೇಖವಾಗಿ ಭೇಟಿ ಮಾಡಿ ಚರ್ಚಿಸಬೇಕಾಯಿತು. ಒಳಗಿದ್ದ ತೆಂಗಿನ ಮರಗಳು, ಹಣ್ಣಿನ ಮರಗಳು ಮತ್ತು ಹೆಚ್ಚು ಬೆಳೆಬಾಳುವ ಎತ್ತರದ ಸಮತಟ್ಟು ಪ್ರದೇಶ ಶಾಲಾ ಕಟ್ಟಡ ನಿರ್ಮಾಣಕ್ಕೆ ಸೂಕ್ತ ಸ್ಥಳ ಎಂದು ಅಪೋಸ್ತೊಲಿಕ್ ಕಾರ್ಮೆಲ್ ಭಗಿನಿಯರು ತಿಳಿದುಕೊಂಡರು. ಒಂದೊಂದೇ ಸ್ಥಳವನ್ನು ನಿಧಾನ ಮತ್ತು ಶ್ರಮದಾಯಕವಾಗಿ ಕೊಂಡುಕೊಳ್ಳುವ ಮೂಲಕ 5 ಫೆಬ್ರವರಿ 1914ರಂದು ಸೈಂಟ್ ಆಗ್ನೆಸ್ ಕಾನ್ವೆಂಟ್‌ಗೆ ಶಿಲಾನ್ಯಾಸ ಹಾಕಲಾಯಿತು. ಈ ನಿರ್ಜನ ಸ್ಥಳ ನೂರಾರು ಮಕ್ಕಳ ಮತ್ತು ದೊಡ್ಡ ಜನ ಸಮುದಾಯದ ಸ್ವರಗಳೊಂದಿಗೆ ಜೀವ ಪಡೆಯಿತು. ಮುಂದಿನ ದಿನದಲ್ಲಿ ಸಿಸ್ಟರ್ ಎಲಿಯಾಸ್, ಸಿಸ್ಟರ್

ಮಾರ್ಗರೆಟ್ ಮೇರಿ ಮತ್ತು ಸಿಸ್ಟರ್ ಡೊಲೊರೆಸ್ ಸೈಂಟ್ ಅನ್ಸ್ ನಿಂದ ಬೆಂದೂರಿನ ಹೊಸ ಕಾನ್ವೆಂಟ್‌ಗೆ ಸ್ಥಾಪಕರಾಗಿ ಆಗಮಿಸಿದರು. ಸಣ್ಣ ಕನಸಿನೊಂದಿಗೆ ಈ ಸ್ಥಳಕ್ಕೆ ಆಗಮಿಸಿದ್ದ ಇವರು ಒಂದು ದಿನ ಮಹಿಳೆಯರ ಒಂದು ದೊಡ್ಡ ಸಂಸ್ಥೆಯಾಗಿ ಬೆಳೆದು ಕಲೆ, "ಜ್ಞಾನ, ವಾಣಿಜ್ಯ ಮತ್ತು ಬ್ಯುಸಿನೆಸ್ ಮ್ಯಾನೇಜ್‌ಮೆಂಟ ಕಾಲೇಜಾಗಿ, ಕಂಪ್ಯೂಟರ್ ಶಿಕ್ಷಣದ ಕೇಂದ್ರವಾಗಿ, ಕಾಲೇಜು ವಸತಿಗೃಹ, ಪ್ರೌಢ ಶಾಲೆ, ಆಂಗ್ಲ ಮಾಧ್ಯಮ ಪ್ರೈಮರಿ ಶಾಲೆ, ಕನ್ನಡ ಮಾಧ್ಯಮ ಪ್ರೈಮರಿ ಶಾಲೆ, ಕಿಂಡರ್‌ಗಾರ್ಟನ್, ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆ, ಸ್ನಾತಕೋತ್ತರ ಪಧವಿ ಕೇಂದ್ರ ಒಂದೇ ಪ್ರಗತಿಯ ಚಿಹ್ನೆಯಡಿಯಲ್ಲಿ ಮಂಗಳೂರಿನ ಕರಾವಳಿಯ ಒಂದು ಸಣ್ಣ ನಗರದಲ್ಲಿ ಮಹಿಳಾ ಸಾಧಕರ ಕೇಂದ್ರವಾಗಿ ಬೆಳೆಯುತ್ತದೆ ಎಂದು ಭಾವಿಸಿರಲಿಲ್ಲ.

2 ಫೆಬ್ರವರಿ 1914ರಂದು ಸೈಂಟ್ ಆಗ್ನೆಸ್ ಕಾನ್ವೆಂಟ್ ಅದರ ಅನೇಕ ವಿಭಾಗಗಳೊಂದಿಗೆ, ಮಂಗಳೂರಿನ ಧರ್ಮಾಧ್ಯಕ್ಷರಾದ ರೈಟ್ ರೆವೆ. ಡಾ। ಪೌಲ್ ಪೆರಿನಿ ಎಸ್. ಜೆ. ಇವರು ಆಶೀರ್ವದಿಸುವುದರೊಂದಿಗೆ ಮದರ್ ಅಲೋಯ್ಸಿಯಾ ಇವರು ಸೈಂಟ್ ಆಗ್ನೆಸ್ ಅನ್ನು ಮುನ್ನಡೆಸಲು ಸಾಧ್ಯವಾಯಿತು ಮತ್ತು 6 ದಿನಗಳ ನಂತರ 80 ಮಕ್ಕಳು 3 ತರಗತಿಯಲ್ಲಿ ಪ್ರೈಮರಿ ವಿಭಾಗದಲ್ಲಿ ಸೇರುವ ಮೂಲಕ ಆರಂಭವಾಯಿತು. ಇವೆಲ್ಲವೂ ಜಂಟಿ ಮನೆಯಲ್ಲಿ ನಡೆಯುತ್ತಿದ್ದು ಹೊಸ ಕಟ್ಟಡ ನಿರ್ಮಾಣದ ನಿರೀಕ್ಷೆಯಲ್ಲಿತು. ಮೊದಲನೆ ಜಾಗತಿಕ ಯುದ್ಧದ ಪರಿಣಾಮವಾಗಿ ಕಟ್ಟಡ ನಿರ್ಮಾಣ ತಡವಾಯಿತು. 1919ರಲ್ಲಿ, ಕಟ್ಟಡ ಅನುದಾನ ದೊರೆತು ಅಡಿಗಲ್ಲು ಹಾಕಲಾಯಿತು. ಅಂತಿಮವಾಗಿ ಮೊದಲ ಸೈಂಟ್ ಆಗ್ನೆಸ್ ಶಾಲಾ ಕಟ್ಟಡ ಕ್ಯಾಂಪಸ್‌ನಲ್ಲಿ ಕಟ್ಟಡ ನಿರ್ಮಾಣ ಪೂರ್ಣಗೊಂಡಿತು. ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗುತ್ತಿತ್ತು. ಇದು ರಾಷ್ಟ್ರೀಯತೆ ಮತ್ತು ದೇಶಾಭಿಮಾನ ಅಲೆ ಹುಟ್ಟುಕೊಳ್ಳುವ ವರೆಗೆ ಆಂಗ್ಲ ಮಾಧ್ಯಮದ ಸಮ್ಮಿಶ್ರ ಶಾಲೆಯಾಗಿದ್ದು ಬಳಿಕ 1946ರಲ್ಲಿ ಕನ್ನಡ ಮಾಧ್ಯಮ ಪ್ರೈಮರಿ ವಿಭಾಗ ಆರಂಭಗೊಂಡಿತು.

1921ರ ವರೆಗೆ ಸೈಂಟ್ ಆಗ್ನೆಸ್ ಮಿಡ್ಲ್ ಸ್ಕೂಲ್ ಆಗಿ ಮುಂದುವರಿಯಿತು. ಹೈಸ್ಕೂಲ್ ಒಂದು ಆವಿಷ್ಕಾರದ ಕೂಗಿನೊಂದಿಗೆ ಅಸ್ತಿತ್ವಕ್ಕೆ ಬಂತು. ಸೈಂಟ್ ಆನ್ಸ್‌ನಲ್ಲಿದ್ದ IV, V, VI ಫೋರ್ಮ್ ತರಗತಿಗಳನ್ನು ಸೈಂಟ್ ಆಗ್ನೆಸ್‌ಗೆ ಸ್ಥಳಾಂತರಿಸಲು ಸುಪೀರಿಯರ್‌ಗಳು ನಿರ್ಧರಿಸಿದರು. 5 ಜುಲೈ 1921ರಂದು ಸುಪೀರಿಯರ್ ಜನರಲ್ ಮದರ್ ಅಲೋಯ್ಸಿಯಾ ಸ್ವತಹ ಮುಖ್ಯ ಶಿಕ್ಷಕಿಯಾಗುವುದರೊಂದಿಗೆ ಹೈಸ್ಕೂಲ್ ತರಗತಿಗಳು ಸೈಂಟ್ ಆಗ್ನೆಸ್‌ಗೆ ಸ್ಥಳಾಂತರಗೊಂಡವು. ಕೆಲವು ವಿದ್ಯಾರ್ಥಿಗಳಿಗೆ ಸೈಂಟ್ ಆನ್ಸ್ ಅನ್ನು ತ್ಯಜಿಸುವುದು ನೋವುಂಟು ಮಾಡುವ ವಿಷಯವಾಗಿದ್ದು ಭಾವನಾತ್ಮಕವಾಗಿ ತಮ್ಮ ಹಿಂದಿನ ಶಾಲೆಯನ್ನು ಹಿಂತಿರುಗಿ ನೋಡುತ್ತಾ ತೆರಳಿದರು ಆದರೆ

ಅದೇ ವೇಳೆ ಉಳಿದವರು ಹೊಸ ಜಾಗಕ್ಕೆ ಉತ್ಸಾಹದಿಂದ ತೆರಳಿದರು. ಆಕಸ್ಮಿಕ ಸ್ಥಳಾಂತರದಿಂದ ಸೈಂಟ್ ಆಗ್ನೆಸ್ ಒಂದು ಸುಸಜ್ಜಿತ ಕಿಂಡರ್ ಗಾರ್ಟನ್, ಮಿಡ್ಲ್ ಮತ್ತು ಹೈಸ್ಕೂಲ್‌ಗಳನ್ನೊಳಗೊಂಡ ಶಾಲೆಯಾಯಿತು.

1946ರಲ್ಲಿ ಶಾಲೆ ಸೆಕೆಂಡರಿ ಶಿಕ್ಷಣಕ್ಕೆ ಸಂಭಂದಿಸಿದಂತೆ ಅನೇಕ ಪ್ರಗತಿಪರ ಬದಲಾವಣೆ ಆರಂಭಕ್ಕೆ ಸಾಕ್ಷಿಯಾಯಿತು. ಸೈಂಟ್ ಆಗ್ನೆಸ್‌ಗೆ ಪ್ರಥಮ ಶಾಕ್ ಕೊಡುವ ವಿಷಯ ಸರಕಾರದಿಂದ ಬಂದ ಆದೇಶ ಎಲ್ಲಾ ತರಗತಿಗಳಲ್ಲಿ VI ಫೋರ್ಮ್ ವರೆಗೆ ಕನ್ನಡ ಮಾಧ್ಯಮ ಶಿಕ್ಷಣ ಅಳವಡಿಸಬೇಕೆಂಬ ಆದೇಶ, ಇದು ಶಿಕ್ಷಕರಿಗೆ ಮಾತ್ರವಲ್ಲದೆ ವಿದ್ಯಾರ್ಥಿಗಳಿಗೂ ಒಮ್ಮೆಗೆ ಅರಗಿಸಿಕೊಳ್ಳಲಾಗದ ವಿಷಯವಾಗಿತ್ತು. ಅನೇಕ ವಿರೋಧಿ ಮೀಟಿಂಗ್‌ಗಳು ನಡೆದು ಶಿಕ್ಷಣ ಸಚಿವರಿಗೆ ಜಂಟಿ ಮನವಿಗಳನ್ನು ಸಲ್ಲಿಸಿದರೂ ಸೈಂಟ್ ಆಗ್ನೆಸ್‌ನಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಭಾಷೆಯನ್ನಾಗಿ ಪ್ರೈಮರಿ ವಿಭಾಗದಲ್ಲಿ ಕಲಿಸಲೇಬೇಕಾಯಿತು. ಭಗಿನಿಯರು ಇದರಿಂದ ವಿನಾಯತಿಗಾಗಿ ಬಹಳ ಪ್ರಯಾಸ ಪಟ್ಟರು ಕೊನೆಗೆ ಶಿಕ್ಷಣ ಸಚಿವರು ಸೈಂಟ್ ಆಗ್ನೆಸ್‌ಗೆ ಪ್ರಥಮ ಭೇಟಿ ನೀಡಿ ಇಲ್ಲಿನ ಶಿಕ್ಷಣ ಮಟ್ಟವನ್ನು ಗಮನಿಸಿ ಬಯಸಿದ ಮನವಿಯನ್ನು ಸ್ಥಳದಲ್ಲಿಯೇ ಅಂಗೀಕರಿಸುವ ಮೂಲಕ ಸಫಲರಾದರು. ಆದುದರಿಂದ ಆಂಗ್ಲ ಭಾಷೇ ಪ್ರಥಮ ಭಾಷೆಯಾಗಿ ಸ್ವಲ್ಪ ಸಮಯದ ವರೆಗೆ ಮುಂದುವರೆಯಿತು. ಸ್ವಾತಂತ್ರ್ಯದ ದಿನಗಳು ಆರಂಭಗೊಂಡುದರಿಂದ 3 ಭಾಷೆಗಳ ಕ್ರಮ ಸ್ಥಾನೀಯ ಭಾಷೆ ಕಲಿಕೆಯ ಮಾಧ್ಯಮವಾಗಿ ಎಲ್ಲಾ ಹಂತಗಳಲ್ಲಿ ಜಾರಿಗೆ ಬಂದು ಅದು ಈಗಲೂ ಮುಂದುವರಿಯುತ್ತಿದೆ.

1946ಕ್ಕೆ ಹಿಂದೆ ಹೋಗುವಾಗ, ಶಿಕ್ಷಣ ಪದ್ಧತಿಯ ಪುನರ್‌ಸಂಘಟನೆಗಾಗಿ ಒಂದು ಪ್ರಶ್ನಾವಳಿಯನ್ನು ಸರಕಾರವು ಕಳುಹಿಸಿತು ಮತ್ತು ಅಭಿಪ್ರಾಯಗಳನ್ನು ಕೇಳಲಾಯಿತು. ಪುನರ್‌ಸಂಘಟನೆಯ ಯೋಜನೆಯಲ್ಲಿ ಹೆಸರಿಸಲಾದ ಕ್ರಮ ನಿಯಮಗಳು ಅಲ್ಪಸಂಖ್ಯಾತರ ಹಕ್ಕುಗಳಿಗೆ ತೊಂದರೆ ಉಂಟು ಮಾಡುವಂತಿದ್ದುದರಿಂದ ಒಂದಾಗಿ ಸೇರಿ ಇದನ್ನು ವಿರೋಧಿಸುವ ಮತ್ತು ನಮ್ಮ ಹಕ್ಕುಗಳಿಗಾಗಿ ಆಗ್ರಹಿಸುವ ಅಗತ್ಯತೆ ಕಂಡು ಬಂತು. ಆದುದರಿಂದ ಸೈಂಟ್ ಆಗ್ನೆಸ್ ಶಾಲೆ ಸೌತ್ ಕೆನರಾ ಟೀಚರ್ಸ್ ಗಿಲ್ಡ್‌ನ ಸದಸ್ಯತ್ವ ಪಡೆಯಿತು. 1948ರಲ್ಲಿ ಸೈಂಟ್ ಆಗ್ನೆಸ್ "The Requisition of Property Bill" ಮತ್ತು "Endowment Fund for Secondary Schools" ವಿರುದ್ಧ ಹೋರಾಟಕ್ಕೆ ಇಳಿಯಿತು.

ಹೈಸ್ಕೂಲ್ ಅದರ ವಿದ್ಯಾರ್ಥಿಗಳ ಸಂಖ್ಯೆ ಏರಿಕೆ ಮತ್ತು ಹೊಸ ಕಟ್ಟಡ ವಿಸ್ತರಣೆ ಮೂಲಕ ನಿರಂತರ ಅಭಿವೃದ್ಧಿಯಾಗುತ್ತಾ ಬಂತು. 1954ರಲ್ಲಿ ಹೋಮ್ ಸೈಯನ್ಸ್ ವಿಭಾಗಗೊಂಡ ಕೋರ್ಸ್‌ನ ಒಂದು ಭಾಗವಾಗಿ ಸೇರ್ಪಡೆಗೊಂಡು ಹೆಸರುವಾಸಿಯಾಯಿತು ಮತ್ತು ಲೆಕ್ಕ ಪರಿಚರ್ಯ ಪ್ರಥಮ ಭಾರಿಗೆ ಕಾಲೇಜು ಶಿಕ್ಷಣ ಮುಂದುವರಿಸುವವರ ಪ್ರಯೋಜನಕ್ಕಾಗಿ ಸೇರ್ಪಡೆಗೊಳಿಸಲಾಯಿತು.

ಸೆಕೆಂಡರಿ ಶಿಕ್ಷಣದ ಸಾಕಷ್ಟು ಬದಲಾವಣೆಗಳನ್ನು ಒಳಗೊಂಡ ಪರಿವರ್ತಿತ ಸ್ಕೀಮ್‌ನಿಂದಾಗಿ ಭಗಿನಿಯರು ಹೊಸ ಪಂಥಾಹ್ವಾನ ಎದುರಿಸಬೇಕಾಯಿತು. ಎಲ್ಲಾ ವಿಧದಲ್ಲಿ ಸೈಂಟ್ ಆಗ್ನೆಸ್ ಪರಿಪಕ್ವವಾಗಿ ಯಾವುದೇ ಪರಿಸ್ಥಿತಿಯನ್ನು ಎದುರಿಸುವಷ್ಟು ಸಾಮರ್ಥ್ಯವನ್ನು ಹೊಂದಿತು. ವೃತ್ತಿಪರ ಶಿಕ್ಷಣ ನೀಡುವ ಉದ್ದೇಶದಿಂದ ಸೆಕ್ರೆಟೇರಿಯಲ್ ಕೋರ್ಸನ್ನು ಒಂದು ಐಚ್ಛಿಕ ವಿಷಯವಾಗಿ ಸೇರಿಸಲಾಯಿತು. ಇದು ಕಾಲೇಜು ಶಿಕ್ಷಣ ಮುಂದುವರಿಸಲಾಗದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಬಹಳಷ್ಟು ಪ್ರಯೋಜನಕಾರಿಯಾಯಿತು. 80 ವಿದ್ಯಾರ್ಥಿಗಳನ್ನೊಳಗೊಂಡು ಪ್ರಾಥಮಿಕ ಶಾಲೆಯಾಗಿ ಚಿಕ್ಕಸ್ಥರದಲ್ಲಿ ಆರಂಭಗೊಂಡ ಸೈಂಟ್ ಆಗ್ನೆಸ್ ಹೈಸ್ಕೂಲ್ ಇಂದು ವಿಸ್ತಾರವಾದ 1700ರಷ್ಟು ವಿದ್ಯಾರ್ಥಿಗಳನ್ನೊಳಗೊಂಡ ಕಲರವ ಹೊಂದಿರುವ ಕ್ಯಾಂಪಸ್ ಆಗಿ ಪರಿವರ್ತಿತವಾಗಿದ್ದು ಜಿಲ್ಲೆಯಲ್ಲಿ ಜನಾನುರಾಗಿಯಾಗಿರುವ ಹೆಸರನ್ನು ಪಡೆದಿದೆ.

1960ರಲ್ಲಿ ಮುಖ್ಯ ಶಿಕ್ಷಕಿಯಾಗಿದ್ದ ಸಿಸ್ಟರ್ ವರ್ಜೀಲಿಯಾ ಇವರಿಗೆ ಆಂಗ್ಲ ಮಾಧ್ಯಮ ಶಾಲೆ ಸ್ಥಾಪಿಸುವಂತೆ ಹೆತ್ತವರಿಂದ ತೀವ್ರ ಒತ್ತಡ ಬಂತು. ಆದುದರಿಂದ 1964ರಲ್ಲಿ ಆಂಗ್ಲ ಮಾಧ್ಯಮದ 1ನೇ ತರಗತಿ ಆರಂಭಿಸಲಾಯಿತು ಮತ್ತು ಶಿಕ್ಷಣ ಇಲಾಖೆಯ ಅನುಮತಿಯೊಂದಿಗೆ ಕಿಂಡರ್ ಗಾರ್ಟನ್ ಶಾಲೆಯಲ್ಲಿ ಇದನ್ನು ಆರಂಭಿಸಲಾಯಿತು. ಇದು ಸೈಂಟ್ ಆಗ್ನೆಸ್ ಸಮ್ಮಿಶ್ರ ಶಾಲೆಯೊಂದಿಗೆ ಸೇರಿಸಲ್ಪಟ್ಟು ಸಿಸ್ಟರ್ ವರ್ಜೀಲಿಯಾ ಮುಖ್ಯ ಶಿಕ್ಷಕಿಯಾಗಿದ್ದರು. ಆನಂತರ ಪ್ರತೀ ವರ್ಷ ಒಂದೊಂದು ಹೊಸ ತರಗತಿಯನ್ನು ಸೇರಿಸಲಾಗಿದ್ದು 1971ರಲ್ಲಿ ಪೂರ್ಣ ಪ್ರಮಾಣದ ಆಂಗ್ಲ ಮಾಧ್ಯಮ ಪ್ರೈಮರಿ ಶಾಲೆಯಾಯಿತು.

ಮುಂದಿನ ವರ್ಷಗಳಲ್ಲಿ ವಿದ್ಯಾರ್ಥಿಗಳು ಉತ್ತಮ ಮಟ್ಟದ ಫಲಿತಾಂಶ ಪಡೆಯುತ್ತಾ ಬಂದಿದ್ದು ನಂತರ ಪ್ರತೀ ವರ್ಷ ಜಿಲ್ಲಾ ಮಟ್ಟದಲ್ಲಿ ಮತ್ತು ಡಯಾಸಿಸ್‌ನ ಕೆಟಕಿಸಮ್ ಪರೀಕ್ಷೆಯಲ್ಲಿ 100% ಫಲಿತಾಂಶ ಪಡೆದರು. 1965–1967ರಲ್ಲಿ 1ನೇ ಮತ್ತು 2ನೇ ತರಗತಿ ಕಿಂಡರ್ ಗಾರ್ಟನ್ ಸ್ಕೂಲ್‌ನಲ್ಲಿ ನಡೆಸಲಾಯಿತು. ಆಗ ಆಂಗ್ಲ ಮಾಧ್ಯಮಕ್ಕಾಗಿ ಹೊಸ ಕಟ್ಟಡದ ಕೂಗು ಎದ್ದಿತು. ಹೆತ್ತವರು ಆಡಳಿತ ವರ್ಗವನ್ನು ಹೊಸ ಕಟ್ಟಡ ನಿರ್ಮಾಣಕ್ಕಾಗಿ ಮನದಟ್ಟು ಮಾಡಿ ಮಕ್ಕಳ ಸೇರ್ಪಡೆ ಸಂದರ್ಭದಲ್ಲಿ ಇದಕ್ಕಾಗಿ ಹೆಚ್ಚುವರಿ ರೂ. 100/– ನೀಡುವುದಾಗಿ ಆಶ್ವಾಸನೆ ನೀಡಿದರು.

20 ಜೂನ್ 1967 ರಂದು, ಬೆಂದೂರಿನ ಫ್ಯಾರಿಸ್ ಪ್ರೀಸ್ಟ್‌ರವರು ರೆವೆ. ಫಾ। ಆಲ್ಬರ್ಟ್ ಪಿಂಟೋ, ಶಿಲಾನ್ಯಾಸ ಕಾರ್ಯಕ್ರಮವನ್ನು ಆಶೀರ್ವದಿಸಿದರು ಮತ್ತು ಕಟ್ಟಡ ನಿರ್ಮಾಣವು ಒಂದು ವರ್ಷದಲ್ಲಿ ಸಂಪೂರ್ಣಗೊಂಡಿತು. 12 ಜುಲೈ 1968 ರಂದು 4 ತರಗತಿಗಳು ವಿಸ್ತಾರವಾದ ಹೊಸ ಕಟ್ಟಡಕ್ಕೆ ಸಂಭ್ರಮದ ಕಾರ್ಯಕ್ರಮದೊಂದಿಗೆ ಸ್ಥಳಾಂತರಗೊಂಡಿತು.

ಶಾಲಾ ಪರಿವೀಕ್ಷಕರು ಶಾಲೆಗೆ ನಿರಂತರವಾಗಿ ಭೇಟಿ ನೀಡಿ ಈ ಶಾಲೆಯ ಕುರಿತಾಗಿ ಭಗಿನಿಯರ ಆಡಳಿತ ಮತ್ತು ಉನ್ನತ ಮಟ್ಟಡ ಶಿಕ್ಷಣದ ಬಗ್ಗೆ ಪೂರಕವಾದ ಷರಾಗಳನ್ನು ಬರೆದರು. ಸಯಾಯಕ ಶಿಕ್ಷಣಾಧಿಕಾರಿಯವರು (AEO) ದಿನಾಂಖ 2/12/1968 ರಂದು – “The premises are neat and attractive and the pupils seem to be quite smart.” ಮತ್ತು ಶ್ರೀ ಕೆ. ಶ್ರೀನೀವಾಸ್, AEO, ರವರು ತಮ್ಮ 01/08/1973ರಂದು “I am happy to note that the headmistress has arranged Teacher- Parents meeting every month.” ಎಂದು ಬರೆಯುತ್ತಾರೆ.

ಶ್ರೀ ಎ. ಎ. ಕುಟಿನ್ಹಾ, AEO ರವರು ದಿನಾಂಖ 19/–08–2983ರಂದು “The headmistress of the school has brought new life into the school. Found the children active and their response was good. Linguaphone and other audiovisual aids are used effectively in the school” ಎಂದು ಬರೆಯುತ್ತಾರೆ.

ಕೊನೆ ಟಿಪ್ಪಣಿಗಳು

1. ಸೋದರಿ ಎಂ. ಕ್ಸೇವಿಯರ್ ಎಸಿ, ಎ ವುಮೆನ್ ಟು ರಿಮೆಂಬರ್, ಬೆಂಗಳೂರು , ಪು .46
2. ಅಪರ್ಣಾ ಬಸು , “ಎ ಸೆಂಚುರಿ ಅಂಡ್ ಎ ಹಾಫ್ಸ್ ಜರ್ನಿ: ವುಮೆನ್ಸ್ ಎಜುಕೇಶನ್ ಇನ್ ಇಂಡಿಯಾ, 1850 ರಿಂದ 2000 ” , (ಪುಟ 183), ಭಾರತಿ ರೇ (ಸಂಪಾದಿತ), “ ವುಮೆನ್ ಆಫ್ ಇಂಡಿಯಾ: ವಸಾಹತು ಮತ್ತು ನಂತರದ ವಸಾಹತು ಅವಧಿಗಳು ” , ಸಂಪುಟ IX ಭಾಗ 3, ನವದೆಹಲಿ, 2005
3. ಅದೇ ಪುಟ, 185
4. ಅದೇ ಪುಟ, 186
5. R.V. Parulekar,” Survey of Indigenous Education In the Province of Bombay, 1820–30”, Bombay,1951. “Survey of Indigenous Education in the Madras Presidency, 1822–26”, reprinted in Dharmpal (ed). The Beautiful Tree, New Delhi, Biblia Impex Pvt. Ltd, 1983.
6. Aindrila chakraborty , “East West interface in 20th century India: analysis of western women’s responses”, Ph.D thesis, Christ University, June, 2016.

7. ಆರ್ಯ ಸಮಾಜ, ಥಿಯಾಸಾಫಿಕಲ್ ಸೊಸೈಟಿ, ರಾಮಕೃಷ್ಣ ಮಿಷನ್ ಹಾಗೂ ಇತರೆ ಸಂಸ್ಥೆಗಳು ಕ್ರಿಶ್ಚಿಯನ್ ಕಾರ್ಯಗಳಲ್ಲಿ ನೀಡಿದ ಪ್ರಮುಖ ನಂತರ ಮಹಿಳೆಯರ ಶಿಕ್ಷಣದ ಆಸಕ್ತಿ ಪಡೆಯಲು ಆರಂಭಿಸಿತು. ಇದಲ್ಲದೆ ಕ್ರಿಶ್ಚಿಯನ್ ಕಾರ್ಯಾಚರಣೆಗಳು ತಮ್ಮನ್ನು ರಾಜಕೀಯದೊಂದಿಗೆ ಆಕ್ರಮಿಸಿಕೊಳ್ಳಬಾರದು ಮತ್ತು ರಾಜಕೀಯ ಉದ್ದೇಶಗಳಿಗಾಗಿ ತಮ್ಮನ್ನು ಬಳಸಿಕೊಳ್ಳಲು ಅನುಮತಿಸಬಾರದು ಎಂದು ತಿಳಿದಿತ್ತು.

8. ಸ್ವತಃ ಯುವ ವಿಧವೆ, ರಮಾಬಾಯಿ ಎಲ್ಲಾ ಮಹಿಳೆಯರು, ವಿಶೇಷವಾಗಿ ವಿಧವೆಯರು, ಸ್ವಯಂ-ಬೆಂಬಲ ಮತ್ತು ಆರ್ಥಿಕವಾಗಿ ಸ್ವತಂತ್ರರಾಗಿರಬೇಕು ಎಂದು ಬಯಸಿದ್ದರು. ಮಹಿಳೆಯರ ಮೋಕ್ಷವು ತಮ್ಮ ಕೈಯಲ್ಲಿದೆ ಮತ್ತು ಅವರು ಪುರುಷರನ್ನು ಅವಲಂಬಿಸಬಾರದು ಎಂದು ಅವರು ಮತ್ತೆ ಮತ್ತೆ ಪುನರುಚ್ಚರಿಸಿದರು. ಅವರು ಮಹಿಳೆಯರ ಸ್ವಾತಂತ್ರ್ಯವನ್ನು ದೃಢವಾಗಿ ನಂಬಿದ್ದರು ಮತ್ತು ಮಹಿಳೆಯರ ಸ್ಥಾನವನ್ನು ಸುಧಾರಿಸುವ ಮುಖ್ಯ ಮಾರ್ಗವೆಂದರೆ ಶಿಕ್ಷಣ ಎಂದು ಅವರು ಭಾವಿಸಿದರು.

9. Kranti.K. Ferais, The Christian Impact in South Kanara, Church History Association of India, Mumbai, 1999.

10. ಅದೇ ಪುಟ, 74

11. ಜನರು ಸಾಕ್ಷರರಾಗಿದ್ದರು, ಆದರೂ ಪ್ಯಾರಿಷ್ ಶಾಲೆಗಳು ಅಸ್ತಿತ್ವದಲ್ಲಿದ್ದವು ಮತ್ತು ಬೋಧನಾ ಮಾಧ್ಯಮ ಯಾವುದು ಎಂಬುದು ಸ್ಪಷ್ಟವಾಗಿಲ್ಲ. ಗೋವಾದ ಪುರೋಹಿತರು ಬಹುಶಃ ಕೇವಲ ಪೋರ್ಚುಗೀಸ್ ಮತ್ತು ಕೊಂಕಣಿ ತಿಳಿದಿತ್ತು ಇದು ಬರೆಯಲು 'ರೋಮನ್ ಸ್ಕ್ರಿಪ್ಟ್ ಬಳಸಲಾಗುತ್ತದೆ. (Kranti.K . Ferais, ದಕ್ಷಿಣ ಕ್ರಿಶ್ಚಿಯನ್ ಇಂಪ್ಯಾಕ್ಟ್ ಕೆನರಾ, ಚರ್ಚ್ ಇತಿಹಾಸ ಅಸೋಸಿಯೇಷನ್ ಆಫ್ ಇಂಡಿಯಾ, ಮುಂಬೈ, 1999, ಪು .69

12. ".. ಸ್ವಿಜಲ್ಯಾಂಡ್ ಇವಾಂಜೆಲಿಕಲ್ ಮಿಷನ್ ಸೊಸೈಟಿ ಬಸ್ಲೆ ಆಫ್ ಹೊಂದಿವೆ ϟಜಡಿಜಚಿ ದೊಡ್ಡ ಮಿಷನ್. ಮೇಲಿನ ಮಿಷನ್ ಮನೆಯಲ್ಲಿ ಕ್ಯಾಟೆಕಿಸ್ಟ್‌ಗಳ ಸೂಚನೆಗಾಗಿ ಸೆಮಿನರಿ ಇದೆ. ಮುದ್ರಣ, ಬುಕ್‌ಬೈಂಡಿಂಗ್, ನೇಯ್ಗೆ ಮತ್ತು ಗಡಿಯಾರ ತಯಾರಿಕೆಯ ಕಲೆಗಳನ್ನು ಕಲಿಸಲು ಜರ್ಮನಿಯ ಲೇಮೆನ್ ಅಧೀಕ್ಷಕರ ಅಡಿಯಲ್ಲಿ ಕೈಗಾರಿಕಾ ವಿಭಾಗವಿದೆ. ಕೆಳಗಿನ ಮಿಷನ್ ಮನೆಯಲ್ಲಿ ಬಾಲಕಿಯರಿಗಾಗಿ ದೊಡ್ಡ ಬೋರ್ಡಿಂಗ್ ಶಾಲೆ ಇದೆ, ಮತ್ತು ಪಟ್ಟಣದಲ್ಲಿ ಇಂಗ್ಲಿಷ್ ಮತ್ತು ಸ್ಥಳೀಯ ಶಾಲೆ ಇದೆ, ಇದನ್ನು ಮಿಷನರಿಗಳಲ್ಲಿ ಒಬ್ಬರು ಮೇಲ್ವಿಚಾರಣೆ ಮಾಡುತ್ತಾರೆ, ಅವರು

ಆವರಣದಲ್ಲಿ ವಾಸಿಸುತ್ತಾರೆ. ಬಿಷಪ್ ಪ್ರಾರ್ಥನಾ ಮಂದಿರದ ಹೊರತಾಗಿ ಮೂರು ರೋಮನ್ ಕ್ಯಾಥೊಲಿಕ್ ಚರ್ಚುಗಳಿವೆ .. " ಎ ಗೆಜೆಟಿಯರ್ ಆಫ್ ಈಸ್ಟರ್ನ್ ಇಂಡಿಯಾ, ಟೆನಾಸ್ಸೆರಿಮ್ ಪ್ರಾಂತ್ಯಗಳು ಮತ್ತು ಸಿಂಗಾಪುರ, ಮದ್ರಾಸ್, 1855, ಪುಟ .553

13. ಆರಂಭದಲ್ಲಿ ಮತಾಂತರಗೊಂಡವರಿಗೆ ಪ್ರಾರಂಭವಾದ ಬಾಲಕಿಯರ ಶಾಲೆ ಹಿಂದೂ ಮತ್ತು ಮುಸ್ಲಿಂ ಬಾಲಕಿಯರಿಗೂ ಶಿಕ್ಷಣವನ್ನು ನೀಡಿತು.

14. ಅಕ್ಟೋಬರ್ 31, 1799 ರಂದು ಆಂಥೋನಿ ಅನ್‌ಫೊಸಿ ಆಗಿ ಜನಿಸಿದರು, ಸ್ಯಾನ್ ರೆಮೋದಲ್ಲಿ ಅತ್ಯಂತ ಗೌರವಾನ್ವಿತ ಮತ್ತು ಧರ್ಮನಿಷ್ಠ ಪೋಷಕರಿಗೆ ಸೇರಿದವರು. ಕುಟುಂಬವು ಇಬ್ಬರು ಗಂಡು ಮತ್ತು ಮಗಳನ್ನು ಒಳಗೊಂಡಿತ್ತು, ಅವರು ಜಗತ್ತನ್ನು ತ್ಯಜಿಸಿ ದೇವರ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು. ರೋಮ್ನಲ್ಲಿ ತನ್ನ ತತ್ತ್ವಶಾಸ್ತ್ರ ಮತ್ತು ದೇವತಾಶಾಸ್ತ್ರದ ಕೋರ್ಸ್ ಅನ್ನು ಪೂರ್ಣಗೊಳಿಸಿದ ನಂತರ ಅವರನ್ನು ಮೇ 5, 1822 ರಂದು ಅರ್ಚಕರಾಗಿ ನೇಮಿಸಲಾಯಿತು. 1825ರಲ್ಲಿ ಅವರನ್ನು ವಿದೇಶಿ ಕಾರ್ಯಾಚರಣೆಯಲ್ಲಿ ಸೇವೆ ಸಲ್ಲಿಸಲು ಭಾರತಕ್ಕೆ ಕಳುಹಿಸಲಾಯಿತು ಮತ್ತು ಆದ್ದರಿಂದ ಸೂರತ್ ನ ವಿಕಾರ್ ಮತ್ತು ಗುಜರಾತ್ ಸಂದರ್ಶಕರಾಗಿ ನೇಮಕಗೊಂಡರು. ಆಗ ಭಾರತದ ಚರ್ಚಿನ ಭಾಷೆಯಾಗಿದ್ದ ಪೋರ್ಚುಗೀಸ್ ಭಾಷೆಯನ್ನು ಅಧ್ಯಯನ ಮಾಡಲು ಅವರು ಬಹಳ ಉತ್ಸಾಹ ಮತ್ತು ಯಶಸ್ಸನ್ನು ಹೊಂದಿದ್ದರು ಮತ್ತು ಸ್ವತಃ ಹಿಂದೂಸ್ತಾನಿ ಮತ್ತು ಹಲವಾರು ಭಾರತೀಯ ಭಾಷೆಗಳ ಮಾಸ್ಟರ್ ಆಗಿದ್ದರು. ಸೂರತ್‌ನಲ್ಲಿ ಒಂಬತ್ತು ವರ್ಷಗಳ ನಂತರ ಅವರನ್ನು ಕ್ಯಾಥೆಡ್ರಲ್‌ನ ವಿಕಾರ್ ಆಗಿ 1835 ರಲ್ಲಿ ಬಾಂಬೆಗೆ ಕರೆಸಲಾಯಿತು. ನಂತರ ಅವರನ್ನು ಮಂಗಳೂರಿನ ವಿಕಾರ್ ಅಪೊಸ್ಟೋಲಿಕ್ ಆಗಿ ನೇಮಿಸಲಾಯಿತು. ಅವರ ಆರಂಭಿಕ ಉತ್ಸಾಹವು ಪಾದ್ರಿಗಳ ಹೆಚ್ಚು ಮತ್ತು ಉತ್ಸಾಹಭರಿತ ದೇಹವನ್ನು ಮತ್ತು ಉತ್ತಮ ವಿದ್ಯಾವಂತ ಜನಸಾಮಾನ್ಯರನ್ನು ರಚಿಸುವುದು. ಮಂಗಳೂರಿಗೆ ಆಗಮಿಸಿದ ಸ್ವಲ್ಪ ಸಮಯದ ನಂತರ ಅವರು ಜೆಪ್ಪುವಿನ ಡಯೋಸಿಸನ್ ಸೆಮಿನರಿ ಈಗ ನಿಂತಿರುವ ನೆಲವನ್ನು ಖರೀದಿಸಿದರು ಮತ್ತು ಈಗ ಆಚರಿಸುತ್ತಿರುವ ಆ ಸಂಸ್ಥೆಯ ಅಡಿಪಾಯವನ್ನು ಹಾಕಿದರು. ಅವರ ಅಧಿಕಾರಾವಧಿಯಲ್ಲಿ ಕೆನರಾದ ಒಳಭಾಗದಲ್ಲಿರುವ ಹಲವಾರು ಪ್ರಾಥಮಿಕ ಸ್ಥಳೀಯ ಶಾಲೆಗಳನ್ನು ಸ್ಥಳೀಯ ಚರ್ಚುಗಳ ವಿಕಾರ್‌ಗಳ ಸಹಾಯದಿಂದ ತೆರೆಯಲಾಯಿತು.

15. ಶ್ರೀ ಆಂಟನಿ ಜಸ್ಟಿನ್ ಸಲ್ಡಾನ್ಹಾ (1815–1872) 1857 ರಲ್ಲಿ ಮಂಗಳೂರಿನಲ್ಲಿ ಬಾಲಕಿಯರಿಗಾಗಿ ಮೊದಲ ಶೈಕ್ಷಣಿಕ ಸ್ಥಾಪನೆಯನ್ನು ಸ್ಥಾಪಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ (ಮೈಕ್ಷೇಲ್. ಪು.472)

16. ಕೆನರಾ ಮತ್ತು ಮಲಬಾರ್ ಶಾಲೆಯ ಇನ್ಸ್‌ಪೆಕ್ಟರ್ ಶ್ರೀ ಗಾರ್ತ್‌ವೈಟ್ , ಕ್ಯಾಥೆಡ್ರಲ್ ಬಳಿ ಕ್ರಿಸ್ಟಿನಾ ಬ್ರದರ್ಸ್ ಕಲಿಸಿದ ಸೇಂಟ್ ಮೇರಿಸ್ ಶಾಲೆಯ ವರದಿಯನ್ನು ವರದಿ ಮಾಡಲು ಸಾಧ್ಯವಾಯಿತು– " ಈ ಶಾಲೆಯನ್ನು ಒಂಬತ್ತು ವರ್ಷಗಳ ಹಿಂದೆ ಸ್ಥಾಪಿಸಲಾಯಿತು ಮತ್ತು ಮೊದಲಿನಿಂದಲೂ ಪರಿಶೀಲನೆಯಲ್ಲಿದೆ ಕಳೆದ ವರ್ಷಗಳಲ್ಲಿ. ಇದು ಒಂದು ದೊಡ್ಡ ಶಾಲೆಯಾಗಿದ್ದು, ಇದು ವರ್ಷದಲ್ಲಿ ಒಂದು ಸಮಯದಲ್ಲಿ, 6 ಶಿಕ್ಷಕರೊಂದಿಗೆ 285 ವಿದ್ಯಾರ್ಥಿಗಳನ್ನು ಹೊಂದಿದೆ. ಆದರೆ "ಬ್ರದರ್ಸ್" ನ ಹಿತಕರವಾದ ಪ್ರಯತ್ನಗಳಿಗಾಗಿ ಸಂಪೂರ್ಣವಾಗಿ ನಿರ್ಲಕ್ಷ್ಯ ವಹಿಸಿರಬೇಕು, ಏಕೆಂದರೆ ಅವರು ಶುಲ್ಕ ಪಾವತಿಸಲು ಅಥವಾ ಪುಸ್ತಕಗಳಿಗೆ ತುಂಬಾ ಬಡವರಾಗಿದ್ದಾರೆ ಮತ್ತು ವಿರಳವಾಗಿ ಸಮರ್ಥರಾಗಿದ್ದಾರೆ ಎಂದು ತಮ್ಮನ್ನು ಗೌರವದಿಂದ ಕಾಣುವರು ಎಂದು ಹೇಳಿದರು.

17. ಕ್ರಿಶ್ಚಿಯನ್ ಅಥವಾ ಮಿಷನ್ ಸಂಸ್ಥೆಗಳಿಂದ ಪಡೆದ ಆದಾಯವು ಸರ್ಕಾರಿ ಸಂಸ್ಥೆಗಳಿಗಿಂತ ಕಡಿಮೆಯಿದ್ದರೂ ಇಂಗ್ಲಿಷ್ ಭಾಷೆಯಲ್ಲಿ ಪಾಶ್ಚಿಮಾತ್ಯ ಶಿಕ್ಷಣವನ್ನು ಕಡಿಮೆ ಆದಾಯದ ಸ್ಥಿತಿಯ ಮಕ್ಕಳಿಗೆ ಸ್ಥಳೀಯ ಸಬ್ಸಿಡಿಗಳೊಂದಿಗೆ ಶಿಕ್ಷಣವನ್ನು ಸಹ ನೀಡಲಾಯಿತು. ಕ್ರಮೇಣ ಕ್ರಿಶ್ಚಿಯನ್ ಸಂಸ್ಥೆಗಳು ಹೆಚ್ಚು ಜನಪ್ರಿಯವಾದವು ಮತ್ತು ಜಾತಿ ಅಡೆತಡೆಗಳನ್ನು ನಿವಾರಿಸಿದ ನಂತರ ಹೆಚ್ಚಿನ ಬೇಡಿಕೆಯನ್ನು ಹೊಂದಿದ್ದವು. ವುಡ್ಸ್ ರವಾನೆ ಅನುದಾನ–ಸಹಾಯದ ವ್ಯವಸ್ಥೆಯನ್ನು ನೀಡಿತು, ಇದರ ಮೂಲಕ ಖಾಸಗಿ ಸಂಸ್ಥೆಗಳಿಗೆ ಸರ್ಕಾರಿ ನಿಯಮಗಳು ಮತ್ತು ಪರಿಶೀಲನೆಯನ್ನು ಪರಿಚಯಿಸಲು ಸಹಾಯ ಮಾಡಿತು, ಇದರರ್ಥ ನಿರ್ಬಂಧಿತ ಎನ್ .. " (ಕ್ರಾಂತಿ , ಪು .97)

18. ಸೇಂಟ್ ಜೋಸೆಫ್ ಆಫ್ ದಿ ಅಪರಿಷನ್‌ನ ಸನ್ಯಾಸಿಗಳು ಶೀಘ್ರದಲ್ಲೇ ಇಲ್ಲಿ ತಮ್ಮ ಅಸ್ತಿತ್ವವು ಅವರ ಯೋಜನೆಗಳನ್ನು ನಿರ್ವಹಿಸುವ ರೀತಿಯಲ್ಲಿ ಸ್ವಲ್ಪಮಟ್ಟಿಗೆ ನಿಂತಿದೆ ಎಂದು ಅರಿತುಕೊಂಡರು, ಮತ್ತು ಅವರೊಂದಿಗಿನ ಅವರ ಸಂಬಂಧವು ಎಲ್ಲಾ ಸಮಯದಲ್ಲೂ ಸಾಮರಸ್ಯವನ್ನು ಹೊಂದಿರದ ಕಾರಣ, ಅವರು ಕ್ಯಾನನೋರ್‌ಗೆ ಹಿಂತೆಗೆದುಕೊಂಡರು 1868 ರಲ್ಲಿ, ಮತ್ತು 2 ವರ್ಷಗಳ ನಂತರ ಅವರ ಸಮುದಾಯಗಳು ವಿಭಜನೆಯಾದವು ಅವರಲ್ಲಿ ಹೆಚ್ಚಿನವರು ಕಾರ್ಮೆಲೈಟ್ ತೃತೀಯ ಸನ್ಯಾಸಿಗಳಿಗೆ ಸೇರಿಕೊಂಡರು, ಅವರು ಆ ಸಮಯದಲ್ಲಿ ಪರಿಚಯಿಸಲ್ಪಟ್ಟರು, ಮತ್ತು 4 ಮಿಷನ್ ತೊರೆದರು.

19. ಭಾರತಿ ರೇ (ಎಡ್), ವುಮೆನ್ ಆಫ್ ಇಂಡಿಯಾ: ವಸಾಹತು ಮತ್ತು ನಂತರದ ವಸಾಹತು ಅವಧಿಗಳು, ಸಂಪುಟ IX ಭಾಗ 3, ನವದೆಹಲಿ, 2005

20. ಶ್ರೀಮತಿ ಆನಿ ಬೆಸೆಂಟ್ 1893 ರಲ್ಲಿ ಥಿಯೋಸೊಫಿಯಲ್ಲಿ ಕೆಲಸ ಮಾಡಲು ಭಾರತಕ್ಕೆ ಬಂದರು. ಇದು ಮದ್ರಾಸ್ ಪ್ರೆಸಿಡೆನ್ಸಿಯ ಪ್ರವಾಸ ಮತ್ತು ಮುಖ್ಯ ವಿಷಯವಾದ ಗೃಹ ನಿಯಮ ಮತ್ತು ಮಹಿಳಾ ಶಿಕ್ಷಣದ ಕುರಿತು ಅವರ ಉಪನ್ಯಾಸವನ್ನು ದಾಖಲಿಸಿದೆ. ಶಿಕ್ಷಣ ಅವರು "ಮಕ್ಕಳಿಗೆ ಕಲಿಸಬೇಕು, ಹೇಗೆ ಯೋಚಿಸಬೇಕು, ಆದರೆ ಅವರಿಗೆ ಎಂದಿಗೂ ಹೇಳಬಾರದು, ಏನು ಯೋಚಿಸಬೇಕು" ಎಂದು ಹೇಳಿದರು.

21. ಫ್ರಾ. ಡೆನಿಸ್ ಫೆರ್ನಾಂಡಿಸ್ ಎಸ್.ಜೆ (1867–1936) ಶ್ರೀ ಪೀಡಾಡೆ ಫ್ರಾನ್ಸಿಸ್ ಫೆರ್ನಾಂಡಿಸ್ (ಕಲೆಕ್ಟರ್ ಕಚೇರಿಯ ಕಂದಾಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು ಮತ್ತು ಖಜಾನೆ ಉಪ ಕಲೆಕ್ಟರ್ ಆಗಿ ನಿವೃತ್ತರಾಗಿದ್ದರು) ಅವರ ಪುತ್ರರಾಗಿದ್ದರು, ಅವರು ಜೆಸ್ಯೂಟ್ ಪ್ರೀಸ್ಟ್ ಆಗಿದ್ದರು. ಸೇಂಟ್ ಅಲೋಶಿಯಸ್ ಕಾಲೇಜಿನಲ್ಲಿ ಮತ್ತು 1918–1922ರವರೆಗೆ ಶಾಲೆಯ ಮುಖ್ಯ ಶಿಕ್ಷಕರಾಗಿದ್ದರು. ಹೆಚ್ಚು ಸಾಮಾನ್ಯವಾಗಿ ಅವರು ಭಾಷಾಶಾಸ್ತ್ರಜ್ಞ, ಬರಹಗಾರ, ಶಿಕ್ಷಕ ಮತ್ತು ಬೋಧಕರಾಗಿ ಪ್ರಸಿದ್ಧರಾಗಿದ್ದರು. ಬರಹಗಾರರಾಗಿ, ಅವರು ಈಡಿ. ಮೂರ್, ಎಸ್.ಜೆ., 'ಮಂಗಳೂರು ಮ್ಯಾಗಜೀನ್' (1908–14) ನ ಸಂಪಾದಕರಾಗಿ, ಮತ್ತು ಫ್ರಾ. ಥಾಮಸ್ ಸ್ಟೀಫನ್ ಅವರ ಕ್ರಿಶ್ಚಿಯನ್ ಪುರಾಣ. ಬೋಧಕನಾಗಿ, ಅವರು ಹಲವಾರು ವೃತ್ತಿಗಳನ್ನು, ವಿಶೇಷವಾಗಿ ಕಾನ್ವೆಂಟ್‌ಗಳನ್ನು ಬೆಳೆಸಿದರು. ಮಹಿಳೆಯರಿಗಾಗಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸುವ ಪ್ರಯತ್ನದಲ್ಲಿ ಅವರು ಮದರ್ ಅಲೋಶಿಯಾದ ಪ್ರಮುಖ ಸಲಹೆಗಾರರಾಗಿದ್ದರು– ಇದರ ಪರಿಣಾಮವಾಗಿ 1921 ರಲ್ಲಿ ಸೇಂಟ್ ಆಗ್ನೆಸ್ ಕಾಲೇಜಿನ ಅಡಿಪಾಯವಾಯಿತು. (ಮೈಕೆಲ್ ಲೋಬೊ, "ಡಿಸ್ಟಿಂಗ್ವಿಶ್ಡ್ ಮಂಗಳೂರಿ ಕ್ಯಾಥೊಲಿಕ್" (1800–2000), ಕ್ಯಾಮೆಲೋಟ್ ಪಬ್ಲಿಕೇಶನ್, ಮಂಗಳೂರು, 2002, ಪು .243)

22. ಸೇಂಟ್ ಅಲೋಶಿಯಸ್ ಕಾಲೇಜಿನಿಂದ ಲೇ ಸಿಬ್ಬಂದಿ ಬಂದರು. ಏತನ್ಮಧ್ಯೆ, ಮದರ್ ಅಲೋಶಿಯಾ ಸಂಸ್ಥೆಯ ಸದಸ್ಯರನ್ನು ಅರ್ಹತೆ ಪಡೆಯಲು ಎಚ್ಚರವಾಗಿತ್ತು. ಕೆಲವನ್ನು ಖಾಸಗಿ ಅಧ್ಯಯನಕ್ಕಾಗಿ ಕಳುಹಿಸಲಾಯಿತು, ಮತ್ತು ಇತರರನ್ನು ಸ್ಥಳೀಯ ಅಥವಾ ಮೆಟ್ರೋಪಾಲಿಟನ್ ಕಾಲೇಜುಗಳಿಗೆ ಕಳುಹಿಸಲಾಗಿದೆ. ಶಿಶು ಕಾಲೇಜಿನ ಹಾದಿಯನ್ನು ಸುತ್ತುವರೆದಿರುವ ತೊಂದರೆಗಳು ಅನೇಕ ಮತ್ತು ದೊಡ್ಡವು. ಮದರ್ ಅಲೋಶಿಯಾ ಒಬ್ಬಂಟಿಯಾಗಿ ನಿಂತಳು, ಅವಳ ನಂಬಿಕೆಯು ದೇವರ ಮೇಲೆ ದೃಢವಾಗಿ ನಿಂತಿದೆ ಮತ್ತು ಕಾಲೇಜು ಬೇರುಗಳನ್ನು ನೋಡಿದೆ

23. 1981ರಲ್ಲಿ ವಾರ್ಷಿಕ ವರದಿಯ ಪ್ರಕಾರ ಕಾಲೇಜಿನ ಸಾಮರ್ಥ್ಯ 1807 ಆಗಿತ್ತು.

24. ಸೈಂಟ್ ಆಗ್ನೆಸ್ ಕಾಲೇಜು, ಪ್ಲಾಟಿನಂ ಜುಬಿಲಿ ಸ್ಮಾರಕ 1920–1996, ಮಂಗಳೂರು.(ಪು .21)

25. ಅದುವರೆಗೆ ಸೈಂಟ್ ಆನ್ಸ್ ಕಾಲೇಜ್ ಕರೆಯಲಾಯಿತು, 1924, ಫೆಬ್ರುವರಿ 19 ರಂದು ಸೈಂಟ್ ಆಗ್ನೆಸ್ ಹೆಸರಿಡಲಾಯಿತು.

26. ಸ್ಟೆಲ್ಲಾ ರಾಚೆಲ್ ಡಿಸೋಜಾ (ಎಸ್.ಆರ್. ಬೆನೆಡಿಕ್ಟಾ, ಎಸಿ) (1900–75) ಎಲಿಯಾಸ್ ಡಿಸೋಜ ಅವರ ಹಿರಿಯ ಮಗಳು ಕಾಫಿ ಎಸ್ಟೇಟ್‌ನಲ್ಲಿ ಬರಹಗಾರರಾಗಿದ್ದರು. ಅವಳು ಅಪೊಸ್ಟೋಲಿಕ್ ಕಾರ್ಮೆಲ್‌ನ ವಿಶಿಷ್ಟ ಸದಸ್ಯೆಯಾಗಿದ್ದಳು; ಪಾಟ್ನಾ ಮಹಿಳಾ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು. (ಮೈಕೆಲ್ ಲೋಬೊ, "ಡಿಸ್ಟಿಂಗ್ವಿಷ್ಡ್ ಮಂಗಳೂರು ಕ್ಯಾಥೊಲಿಕರು (1800–2000), ಕ್ಯಾಮೆಲೋಟ್ ಪಬ್ಲಿಕೇಶನ್, ಮಂಗಳೂರು, 2002, ಪು .207)

27. ಕಾಲೇಜಿನ ಈ ಧ್ಯೇಯವಾಕ್ಯವು ಸೂಕ್ತವಾದ ವಾಚ್ ವರ್ಡ್ ಆಗಿತ್ತು.

28. ಲಿಲಿ ಕೊಲಾಸೋ (ಮದರ್ ಥಿಯೊಡೋಸಿಯಾ ಎಸಿ) (1899–1995) ಸೇರಿದ್ದು ಪ್ರಸಿದ್ಧ ಕೊಲಾಸೋ ಕಾಮತ್ ಆಫ್ ಹೊಸಪೇಟೆಯ ಕುಟುಂಬ. ಅವರು ಡಾ. ಬೊನಾವೆಂಚರ್ ಮ್ಯಾನುಯೆಲ್ ಕೊಲಾಸೊ ಅವರ ಏಕೈಕ ಪುತ್ರಿ, ಅವರು ಪ್ರಖ್ಯಾತ ಅಪೊಸ್ಟೋಲಿಕ್ ಕಾರ್ಮೆಲೈಟ್. ಪ್ರಾಂಶುಪಾಲರು, ಸೇಂಟ್ ಆಗ್ನೆಸ್ ಕಾಲೇಜ್ (1934–43), ನಲ್ಲಿ ಅವರು ಎಲ್ಟಿ ಕೋರ್ಸ್ ಅನ್ನು ಪರಿಚಯಿಸಿದರು. ಪ್ರಾಂಶುಪಾಲರು, ಮಹಿಳಾ ಕಾಲೇಜು, ಪಾಟ್ನಾ (1959–71). 1971ರಲ್ಲಿ ಪದ್ಮಶ್ರೀ ಪ್ರಶಸ್ತಿ ಪಡೆದರು. ಸುಪೀರಿಯರ್ ಜನರಲ್ ಆಗಿ, ಅವರು ಮೆಲ್ಬೋರ್ನ್, ಪೋರ್ಟ್ ಬ್ಲೇರ್ ಮತ್ತು ಕುವೈತ್‌ನಲ್ಲಿ ಮನೆಗಳನ್ನು ತೆರೆದರು. ಅವರು ಭಾರತದ ಧಾರ್ಮಿಕ ಸಮ್ಮೇಳನದ (ಮಹಿಳಾ ಶಾಖೆ) ಅಧ್ಯಕ್ಷರಾಗಿದ್ದರು, ರೋಮ್‌ನಲ್ಲಿನ ಇಂಟರ್‌ನ್ಯಾಷನಲ್ ಯೂನಿಯನ್ ಆಫ್ ಸುಪೀರಿಯರ್ ಜನರಲ್‌ಗೆ ಭಾರತದಿಂದ ಪ್ರತಿನಿಧಿ ಮತ್ತು ಕೌನ್ಸಿಲರ್ ಆಗಿದ್ದರು ಮತ್ತು ನಂಬಿಕೆಯ ಪ್ರಸಾರಕ್ಕಾಗಿ ಪವಿತ್ರ ಸಭೆಗೆ ಸಲಹೆಗಾರರಾಗಿದ್ದರು. ಅವಳು ತನ್ನ ಕೊನೆಯ ವರ್ಷಗಳನ್ನು ಪಾಟ್ನಾದಲ್ಲಿ ಕಳೆದಳು. ಅವರ ಸಹೋದರ ಬಾಂಬೆಯಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರ್ ಆಗಿದ್ದರು, ಇನ್ನೊಬ್ಬ ಮುಖ್ಯ ವಾಣಿಜ್ಯ ಅಧೀಕ್ಷಕರು, ಪಶ್ಚಿಮ ರೈಲ್ವೆ, ಬಾಂಬೆ. ಮದ್ರಾಸ್‌ನಲ್ಲಿ ಮತ್ತೊಬ್ಬ ಪತ್ರಕರ್ತ.

29. 1914 ರಲ್ಲಿ, ಭಾರತದಾದ್ಯಂತ ಕೇವಲ 89 ಮಹಿಳಾ ವೈದ್ಯಕೀಯ ವಿದ್ಯಾರ್ಥಿಗಳು ಇದ್ದರು ಮತ್ತು ಅವರಲ್ಲಿ ಹೆಚ್ಚಿನವರು ಪಾರ್ಸಿಗಳು, ಭಾರತೀಯ ಕ್ರಿಶ್ಚಿಯನ್ನರು ಮತ್ತು ಯುರೋಪಿಯನ್ನರು ವ್ಯಾಸಂಗ ಮಾಡುತ್ತಿದ್ದರು. ಕೆಲವೇ ಕೆಲವು ಹಿಂದೂ ಮತ್ತು ಮುಸ್ಲಿಂ ಹುಡುಗಿಯರು ವೈದ್ಯಕೀಯ ಕಾಲೇಜುಗಳಿಗೆ ಹೋಗಿದ್ದರು ಮತ್ತು ಪೋಷಕರು ತಮ್ಮ ಹೆಣ್ಣುಮಕ್ಕಳನ್ನು ಸಹ-ಶಿಕ್ಷಣ

ಕಾಲೇಜುಗಳಿಗೆ ಕಳುಹಿಸಲು ಇಷ್ಟವಿಲ್ಲದ ಕಾರಣ ಇದು ಎಂದು ನಂಬಲಾಗಿತ್ತು. ಇದನ್ನು ಗಮನದಲ್ಲಿಟ್ಟುಕೊಂಡು, ಲೇಡಿ ಹಾರ್ಡಿಂಗ್ ವೈದ್ಯಕೀಯ ಕಾಲೇಜನ್ನು ದೆಹಲಿಯಲ್ಲಿ 1916ರಲ್ಲಿ ತೆರೆಯಲಾಯಿತು. ಸ್ವಾತಂತ್ರ್ಯದವರೆಗೆ ಇದು ಹುಡುಗಿಯರಿಗೆ ಮಾತ್ರ ಭಾರತದ ಏಕೈಕ ವೈದ್ಯಕೀಯ ಕಾಲೇಜು.

30. ಪಶ್ಚಿಮ ಘಟ್ಟದಿಂದ ಹೆಚ್ಚಿನ ಸಂಖ್ಯೆಯ ಬೋರ್ಡರ್‌ಗಳು ಇದ್ದರು, ಆ ಸಮಯದಲ್ಲಿ ಅವರು ಬೇರೆ ಕಲಿಕೆಯ ಕೇಂದ್ರಗಳನ್ನು ಹೊಂದಿರಲಿಲ್ಲ. ಅವರಲ್ಲಿ ಹೆಚ್ಚಿನವರು ಕಾಫಿ ತೋಟಗಾರರ ಕುಟುಂಬದಿಂದ ಬಂದವರು ಆದರೆ 1940ರ ನಂತರ ಅತ್ಯಂತ ಕಳಪೆ ಹಿನ್ನೆಲೆಯ ವಿದ್ಯಾರ್ಥಿಗಳು ಕಾರ್ಮೆಲ್ ಸಂಸ್ಥೆಗಳಲ್ಲಿ ಸ್ಥಾನಗಳನ್ನು ಪಡೆಯುವಲ್ಲಿ ಯಶಸ್ವಿಯಾದರು. ಹೀಗೆ ಕ್ರಮೇಣ, ಹಾಸ್ಟೆಲ್‌ಗಳಲ್ಲಿ ವಿಶೇಷವಾಗಿ ಕೊಡಗು, ಹಾಸನ, ಚಿಕಮಂಗಳೂರು ಕಡೆಗಳಿಂದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಬರುತ್ತಿದ್ದರು.

31. ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ಸ್ಥಾನವನ್ನು ಪಡೆದ ಮೊದಲ ಮಂಗಳೂರಿನವರಲ್ಲಿ ಒಬ್ಬರು (ಮೈಕೆಲ್ ಲೋಬೊ, 278)

32. 1956 ರಲ್ಲಿ ರಾಜ್ಯಗಳ ಮರುಸಂಘಟನೆಯಾಗುವವರೆಗೂ ಅವಿಭಜಿತ ದಕ್ಷಿಣ ಕೆನರಾ ಜಿಲ್ಲೆ ಮದ್ರಾಸ್ ಪ್ರೆಸಿಡೆನ್ಸಿಯ ಅಡಿಯಲ್ಲಿತ್ತು. ಆದ್ದರಿಂದ ಗೊಸ್ಚೆನ್ ಮದ್ರಾಸ್‌ನ ಗವರ್ನರ್ ಆಗಿ ಸೇವೆ ಸಲ್ಲಿಸಿದಾಗ, ಲೇಡಿ ಗೊಸ್ಚೆನ್ ಅವರು ಮಂಗಳೂರಿಗೆ ಭೇಟಿ ನೀಡಿದಾಗಲೆಲ್ಲಾ ಅವರೊಂದಿಗೆ ಬಂದರು. ನಗರದ ಮಕ್ಕಳ ಆಸ್ಪತ್ರೆಗೆ ಅವಳ ಹೆಸರನ್ನು ಇಡಲಾಗಿದೆ. (www.ancient mangalore.com)

33. ತನ್ನ ಕೊಡುಗೆ ಗುರುತಿಸಿ ವರ್ಷದ 1971 ಅವರು 'ಪದ್ಮ ಪ್ರಶಸ್ತಿ'ಗೆ ಪಾತ್ರರಾದರು.

34. ಈ ಅವಧಿಯಲ್ಲಿ ಕಾಲೇಜಿನ ಚಟುವಟಿಕೆಗಳಲ್ಲಿ ಗಮನಾರ್ಹವಾದುದು ಕಾಲೇಜಿನ ವಿವಿಧ ಇಲಾಖೆಗಳು ಆಯೋಜಿಸಿದ ವಿಹಾರಗಳು. ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ ಪ್ರಮುಖ ವಿದ್ಯಾರ್ಥಿಗಳು ಕೊಡೈಕೆನಾಲ್, ಮಧುರೈ, ರಾಮೇಶ್ವರಂ, ಮಂಟಪ ಮತ್ತು ಕ್ರುಸಡಿ ದ್ವೀಪಗಳಂತಹ ಸ್ಥಳಗಳಿಗೆ ಮಾದರಿ ಸಂಗ್ರಹಕ್ಕಾಗಿ ಹೋದರು. ರಸಾಯನಶಾಸ್ತ್ರ ಪ್ರಮುಖ ವಿದ್ಯಾರ್ಥಿಗಳು ಅಲ್ವೇ, ಎರ್ನಾಕುಲಂ ಮತ್ತು ಕೊಚ್ಚಿನ್‌ನಲ್ಲಿ ಹಲವಾರು ಕಾರ್ಖಾನೆಗಳಿಗೆ ಭೇಟಿ ನೀಡಿದರು. ಅರ್ಥಶಾಸ್ತ್ರ ಮತ್ತು ರಾಜಕೀಯ ವಿಜ್ಞಾನ ಪ್ರಮುಖ ವಿದ್ಯಾರ್ಥಿಗಳು ಕೊಚ್ಚಿನ್, ಮಲಾಂಪುಜಾ ಅಣೆಕಟ್ಟು, ಮದ್ರಾಸ್ ಮತ್ತು ದೆಹಲಿಯಂತಹ ಸ್ಥಳಗಳಿಗೆ ಹೋದರು. ಇತಿಹಾಸ ವಿದ್ಯಾರ್ಥಿಗಳು ಮದ್ರಾಸ್,

ದೆಹಲಿ, ಮುಸೊರಿ, ಆಗ್ರಾ ಮತ್ತು ಜೈಪುರ ಮತ್ತು ಐತಿಹಾಸಿಕ ಮಹತ್ವದ ಇತರ ಸ್ಥಳಗಳಿಗೆ ಭೇಟಿ ನೀಡಿದರು. ಸೈಕಾಲಜಿ ವಿದ್ಯಾರ್ಥಿಗಳು ಮಾನಸಿಕ ಆಸ್ಪತ್ರೆ ವಾರ್ಡ್‌ಗೆ ತೆರಳಿದರು. ಮುಲ್ಲರ್ಸ್ ಆಸ್ಪತ್ರೆ ತಮ್ಮ ಅಧ್ಯಯನಗಳನ್ನು ಸ್ಥಳದಲ್ಲೇ ವೀಕ್ಷಿಸಲು ಪೂರಕವಾಗಿದೆ. ಮಧ್ಯಕಾಲೀನ ರಜೆಯ ಸಮಯದಲ್ಲಿ ಕಾಲೇಜು ಮಟ್ಟದಲ್ಲಿ ವಿಹಾರವನ್ನು ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ಮದ್ರಾಸ್, ಬಾಂಬೆ, ಚಂಡೀಗಡ, ದೆಹಲಿ ಮತ್ತು ಇತರ ಸ್ಥಳಗಳಿಗೆ ಹೋದರು. ಕೆಲವು ವಿದ್ಯಾರ್ಥಿಗಳು ನವದೆಹಲಿ ಭೇಟಿಯ ಸಮಯದಲ್ಲಿ ಪ್ರಧಾನಿ ಮತ್ತು ದೇಶದ ರಾಷ್ಟ್ರಪತಿಯನ್ನು ಭೇಟಿ ಮಾಡುವ ಭಾಗ್ಯವನ್ನು ಹೊಂದಿದ್ದರು.

35. 1947–48ರ ವರ್ಷವು ಸಂಸ್ಥೆಯ ಇತಿಹಾಸದಲ್ಲಿ ಹೊಸ ಘಟನೆಗಳನ್ನು ದಾಖಲಿಸಿದೆ. ಆಗಸ್ಟ್ 15, 1947 ರಂದು ಒಂದು ಮಹತ್ವದ ಬದಲಾವಣೆ ಸಂಭವಿಸಿತು. ಈ ಸ್ಮರಣೀಯ ದಿನದಂದು ಭಾರತವು ಬ್ರಿಟಿಷ್ ಆಡಳಿತದಿಂದ ತನ್ನ ಸ್ವಾತಂತ್ರ್ಯವನ್ನು ಗೆದ್ದಿತು. ಇದು ರಾಷ್ಟ್ರವ್ಯಾಪಿ ಸಂತೋಷದ ದಿನವಾಗಿತ್ತು. ಸೈಂಟ್ ಆಗ್ನೆಸ್ ಕಾಲೇಜು ಆ ದಿನದ ಸಂತೋಷವನ್ನು ಆಸ್ವಾದಿಸಿತು, ಅದು ದೇವರಿಗೆ ಕೃತಜ್ಞತೆಯಿಂದ ಗುರುತಿಸಲ್ಪಟ್ಟಿತು.

36. ನಂತರ ಈ ಕಾಲೇಜಿನಲ್ಲಿ ಅಧ್ಯಯನ ಮಾಡಿದ ಅನೇಕ ವಿದ್ಯಾರ್ಥಿಗಳು ಮಂಗಳೂರಿನ ಬೆಥನಿ, ಉರ್ಸುಲಿನ್ ಮತ್ತು ಸಿಸ್ಟರ್ಸ್ ಆಫ್ ಚಾರಿಟಿ ಮುಂತಾದ ಹೊಸ ಧಾರ್ಮಿಕ ಸಭೆಗಳ ಪ್ರವರ್ತಕ ಸನ್ಯಾಸಿಗಳಾಗಿ ಹೊರಹೊಮ್ಮಿದರು.

37. ಸ್ವಾತಂತ್ರ್ಯದ ನಂತರ ರಚನೆಯಾದ ಮೊದಲ ಶಿಕ್ಷಣ ಆಯೋಗ, ಡಾ. ರಾಧಾಕೃಷ್ಣನ್ ನೇತೃತ್ವದ ಭಾರತೀಯ ವಿಶ್ವವಿದ್ಯಾಲಯಗಳ ಆಯೋಗ (1948–49) ಮಹಿಳಾ ಶಿಕ್ಷಣದ ಮಹತ್ವ ಮತ್ತು ಮಹಿಳೆಯರಿಗೆ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ವ್ಯಕ್ತಪಡಿಸಲು ಅವಕಾಶಗಳನ್ನು ಒದಗಿಸುವ ಅಗತ್ಯವನ್ನು ಗಮನಿಸಿತು. ಮೊದಲ ಎರಡು ಪಂಚವಾರ್ಷಿಕ ಯೋಜನೆಗಳು ಮಹಿಳಾ ಶಿಕ್ಷಣವನ್ನು ಮಹಿಳೆಯರಿಗೆ ವೃತ್ತಿಯ ತರಬೇತಿಗಾಗಿ ಜೋಡಿಸಲು ಪ್ರಯತ್ನಿಸಿದವು.

38. ಇಂದಿರಾ ಗಾಂಧಿ ಮಂಗಳೂರಿನೊಂದಿಗೆ ವಿಶೇಷ ಸಂಪರ್ಕವನ್ನು ಹೊಂದಿದ್ದರು. ಆಕೆಯ ತಂದೆ ಪಂಡಿತ್ ಜವಾಹರಲಾಲ್ ನೆಹರು ಆಧುನಿಕ ದಕ್ಷಿಣ ಕನ್ನಡದ ವಾಸ್ತುಶಿಲ್ಪಿ ಉಲ್ಲಾಳ ಶ್ರೀನಿವಾಸ್ ಮಲ್ಯ ಅವರೊಂದಿಗೆ ವಿಶೇಷ ಬಾಂಧವ್ಯವನ್ನು ಹಂಚಿಕೊಂಡಿದ್ದಾರೆ.

39. ಎನಿಡ್ ಸಲ್ಡಾನಾ (ಸಿನಿಯರ್ ಕಾರ್ಮೆಲಿಟಾ ಎಸಿ) ಹಿರಿಯ ಮಗಳ ತಹಶೀಲ್ದಾರ್ ವಿಕ್ಟರ್ ಸಲ್ಡಾನ, ಪ್ರಶಸ್ತಿ ಕಿಂಗ್ ಜಾರ್ಜ್ V ಪಟ್ಟಾಭಿಷೇಕದ ಮೆಡಲ್ 1935ರಲ್ಲಿ ಮತ್ತು ಪ್ರೊ ಎಕ್ಲೇಷಿಯಾ

ಎಟ್ Pontifice 1963ರಲ್ಲಿ ಅವರ ತಂದೆ ಜೋಕಿಮ್ ಎಲ್ ಸಲ್ಡಾನಾ ಏರಿಸಲಾಯಿತು ಸ್ಥಾನವನ್ನು ತಹಶೀಲ್ದಾರ್ 36 ವಯಸ್ಸಿನಲ್ಲಿ ತದನಂತರ ಉಪ ಕಲೆಕ್ಟರ್ ನೇಮಕ. ಸೀನಿಯರ್ ಕಾರ್ಮೆಲಿಟಾ ಎ. ಸಿ ವಿಶೇಷ ಶಿಕ್ಷಣ ತಜ್ಞ, ಅವರು ಮಂಗಳೂರಿನ ಸೈಂಟ್ ಆನ್ಸ್ ತರಬೇತಿ ಕಾಲೇಜಿನ ಪ್ರಾಂಶುಪಾಲರಾಗಿದ್ದರು (1949–58), ಮಂಗಳೂರಿನ ಸೈಂಟ್ ಆಗ್ನೆಸ್ ಕಾಲೇಜಿನ (1960–63), ಮತ್ತು ನಂತರ ಕ್ಯಾಲಿಕಟ್‌ನ ಪ್ರಾವಿಡೆನ್ಸ್ ಕಾಲೇಜು ಮತ್ತು ಪಾಟ್ನಾದ ಅವಿಲಾ ಕಾನ್ವೆಂಟ್. 1972 ರಲ್ಲಿ ಅಪೊಸ್ಟೋಲಿಕ್ ಕಾರ್ಮೆಲ್ ಚುನಾಯಿತ ಸುಪೀರಿಯರ್ ಜನರಲ್.

40. ಜೊಕಿಮ್ ಆಳ್ವ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ. 1928 ರಲ್ಲಿ, ಅವರು ಬಾಂಬೆ ವಿದ್ಯಾರ್ಥಿಗಳ ಬ್ರದರ್‌ಹುಡ್‌ನ ಮೊದಲ ಕ್ರೈಸ್ತ ಕಾರ್ಯದರ್ಶಿಯಾದರು. ನಂತರ ಅವರು ರಾಷ್ಟ್ರೀಯವಾದಿ ಕ್ರಿಶ್ಚಿಯನ್ ಪಕ್ಷವನ್ನು ಸ್ಥಾಪಿಸಿದರು. 1937 ರಲ್ಲಿ, ಅವರು ಆಂಗ್ಲಿಕನಿಸಂಗೆ ಮತಾಂತರಗೊಂಡ ಗುಜರಾತಿಯವರ ಮಗಳಾದ ವೈಲೆಟ್ ಅವರನ್ನು ವಿವಾಹವಾದರು. ಒಟ್ಟಾಗಿ ಅವರು ಕಾನೂನು ಅಭ್ಯಾಸವನ್ನು ಮಾಡುತ್ತಾರೆ. ನಂತರ ಅವರು ಪತ್ರಿಕೋದ್ಯಮಕ್ಕೆ ತೆರಳಿದರು– 1943 ರಲ್ಲಿ 'ಫೋರಂ' ಎಂಬ ನಿಯತಕಾಲಿಕವನ್ನು ಸ್ಥಾಪಿಸಿದರು. ಈ ದಂಪತಿಗಳು ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯ ಪಾತ್ರವಹಿಸಿದರು – ಮತ್ತು ಇತರ ದೇಶಭಕ್ತರೊಂದಿಗೆ ಹೆಚ್ಚಾಗಿ ಅವರನ್ನು ಬಂಧಿಸಲಾಯಿತು. ಸ್ವಾತಂತ್ರ್ಯಾನಂತರ ಅವರು ಉತ್ತರ ಸಂಸದ ನೇಮಿಸಲಾಯಿತು ಕೆನರಾ ಮತ್ತು ಅವರ ಪತ್ನಿ ಉಪ ಅಧ್ಯಕ್ಷರಾದಾಗ ರಾಜ್ಯ ಸಭಾ. ಅವರ ಅಳಿಯ ಶ್ರೀಮತಿ ಮಾರ್ಗರೇಟ್ ಅಳ್ವ ಕೆಲವು ದಶಕಗಳ ಕಾಲ ಸಂಸದರಾಗಿದ್ದರು ಮತ್ತು ವಿವಿಧ ಮಂತ್ರಿ ಸ್ಥಾನಗಳನ್ನು ಹೊಂದಿದ್ದರು. (ಮೈಕೆಲ್ ಲೋಬೊ, ಪುಟ.111)

41. ಶಿಕ್ಷಣ ಆಯೋಗ (ಕೊಥಾರಿ ಆಯೋಗ, 1964–66) ಹೀಗೆ ಸ್ವಾತಂತ್ರ್ಯದ ನಂತರದ ಮೊದಲ ಇಪ್ಪತ್ತೈದು ವರ್ಷಗಳಲ್ಲಿ, ಮಹಿಳೆಯರ ಉನ್ನತ ಶಿಕ್ಷಣಕ್ಕೆ ಒತ್ತು ನೀಡಲಾಯಿತು.

42. ಕಾಲೇಜಿನ ಸುವರ್ಣ ಮಹೋತ್ಸವವನ್ನು ಜುಲೈ 22, 1971 ರಂದು ಕಾನ್ವೆಂಟ್ ಚಾಪೆಲ್‌ನಲ್ಲಿ ಯೂಕರಿಸ್ಟ್ ಆಚರಣೆಯೊಂದಿಗೆ ಮತ್ತು ಕಾಲೇಜು ಸಭಾಂಗಣದಲ್ಲಿ ಹಿರಿಯ ವಿದ್ಯಾರ್ಥಿಗಳು, ಸಿಬ್ಬಂದಿ ಮತ್ತು ಹಿತೈಷಿಗಳ ಒಂದು ಸಣ್ಣ ಸಮಾವೇಶದೊಂದಿಗೆ ಉದ್ಘಾಟಿಸಲಾಯಿತು. 1921 ರ ಮೊದಲ ಬ್ಯಾಚ್ ಇಂಟರ್ಮೀಡಿಯೆಟ್ ವಿದ್ಯಾರ್ಥಿಗಳಲ್ಲಿ ಒಬ್ಬರು ಮತ್ತು ಮೊದಲ ಕೃಪಾಬಾಯಿ ಸತ್ಯನಾಥನ್ ಚಿನ್ನದ ಪದಕ ವಿಜೇತೆ ಸೀನಿಯರ್ ಬೆನೆಡಿಕ್ಟಾ ಅವರು ಕಾಲೇಜಿನ ಐತಿಹಾಸಿಕ ರೇಖಾ ಚಿತ್ರವನ್ನು ಪ್ರಸ್ತುತಪಡಿಸಿದರು.

43. ಸಿರಿಲ್ ಅಲೆಕ್ಸಾಂಡರ್ ಅಲ್ಬುಕರ್ಕ್ ಅವರ ಪತ್ನಿ ಶ್ರೀಮತಿ ಆಕ್ಟೇವಿಯಾ ಅವರು ಸಮುದಾಯದ ಪ್ರಸಿದ್ಧ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದಾರೆ, 50 ವರ್ಷಗಳಿಂದ ಸಾಮಾಜಿಕ ಸೇವೆ ಮತ್ತು ರಾಜಕೀಯ ಕ್ಷೇತ್ರಗಳಲ್ಲಿದ್ದಾರೆ- ವಾಸ್ತವವಾಗಿ ಅವರು ಲೇಡೀಸ್ ಸೋಷಿಯಲ್ ಸರ್ವಿಸ್ ಲೀಗ್‌ನ ಅಧ್ಯಕ್ಷರಾಗಿದ್ದಾರೆ 50 ವರ್ಷಗಳ ಕಾಲ. ರಾಜಕಾರಣಿಯಾಗಿ, ಅವರು ಮಂಗಳೂರು ಪುರಸಭೆಯ ಉಪಾಧ್ಯಕ್ಷರಾಗಿ ಮತ್ತು ಕರ್ನಾಟಕ ವಿಧಾನಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. 'ಗರ್ಲ್ ಗೈಡ್ ಮೂವ್‌ಮೆಂಟ್'ನೊಂದಿಗೆ ನಿಕಟ ಸಂಬಂಧ ಹೊಂದಿದ್ದ ಅವರು, 1980ರಲ್ಲಿ ಅಖಿಲ ಭಾರತ ಆಯುಕ್ತ, ಗರ್ಲ್ ಗೈಡ್ಸ್ ಆಗಿ ನೇಮಕಗೊಳ್ಳುವ ಮೂಲಕ ತಮ್ಮ ಚಟುವಟಿಕೆಗಳ ಈ ಅಂಶವನ್ನು ಪರಾಕಾಷ್ಠೆಗೊಳಿಸಿದರು. ಅವರು ಹಲವಾರು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳ ಅಧ್ಯಕ್ಷರೂ ಆಗಿದ್ದಾರೆ- ಉಲ್ಲೇಖಿಸಲು ಅಸಂಖ್ಯಾತ. 1967 ರಲ್ಲಿ, ಸಿರಿಲ್ ಮತ್ತು ಆಕ್ಟೇವಿಯಾ ಅವರಿಗೆ ಜಂಟಿಯಾಗಿ ಪ್ರೊ ಎಕ್ಲೆಸಿಯಾ ಎಟ್ ಪಾಂಟಿಫಿಕ್ (ಮೈಕೆಲ್ ಲೋಬೊ, "ಡಿಸ್ಟಿಂಗ್ವಿಶ್ಡ್ ಮಂಗಳೂರಿನ ಕ್ಯಾಥೊಲಿಕರು (1800–2000), ಕ್ಯಾಮೆಲೋಟ್ ಪಬ್ಲಿಕೇಶನ್, ಮಂಗಳೂರು, 2002, ಪುಟ .107)

44. ಸೈಂಟ್ ಆನ್ಸ್ ಟೀಚರ್ಸ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಫಾರ್ ವುಮೆನ್ ಮಂಗಳೂರು 1890–1990), ಕಾಲೇಜು ಮ್ಯಾಗಜೀನ್.

45. (ಮಿಸ್) ಮೇರಿ ಎಂ. ಬ್ರಿಟ್ಟೊ, 1941–1943ರ ವರೆಗೆ ಸೇಂಟ್ ಆನ್ಸ್ ತರಬೇತಿಯ ಮಾಜಿ ವಿದ್ಯಾರ್ಥಿ, ಜೂನ್ 1943 ರಿಂದ ಅಕ್ಟೋಬರ್ 1976 ರವರೆಗೆ ನಿವೃತ್ತ ಸರ್ಕಾರಿ ಶಿಕ್ಷಕಿ ಸಬೀನಾ ಬ್ರಿಟ್ಟೊ (ಎಸ್. ಆರ್. ಡೊರಥಿ. ಎಸಿ) (1858–1949) ಮ್ಯಾನುಯೆಲ್ ಕಾನ್ಸ್ಟಂಟೈನ್ ಬ್ರಿಟ್ಟೊ ಅವರ ಮಗಳು . ಪ್ರವರ್ತಕ ಅಪೊಸ್ಟೋಲಿಕ್ ಕಾರ್ಮೆಲೈಟ್ ಸನ್ಯಾಸಿನಿ; ವಿಕ್ಟೋರಿಯಾ ಕಾಸ್ಟ್ ಗರ್ಲ್ಸ್ ಸ್ಕೂಲ್‌ನಲ್ಲಿ ಕಲಿಸಿದ ಮತ್ತು Ladyhill ವಿಕ್ಟೋರಿಯಾ ಶಾಲೆಯ ಸ್ಥಾಪಕರು. ಅವರ ಸಹೋದರ ಜಿಲ್ಲಾ ಅರಣ್ಯ ಅಧಿಕಾರಿಯಾಗಿ (1920) ನಿವೃತ್ತರಾಗಿದ್ದರು. (ಮೈಕೆಲ್ ಲೋಬೊ, ಪು. 133)

46. ಏಂಜಲೀನಾ ಕೊಲಾಕೊ (ಸೀನಿಯರ್ ಕ್ಲಾರಿಸ್ಸಾ ಎಸಿ) ರೊಸಾರಿಯೋ ಶಾಲೆಯ ಪ್ರಸಿದ್ಧ ಶಿಕ್ಷಕ ಶ್ರೀ ರೇಮಂಡ್ ಪ್ಯಾಸ್ಕಲ್ (1863–1948) ಅವರ ಪುತ್ರಿ. ಅವರು ಸೈಂಟ್ ಆನ್ಸ್ ತರಬೇತಿ ಕಾಲೇಜಿನ (1943–49) ಮೊದಲ ಪ್ರಾಂಶುಪಾಲರಾಗಿದ್ದರು ಮತ್ತು ಸೈಂಟ್ ಆಗ್ನೆಸ್ ಕಾಲೇಜಿನ (1949–52) ಪ್ರಾಂಶುಪಾಲರಾಗಿದ್ದರು. ಅವರ ಅಂಕಲ್ ರೆವ್ ಫ್ರಾ. ಮೈಕೆಲ್ ಕೊಲಾಸೊ

ಮಂಗಳೂರಿನ ಅತ್ಯುತ್ತಮ ಡಯೋಸಿಸನ್ ಪ್ರೀಸ್ಟ್ ಆಗಿದ್ದರು. ಸೈಂಟ್ ಆಂಥೋನಿಸ್ ಚಾರಿಟಬಲ್ ಇನ್ಸ್ಟಿಟ್ಯೂಶನ್‌ನ ಸ್ಥಾಪಕ- ನಿರ್ದೇಶಕ. ಕೊಂಕಣಿ ಗೀತೆಗಳ ಬರಹಗಾರರೂ ಆಗಿದ್ದರು. ಮಾನ್ಸಿಗ್ನರ್ ಎಂಬ ಬಿರುದನ್ನು ನೀಡಲಾಯಿತು.

47. ಸೈಂಟ್ ಆನ್ಸ್ ಕಾಲೇಜ್ ಆಫ್ ಎಜುಕೇಶನ್, ಗೋಲ್ಡನ್ ಜುಬಿಲಿ 1945–1995, ಸ್ಮಾರಕ
48. ಸೈಂಟ್ ಆನ್ಸ್ ಜರ್ನಲ್ ಆಫ್ ಎಜುಕೇಶನ್, ಸಂಪುಟ XX, 1989, ಪು –22
49. ಡಾ. ಮಿಸ್ ಜೆಸ್ಸಿ ಟೆಲ್ಲಿಸ್ ನಾಯಕ್ ಎಮ್‌ಎ, ಪಿಎಚ್‌ಡಿ (ಯುಎಸ್‌ಎ), ಮತ್ತೊಂದು ಅದ್ಭುತ ಅಗ್ನೇಷಿಯನ್ ಡಾ. ಜೆಸ್ಸಿ ಟೆಲ್ಲಿಸ್ ಫ್ರಾನ್ಸಿಸ್ ಜೇವಿಯರ್ ಟೆಲ್ಲಿಸ್ ಅವರ ಮಗಳು ಬಟ್ಟೆ ವ್ಯಾಪಾರಿ ಮತ್ತು ವೆನ್ಲಾಕ್ ಮತ್ತು ಲೇಡಿ ಗೋಸ್ಚೆನ್ ಆಸ್ಪತ್ರೆಗಳಿಗೆ ಆಹಾರವನ್ನು ಪೂರೈಸುವ ಸರ್ಕಾರಿ ಗುತ್ತಿಗೆದಾರ. ಶಿಕ್ಷಣ ತಜ್ಞ, ಬರಹಗಾರ ಮತ್ತು ಸಮಾಜ ಸೇವಕ- ಮುಖ್ಯವಾಗಿ ಮಹಿಳಾ ಸಮಸ್ಯೆಗಳಿಗೆ ಸಂಬಂಧಿಸಿ, ಮಂಗಳೂರಿನ ಸೈಂಟ್ ಆಗ್ನೆಸ್ ಕಾಲೇಜಿನಲ್ಲಿ ಜೀವಶಾಸ್ತ್ರದಲ್ಲಿ ಉಪನ್ಯಾಸ ನೀಡಿದರು. ತದನಂತರ ಕ್ಯಾಥೊಲಿಕ್ ಯೂನಿವರ್ಸಿಟಿ ಆಫ್ ಅಮೇರಿಕಾದಲ್ಲಿ 8 ವರ್ಷಗಳನ್ನು (1957–65) ಕಳೆದರು. ಅವರು ಭಾರತೀಯ ಸಾಮಾಜಿಕ ಸಂಸ್ಥೆಯಲ್ಲಿ ಸಮುದಾಯ ಅಭಿವೃದ್ಧಿ ಅಧಿಕಾರಿಯಾಗಿದ್ದಾರೆ ಮತ್ತು ಅಪ್ರತಿಮ ಮಹಿಳೆಯರ ರಕ್ಷಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ, ವಿಶೇಷವಾಗಿ ಸಂಸ್ಥಾಪಕ ಸದಸ್ಯರಾಗಿ ವಿನಾ (ಹೊಸ ಅವೇಕನಿಂಗ್‌ಗಾಗಿ ಮಹಿಳಾ ಸಂಸ್ಥೆ). ವಂಚಿತರಿಗೆ ಮಿತಿಯಿಲ್ಲದ ಪ್ರೀತಿಯಿಂದ, ಜೆಸ್ಸಿ ತನ್ನ ಜನ್ಮ ಭೂಮಿಯಲ್ಲಿ ಬಡತನ, ಅನಕ್ಷರತೆ ಮತ್ತು ರೋಗದ ವಿರುದ್ಧ ಹೋರಾಡುತ್ತಾನೆ. ಮಹಿಳೆಯರಿಗಾಗಿ ಔಪಚಾರಿಕ ಶಿಕ್ಷಣ ಎಂಬ ಪುಸ್ತಕದ ಲೇಖಕಿ. ಅವರ ಹಿರಿಯ ಸಹೋದರಿ ಲೂಯಿಸಾ ಮಾರ್ಥಾ ಟೆಲ್ಲಿಸ್ ಎರಡನೇ ವಿಶ್ವಯುದ್ಧದಲ್ಲಿ ಮಿಲಿಟರಿ ವೈದ್ಯರಾಗಿ ಸೇವೆ ಸಲ್ಲಿಸಿದ ಸಮುದಾಯದ ಮೊದಲ ಮಹಿಳೆ.
50. ಶ್ರೀಮತಿ ಲೂಯಿಸಾ ಕೊಯಿಲೊ (1883–1953) ಆಂಟನಿ ಜಾನ್ ಕೊಯಿಲೊ ಅವರು ಸಮುದಾಯದ ಪ್ರಮುಖ ಸದಸ್ಯರ ಸಮಿತಿಯ ಮುಖ್ಯಸ್ಥರಾಗಿರುತ್ತಾರೆ ಅವರು ಮಂಗಳೂರು ಡಯಾಸಿಸ್‌ನ ಉಸ್ತುವಾರಿ ವಹಿಸಿಕೊಳ್ಳಲು ಯೇಸುವಿನ ಸಮಾಜವನ್ನು ಆಹ್ವಾನಿಸುವ ಕ್ರಮವನ್ನು ಚರ್ಚಿಸಲು ಭೇಟಿಯಾದರು). ಅವರು ಸೈಂಟ್ ಆನ್ಸ್ ಅಕಾಡೆಮಿಯ (1900) ಪ್ರವರ್ತಕ ಮೆಟ್ರಿಕ್ಯುಲೇಟ್ ಆಗಿದ್ದರು. ಆ ವರ್ಷ ಅವರು ಯಶಸ್ವಿ ಅಭ್ಯರ್ಥಿಯಾಗಿದ್ದರು- ಮತ್ತು ಇಂಗ್ಲಿಷ್‌ನಲ್ಲಿ ಪ್ರೆಸಿಡೆನ್ಸಿಯಲ್ಲಿ ಪ್ರಥಮ ಸ್ಥಾನ ಪಡೆದರು- ಮದ್ರಾಸ್ ವಿಶ್ವವಿದ್ಯಾಲಯದ ಚಿನ್ನದ ಪದಕವನ್ನು

ಗೆದ್ದರು. ನಂತರ ಅವರು ಮತ್ತೊಬ್ಬ ವಿದ್ವತ್ಪೂರ್ಣ ವ್ಯಕ್ತಿ ಜೋಸೆಫ್ ಸಲ್ಡಾನ್ಹಾ ಶೆಟ್ ಅವರನ್ನು ವಿವಾಹವಾದರು. ಮೈಕೆಲ್ ಲೋಬೊ, "ಡಿಸ್ಟಿಂಗ್ವಿಶ್ಡ್ ಮಂಗಳೂರು ಕ್ಯಾಥೊಲಿಕ್ (1800–2000), ಕ್ಯಾಮೆಲೋಟ್ ಪಬ್ಲಿಕೇಶನ್ , ಮಂಗಳೂರು, 2002, ಪು .149–151

51. ಸಹೋದರಿಯರು ಮಂಗಳೂರಿನ ಹಂಪನಕಟ್ಟೆಯಲ್ಲಿ ಕ್ಯಾಥೋಲಿಕ್ಕರಿಗಾಗಿ ಒಂದು ಪ್ರಾಥಮಿಕ ಶಾಲೆಯನ್ನು ನಡೆಸಿದರು, ಮತ್ತು ಇನ್ನೊಂದು ಹಿಂದೂ ಮಕ್ಕಳಿಗಾಗಿ ಶಾಲೆಯನ್ನು 1887 ಪ್ರಾರಂಭಿಸಿದರು.

52. ಸ್ಮಾರಕ, ಲೇಡಿ ಹಿಲ್ ಪಿಎಲ್ ಪ್ಲಾಟಿನಮ್ ಜುಬಿಲಿ 1920–1995, ಉರ್ವಾ

ಅಧ್ಯಾಯ 5

ಸಾಮಾಜಿಕ ಸುಧಾರಣೆ ಮತ್ತು ಅನೌಪಚಾರಿಕ ಶಿಕ್ಷದೆಡೆಗೆ

5.1 ಸೈಂಟ್ ಆಗ್ನೆಸ್ ಸ್ಪೆಷಲ್‌ಸ್ಕೂಲ್ , ಮಂಗಳೂರು

5.2 ಗ್ರಾಮೀಣ ಪ್ರದೇಶದಲ್ಲಿ ಮಹಿಳಾ ಶಿಕ್ಷಣ

5.3 ವೃತ್ತಿಪರ ತರಬೇತಿ ಕೇಂದ್ರಗಳು

5.4 ಶಿಕ್ಷಣ ವಿಧಾನ ಮತ್ತು ಕೌಶಲ್ಯ

5.5 ಮೌಲ್ಯಾಧಾರಿತ ಶಿಕ್ಷಣ

5.6 ಶಿಕ್ಷಣ ಮತ್ತು ಸಬಲೀಕರಣ

ಅಧ್ಯಾಯ 5

ಸಾಮಾಜಿಕ ಸುಧಾರಣೆ ಮತ್ತು ಅನೌಪಚಾರಿಕ ಶಿಕ್ಷದೆಡೆಗೆ

5.1 ಸೈಂಟ್ ಆಗ್ನೆಸ್ ಸ್ಪೆಷಲ್ ಸ್ಕೂಲ್, ಮಂಗಳೂರು

ವಿಶೇಷವಾಗಿ ಸಾಮರ್ಥ್ಯವುಳ್ಳ ಜನರು ದೇಶದ ಕಡೆಗಣಿಸಲ್ಪಟ್ಟ ಮತ್ತು ವಂಚಿತ ಸಮುದಾಯ ಗುಂಪಿಗೆ ಸೇರಿದವರಾಗಿರುತ್ತಾರೆ. ಭಾರತದ ಸಂವಿದಾನ ನಿಯಮ 41 –"ರಾಜ್ಯಗಳು ಅದರ ಹಣಕಾಸು ಮತ್ತು ಅಭಿವೃದ್ಧಿ ಸಕ್ಷಮತೆಗೆ ತಕ್ಕಂತೆ ಕೆಲಸದ ಹಕ್ಕು ಹೊಂದಿಕೊಳ್ಳಲು, ಶಿಕ್ಷಣ ಹೊಂದಲು ಮತ್ತು ಕೆಲಸವಿಲ್ಲದಿದ್ದಲ್ಲಿ, ಪ್ರಾಯಸ್ಥರಾಗಿದ್ದಲ್ಲಿ, ಕಾಯಿಲೆಗಳಿದ್ದಲ್ಲಿ, ಅಶಕ್ತತೆ ಇದ್ದಲ್ಲಿ ಸರಕಾರದ ವತಿಯಿಂದ ಸಕ್ರೀಯ ಕ್ರಮಗಳನ್ನು ಕೈಗೊಳ್ಳಬೇಕು" ಎಂದು ಹೇಳುತ್ತದೆ.

1872 ರಿಂದ 1931ವರೆಗಿನ ಭಾರತದ ಜನಗಣತಿಯಲ್ಲಿ ಅಶಕ್ತತೆಯ ಪ್ರಶ್ನೆಯು ಚಾಲ್ತಿಯಲ್ಲಿತ್ತು. ಆದರೆ 1941 ಯಿಂದ 1971ರ ಅವಧಿಯಲ್ಲಿ ಅಶಕ್ತ ಮಕ್ಕಳ ಮಧ್ಯೆ ವಿಶೇಷ ಶಾಲೆಗಳಿಂದ ರಾಜ್ಯದಲ್ಲಿ ನಡೆಯುವ ಸೇವೆಯ ಬಗ್ಗೆ ಹೆಚ್ಚೇನೂ ವಿವರಣೆ ಹೊಂದಿಲ್ಲ. ನೇಶನಲ್ ಸ್ಯಾಂಪಲ್ ಸರ್ವೆ ಆರ್ಗನೈಸೇಷನ್ (NSSO) ನಡೆಸಿದ ಭಾರತದ ಇತ್ತೀಚಿಗಿನ (2016) ಜನಗಣತಿಯಲ್ಲಿ 121 ಕೋಟಿ ಜನಸಂಖ್ಯೆಯಲ್ಲಿ 2.68 ಕೋಟಿ ಜನರು ಅಶಕ್ತರು ಎಂದು ತೋರಿಸುತ್ತದೆ, ಅಂದರೆ ಇಂದಿನ ಜನಸಂಖ್ಯೆಯ 2.21%. ಇದರಲ್ಲಿ 1.5 ಕೋಟಿ ಪುರುಷರಾಗಿದ್ದರೆ 1.18 ಕೋಟಿ ಮಹಿಳೆಯರಾಗಿರುತ್ತಾರೆ. ಮತ್ತು 61% 5ರಿಂದ 19 ವರ್ಷ ವಯಸ್ಸಿನ ಅಶಕ್ತ ಮಕ್ಕಳು ಶಿಕ್ಷಣ ಸಂಸ್ಥೆಗಳಿಗೆ ದಾಖಲಾಗಿರುತ್ತಾರೆ. 27% ಮಕ್ಕಳು ಶಿಕ್ಷಣದಿಂದ ವಂಚಿತರಾಗಿಯೇ ಇದ್ದಾರೆ ಮತ್ತು 12% ಶಿಕ್ಷಣ ಸಂಸ್ಥೆಗೆ ಹೋಗುತ್ತಿದ್ದರು. ಇವರಲ್ಲಿ 57% ಗಂಡು ಮಕ್ಕಳಾಗಿದ್ದು ಹೆಣ್ಣು ಮಕ್ಕಳ ಸಂಖ್ಯೆ ತೀರಾ ಕಡಿಮೆ. ಗ್ರಾಮೀಣ ಪ್ರದೇಶಕ್ಕೆ ಹೋಲಿಸಿದರೆ ನಗರ ಪ್ರದೇಶದ ಮಕ್ಕಳ (5–19 ವರ್ಷ) ಶಾಲಾ ಹಾಜರಾತಿ ಹೆಚ್ಚಿರುತ್ತದೆ. ಕರ್ನಾಟಕ ರಾಜ್ಯದಲ್ಲಿ 68.308 ಮಿಲಿಯನ್ (2019) ಜನಸಂಖ್ಯೆಯಲ್ಲಿ 2.26% ರಿಂದ 2.50% ಜನರು ಅಶಕ್ತರು.

ಅಶಕ್ತ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಮತ್ತು ವಿಶೇಷ ಶಿಕ್ಷಣದ ದೃಷ್ಟಿಯಿಂದ ನಗರದಲ್ಲಿ ಅಪೊಸ್ತೊಲಿಕ ಕಾರ್ಮೆಲ್ ಕಾಂಗ್ರೇಗೇಶನ್ 1970ರಲ್ಲಿ ಸೈಂಟ್ ಆಗ್ನೆಸ್ ಸ್ಪೆಷಲ್ ಸ್ಕೂಲನ್ನು ತಮ್ಮ ಸಂಸ್ಥೆಯ ಅಸ್ತಿತ್ವದ ಶತಮಾನೋತ್ಸವ ಸ್ಮಾರಕ ಯೋಜನೆಯಾಗಿ ಆರಂಭಿಸಿತು. ಇದು ಜಿಲ್ಲೆಯಲ್ಲಿ ಇಂತಹ ವಿಶೇಷ ಅಗತ್ಯತೆಯನ್ನು ಕೈಗೊಳ್ಳಲು ಸ್ಥಾಪಿಸಿದ ಏಕೈಕ ಸಂಸ್ಥೆ ಸಂಸ್ಥೆಯಾಗಿದೆ.[1]

ಹಿನ್ನೆಲೆ:

1970ರಲ್ಲಿ ಅಪೊಸ್ಟೊಲಿಕ್ ಕಾರ್ಮೆಲ್ ಸಭೆ ಭಾರತದಲ್ಲಿ ಶಿಕ್ಷಣ ಸೇವಾ ಕ್ಷೇತ್ರದಲ್ಲಿ ತನ್ನ ಶತಮಾನೋತ್ಸವವನ್ನು ಆಚರಿಸುತ್ತಿರುವಾಗ, ಅಂದಿನ ಸುಪೀರಿಯರ್ ಜನರಲ್, ಮದರ್ ತೆದೋಸಿಯಾ ಇವರಿಗೆ ಬುದ್ಧಿಮಾಂದ್ಯ (ಈಗ ವಿಭಿನ್ನ ಸಾಮರ್ಥ್ಯದ ಎಂದು ಕರೆಯುಲ್ಪಡುವ) ಮಕ್ಕಳ ಶಿಕ್ಷಣ ಯೋಜನೆಯ ಅಗತ್ಯತೆ ಕಂಡು ಬಂತು. ಆದುದರಿಂದ ಈ ಮಕ್ಕಳಿಗೆ ಅಪೋಸ್ಟೋಲಿಕ್ ಕಾರ್ಮೆಲ್ ಶತಮಾನೋತ್ಸವ ಸ್ಮಾರಕವಾಗಿ ಒಂದು ಶಾಲೆಯನ್ನು ತೆರೆಯಲು ನಿರ್ಧರಿಸುತ್ತದೆ. ಸಿಸ್ಟರ್ ಮರಿಯ ಜ್ಯೋತಿ[2] ಸ್ಥಾಪಕ ಪ್ರಾಂಶುಪಾಲೆ ಪ್ರತಿಯೊಂದು ಮಗುವು ಜನಾಂಗ, ಜಾತಿ ಮತ್ತು ಸಾಂಸ್ಕೃತಿಕ ಬೇಧವಿಲ್ಲದೆ ಶಿಕ್ಷಣ ಹೊಂದುವ ಮತ್ತು ತನ್ನದೇ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವ ಹಕ್ಕನ್ನು ಹೊಂದಿದೆ ಎಂಬ ಧ್ಯೇಯದೊಂದಿಗೆ 1970ರಲ್ಲಿ ಶಾಲೆಯನ್ನು ಸ್ಥಾಪಿಸಿದರು. ಇದರಿಂದಾಗಿ ಪ್ರತ್ಯೇಖಿಸಲ್ಪಟ್ಟ ಮತ್ತು ಕಡೆಗಣಿಸಲ್ಪಟ್ಟ ಮಕ್ಕಳನ್ನು ಅವರ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ಕರೆತಂದು ಪ್ರೀತಿ ಮತ್ತು ಕರುಣೆಯ ವಾತಾವರಣದಲ್ಲಿ ಅವರ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಬೇಕಾದ ತರಭೇತಿ ನೀಡುವುದಕ್ಕೆ ಮಾರ್ಗವಾಯಿತು. ಅವರು 5 ಮಕ್ಕಳೊಂದಿಗೆ ಸೈಂಟ್ ಆಗ್ನೆಸ್ ಕಾನ್ವೆಂಟ್ ಆವರಣದ "Rest" ಎಂಬ ಸಣ್ಣ ಮನೆಯಲ್ಲಿ ಶಾಲೆಯನ್ನು ಆರಂಭಿಸಿದರು.

ಈ ಶಾಲೆ ನೂರಾರು ಅಶಕ್ತ ಮಕ್ಕಳಿಗೆ ಶಿಕ್ಷಣ ಯೋಜನೆಯಲ್ಲಾಗಲಿ ಅಥವಾ ವೃತ್ತಿಪರ ತರಬೇತಿ ಯೋಜನೆಯಲ್ಲಾಗಲಿ ಪುನರ್ವಸತಿ ಕಲ್ಪಿಸಿಕೊಳ್ಳುವಲ್ಲಿ ಸಹಾಯ ಮಾಡಿದೆ. ಶಾಲೆಯು ವರ್ಷದಿಂದ ವರ್ಷಕ್ಕೆ ಹೆಚ್ಚೆಚ್ಚು ಮಕ್ಕಳು ಸೇರ್ಪಡೆಗೊಂಡು ಪ್ರಸ್ತುತ ಸುಮಾರು 300 ಮಕ್ಕಳು ಈ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಶಾಲೆಯು ಹೊಸ ಕಟ್ಟಡಕ್ಕೆ 1973ರಲ್ಲಿ ಸ್ಥಳಾಂತರಗೊಂಡಿದ್ದು ನಂತರ 1977ರಲ್ಲಿ ಆಡಳಿತಾತ್ಮಕವಾಗಿ ಸೈಂಟ್ ಆಗ್ನೆಸ್ ಕಾಲೇಜಿನಿಂದ ಪ್ರತ್ಯೇಖಗೊಂಡು ಸೈಂಟ್ ಆಗ್ನೆಸ್ ಕಾನ್ವೆಂಟ್‌ನ ಒಂದು ಸ್ವತಂತ್ರ ಸಂಸ್ಥೆಯಾಯಿತು. ಸೈಂಟ್ ಆಗ್ನೆಸ್ ಸರ್ವಿಸ್ ಪ್ರಾಜೆಕ್ಟ್ ನಂತರ ಸೈಂಟ್ ಆಗ್ನೆಸ್ ಸ್ಪೆಷಲ್ ಸ್ಕೂಲ್ ಎಂದು ಮರುನಾಮಕರಣಗೊಂಡಿತು. 300ಕ್ಕಿಂತ ಅಧಿಕ ಮಕ್ಕಳು ಇಲ್ಲಿ ಪ್ರಯೋಜನ ಹೊಂದುತ್ತಿದ್ದಾರೆ. ಸಾಮಾನ್ಯ ಶಾಲೆಗಳಿಗೆ ಹೋಗಲಾಗದಿರುವ ಮತ್ತು ಶಾಲೆಬಿಟ್ಟ ಮಕ್ಕಳಿಗೆ National Institute of Open Schooling and Karnataka Open School, Bangalore, ಮೂಲಕ ಸೆಕೆಂಡರಿ ಮತ್ತು ಸೀನಿಯರ್ ಸೆಕೆಂಡರಿ ಶಿಕ್ಷಣ ಪಡೆಯಲು ಅನುಕೂಲ ಮಾಡಿ ಕೊಡಲಾಗಿತ್ತಿದೆ.

ಶಾಲೆಯು ಕಲಿಯುವಿಕೆಯ ವಾತಾವರಣವನ್ನು ಸೃಷ್ಟಿಸುತ್ತಿದೆ ಮತ್ತು ಜೀವನ ಚಕ್ರದ ಉನ್ನತ ಮಟ್ಟದ ಸಾಮರ್ಥ್ಯವನ್ನು ಹೊಂದಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತದೆ. ಶಾಲೆಯು ವಿಭಿನ್ನ ಸಾಮರ್ಥ್ಯದ

ವಿದ್ಯಾರ್ಥಿಗಳಿಗೆ ಎಷ್ಟು ಸಾಧ್ಯವೋ ಅಷ್ಟು ಅಗತ್ಯವುಳ್ಳ ಬೆಳವಣಿಗೆ ಸಹಾಯ ಮಾಡುತ್ತದೆ. ಉಧಾಹರಣೆಗೆ, ಒಬ್ಬರಿಗೆ ಆರೋಗ್ಯಕರ ಸಾಮಾಜಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಬೇಕಾದ ಸಾಮರ್ಥ್ಯವನ್ನು ಬೆಳೆಸುವುದು, ಶಾಲೆಗೆ ಬರುವ ಮಕ್ಕಳು ದೈನಂದಿನ ಜೀವನದ ಕೌಶಲ್ಯಗಳನ್ನು ಅಂದರೆ ಹಲ್ಲು ಉಜ್ಜುವುದು, ಮುಖ ತೊಳೆಯುವುದು, ತಿನ್ನುವುದು, ಬಟ್ಟೆ ಧರಿಸುವುದು, ಇತ್ಯಾಧಿ ಅಗತ್ಯವುಳ್ಳ ಸಾಮರ್ಥ್ಯವನ್ನು ವ್ಯಾಯಾಮಗಳ ಮೂಲಕ ಕಲಿಸಲಾಗುತ್ತದೆ. ವಿಶೇಷ ಶಿಕ್ಷಕರು ಆಧುನಿಕ ಕ್ರಮಗಳ ಮೂಲಕ ವಿದ್ಯಾರ್ಥಿಗಳಿಗೆ, 3 ವರ್ಷದ ಮೇಲಿನ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಮತ್ತು ಯುವಜನರಿಗೆ ಕೌಶಲ್ಯಗಳನ್ನು ಹೊರತರುವ ಇಲ್ಲವೇ ಅಭಿವೃದ್ಧಿಗೊಳಿಸುವ ರೀತಿಯಲ್ಲಿ ಕಲಿಸುತ್ತಾರೆ. ಶೈಕ್ಷಣಿಕ, ವೃತ್ತಿಪೂರ್ವ, ವೃತ್ತಿಪರ, ಹೋಮ್ ಸೈಯನ್ಸ್ ಮತ್ತು ಕಂಪ್ಯೂಟರ್ ತರಬೇತಿಗಳನ್ನು ಕಲಿಸಲಾಗುತ್ತದೆ.

5.2 ಗ್ರಾಮೀಣ ಪ್ರದೇಶದಲ್ಲಿ ಮಹಿಳಾ ಶಿಕ್ಷಣ

ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಮಹಿಳಾ ಶಿಕ್ಷಣ ವಿಸ್ತರಣೆಗೊಂಡಿತು. ಆದರೆ ಅದು ನಗರ ಪ್ರದೇಶಕ್ಕೆ ಸೀಮಿತವಾಗಿತ್ತು. ಅಂದಿನ ದಿನಗಳಲ್ಲಿ ಮಹಿಳಾ ಶಿಕ್ಷಣ ಕೇಂದ್ರಗಳು ಸರಕಾರೇತರ ನಿಧಿಯಿಂದ ಖಾಸಗೀ ದತ್ತಿನಿಧಿಗಳು[3], ಮಿಶನ್ ಶಾಲೆಗಳು ಇತ್ಯಾಧಿಗಳಿಂದ 1947ರ ವರೆಗೆ ನಡೆಸಲ್ಪಡುತ್ತಿದ್ದುವು. ಇದರಲ್ಲಿ ಪ್ರಮುಖ ಪ್ರಯತ್ನ ಭಾರತೀಯರಿಂದ ಉಂಟಾಯಿತು. 20ನೇ ಶತಮಾನದ ಮಧ್ಯ ಭಾಗದಲ್ಲಿ ಅಪೊಸ್ತೊಲಿಕ್ ಕಾರ್ಮೆಲ್ ಸಭೆ ನಗರ ಪ್ರದೇಶದಿಂದ ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸುವ ಒಂದು ಪ್ರಾಯೋಗಿಕ ಪ್ರಯತ್ನವನ್ನು ಮಾಡಿದರು. ಈ ಪ್ರಯತ್ನದಲ್ಲಿ ಅವರು ಹೊರ ಪ್ರಪಂಚದ ಸಂಪರ್ಕವಿರದ ಮತ್ತು ಅವಗಣಿಸಲ್ಪಟ್ಟ ಬಾಲ ಕಾರ್ಮಿಕರಾಗಿ ದುಡಿಯುವ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಸಫಲರಾದುದು ಮಾತ್ರವಲ್ಲದೆ ಅವರ ಸಭೆಯ ಆರ್ಡರ್‌ಗೆ ಹೆಚ್ಚು ಭಗಿನಿಯರನ್ನು ಸೇರಿಸಿಕೊಳ್ಳುವ ಮೂಲಕ ಅವರು ಮುಂದಿನ ಗ್ರಾಮೀಣ ಪ್ರದೇಶದಲ್ಲಿ ಮಹಿಳಾ ಶಿಕ್ಷಣತಜ್ಞರಾಗಿ ಮಾರ್ಪಡಿಸಿದರು.

ಸಂತ ಮರಿಯ ಗೊರೆಟ್ಟಿ ಶಾಲೆ, ಕೆಮ್ಮಣ್ಣು (1933)

ಶಿಕ್ಷಣವು ಕೇವಲ ಪಟ್ಟಣಗಳಿಗೆ ಸೀಮಿತವಾದ ಕಾರಣ ಗ್ರಾಮೀಣ ಪ್ರದೇಶದ ಮಕ್ಕಳು ಈ ಸೌಲಭ್ಯದಿಂದ ವಂಚಿತರಾಗಿದ್ದರು. ಉನ್ನತ ವರ್ಗದ ಕುಟುಂಬಗಳ ಮಕ್ಕಳು ಪಟ್ಟಣಕ್ಕೆ ಪ್ರಯಾಣ ಮಾಡಿ ಪ್ರಾಥಮಿಕ ಶಿಕ್ಷಣ

ಪಡೆಯುತ್ತಿದ್ದರು, ಆದರೆ ಹೆಚ್ಚಿನ ಮಕ್ಕಳು[4] ಅನಕ್ಷರಸ್ಥರಾಗಿದ್ದು ಕಡೆಗಣಿಸಲ್ಪಡುತ್ತಿದ್ದರು. ಹೀಗೆ ಅವಗಣಿಸಲ್ಪಟ್ಟ ಒಂದು ಗ್ರಾಮಕ್ಕೆ ಕೆಥೋಲಿಕ ಸಂಸ್ಥೆ ಶಿಕ್ಷಣದ ಅಗತ್ಯತೆಯನ್ನು ಮನಗಂಡು ಭಗಿನಿಯರು ಕೆಮ್ಮಣ್ಣು[5] ಎಂಬಲ್ಲಿ ಭಗಿನಿಯರು ಶಾಲೆಯೊಂದನ್ನು ತೆರೆಯಲು ನಿರ್ಧರಿಸಿದರು.

ಮಂಗಳೂರಿನ ಬಿಷಪರಾಗಿದ್ದ ರೈಟ್ ರೆವೆ. ವಿಕ್ಟರ್ ಫೆರ್ನಾಂಡಿಸ್‌ರವರು[6] ಮತ್ತು ಕಲ್ಯಾಣಪುರದ ಮೌಂಟ್ ರೋಸರಿ ಚರ್ಚ್‌ನ ಧರ್ಮಗುರು ಫಾದರ್ ಸೆವರಿನ್ ಪಿ. ಟೆಲ್ಲೀಸ್ ಇವರು ಮಂಗಳೂರಿನ ಅಪೊಸ್ತೋಲಿಕ ಕಾರ್ಮೆಲ್‌ನ ಭಗಿನಿಯರನ್ನು ಆಹ್ವಾನಿಸಿ ಅದಾಗಲೇ ಕೆಮ್ಮಣ್ಣು ಬಜಾರ್‌ನಲ್ಲಿ ಅಸ್ತಿತ್ವದಲ್ಲಿದ್ದ ಹೆಣ್ಣುಮಕ್ಕಳ ಕಿರಿಯ ಪ್ರಾಥಮಿಕ ಶಾಲೆಯ ಜವಾಬ್ದಾರಿಯನ್ನು 1933ರಲ್ಲಿ ವಹಿಸಿಕೊಳ್ಳಲು ತಿಳಿಸಿದರು. ಈ ಪ್ರದೇಶದ ಕೆಥೋಲಿಕ ಮಕ್ಕಳಿಗಾಗಿ ಕಾಳಜಿಯಿಂದ ಫಾದರ್ ಸೆವರಿನ್ ಪಿ. ಟೆಲ್ಲೀಸ್‌ರವರು 1925ರಲ್ಲಿ ಹುಡುಗರು ಮತ್ತು ಹುಡುಗಿಯರಿಗಾಗಿ ಪ್ರತ್ಯೇಕ ಶಾಲೆಗಳನ್ನು ತೆರೆದಿದ್ದರು. 1ರಿಂದ 6ನೇ ತರಗತಿವರೆಗೆ ಈ ಉದ್ದೇಶಕ್ಕಾಗಿ ನಿರ್ಮಿಸಲ್ಪಟ್ಟ ಹುಲ್ಲು ಹಾಸಿನ ಶೆಡ್‌ನಲ್ಲಿ ತರಗತಿಗಳು ನಡೆಯುತ್ತಿತ್ತು. ಜಿಲ್ಲಾ ಶಿಕ್ಷಣ ಕೌನ್ಸಿಲ್ ಹೆಣ್ಣು ಮಕ್ಕಳ ಶಾಲೆಗೆ ಅನುಮೋದನೆ ನೀಡಿತು ಆದರೆ ಗಂಡು ಮಕ್ಕಳ ಶಾಲೆಗೆ ಆ ಪ್ರದೇಶದಲ್ಲಿ ಬೇರೆ ಸ್ಪರ್ಧಾತ್ಮಕ ಶಾಲೆಗಳು ಸ್ಥಾಪನೆಯಾಗಿದ್ದುದರಿಂದ ಅನುಮೋದನೆ ನೀಡಲಿಲ್ಲ

ಹೆಣ್ಣು ಮಕ್ಕಳ ಶಾಲೆ ಚರ್ಚ್‌ಗಿಂತ ಬಹಳ ದೂರದಲ್ಲಿ ಇದ್ದುದರಿಂದ ಅದನ್ನು ಅಪೊಸ್ತೋಲಿಕ ಕಾರ್ಮೆಲ್‌ನ ಭಗಿನಿಯರಿಗೆ 25 ಮೇ 1933ರಂದು ಹಸ್ತಾಂತರಿಸಲಾಯಿತು. ಅದಕ್ಕೆ ರೊಸಾರಿಯೋ ಹೈಯರ್ ಪ್ರೈಮರಿ ಶಾಲೆ, ಕೆಮ್ಮಣ್ಣು ಎಂದು ಹೆಸರಿಡಲಾಯಿತು. ಭಗಿನಿಯರು ಶಾಲೆಯನ್ನು ಪಡಕೊಂಡಾಗ ಮಕ್ಕಳಿಗೆ ಕೇವಲ ಮೂರು ಕೊಠಡಿಗಳನ್ನೊಳಗೊಂಡ ಚಿಕ್ಕ ಶಾಲೆಯಾಗಿತ್ತು. ಈ ಕಾರಣದಿಂದ ಒಂದು ತರಗತಿಯನ್ನು ಹಿಂದಿನ ಅಂಚೆ ಕಛೇರಿಯಲ್ಲಿ ಪೋಸ್ಟ್ ಮಾಸ್ಟರ್‌ರವರು ಅಂಚೆ ಕಛೇರಿಯನ್ನು ಬೇರೆಡೆಗೆ ಸ್ಥಳಾಂತರಿಸಿದ್ದರಿಂದ ನಡೆಸಲಾಗುತ್ತಿತ್ತು. ಜೂನ್ 1ರಂದು ಶಾಲೆ ಪುನರಾರಂಭವಾದಾಗ 5 ತರಗತಿಗಳಿದ್ದು ಕೇವಲ 4 ಮಂದಿ ಶಿಕ್ಷಕರಿದ್ದರು. ಕಾನ್ವೆಂಟ್‌ನ ಉಸ್ತುವಾರಿಯಾಗಿದ್ದ ಸಿಸ್ಟರ್ ಬೆನಿಗ್ನರವರೇ ಶಾಲೆಯ ಮುಖ್ಯ ಶಿಕ್ಷಕರೂ ಆಗಿದ್ದರು. 13 ಜುಲೈ 1934ರಂದು ಶಾಲೆಯನ್ನು "ರೊಸಾರಿಯೋ ಗರ್ಲ್ಸ್ ಸ್ಕೂಲ್" ಎಂಬ ಹೆಸರಿನಿಂದ "ಸೈಂಟ್ ಫಿಲೊಮಿನಾಸ್ ಹೈಯರ್ ಪ್ರೈಮರಿ ಸ್ಕೂಲ್"ಎಂದು ಮರುನಾಮಕರಣ ಮಾಡಲು ಅನುಮತಿ ದೊರೆಯಿತು. ಮತ್ತು ಶಾಲೆಗೆ ಹೈಯರ್ ಎಲಿಮೆಂಟರಿ ಶಾಲೆ ಎಂಬ ಶಾಶ್ವತ ಅನುಮೋದನೆ ದೊರೆಯಿತು. 1936ರಲ್ಲಿ ಮೊದಲ ಬಾರಿಗೆ ವಿದ್ಯಾರ್ಥಿಗಳು EPSC ಪರೀಕ್ಷೆ ಬರೆದು 14ರಲ್ಲಿ 10 ಮಂದಿಗೆ ಈ ಸರ್ಟಿಫಿಕೇಟ್

ದೊರೆಯಿತು. ಏಳು ಮಂದಿ ವಿವಿಧ ಪ್ರೌಢ ಶಾಲೆಗಳಲ್ಲಿ ಶಿಕ್ಷಣ ಮುಂದುವರಿಸಿದರು. ಮೂರು ಮಂದಿ ಹುಡುಗಿಯರಿಗೆ ಧಾರ್ಮಿಕ ಶಿಕ್ಷಣಕ್ಕೆ ಸೇರುವ ಬಯಕೆ ಇದ್ದುದರಿಂದ, ಬೆಥನಿ ಸಭೆಗೆ ನಂತರ ಸೇರಿಕೊಂಡರು.

1940ರಲ್ಲಿ ಶಾಲೆ ನೂರು ಶೇಖಡಾ ಫಲಿತಾಂಶವನ್ನು ಪಡಕೊಂಡುದರಿಂದ ಪರಿವೀಕ್ಷಣಾಧಿಕಾರಿಯವರು ಹೀಗೆ ವರದಿ ಮಾಡುತ್ತಾರೆ -*"It is really commendable that educational excursions are arranged from time to time and this adds to the popularity of the institution"*[7] ಜೂನ್ 1967ರಲ್ಲಿ, ಸುಪೀರಿಯರ್ ಜನರಲ್, ಮದರ್ ತೆದೋಸಿಯಾರವರು ಕೆಮ್ಮಣ್ಣುವಿನಲ್ಲಿ ಹೆಣ್ಣು ಮಕ್ಕಳ ಪ್ರೌಢ ಶಾಲೆ ತೆರೆಯಲು ನಿರ್ಧರಿಸಿದರೂ ಅದು ಸಫಲವಾಗಲಿಲ್ಲ. 1970ರಲ್ಲಿ ಮರು ಪ್ರಯತ್ನ ಮಾಡಲಾಯಿತು ಮತ್ತು 17 ಮೇ 1971 ರಂದು ಶಿಕ್ಷಣ ಇಲಾಖೆಯಿಂದ ಅನುಮತಿ ದೊರೆಯಿತು.

ಈ ಭಗಿನಿಯರಿಂದ ಮೌಲ್ಯವರ್ಧಕ ಶಿಕ್ಷಣ ದೊರೆಯುತ್ತಿದೆ ಎಂದು ಪ್ರಚಲಿತಗೊಂಡಾಗ, ಮಕ್ಕಳ ಸಂಖ್ಯೆ ಕ್ರಮೇಣ ಹೆಚ್ಚುತ್ತಾ ಬಂತು. ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಹೊಸ ಕಟ್ಟಡದ ಅವಶ್ಯಕತೆಗನುಗುಣವಾಗಿ ಶಾಲೆಯು ಎಲ್ಲಾ ಆಧುನಿಕ ಸೌಕರ್ಯಗಳನ್ನೊಳಗೊಂಡ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡಿತು. ಶಿಲಾನ್ಯಾಸ ಮಾಡುವಾಗ ಪ್ರಾಥಮಿಕ ಅವಶ್ಯಕತೆ ಗ್ರಾಮದ ಕೆಥೋಲಿಕ ವಿದ್ಯಾರ್ಥಿಗಳಿಗೆ ಎಂಬುದಾಗಿದ್ದರೂ, ಕ್ರಮೇಣ ಎಲ್ಲಾ ಮಕ್ಕಳಿಗೂ ಅವಕಾಶ ಕಲ್ಪಿಸಲಾಯಿತು. ಇಲ್ಲಿನ ಕೆಲವು ಹಳೆ ವಿದ್ಯಾರ್ಥಿಗಳು ಶಿಕ್ಷಣ ವಿಸ್ತರಣೆಗೆ ಪ್ರಾಶಸ್ತ್ಯ ನೀಡಿ ಮುಂದೆ ಬಂದರು ಮತ್ತು ಅವರದೇ ಕೊಡುಗೆಗಳನ್ನು ಸಮಾಜಕ್ಕೆ ನೀಡುವ ಮೂಲಕ ಹೆಸರು ಗಳಿಸಿದರು.

ಸೈಂಟ್ ಸಿಸಿಲೀಸ್ ಗರ್ಲ್ಸ್ ಹೈಸ್ಕೂಲ್, ಉಡುಪಿ (1933)

ಈ ಶಾಲೆ ಉಡುಪಿಯ ಜನರಿಂದ, ಮುಖ್ಯವಾಗಿ ಶಿಕ್ಷಿತ ಮಹಿಳೆಯರು ತಮ್ಮ ಮಕ್ಕಳು ಕಾನ್ವೆಂಟ್ ಶಿಕ್ಷಿತರಾಗಿ ಮಂಗಳೂರಿನ ಸೈಂಟ್ ಆನ್ಸ್ ಶಾಲೆಯ ಮಾದರಿಯಲ್ಲಿ ಬೆಳೆಯಬೇಕು ಎಂದು ಬಯಸಿ ಅಪೊಸ್ತೊಲಿಕ್ ಕಾರ್ಮೆಲ್‌ನ ಸುಪೀರಿಯರ್ ಜನರಲ್ ಆಗಿದ್ದ ರೆವೆ. ಮದರ್ ಅಲೋಯ್ಸಿಯಾರವರಿಗೆ ಮಂಗಳೂರಿನ ಬಿಷಪ್ ಪೌಲ್ ಪೆರಿನಿ ಎಸ್. ಜೆ. ಇವರ ಮೂಲಕ ಪದೇ ಪದೇ ಮನವಿ ಮಾಡಿದ್ದರಿಂದ ಸ್ಥಾಪನೆಯಾಯಿತು. ಎರಡು ವರ್ಷಗಳಷ್ಟು ತಡವಾಗಿ ಮತ್ತು ಹಿಂಜರಿಯುವಿಕೆಯಿಂದಲೇ, ಅತೀವ ಒತ್ತಡವಿದ್ದುದರಿಂದ ಕೊನೆಯದಾಗಿ ದೃಢ ನಿರ್ಧಾರ ತೆಗೆದುಕೊಂಡು 18 ಮೇ 1918ರಲ್ಲಿ ಭಗಿನಿಯರು ಈ ಜವಾಬ್ದಾರಿ ಹೊತ್ತುಕೊಂಡರು.

ಬಿಷಪರು ಮತ್ತು ಶ್ರೀ ಪಿ. ಆಳ್ವ, ವಿಕಾರ್ ಆಗಿದ್ದ ರೆ। ಫಾ। ಕಾಸ್ಮಿರ್ ಮೆನೇಜಸ್, ಶ್ರೀ ಸೆಬೇಸ್ಟಿನ್ ಅಂದ್ರಾದೆ, ಶ್ರೀ ಆದಮ್ ಸಾಹಿಬ್ ಮತ್ತು ಶ್ರೀ ಮರಿಯನ್ ಪಾಯ್ಸ್ ಇವರುಗಳ ಸಹಕಾರದೊಂದಿಗೆ 24 ಮೇ 1918ರಂದು ಮೂರು ತರಗತಿಗಳನ್ನು 9 ವಿದ್ಯಾರ್ಥಿಗಳೊಂದಿಗೆ ಒಂದು ಬಾಡಿಗೆ ಕಟ್ಟಡದಲ್ಲಿ ವರ್ಷಕೊಂದು ತರಗತಿ ಸೇರಿಸುವ ಯೋಜನೆಯೊಂದಿಗೆ ಆರಂಭಿಸಲಾಯಿತು. ಸ್ಥಾಪಕ ಭಗಿನಿಯರು ಆಗಮಿಸಿ ಆರು ದಿನಗಳಲ್ಲಿಯೇ ಜನರ ಸೇವೆಗಾಗಿ ಇಂತಹ ಒಂದು ದೊಡ್ಡ ಸಾಧನೆಗೆ ಕೈ ಹಾಕಿರುವುದು ನಿಜಕ್ಕೂ ಶ್ಲಾಘನೀಯ ಕೆಲಸ. 1920ರಲ್ಲಿ ಮದರ್ ಎಮ್. ಆಗ್ನೆಸ್ ಸುಪೀರಿಯರ್ ಆಗಿದ್ದು 5ನೇ ತರಗತಿ ಸ್ಥಾಪಿಸಲು ಅನುಮತಿ ಪಡೆದರು. 1923 ಮಾರ್ಚ್ ವೇಳೆಗೆ, ಅವರು ಶಾಲೆಯ ಪ್ರಥಮ ಕಟ್ಟಡ ಬ್ಲಾಕ್ ನಿರ್ಮಿಸುವಲ್ಲಿ ಸಫಲರಾದರು. ಈ ಶಾಲೆಯು ಮಾಧ್ಯಮಿಕ ಶಾಲೆಯಾಗಿ ಅನುಮೋದನೆಗೊಂಡಿತು ಮತ್ತು ಎರಡು ವರ್ಗಗಳುಸೇರಿಸಲ್ಪಟ್ಟವು. IIIನೇ ವರ್ಗ ಜೂನ್ 1924ರಲ್ಲಿ ಆರಂಭವಾದಾಗ ಈ ಸಂಸ್ಥೆಯನ್ನು ಹೈಸ್ಕೂಲ್ ಮಟ್ಟಕ್ಕೆ ಏರಿಸಲು ಪ್ರಯತ್ನ ನಡೆದರೂ ಅದು ಸಫಲವಾಗಲಿಲ್ಲ.

ಮದರ್ ಎಂ. ಸಿರಿಲ್ಲ, ಸುಪೀರಿಯರ್ ಆಗಿದ್ದು ಈಗಿನ ಇಂಗ್ಲೀಷ್ ಶಾಲೆಯನ್ನು 1928ರಲ್ಲಿ ಕಟ್ಟಿಸುವ ಜವಾಬ್ದಾರಿ ನೋಡಿಕೊಂಡರು ಮತ್ತು 1930ರಲ್ಲಿ ಮದರ್ ಎಂ. ಫ್ಲೇಸೈಡ್ ಒಂದು ವಿಶಾಲವಾದ ಸಭಾಂಗಣ ಮತ್ತು 60 ಮಕ್ಕಳಿಗೆ ಅನುಕೂಲವಾಗುವ ಬೋರ್ಡಿಂಗ್ ಹೋಮ್ ನಿರ್ಮಿಸಿದರು. ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕಟ್ಟಡ ವಿಸ್ತರಣೆ ತೀರಾ ಅಗತ್ಯವಿದ್ದುದರಿಂದ ಸರಕಾರ ಕಟ್ಟಡ ನಿರ್ಮಾಣಕ್ಕೆ ಮತ್ತು ಆಟದ ಮೈದಾನ ಸ್ಥಳ ಖರೀದಿಸಲು ಅನುದಾನ ನೀಡಿತು.

3 ಜೂನ್ 1931 ರಂದು ಮೊದಲ ಮುಖ್ಯ ಶಿಕ್ಷಕಿಯಾಗಿದ್ದ ಸಿಸ್ಟರ್ ಯೂಜಿನ್ IVನೇ ವರ್ಗ ತೆರೆಯಲು ಅನುಮತಿ ಪಡೆಯಲು ಸಫಲರಾದರು ಮತ್ತು ಇದು ಹೈಸ್ಕೂಲ್‌ನ ಮೊದಲ ತರಗತಿಯಾಗಿತ್ತು. ಸುಪೀರಿಯರ್ ಮತ್ತು ಮುಖ್ಯ ಶಿಕ್ಷಕಿಯಾಗಿ ಎರಡು ಜವಾಬ್ದಾರಿಗಳಿದ್ದರೂ ಅವರು ಮಾರ್ಚ್ 1932ರಲ್ಲಿ ಹೈಸ್ಕೂಲ್ ವಿಭಾಗಕ್ಕೆ ಹೊಸ ಕಟ್ಟಡ ವಿಭಾಗವನ್ನು ಕಟ್ಟುವಲ್ಲಿ ಸಫಲರಾದರು. ಅದೇ ವರ್ಷ Vನೇ ವರ್ಗವನ್ನು ಆರಂಭಿಸಲು ಅನುಮತಿ ದೊರೆಯಿತು ಮತ್ತು 1933ರಲ್ಲಿ ಸೈಂಟ್ ಸಿಸಿಲೀಸ್ ಹೆಣ್ಮಕ್ಕಳ ಪ್ರೌಢ ಶಾಲೆ ಸೌತ್ ಕೆನರಾದ ಅಪೊಸ್ತೋಲಿಕ್ ಕಾರ್ಮೆಲ್ ಭಗಿನಿಯರಿಂದ ನಡೆಸಲ್ಪಡುವ ಎರಡನೇ ಪ್ರೌಢ ಶಾಲೆ ಎಂಬ ರ್‍ಯಾಂಕ್ ಪಡೆಯಿತು. ಶಾಲೆಯು ಹೊಸತಾಗಿ ಆರಂಭವಾದ ಹೈಸ್ಕೂಲ್‌ನಿಂದಾಗಿ ಹೆಚ್ಚಿನ ಹಣಕಾಸು ತೊಂದರೆಗೆ ಒಳಗಾಯಿತು. ಜೂನ್ 1936ರಲ್ಲಿ, ಈಗಿನ ಪ್ರೌಢ ಶಾಲಾ ಕಟ್ಟಡಕ್ಕೆ ಧರ್ಮಗುರು ಆಗಿದ್ದ ರೆವೆ. ಫಾ। ಸಿಕ್ವೇರಾರವರು ಶಿಲಾನ್ಯಾಸಗೈದರು. ಅದೇ ವರ್ಷ ಜುಲೈನಲ್ಲಿ ಪ್ರೌಢ ಶಾಲೆಗೆ ಶಾಶ್ವತ ಅನುಮೋದನೆ ದೊರೆಯಿತು. ಮತ್ತು

1937ರಲ್ಲಿ ಪ್ರೌಢ ಶಾಲೆಯನ್ನು ಮಂಗಳೂರಿನ ಬಿಷಪರಾದ ಗೌರವಾನ್ವಿತ ರೆವೆ. ಡಾ। ವಿ. ಆರ್. ಫೆರ್ನಾಂಡಿಸ್[9], ಇವರು ಆಶೀರ್ವದಿಸಿದರು. 1947ರಲ್ಲಿ ಶಾಲೆಯು ಕನ್ನಡವನ್ನು ಕಲಿಕಾ ಮಾಧ್ಯಮವಾಗಿ ಅಂಗೀಕರಿಸಿತು ಮತ್ತು ಇಂದಿನವರೆಗೆ ಕನ್ನಡ ಮಾಧ್ಯಮವನ್ನು ಉಳಿಸಿಕೊಂಡಿದೆ.

1935ರಲ್ಲಿ ಶಾಲೆಯು 'Girls Guide' ತುಕಡಿಯನ್ನು ಹೊಂದಿಕೊಂಡು ಇದು ಪ್ರಾಮಾಣಿಕತೆ, ವಿದೇಯತೆ, ಸಮಯಪ್ರಜ್ಞೆ, ಗೌರವ ಮತ್ತು ದಯೆಯ ಗುಣಗಳನ್ನು ಬೆಳೆಸಿಕೊಂಡು ಅವರ ಮುಂದಿನ ಜೀವನ ರೂಪಿಸಿಕೊಳ್ಳುವಲ್ಲಿ ಮತ್ತು ಮನೆವಾರ್ತೆ ನಿರ್ವಹಿಸುವಲ್ಲಿ ಹೆಣ್ಣು ಮಕ್ಕಳಿಗೆ ಸಹಾಯಕವಾಯಿತು. ಇದರ ಅಂಗವಾಗಿ ಹುಡುಗಿಯರು ನೆರೆಹಾವಳಿಗೆ ಒಳಗಾದ ಜನರಿಗೆ ಸಹಾಯ ಮಾಡಲು ಸಮಾಜ ಸೇವಾ ಶಿಬಿರಗಳಿಗೆ ಹೋಗಬೇಕಾಗಿತ್ತು. ಯುವ ಮಹಿಳೆಯರನ್ನು ಅಡಿಗೆಯಲ್ಲಿ ಪರಿಣಿತಗೊಳಿಸಲು ಶಾಲಾ ಆಡುಗೆ ಮನೆಯನ್ನು 1948ರಲ್ಲಿ ಸ್ಥಾಪಿಸಲಾಯಿತು. ಕೆಲವು ವರ್ಷಗಳ ವರೆಗೆ ಈ ಕಲೆಗೆ ಹೆಚ್ಚಿನ ಪ್ರಾಧಾನ್ಯತೆ ಕೊಡದಿದ್ದರೂ, ಹುಡುಗಿಯರು ಆಡುಗೆ ಕ್ಲಾಸನ್ನು ಪುನರಾರಂಭಿಸಿದರು. ಹೆಣ್ಣು ಮಕ್ಕಳಲ್ಲಿ ನಾಯಕತ್ವ ಗುಣವನ್ನು ಬೆಳೆಸುವ ಉದ್ದೇಶದಿಂದ ಶಾಲಾ ಮಂತ್ರಿ ಮಂಡಲವನ್ನೂ ಸ್ಥಾಪಿಸಲಾಗಿತ್ತು.

1951ರಲ್ಲಿ "ಹಳೆ ವಿದ್ಯಾರ್ಥಿಗಳ ಸಂಘ" ಅಸ್ತಿತ್ವಕ್ಕೆ ಬಂತು. ಸಂಘವು ವರ್ಷಕ್ಕೊಂದು ಬಾರಿ ಸೇರಿಬಂದು ಸಂಸ್ಥೆಗೆ ಹಣಕಾಸು ಮತ್ತು ಔಪಚಾರಿಕ ನೆರವು ನೀಡುವಲ್ಲಿ ಸಹಕಾರ ನೀಡುತ್ತಿತ್ತು. ಇಂದಿನ ವರೆಗೆ ಈ ಸಂಘವು ಸಕ್ರೀಯವಾಗಿ ಕಾರ್ಯ ನಿರ್ವಹಿಸುತ್ತಿದೆ. ವಿಶೇಷವಾಗಿ ಹೇಳಬೇಕೆಂದರೆ ಸಹಾಯದ ಹಸ್ತಗಳು "ಕೊಂಕಣ ಸಮುದಾಯದ" ಸದಸ್ಯರಿಂದ ಅಂದರೆ ನಾಯಕ್, ಶೆಣೈ, ಕಾಮತ್, ಬಾಳಿಗಾ ಮತ್ತಿತರಿಂದ ಬರಲಾರಂಭಿಸಿ ಸಂಸ್ಥೆಗೆ ಉತ್ತಮ ಆತ್ಮೀಯ ನೆರವು ದೊರೆಯಿತು.

'Social Service' ದಿನವು ನವೆಂಬರ್ 1939ರಂದು ಸಿಸ್ಟರ್ ಮೆಕ್‌ಟೈಡ್ ಇವರಿಂದ ಆರಂಭವಾಗಿ ಅದು ಬಡ ವಿದ್ಯಾರ್ಥಿಗಳ ಫೀಸ್, ಪುಸ್ತಕ, ಸಮವಸ್ತ್ರ ಇತ್ಯಾದಿ ವೆಚ್ಚಗಳನ್ನು ಭರಿಸಲು ವಿದ್ಯಾರ್ಥಿಗಳು ಹಣ ಸಂಗ್ರಹ ಮಾಡುವುದಕ್ಕೆ ಪ್ರೋತ್ಸಾಹ ನೀಡಿತು. ಸಿಸ್ಟರ್ ಲುಸೆಲಿಯಾ ಎ.ಸಿ. ಇವರು ಪ್ರೌಢ ಶಾಲೆಯ ಮುಖ್ಯ ಶಿಕ್ಷಕಿಯಾಗಿ 13 ವರ್ಷಗಳ ಸೇವೆ ಸಲ್ಲಿಸಿದ್ದು ಶಾಲೆಯ ಅಭಿವೃದ್ಧಿಗೆ ಬಹಳಷ್ಟು ಕೊಡುಗೆ ನೀಡಿದರು. ಕರ್ನಾಟಕ ಸರಕಾರವು ಅವರ ಸೇವೆಯನ್ನು ಪ್ರಶಂಷಿಸಿ 1981ರಲ್ಲಿ ರಾಜ್ಯ ಪ್ರಶಸ್ತಿಯನ್ನು ನೀಡಿತು. ದೇಶಕ್ಕೆ ಹಲವಾರು ಯುವ ಆಟೋಟ ಸ್ಪರ್ಧಿಗಳನ್ನು ಕೊಟ್ಟ ಹೆಮ್ಮೆಯೂ ಸೈಂಟ್ ಸಿಸಿಲೀಸ್‌ಗೆ ಸಲ್ಲುತ್ತದೆ. ರಾಷ್ಟ್ರೀಯ ಎವಾರ್ಡ್ ಪಡೆದಿರುವ ಮಿಸ್ ಅನಿತ ತಂತ್ರಿ ಮತ್ತು ಮಿಸ್ ಶೈಲಜ ಕಾಮತ್ ಇವರು ಇದಕ್ಕೆ ಉದಾಹರಣೆಯಾಗಿದ್ದಾರೆ.

ಕಾರ್ಮೆಲ್ ಗರ್ಲ್ಸ್ ಹೈಸ್ಕೂಲ್, ಬಂಟ್ವಾಳ(1963)

1960ರಲ್ಲಿ ಮಂಗಳೂರಿಗೆ ಪ್ರೊ। ನೂನಿಯೊ, ಕಾರ್ಡಿನಲ್ ಜೇಮ ನೋಕ್ಸ್ ಭೇಟಿ ನೀಡಿ ಅಪೊಸ್ತೊಲಿಕ್ ಸಭೆಗೆ ಪರಿಣಾಮಕಾರಿಯಾದ ಹೊಸ ತಿರುವನ್ನು ನೀಡಿದರು. ಅವರು ಸುಪೀರಿಯರ್ ಜನರಲ್ ಆಗಿದ್ದ ಮದರ್ ತೆದೋಸಿಯಾ ಇವರಿಗೆ ಚರ್ಚ್ ವ್ಯಾಪ್ತಿಯಲ್ಲಿರುವ ಗ್ರಾಮೀಣ ಪ್ರದೇಶದ ಕಡೆಗೆ ವೈದ್ಯಕೀಯ ಮತ್ತು ಶಿಕ್ಷಣ ಸೇವೆಯನ್ನು ವಿಸ್ತರಿಸುವತ್ತ ಧಾರ್ಮಿಕ ಭಗಿನಿಯರ ಚಿತ್ತ ಹರಿಯಬೇಕು ಎಂದು ಮನದಟ್ಟು ಮಾಡಿದರು. ಪರಿಶೀಲಿಸುವಾಗ ಹಳ್ಳಿಯ ಕೆಥೋಲಿಕ ಮನೆಗಳಲ್ಲಿ ಅನೇಕ ಯುವ ಹೆಣ್ಣು ಮಕ್ಕಳು ಪ್ರೌಢಿಮೆ ಹೊಂದಿ ಬೆಳೆದಿರುವುದರಿಂದ ಅವರು ಧಾರ್ಮಿಕ ಸೇವೆಗೆ ತರಭೇತುಗೊಳಿಸುವುದಕ್ಕಾಗಿ ಅಭ್ಯರ್ಥಿಗಳನ್ನಾಗಿ ಆಯ್ಕೆ ಮಾಡಬಹುದು ಅನಿಸಿತು. ಅಂತೆಯೇ ಕಾರ್ಮೆಲ್ ಕಾನ್ವೆಂಟ್, ಬಂಟ್ವಾಳದ ಮೊಡಂಕಾಪುವಿನಲ್ಲಿ 1963ರಲ್ಲಿ ಮತ್ತು ಮುಂದಿನ ವರ್ಷ ಕಾರ್ಮೆಲ್ ಕಾನ್ವೆಂಟ್ ಮೂಡಬಿದ್ರಿ ಸ್ಥಾಪನೆಯಾಯಿತು.

ಬಂಟ್ವಾಳದ ಇನ್ಫೆಂಟ್ ಜೀಸಸ್ ಚರ್ಚ್‌ನ ಧರ್ಮಗುರು ಫಾ। ಎಡ್ವಿನ್ ಕಾಸ್ಟೆಲಿನೊ ಇವರು ಪ್ಯಾರಿಷ್‌ನ ವ್ಯಾಪ್ತಿಯಲ್ಲಿ ಹೆಣ್ಣು ಮಕ್ಕಳ ಪ್ರೌಢ ಶಾಲೆಯ ಅಗತ್ಯತೆಯನ್ನು ತಿಳಿಸಿದರು. ಆಗಲೆ ಪ್ಯಾರಿಷ್‌ನಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳಿಗಾಗಿ ಒಂದು ಪ್ರಾಥಮಿಕ ಶಾಲೆ ಅಸ್ತಿತ್ವದಲ್ಲಿದ್ದು ಹೆಣ್ಣು ಮಕ್ಕಳು ಪ್ರೌಢ ಶಿಕ್ಷಣಕ್ಕಾಗಿ ದೂರದ ಶಾಲೆಗೆ ಹೋಗಬೇಕಾಗಿದ್ದು ಕೆಲವು ಹೆಣ್ಣು ಮಕ್ಕಳು ಇದರಿಂದಾಗಿ ಶಿಕ್ಷಣ ಕಡಿತಗೊಳಿಸಿ ಮುಂಬಯಿ ಮತ್ತಿತರ ಕಡೆಗೆ ಉದ್ಯೋಗ ಹುಡುಕಿ ಹೋಗುತ್ತಿದ್ದರು. ಆದುದರಿಂದ ಪರಿಸರದಲ್ಲಿ ಒಂದು ಪ್ರೌಢ ಶಾಲೆ ಹೆಣ್ಣು ಮಕ್ಕಳಿಗಾಗಿ ಅವರು ಶಿಕ್ಷಣ ಪಡೆಯಲು ಮತ್ತು ಜೀವನ ಮಟ್ಟ ಹೆಚ್ಚಿಸಿಕೊಳ್ಳಲು ಅಗತ್ಯವಾಗಿತ್ತು. ಹೀಗೆ ಶಿಕ್ಷಣ ಹೊಂದುವುದರಿಂದ ಅವರಿಗೆ ಧಾರ್ಮಿಕ ಜೀವನಕ್ಕೆ ಸೇರಲು ಪ್ರೋತ್ಸಾಹ ನೀಡಿದಂತಾಗುತ್ತಿತ್ತು.

ಮಂಗಳೂರಿನಲ್ಲಿ ಅಡ್ವೊಕೇಟ್ ಆಗಿದ್ದ ಶ್ರೀ ಜಾನ್ ಗೊನ್‌ಸಾಲ್ವೆಸ್‌ರವರು ಭಗಿನಿಯರಿಗೆ ಮೊಡಂಕಾಪುವಿನ ಮೂಡಾ ಗ್ರಾಮದ ಒಂದು ಅನುಕೂಲಕರ ಸ್ಥಳವನ್ನು ಕೊಂಡುಕೊಳ್ಳಲು ಸಹಾಯ ಮಾಡಿದರು. ಇದು ಮಂಗಳೂರು ರಸ್ತೆಯಿಂದ ಎರಡು ಫರ್ಲಾಂಗ್‌ನಷ್ಟು ದೂರವಿದ್ದು ಬಂಟ್ವಾಳ ಪಟ್ಟಣದಿಂದ ಮೂರು ಮೈಲು ದೂರದಲ್ಲಿದೆ. ಮದರ್ ಗೆರ್ಟ್ರೂಡ್ ಮತ್ತು ಸಿಸ್ಟರ್ ಕ್ಲೇರಿಸ್ ಇವರು ಈ ಸ್ಥಳವನ್ನು ನೆತ್ತೆರ್‌ಕೆರೆಯ ವೈದ್ಯರಾದ ನರಸಿಂಹ ಹೊಳ್ಳ ಮತ್ತವರ ಕುಟುಂಬದವರಿಂದ ರೂ. 11,240/- ನೀಡಿ 2 ಎಕರೆ 92 ಸೆಂಟ್ಸ್ ಸ್ಥಳವನ್ನು ಪಡೆಯುವಲ್ಲಿ ಸಫಲರಾದರು. ಇನ್ನೊಂದು 8 ಸೆಂಟ್ಸ್ ಸ್ಥಳವನ್ನು ನಂತರ ಶ್ರೀ ವಾಸುದೇವ ಹೊಳ್ಳ ಅವರಿಂದ ಖರೀದಿಸಲಾಯಿತು ಮತ್ತು ಈ ಸ್ಥಳವು ಕಾನ್ವೆಂಟ್‌ಗೆ ಮಂಗಳೂರು ಮುಖ್ಯ ರಸ್ತೆಗೆ ನೇರ ಸಂಪರ್ಕವನ್ನು ನೀಡುವ ಪೊಳಲಿ ರಸ್ತೆಯನ್ನು ಸಂಪರ್ಕಿಸುವಲ್ಲಿ ಸಹಾಯವಾಯಿತು. 29 ಮೇ 1963 ರಂದು ಸಿಸ್ಟರ್

ಕೊನ್ಸೆಟ್ಟಾ, ಅವಿಟ, ಕೊನ್ಸೆಸ್ಸಾ ಮತ್ತಿತರ ಭಗಿನಿಯರೊಡಗೂಡಿ ಬಂಟ್ವಾಳದ ಮೊಡಂಕಾಪುವಿಗೆ ಬಂದರು. ಫಾ। ಎಡ್ವಿನ್ ಕ್ಯಾಸ್ಟಲಿನೊ ಅವರಿಗೆ ಹಾರ್ದಿಕ ಸ್ವಾಗತ ನೀಡಿದರು ಮತ್ತು ಅವರಿಗೆ ಆಶೀರ್ವಾದ ನೀಡಿ ಶುಭ ಹಾರೈಸಿ ಅವರಿಗೆ ಚರ್ಚ್‌ನ ಆವರಣದಲ್ಲಿರುವ ಪ್ಯಾರಿಶ್‌ಗೆ ಸಂಭಂದಪಟ್ಟ ಒಂದು ಮನೆಯನ್ನು ವಾಸ್ತವ್ಯಕ್ಕೆ ನೀಡಿದರು.

ಸಿಸ್ಟರ್ ಮೇರಿ ಮಚಾದೊ ಇವರ ತಾಯಿಯಾದ ಶ್ರೀಮತಿ ಕಾರ್ಮಿನ್ ಮಚಾದೊ ಈ ಸ್ಥಾಪಕ ಭಗಿನಿಯರಿಗೆ ಆತ್ಮೀಯ ನೆರೆಮನೆಯವರಾಗಿದ್ದರು ಆದುದರಿಂದ ತರಕಾರಿ, ಮತ್ತು ಇತರ ಆಹಾರ ಪದಾರ್ಥಗಳು ಕೊಡು-ಕೊಳ್ಳುವ ಸಂಪ್ರದಾಯವಿತ್ತು. ಶಾಲೆಯ ಆರಂಭವು 1 ಜೂನ್ 1963 ರಂದು ಯಾವುದೇ ಔಪಚಾರಿಕ ಕಾರ್ಯಕ್ರಮಗಳಿಲ್ಲದೆ ನಡೆಯಿತು. ಧರ್ಮಗುರುಗಳು ಭಗಿನಿಯರನ್ನು ಕಳುಹಿಸಿ ಚರ್ಚ್‌ಶಾಲೆಯ ರಂಗಮಂಟಪವನ್ನು 8ನೇ ತರಗತಿ ಆರಂಭಿಸುವುದಕ್ಕಾಗಿ ಬಿಟ್ಟುಕೊಟ್ಟರು ಮತ್ತು 40 ಹುಡುಗಿಯರು ಸೇರ್ಪಡೆಗೊಂಡರು. ಭಗಿನಿಯರು ಕೊಂಡುಕೊಂಡ ಸ್ಥಳವನ್ನು ಸಮತಟ್ಟು ಮಾಡಲಾಯಿತು ಮತ್ತು ಹೊಸ ಕಟ್ಟಡ ನಿರ್ಮಾಣ ಆರಂಭಗೊಂಡಿತು. ಜೂನ್ 1963ರ ಹೊತ್ತಿಗೆ ಕಟ್ಟಡ ನಿರ್ಮಾಣಗೊಂಡು ವಿಕಾರ್ ಇವರಿಂದ ಆಶೀರ್ವದಿಸಲ್ಪಟ್ಟು 8ನೇ ತರಗತಿಯು ಅಲ್ಲಿಗೆ ಸ್ಥಳಾಂತರಗೊಂಡಿತು. ಮುಂದೆ ಮಕ್ಕಳ ಸಂಖ್ಯೆ 53ಕ್ಕೆ ಹೆಚ್ಚಿಸಲ್ಪಟ್ಟು ಭಗಿನಿಯರು ಶಾಲಾ ಕಟ್ಟಡದಲ್ಲಿ ಕೆಲವು ಕೋಣೆಗಳನ್ನು ಉಪಯೋಗಿಸಿಕೊಂಡರು.

ಬಂಟ್ವಾಳ ಕಾರ್ಮೆಲ್ ಕಾನ್ವೆಂಟ್ 25 ಮೇ 1967ರಲ್ಲಿ ಸಂಘಟಿತ ಸಂಸ್ಥೆಯಾಗಿ ಸಿಸ್ಟರ್ ಬೆರ್ನಾಡೈನ್ ಮೊದಲ ಸ್ಥಳೀಯ ಸುಪೀರಿಯರ್ ಆಗಿ ನೇಮಕಗೊಂಡರು ಮತ್ತು ಇವರು ಆಗಸ್ಟ್ 1969ರಲ್ಲಿ ಕಾನ್ವೆಂಟ್ ಕಟ್ಟಡ ನಿರ್ಮಾಣ ಆರಂಭಿಸಿದರು. ತೀರಾ ಹಳ್ಳಿಗಳ ಹೆಣ್ಣು ಮಕ್ಕಳಿಗೂ ಶಿಕ್ಷಣ ಲಭ್ಯವಾಗಬೇಕೆಂಬ ದೃಷ್ಟಿಯಿಂದ ಧಾರ್ಮಿಕ ನೆರವಿನಿಂದ ಒಂದು ಬೋರ್ಡಿಂಗನ್ನು ಸ್ಥಾಪಿಸಲಾಯಿತು. 30 ಹೆಣ್ಣುಮಕ್ಕಳು ಸ್ಥಾಪನೆಯ ಪ್ರಥಮ ವರ್ಷದಲ್ಲಿ ಬೋರ್ಡಿಂಗ್ ಹೋಮ್‌ಗೆ ಸೇರ್ಪಡೆ ಬಯಸಿದರು. ಹೀಗೆ ಬಂಟ್ವಾಳದಲ್ಲಿ 1963ರಲ್ಲಿ ಸಣ್ಣದಾಗಿ ಸ್ಥಾಪನೆಗೊಂಡ ಈ ಸಂಸ್ಥೆ ಇಂದು ಅದ್ವಿತೀಯ ಸಂಸ್ಥೆಯಾಗಿ ಅಭಿವೃದ್ಧಿಗೊಂಡರೂ ಆರಂಭಿಕ ಸರಳತೆಯನ್ನು ಕಾಯ್ದುಕೊಂಡಿದೆ.[9] ಶಾಲೆಯು ನೂರಾರು ಹೆಣ್ಣು ಮಕ್ಕಳ ಜೀವನ ರೂಪಿಸಿರುವುದಕ್ಕೆ ಜ್ವಲಂತ ಸಾಕ್ಷಿಯಾಗಿದ್ದು ಅವರ ಜೀವನ ಭಗಿನಿಯರ ಆಗಮನದಿಂದ ಪರಿವರ್ತನೆಗೊಂಡಿದೆ. ಪ್ರೌಢ ಶಿಕ್ಷಣ ಮುಗಿಸಿದ ಬಳಿಕ ಅನೇಕ ಹೆಣ್ಣು ಮಕ್ಕಳು ಹೆಚ್ಚಿನ ಶಿಕ್ಷಣಕ್ಕಾಗಿ ಮಂಗಳೂರಿಗೆ ಹೋಗಿ ಅನೇಕರು ಉತ್ತಮ ಶಿಕ್ಷಕರಾಗಿ ಶಿಕ್ಷಣ ಹೊಂದಿ ಅವರು ತಾವೇ ಕಲಿತ ಶಾಲೆಗೆ ಶಿಕ್ಷಕಿಯರಾಗಿ ಬಂದರು.

ಕಾರ್ಮೆಲ್ ಕಾನ್ವೆಂಟ್, ಮೂಡಬಿದ್ರಿ (1964)

ಬಂಟ್ವಾಳದ ಶಿಲಾನ್ಯಾಸವಾದ ಕೂಡಲೇ, ಬಿಷಪ್ ರೇಮಂಡ್ ಡಿ'ಮೆಲ್ಲೋರವರು ಮದರ್ ತೆರೋಸಿಯಾರವರನ್ನು ಮೂಡಬಿದ್ರೆಯಲ್ಲಿ ಕಾನೆಂಟ್ ಒಂದನ್ನು ತೆರೆಯಲು ಕೇಳಿಕೊಂಡರು. ಅಲಂಗಾರಿನ ಧರ್ಮಗುರು ಆಗಿದ್ದ ಫಾ। ಫ್ರಾನ್ಸಿಸ್ ಕ್ಸೇವಿಯರ್ ಡಿ'ಸೋಜ ಮತ್ತು ಹೋಲಿ ರೋಸರಿ ಸಾನಟೋರಿಯಂನ ನಿರ್ದೇಶಕರಾದ ಫಾ। ಜಾನ್ ಮಾರಿಯನ್ ಮೆನೇಜಸ್ ಈ ಮನವಿಯನ್ನು ಪುನರುಚ್ಚಿಸಿದರು. ಹೆಣ್ಣು ಮಕ್ಕಳಿಗೆ ಒಂದು ಪ್ರೌಢ ಶಾಲೆಯ ಅಗತ್ಯತೆಯನ್ನು ಮನಗಂಡು ಸಹಾಯಕ ಸುಪೀರಿಯರ್ ಜನರಲ್ ಆಗಿದ್ದ ಮದರ್ ಸೆಲೀನ್ ಮತ್ತವರ ಸಹ ಭಗಿನಿಯರು 30 ಮೇ 1964ರಂದು ಮೂಡಬಿದ್ರಿಗೆ ಒಂದು ಶಾಲೆ ಮತ್ತು ಕಾನ್ವೇಂಟನ್ನು ತೆರಿಯುವುದಕ್ಕಾಗಿ ತೆರಳಿದರು. ಶ್ರೀ ಲೂಯಿಸಿ ಪಿಂಟೋ ಎಂಬವರು ತನ್ನ ಮನೆಯ ಒಂದು ಕೊಠಡಿಯಲ್ಲಿ ಭಗಿನಿಯರ ಉಪಯೋಗಕ್ಕಾಗಿ ತುಂಬಿದ ಮನಸ್ಸಿನಿಂದ ಬಿಟ್ಟುಕೊಟ್ಟರು ಮತ್ತು ಆಗ ಕಾನ್ವೆಂಟ್ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿತ್ತು. ಬಿಷಪ್ ರೇಮಂಡ್ ಡಿ'ಮೆಲ್ಲೋ ಶಾಲೆಯನ್ನು 1 ಜೂನ್ 1964ರಂದು ಉದ್ಘಾಟಿಸಿ ಆಶೀರ್ವದಿಸಿದರು. ಪ್ರಥಮ ವರ್ಷದಲ್ಲಿಯೇ ಮಕ್ಕಳ ಸೇರ್ಪಡೆ 40 ಆಗಿತ್ತು ಮತ್ತು 1965 ಆಗಸ್ಟ್ ಮೂರನೇ ವಾರದಲ್ಲಿ ಶಾಲಾ ಕಟ್ಟಡ ಸಿದ್ಧವಾಗಿತ್ತು. 1967ರಲ್ಲಿ ಪ್ರಥಮ ಹಂತದ ಮಕ್ಕಳು ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆದು 92% ಮಂದಿ ಉತ್ತೀರ್ಣಗೊಂಡರು. ಇವರಲ್ಲಿ 4 ಮಂದಿ ಅಪೊಸ್ತೋಲಿಕ್ ಕಾರ್ಮೆಲ್‌ನ ಭಗಿನಿಯರಾಗಿ, 5 ಮಂದಿ ಇತರ ಸಭೆಗೆ, ಉಳಿದವರು ಮಂಗಳೂರಿನಲ್ಲಿ ಇದೇ ಭಗಿನಿಯರಿಂದ[10] ನಡೆಸಲ್ಪಡುವ ಶಿಕ್ಷಕ ತರಬೇತಿ ಕೇಂದ್ರಕ್ಕೆ ಸೇರ್ಪಡೆಗೊಂಡರು.

ಶಿಕ್ಷಣ ನೀಡುವುದರ ಹೊರತಾಗಿ ಭಗಿನಿಯರು ಯಾವಾಗಲೂ ಕೈತೋಟ ಮತ್ತು ತೋಟಗಾರಿಕೆಯಲ್ಲಿ ಹೆಚ್ಚಿನ ಉತ್ಸಾಹ ತೋರಿಸುತ್ತಿದ್ದರು. ಉದಾಹರಣೆಗಾಗಿ ಬೋರ್ಡಿಂಗ್ ಮಕ್ಕಳಿಗೆ ಊಟೋಪಚಾರಕ್ಕಾಗಿ ಬೋರ್ಡಿಂಗ್ ಸಮೀಪದ ಭೂಮಿಯಲ್ಲಿ ಭತ್ತ ಬೆಳೆಸುತ್ತಿದ್ದರು. ವರ್ಷ ಕಳೆದಂತೆ ಸಂಖ್ಯೆ ಬೆಳೆಯಿತು ಮತ್ತು ವಾರ್ಷಿಕೋತ್ಸವ ಇತ್ಯಾಧಿ ನಡೆಸಲು ದೊಡ್ಡ ರಂಗಮಂಟಪ ಅಗತ್ಯತೆ ಕಂಡು ಬಂತು. ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆ ಇವರು ನೂತನ ರಂಗ ಮಂಟಪ ದಾನರೂಪವಗಿ ನಿರ್ಮಿಸಿಕೊಟ್ಟರು ಮತ್ತು ಇದರಲ್ಲಿ 21 ಜನವರಿ 1971ರಂದು ಪ್ರಥಮ ಶಾಲಾ ವಾರ್ಷಿಕೋತ್ಸವ ನೆರವೇರಿತು. ಮಾರ್ಚ್ 1971ರಲ್ಲಿ[10] ಶಾಲೆಗೆ ಶಾಶ್ವತ ಅನುಮೋದನೆ ದೊರೆಯಿತು. ಅಂದಿನಿಂದ ಶಾಲೆಯು ಶಿಕ್ಷಣದ ಬೆಳಕನ್ನು ಅದರ ವಿವಿಧ ಸಹಸಂಸ್ಥೆಗಳ ಮೂಲಕ ಮತ್ತು ಪ್ರಸ್ತುತ ಉದ್ಯೋಗಿಗಳಾಗಿರುವ ಹಾಗೂ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅದರ ಹಳೆ ವಿದ್ಯಾರ್ಥಿಗಳ ಮೂಲಕ ಚೆಲ್ಲುತ್ತಾ ಬಂದಿದೆ.

5.3 ವೃತ್ತಿಪರ ತರಬೇತಿ ಕೇಂದ್ರಗಳು

ವೃತ್ತಿಪರ ತರಬೇತಿ ಸಂಸ್ಥೆಗಳು ವಿವಿಧ ಕೌಶಲ್ಯ ಕ್ಷೇತ್ರಗಳಲ್ಲಿ ತರಬೇತಿಯನ್ನು ನೀಡಿ ತರಬೇತಿ ಹೊಂದಿದವರಿಗೆ ಉದ್ಯೋಗಾವಕಾಶ ಮತ್ತು ಸ್ವ-ಉದ್ಯೋಗ ಕಲ್ಪಿಸುವುದಕ್ಕೆ ಸಹಾಯಕವಾಗುತ್ತದೆ. ತಾಂತ್ರಿಕ ತರಬೇತಿ ಸಂಸ್ಥೆಗಳು (ITI) ನೀಡುವ ತರಬೇತಿ ಈ ವಿಭಾಗದಲ್ಲಿ ಬರುತ್ತದೆ. ದಕ್ಷಿಣ ಕನ್ನಡಕ್ಕೆ ಸಂಭಂದಿಸಿದಂತೆ ಯುವಜನರಿಗೆ ಉದ್ಯೋಗ ಕಲ್ಪಿಸುವ ದೃಷ್ಟಿಯಿಂದ ಅನೇಕ ಪುರುಷ ಮತ್ತು ಮಹಿಳಾ ಸಭೆಗಳ ಮಿಶನರಿಗಳು ಕೆಲವು ವೃತ್ತಿಪರ ತರಬೇತಿ ಕೇಂದ್ರಗಳನ್ನು ನಗರದ ವಿವಿಧ ಭಾಗಗಳಲ್ಲಿ ಸ್ಥಾಪಿಸಿದರು. ಈ ಕೇಂದ್ರಗಳ ಹೆಚ್ಚಿನ ಉಪಯೋಗವನ್ನು ಪುರುಷರು ಬಳಸಿಕೊಂಡರು. ಯಾಕಂದರೆ ಇವರಿಗೆ ಈ ತರಬೇತಿ ಕೇಂದ್ರಗಳಿಗೆ ಸೇರ್ಪಡೆಗೊಳ್ಳುವುದು ಸುಲಭಸಾಧ್ಯವಾಗಿತ್ತು ಮತ್ತು ಎರಡನೇದಾಗಿ ಅವರು ಮುಂಬಯಿ ಮತ್ತು ಮದರಾಸುಗಳಂತ ಪಟ್ಟಣದಲ್ಲಿ ಕೆಲಸಕ್ಕೆ ಸೇರ್ಪಡೆಗೊಳ್ಳುವುದಕ್ಕೆ ಇಲ್ಲವೇ ತಮ್ಮದೇ ಊರಿನಲ್ಲಿ ಸ್ವಂತ ಉದ್ಯೋಗಗಳನ್ನು ಇರುವ ಸಂಪನ್ಮೂಲಗಳನ್ನು ಬಳಸಿಕೊಂಡು ಮಾಡಲು ತಯಾರಾಗಿದ್ದರು. ಆದರೆ ಹೆಣ್ಣು ಮಕ್ಕಳು ಅಂದಿನ ದಿನದಲ್ಲಿ ಅಪೇಕ್ಷೆ ಪಡುವಂತೆ ಶಿಕ್ಷಕಿಯರಾಗಿ ಕೆಲಸ ಹೊಂದಿಕೊಳ್ಳಲು ಬಯಸುತ್ತಿದ್ದರೇ ಹೊರತಾಗಿ ಸ್ವ-ಉದ್ಯೋಗದ ಬಗ್ಗೆ ಒಲವು ಹೊಂದಿರಲಿಲ್ಲ. ಹೆಣ್ಣು ಮಕ್ಕಳು ಗಂಡು ಮಕ್ಕಳಂತೆ ಹೆಚ್ಚಿನ ಶಿಕ್ಷಣ ಪಡೆಯುವುದಕ್ಕೆ ಮತ್ತು ಹೊರಗಿನ ಪಟ್ಟಣಗಳಲ್ಲಿ ಕೆಲಸ ನಿರ್ವಹಿಸುವುದಕ್ಕೆ ಅಂದು ಆಸ್ಪದವಿಲ್ಲದ ಕಾರಣ ಅಪೋಸ್ತೊಲಿಕ್ ಭಗಿನಿಯರು ಕೂಡಾ ಇದೇ ದೃಷ್ಟಿಕೋನದಲ್ಲಿ ಹೆಣ್ಣು ಮಕ್ಕಳ ತರಬೇತಿ ವ್ಯವಸ್ಥೆಗೊಳಿಸಬೇಕಾಗಿತ್ತು.

ಹೊಲಿಗೆ, ಕಸೂತಿ, ಟೈಪಿಂಗ್ ಮತ್ತು ಶೀಘ್ರಲಿಪಿ ಇಂತಹ ತಾಂತ್ರಿಕ ತರಬೇತಿಗಳನ್ನು ನೀಡುತ್ತಿತ್ತು. ಈ ವಿಷಯಗಳಲ್ಲಿ ವಿದ್ಯಾರ್ಥಿಗಳನ್ನು ವಾರ್ಷಿಕ ತಾಂತ್ರಿಕ ಪರೀಕ್ಷೆಗೆ ಸಿದ್ಧಗೊಳಿಸಲಾಗುತ್ತಿತ್ತು. ಇಗ್ನೇಶಿಯನ್ ಅಸೋಸಿಯೇಶನ್‌ನ ಸದಸ್ಯರು ಮತ್ತು ಮಂಗಳೂರಿನ ಬಿಷಪ್, ರೆ. ಡಾ। ಬಾಸಿಲ್ ಡಿ'ಸೋಜ ಇವರು ಔದ್ಯೋಗಿಕ ಕೇಂದ್ರಕ್ಕೆ ಹೊಸ ಬೆರಳಚ್ಚು ಯಂತ್ರಗಳನ್ನು (typewriters) ಕೊಡುಗೆಯಾಗಿ ನೀಡಿದರು.

ಸೈಂಟ್ ಆನ್ಸ್, ಮಂಗಳೂರಿನಲ್ಲಿ ಬೇಸಿಕ್ ತರಬೇತಿ ಶಾಲೆ :

ಭಗಿನಿಯರು ನಡೆಸುತ್ತಿದ್ದ ಸಂಸ್ಥೆಗಳು ಉತ್ತಮ ಸೇವೆ ಸಲ್ಲಿಸುತ್ತಿದ್ದವು ಎನ್ನುವುದರಲ್ಲಿ ಸಂಶಯವಿಲ್ಲದಿದ್ದರೂ, ಶಿಕ್ಷಣ ವ್ಯವಸ್ಥೆ ಮತ್ತು ಶಿಕ್ಷಣ ಮಾಧ್ಯಮವು ಬದಲಾಗುತ್ತಿರುವ ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳುವುದು ಅವರಿಗೆ ದೊಡ್ಡ ಹೊಣೆಯಾಯಿತು. ಉಚಿತ ಶಿಕ್ಷಣವನ್ನು ಅಳವಡಿಸಿಕೊಳ್ಳಬೇಕಾದುದರಿಂದ ಶಿಸ್ತಿನಲ್ಲಿ ವ್ಯತ್ಯಾಸ ಉಂಟಾಯಿತು. ಕಾರಣ ಶಿಕ್ಷಣ ಮೌಲ್ಯ ಕಡಿಮೆಯಾಯಿತು. ಮತ್ತು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿ ಹಿಂದೆ 30-

40 ರಷ್ಟಿದ್ದ ತರಗತಿಗಳಲ್ಲಿ 60 ವಿದ್ಯಾರ್ಥಿಗಳನ್ನು ಸೇರಿಸಬೇಕಾದುದರಿಂದ ಒತ್ತಡದ ಪರಿಸ್ಥಿತಿ ಉಂಟಾಯಿತು. ಕನ್ನಡ ಮಾಧ್ಯಮವನ್ನು ಅಳವಡಿಸಿಕೊಳ್ಳಬೇಕಾದುದರಿಂದ ಶಿಕ್ಷಕಿಯರ ಆಯ್ಕೆ ಕಷ್ಟವಾಯಿತು. ಮಾತ್ರವಲ್ಲದೆ ಅನುದಾನಿತ ಶಾಲೆಗಳಾದುದರಿಂದ ಅವರು ಇಲಾಖೆಯ ಕ್ರಮ ನಿಯಮಗಳ ಅನುಸಾರ ನಡೆಯಬೇಕಾಗಿತ್ತು, ಮುಖ್ಯವಾಗಿ ಶಿಕ್ಷಕರ ಆಯ್ಕೆ. ಇದರಿಂದಾಗಿ ISC ಶಾಲೆಗಳಲ್ಲಿ ಕಲಿಸುವಿಕೆಯ ಮೌಲ್ಯ ಕಡಿಮೆಯಾಗಿ ಶಾಲೆಗಳು ಕ್ರಮೇಣ ಅವನತಿಯತ್ತ ಸಾಗಿತು.

ತರಬೇತಿಯ ಮೂಲಕ ಉತ್ತಮ ಶಿಕ್ಷಣ ಹೊಂದಿದ ಶಿಕ್ಷಕರನ್ನು ಕನ್ನಡ ಮಾಧ್ಯಮ ಶಾಲೆಗೆ ನೇಮಿಸಿವುದು ಕಡ್ಡಾಯವಾಗಿದ್ದುದರಿಂದ ಮೊದಲ ಬೇಸಿಕ್ ತರಬೇತಿ ಶಾಲೆ ಸೈಂಟ್ ಆನ್ಸ್ ಕಾನ್ವೆಂಟ್, ಮಂಗಳೂರು ಇದರ ಆವರಣದಲ್ಲಿ ಆರಂಭಗೊಂಡಿತು. ಅದಕ್ಕೆ ಹೊರದೇಶದ ಸಂಬಂಧ ಇದ್ದುದರಿಂದ, ಮದರ್ ತೆದೋಸಿಯಾ ರವರು ಜರ್ಮನ್–ಮಿಸೆರರ್ ಏಜೆನ್ಸಿ ಮೂಲಕ ಅನುದಾನವನ್ನು ಪಡೆದು ತರಬೇತಿ ಶಾಲೆ ಮತ್ತು ಹಾಸ್ಟೆಲ್ ಸ್ಥಾಪಿಸಿ ಅದಕ್ಕೆ ಬೇಕಾದ ಪೀಠೋಪಕರಣಗಳನ್ನು ಪಡೆದುಕೊಂಡರು. ಇದರಿಂದಾಗಿ 100 ವಿದ್ಯಾರ್ಥಿಗಳಿಗೆ ಅವಕಾಶ ದೊರೆತಂತೆ ಆಯಿತು ಮತ್ತು ಕರ್ನಾಟಕ ಮತ್ತಿತರ ಸ್ಥಳಗಳ ಬಹಳಷ್ಟು ಹೆಣ್ಣು ಮಕ್ಕಳನ್ನು ತರಬೇತಿ ನೀಡಲು ಸಾಧ್ಯವಾಯಿತು. ಆದುದರಿಂದ ಭಗಿನಿಯರು ಒಳ್ಳೆಯ ಶಾಲೆ ಅಥವಾ ಕಾಲೇಜುಗಳು ಕಾರ್ಯ ನಿರ್ವಹಿಸಬೇಕಾದರೆ ಉತ್ತಮವಾದ ಶಿಸ್ತು[12] ಮತ್ತು ಉತ್ತಮ ಶಿಕ್ಷಕರ ನೇಮಕದಲ್ಲಿ ಅಡಗಿದೆ ಎಂದು ತಿಳಿದುಕೊಂಡರು.

ಟ್ರೈನಿಂಗ್ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ಪ್ರತಿಭೆಗಳನ್ನು ಬೆಳೆಸಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತಿತ್ತು. ಹಿಂದಿ, ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳ ಭಾಷಣ, ಪಾಶ್ಚಿಮಾತ್ಯ ಮತ್ತು ಪೌರಾತ್ಯ ಹಾಡುಗಾರಿಕೆ ಮತ್ತು ವಾದ್ಯ ನುಡಿಸುವಿಕೆಯ ಸ್ಪರ್ಧೆಗಳು, ಪ್ರಬಂದ, ರಸಪ್ರಶ್ನೆ, ಚರ್ಚೆ, ನೃತ್ಯ, ಚಿತ್ರಕಲೆ ಮತ್ತು ಬಣ್ಣ ಹಾಕುವುದು, ಆಡುಗೆ, ಹೊಲಿಗೆ ಮತ್ತು ಹೂಗುಚ್ಚ ರಚನೆ ಇತ್ಯಾಧಿ ಸ್ಪರ್ಧೆಗಳನ್ನು ನಡೆಸುವುದರ ಮೂಲಕ ಉತ್ತಮ ಗುಣಮಟ್ಟದ ವಿದ್ಯಾರ್ಥಿಗಳನ್ನು ಸೃಷ್ಟಿಸಲಾಗುತ್ತಿತ್ತು. ಸಿಬಂಧಿವರ್ಗ ಮತ್ತು ವಿದ್ಯಾರ್ಥಿಗಳಿಂದ ನಡೆಸಲ್ಪಡುವ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಆಗಮಿಸುತ್ತಿದ್ದ ಅತಿಥಿಗಳಿಂದ ಮತ್ತು ಸಾರ್ವಜನಿಕರಿಂದ ಮೆಚ್ಚುಗೆಗೆ ಪಾತ್ರವಾಗಿತ್ತು.

ದೃಶ್ಯ ಮಾಧ್ಯಮದ ಶಿಕ್ಷಣವು ಉತ್ತಮ ಕಲಿಕೆಯ ಸಾಧನ ಎಂದು ಪರಿಗಣಿಸಲ್ಪಡುತ್ತಿತ್ತು. ಮತ್ತು 1940ರ ಆರಂಭದಲ್ಲಿ ಚಲನಚಿತ್ರಗಳು ನವ ಶಿಕ್ಷಣದಲ್ಲಿ ಹೆಸರುವಾಸಿಯಾಗಿತ್ತು. ಆ ದಿನಗಳಲ್ಲಿ ಜಿಲ್ಲೆಯ ಜನರು ದೂರದರ್ಶನವನ್ನು ಹೊಂದಿಕೊಳ್ಳುವಷ್ಟು ಸಮರ್ಥರಾಗಿರಲಿಲ್ಲ. ಆದರೆ ಭಗಿನಿಯರು ಶಾಲೆಗಳಲ್ಲಿ ಮಕ್ಕಳಿಗೆ

"ಶೈಕ್ಷಣಿಕ ಚಲನಚಿತ್ರ"ಗಳನ್ನು ತೋರಿಸುತ್ತಿದ್ದರು. ಈ ಚಲನಚಿತ್ರಗಳು ಮುಖ್ಯವಾಗಿ ಮನೋವಿಜ್ಞಾನ ಶಾಸ್ತ್ರ, ಸಂಗೀತ, ವಾಸ್ತುಶಿಲ್ಪ, ಸಮಯ, ಹಣ ಇತ್ಯಾಧಿಗಳಿಗೆ ಸಂಭಂದಿಸಿರುತ್ತಿದ್ದು ಯುವ ಮನಸ್ಸುಗಳಿಗೆ ಸಾಕಷ್ಟು ಆಹಾರ ಒದಗಿಸುವಂತಹುದಾಗಿತ್ತು.

'ಕ್ಯೂ' ಕ್ಲಬ್ ಎಂದು ಕರೆಯಲ್ಪಡುತ್ತಿದ್ದ ಸೈಯನ್ಸ್ ಕ್ಲಬ್ ಮಕ್ಕಳ ಜ್ಞಾನ ವೃದ್ಧಿಸಲು ಪ್ರವಾಸಗಳನ್ನು ಹಮ್ಮಿಕೊಳ್ಳುತ್ತಿತ್ತು. ಅವರನ್ನು Power House, the Telegraph Office, Telephone Exchange, to study the Pendulums, ಇವುಗಳ ಬಗ್ಗೆ ತಿಳಿದುಕೊಳ್ಳಲು ಕರೆದುಕೊಂಡು ಹೋಗಲಾಗುತ್ತಿತ್ತು. ಇಂಟರ್-ಸ್ಕೂಲ್ ಅಥ್ಲೆಟಿಕ್ ಅಸೋಸಿಯೇಶನ್‌ನವರು ಅನೇಕ ಪಂದ್ಯಾಟಗಳನ್ನು ಜಿಲ್ಲೆಯಾದ್ಯಂತ ವಿದ್ಯಾರ್ಥಿಗಳಿಗಾಗಿ ಏರ್ಪಡಿಸುತ್ತಿದ್ದರು. ಮತ್ತು ಈ ಶಾಲೆಯು ವಿವಿಧ ಆಟಗಳಲ್ಲಿ ಬಹುಮಾನ ಪಡೆಯುತ್ತಿತ್ತು. ಭಾರತದ ಕಾರ್ಖಾನೆಗಳು, ಪ್ರಾಯೋಗಿಕ ಶಿಭಿರಗಳು, ಕವಾಯತು, ಶಾರೀರಿಕ ವ್ಯಾಯಾಮ, ನಾಗರಿಕ ಮತ್ತು ಗೈಡ್ ಕಾರ್ಯಕ್ರಮಗಳು, ಸಂಗೀತ ಮತ್ತು ನಾಟಕ ಪ್ರದರ್ಶನ ಇತ್ಯಾಧಿಗಳನ್ನು ವಿದ್ಯಾರ್ಥಿಗಳಿಗೆ ಕಲ್ಪಿಸುವ ಮೂಲಕ ಶಿಸ್ತು ಮತ್ತು ಪ್ರತಿಭೆಗಳನ್ನು ಹೊಂದಿಕೊಳ್ಳುವಂತೆ ಮಾಡಲಾಗುತ್ತಿತ್ತು.

ಆಕ್ಟೋಬರ್ 1956ರಲ್ಲಿ ಟ್ರೈನಿಂಗ್ ಶಾಲೆಗೆ ವಾರ್ಷಿಕ ಇನ್‌ಸ್ಪೆಕ್ಷನ್ ನಡೆಸಲಾಗಿದ್ದು ಪ್ರತೀ ವರ್ಷದ ಪರಿವೀಕ್ಷಣಾಧಿಕಾರಿಯವರ ಮೆಚ್ಚುಗೆಯ ಷರಾ ಬರೆದು ಶಾಲೆಗೆ ಹೆಚ್ಚಿನ ಹೆಸರು ಗಳಿಸುವಂತೆ ಮಾಡಿತ್ತು. ಹೊಸ ಪರಿವೀಕ್ಷಣಾಧಿಕಾರಿ, ಶ್ರೀಮತಿ ಓ. ಸಿ. ನಂಬಿಯಾರ್, ಶಿಕ್ಷಕಿಯರು ಮಾಡುತ್ತಿದ್ದ ಕೆಲಸವನ್ನು ಉತ್ತಮವಾಗಿ ಪ್ರಶಂಸಿದರು.

ಡಿಸೆಂಬರ್ 23, 1956ರಂದು, ಟ್ರೈನಿಂಗ್ ಶಾಲೆಯ 14 ವಿದ್ಯಾರ್ಥಿಗಳು ಉಳ್ಳಾಲದಲ್ಲಿ ನಡೆಯುವ ಸೋಶಿಯಲ್ ಸರ್ವಿಸ್ ಕ್ಯಾಂಪ್‌ಗೆ ಆಯ್ಕೆಯಾದರು. ಅಲ್ಲಿ ಅವರು ಬೆಳಿಗ್ಗೆ ಮತ್ತು ಸಂಜೆ ಗ್ರಾಮದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಗ್ರಾಮದ ಜನರಿಗೆ ಶುಚಿತ್ವ ಮತ್ತು ಶಿಸ್ತು, ಆರೋಗ್ಯಕ್ಕೆ ಸಂಭಂದಿಸಿದ ವಿಷಯಗಳನ್ನು ತಿಳಿಸಿ ಅವರನ್ನು ವಿವಿಧ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಮತ್ತು ಭಾಷಣಗಳನ್ನು ಕೇಳುವಂತೆ ಪ್ರೋತ್ಸಾಹಿಸಿ, ಹೊಲಿಗೆ, ಕಸೂತಿ, ಹೂಗುಚ್ಚ ನಿರ್ಮಾಣ ಇತ್ಯಾದಿಗಳನ್ನು ಕಲಿಸಿಕೊಟ್ಟರು. ಬಡ ವಿದ್ಯಾರ್ಥಿಗಳಿಗೆ ಆಟೋಟಗಳನ್ನು ಏರ್ಪಡಿಸಿ, ಮಹಿಳೆಯರಿಗೆ ತೆಂಗಿನ ನಾರಿನ ಹುರಿ ಹಗ್ಗ ನೇಯುವ ಸ್ಪರ್ಧೆಗಳನ್ನು ಏರ್ಪಡಿಸಿದ್ದರು. ಮಕ್ಕಳ ಸ್ಪರ್ಧೆಯನ್ನೂ ಏರ್ಪಡಿಸಿದ್ದು ಶುಚಿತ್ವ ಮತ್ತು ಆರೋಗ್ಯವಂತ ಮಕ್ಕಳಿಗೆ ಬಹುಮಾನ ನೀಡಲಾಗಿತ್ತು. ಇದು ತಾಯಂದಿರಿಗೆ ಒಂದು ಉತ್ತೇಜಿತ ಕಾರ್ಯಕ್ರಮವಾಗಿತ್ತು. ಭಾಗವಹಿಸಿದ್ದ ಹೆಣ್ಣುಮಕ್ಕಳು ಬರಲಾರದ ಮನಸ್ಸಿನಿಂದ ಹಿಂತಿರುಗಿದರೂ ಇಂತಹ ಕೆಲಸವನ್ನು ಮುಂದುವರೆಸುವ ನಿರ್ಧಾರ ಕೈಗೊಂಡರು.

ಮತ್ತು ಇದು ಮಾತಿನಲ್ಲಿ ಮಾತ್ರ ಉಳಿಯದೆ ರಜೆಯ ಸಮಯದಲ್ಲಿ ತರಬೇತು ಹೊಂದಿದ ಹೆಣ್ಣು ಮಕ್ಕಳು ಪೋಲೀಸ್ ಲೈನ್, ಕಸಬಾ ಬಜಾರ್ ಮುಂತಾದ ಸ್ಥಳಗಳಿಗೆ ಹಾಲು, ಸಿಹಿತಿಂಡಿ, ಆಟಿಕೆಗಳು, ಔಷದ ಇತ್ಯಾಧಿ ವಿತರಣೆ ಮಾಡುವುದರಲ್ಲಿ ಮತ್ತು ತೀರಾ ಬಡವರಿಗೆ ಹಳೆ ಬಟ್ಟೆಗಳನ್ನು ನೀಡುವುದಕ್ಕೆ ತೆರಳುತ್ತಿದ್ದರು. ಬಡ ಕುಟುಂಬಗಳ ಸದಸ್ಯರಿಗೆ ತಮ್ಮ ಮನೆ ಮತ್ತು ಪರಿಸರದ ಶುಚಿತ್ವದ ಬಗ್ಗೆ ತಿಳುವಳಿಕೆ ಹೇಳುತ್ತಿದ್ದರು.

"ಕನ್ನಡ ಸಂಘ"ದವರು ಚರ್ಚಾ ಮತ್ತು ಭಾಷಣ ಸ್ಪರ್ಧೆಗಳನ್ನು ವರ್ಷಪೂರ್ತಿ ನಡೆಸುತ್ತಿದ್ದು "ನಿರುದ್ಯೋಗ ಸಮಸ್ಯೆ" "ಭಾಷಾವಾರು ರಾಜ್ಯ ರಚನೆ" ಇಂತಹ ಜ್ವಲಂತ ವಿಚಾರಗಳ ಕುರಿತು ಚರ್ಚಾಗೋಷ್ಠಿಗಳನ್ನು ಏರ್ಪಡಿಸುತ್ತಿದ್ದರು. VI ಫಾರ್ಮ್‌ನ ಕುಮಾರಿ ಶಾರದ ಪೂಂಜ ಇವರ "Our Motherland" ಎಂಬ ಪದ್ಯವು ಬೆಂಗಳೂರು ಆಕಾಶವಾಣಿ ಪ್ರಾಯೋಜಿಸಿದ್ದ ಪದ್ಯ ಸ್ಪರ್ಧೆಯಲ್ಲಿ ಉತ್ತಮ ಎಂದು ಪರಿಗಣಿಸಲ್ಪಟ್ಟಿತು.

ಬೇರೆ ಖಾಸಗೀ ಶಾಲೆಗಳಂತೆ ಈ ಶಾಲೆಯೂ ಈ ನಗರ ಪ್ರದೇಶದ, ಮಧ್ಯಮ ವರ್ಗ, ಸಾಂಸ್ಕೃತಿಕ ಹಿನ್ನೆಲೆ ಹೊಂದಿದ್ದು ಭಾರತೀಯ ಮತ್ತು ಪಾಶ್ಚಾತ್ಯ ಸಂಸ್ಕೃತಿಯ ತಳಹದಿಯಲ್ಲಿ ಸ್ಥಾಪಿತವಾದ ಒಂದು ಸಂಸ್ಥೆಯಾಗಿದ್ದು ಪಾಶ್ಚಾತ್ಯ ಸಂಸ್ಕೃತಿಯು ವಸಾಹತುಶಾಹಿ ಮತ್ತು ಅಭಿವೃದ್ಧಿಕಾರಕ ಶಿಕ್ಷಣದ ತಳಹದಿಯನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರು ಪಾರಂಪರಿಕ ಅಭ್ಯಾಸಗಳು ಮತ್ತು ಪುಸ್ತಕಾಧಾರಿತ ಶಿಕ್ಷಣ, ಪರೀಕ್ಷಾಪಟ್ಟಿ ಆಧರಿತ ಶಿಕ್ಷಣ, ತರಗತಿಯಲ್ಲಿ ಮಕ್ಕಳನ್ನು ಕೇಂದ್ರೀಕರಿಸಿದ ಶಿಕ್ಷಣ ಮಾತ್ರವಲ್ಲದೆ ಪಾಶ್ಚಾತ್ಯ ಜೀವನ ಶೈಲಿಯ ಮೌಲ್ಯ[13] ಇವುಗಳನ್ನು ಸರಿದೂಗಿಸಿಕೊಂಡು ಶಿಕ್ಷಣ ನೀಡಬೇಕಾಗಿತ್ತು.

5.4 ಶಿಕ್ಷಣ ವಿಧಾನ ಮತ್ತು ಕೌಶಲ್ಯ

ಭಾಷೆ :

ಅಪೋಸ್ಟೊಲಿಕ್ ಕಾರ್ಮೆಲ್ ಶಿಕ್ಷಣ ಸಂಸ್ಥೆಗಳು ಕೇವಲ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯಿಂದ ಪಟ್ಟಣದಲ್ಲಿ ಮನೆಮಾತಾಗಿಲ್ಲ, ಬದಲಾಗಿ ಕಲಿಸುವ ರೀತಿ ಮತ್ತು ಇಲ್ಲಿನ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಇಂಗ್ಲೀಷ್ ಮಾತಾಡುವಿಕೆ 1970ರ ಕಾಲದಲ್ಲಿ ಆಧುನಿಕತೆಗೆ ಮಾದರಿಯಾಗಿತ್ತು. ಸಭೆ ತಮ್ಮ ಶಿಕ್ಷಣ ಸಂಸ್ಥೆಗಳನ್ನು ಪ್ರತಿಷ್ಠಿತ ಕುಟುಂಬಗಳ ಮತ್ತು ಐರೋಪ್ಯ ಸಮುದಾಯದ ಮಕ್ಕಳಿಗೆ ಸೀಮಿತವಾಗಿ ಆರಂಭಿಸಿದ್ದರೂ, ಮುಂದೆ ಇತರ ಸಮುದಾಯಗಳ ವಿದ್ಯಾರ್ಥಿಗಳಿಗೂ ತಮ್ಮ ಸಂಸ್ಥೆಗಳ ಬಾಗಿಲುಗಳನ್ನು ತೆರೆದಿರಿಸುತ್ತಿದ್ದರು. ನಿಯತಕಾಲಿಕಗಳು ಮತ್ತು ಸ್ಮರಣ ಸಂಚಿಕೆಗಳನ್ನು ಕಾಲಕಾಲಕ್ಕೆ ಪ್ರಕಟಿಸುತ್ತಿದ್ದು ಅದು

ಕವನ[14], ಸಣ್ಣ ಕತೆಗಳು ಮತ್ತು ಇತರ ಸಣ್ಣ ಲೇಖನಗಳನ್ನು ಒಳಗೊಂಡಿರುತ್ತಿದ್ದು ಅವುಗಳು ಉನ್ನತ ಮಟ್ಟದ ಬರಹಗಳಾಗಿದ್ದು ಅನೇಕರನ್ನು ಆಶ್ಚರ್ಯಚಕಿತರನ್ನಾಗಿ ಮಾಡುತ್ತಿತ್ತು. ವಿದ್ಯಾರ್ಥಿಗಳ ಕವನಗಳು ಮತ್ತು ಸಣ್ಣಕತೆಗಳು ಎಷ್ಟು ಸ್ವಾರಸ್ಯಕರವಾಗಿದ್ದವು ಅಂದರೆ, ಅದು ಇಂಗ್ಲೀಷ್ ಭಾಷೆಯ ಕಡೆಗೆ ಅವರಿಗಿದ್ದ ಪ್ರೀತಿ ಮತ್ತು ಶಾಲಾ ಕಾರ್ಯಚಟುವಟಿಕೆಗಳಲ್ಲಿ ಅವರಿಗಿದ್ದ ಸ್ವಾತಂತ್ರ್ಯವನ್ನು ಪ್ರತಿಬಿಂಬಿಸುತ್ತಿತ್ತು ಮತ್ತು ಅವರಿಗೆ ಅಭಿವ್ಯಕ್ತ ಸ್ವಾತಂತ್ರ್ಯವನ್ನು ಸಾಹಿತ್ಯದ ಮೂಲಕ ಪ್ರಕಟಿಸುವುದಕ್ಕೆ ಅವಕಾಶ ನೀಡಿತ್ತು. ಉದಾಹರಣೆಗೆ, 1956–57ರ ಸಾಲಿನ ಫಾರ್ಮ್ IIರ ಜಯಲಕ್ಷ್ಮಿ ಎಂಬ ವಿದ್ಯಾರ್ಥಿನಿ "On Wings" ಎಂಬ ತಲೆಬರಹದೊಂದಿಗೆ ಒಂದು ಚಿಕ್ಕ ಕವನವನ್ನು ಹೀಗೆ ಬರೆಯುತ್ತಾಳೆ:

A ray of sunshine that I see

Makes me happy as a bee.

When I walk or play or sing,

I wish so much I had a wing;

Then like a bird with wings I'd fly

And catch the ray of light so high,

Fly up and down from earth to sky,

With none to question, "Why, O Why?"

ಫಾರ್ಮ್ IIರ ಕೆ. ಗೌರಿ ಎಂಬ ಇನ್ನೊಬ್ಬ ವಿದ್ಯಾರ್ಥಿನಿ ತನ್ನ "If I Were a Bird", ಎಂಬ ಕವನದಲ್ಲಿ ಹೀಗೆ ಬರೆಯುತ್ತಾಳೆ: *"If I were a bird, I would fly round the world singing peace songs. I would fly high over the Himalayas and see for myself the splendor of the 'Home of snow'."*

ಇತರ ಧರ್ಮದ ಹುಡುಗಿಯರು ಇಂಗ್ಲೀಷ್ ಮಾತನಾಡುವುದು 'ಕಾನ್ವೆಂಟ್ ಸಂಸ್ಕೃತಿ'ಯಾಗಿದ್ದು ಅದಕ್ಕಿರುವ ಹಿರಿಮೆ ವಿದ್ಯಾರ್ಥಿಗಳು ಇಂಗ್ಲೀಷ್ ಕಲಿಯುವುದಕ್ಕೆ ಮತ್ತು ಇಂಗ್ಲೀಷ್‌ನಲ್ಲಿ ಮಾತನಾಡುವುದಕ್ಕೆ ಪ್ರೇರಿಸುತ್ತದೆ ಆದುದರಿಂದ ನಾವು ಇಂಗ್ಲೀಷ್ ಕಲಿಯಬೇಕು ಎಂಬ ಅಪೇಕ್ಷೆಯನ್ನು ವ್ಯಕ್ತ ಪಡಿಸುತ್ತಿದ್ದರು. ಶಿಕ್ಷಕರು ಅದರಲ್ಲೂ ಪ್ರಾಮುಖ್ಯವಾಗಿ ಭಗಿನಿಯರು ಇಂಗ್ಲೀಷ್ ಕಲಿಸುವುದಕ್ಕೆ ಉಪಯೋಗಿಸುತ್ತಿದ್ದ ವಿಧಾನಗಳು ಮತ್ತು ತಾಂತ್ರಿಕತೆ ಬಹಳ ಸ್ವಾರಸ್ಯಕರವಾಗಿದ್ದು ಇಂಗ್ಲೀಷ್ ಕಲಿಯುವುದಕ್ಕೆ ಬಹಳ ಉತ್ಸಾಹದಾಯಕವಾಗಿತ್ತು.

ಫಾರ್ಮ್ Ir ವಿದ್ಯಾರ್ಥಿನಿ, ಮಾಲಿನಿ ಪೂಂಜ ಹೇಳುತ್ತಾರೆ– *"English is a nice language. Many children in our school speak English. I can write letters to my friends, and hear the news over the radio."* ಎಂ. ಪ್ರಫುಲತ ಹೇಳುತ್ತಾರೆ - *"In class, I eagerly wait for the arrival of our English teacher to start the lessons. She makes the class interesting. I am now trying to talk English at home."*

ಎರಡನೇದಾಗಿ, ಕೆಳಗಿನ ತರಗತಿಯ ವಿದ್ಯಾರ್ಥಿಗಳೂ ತಮ್ಮ ಅನುಭವವನ್ನು ಉಪಮೇಯಗಳೊಂದಿಗೆ ಮತ್ತು ರೂಪಕವಾಗಿ ಕನ್ನಡ ಭಾಷೆ ಮಾತ್ರ ಪ್ರಚಲಿತ್ತವಿದ್ದ ಆ ಕಾಲದಲ್ಲಿ ಸ್ವಾರಸ್ಯ ಪೂರ್ಣವಾಗಿ ವಿವರಿಸುವಾಗ ನಂಬಲಸಾಧ್ಯವಾಗಿರುತ್ತದೆ. ಶಾಲೆಗೆ ಭೇಟಿ ನೀಡಿದ ಪರಿವೀಕ್ಷಣಾಧಿಕಾರಿಗಳು ಕೂಡಾ ಭಗಿನಿಯರು ಶಿಕ್ಷಣ ಕಲಿಸುವ ವಿಧಾನಕ್ಕೆ ಮೆಚ್ಚುಗೆ ವ್ಯಕ್ತ ಪಡಿಸಿ ದಾಖಲಿಸಿರುತ್ತಾರೆ. ಹಳೆ ವಿದ್ಯಾರ್ಥಿಗಳು ಕೂಡಾ ತಮಗೆ ದೊರೆತ ಶಿಕ್ಷಣದ ಬಗ್ಗೆ ಸಾಕ್ಷಿ ರೂಪದ ಹೇಳಿಕೆ ನೀಡಿರುತ್ತಾರೆ ಮತ್ತು ಇದುವೇ ಈ ಶಿಕ್ಷಣ ಸಂಸ್ಥೆಗೆ ಪ್ರಚಾರಕ ಜಾಹೀರಾತು ಆಗಿ ಪರಿಗಣಿಸಲ್ಪಟ್ಟು ಅನೇಕರು ಇದರಿಂದಾಗಿ ಈ ಸಂಸ್ಥೆಗೆ ಸೇರ್ಪಡೆ ಬಯಸುವಂತಾಗಿದೆ. ಅದುದರಿಂದ ಸಾಮಾನ್ಯವಾಗಿ ಹೆಚ್ಚಿನ ಜನರು ಕಾರ್ಮೆಲ್ ಶಾಲೆಗಳಲ್ಲಿ ಆಡುವ ಮಾತು ಮತ್ತು ಕಲಿಸುವ ಕ್ರಮ ಜಿಲ್ಲೆಯ ಇತರ ಶಾಲೆಗಳಿಗೆ ಹೋಲಿಸಿದರೆ ಬಹಳ ಉನ್ನತ ಮಟ್ಟದ್ದು ಎಂದು ಹೇಳಿಕೊಳ್ಳುವಂತಾಗಿದೆ.

ಈ ಶಾಲೆಯ ಶಿಕ್ಷಕರ ಪ್ರೀತಿ, ನೋಡಿಕೊಳ್ಳುವಿಕೆ, ಆತ್ಮೀಯತೆ ಮತ್ತು ಕ್ರಮಗಳಿಂದಾಗಿ ಅನೇಕ ಹೆಣ್ಣು ಮಕ್ಕಳು ಶಿಕ್ಷಕ ವೃತ್ತಿಯನ್ನು ಆಯ್ದುಕೊಳ್ಳಲು ಪ್ರೇರಕವಾದ ಉದಾಹರಣೆಗಳಿವೆ. ಒಬ್ಬಾಕೆ ವಿದ್ಯಾರ್ಥಿನಿ ತನ್ನ ಶಿಕ್ಷಕರಿಗೆ ಹೀಗೆ ಬರೆಯುತ್ತಾಳೆ -*"I like to be teacher, because I love children. I want to help children to be good, to love god and their fellow beings and all this will be in my power to do as a teacher. There are many poor unfortunate children who have not tasted the joys and happiness of a happy home, who have no kind father or mother to love them; they may be living a lonely miserable life. As a teacher I have the opportunity of loving these children and filling the empty lives with the joys and sunshine of love."* ಆದುದರಿಂದ ಅಪೊಸ್ತೋಲಿಕ್ ಕಾರ್ಮೆಲ್ ಶಾಲೆಗಳಲ್ಲಿನ ಶಿಕ್ಷಕರ ಪ್ರಭಾವ ಅನೇಕರನ್ನು ಶಿಕ್ಷಕರನ್ನಾಗಿ ಮಾಡಿದ್ದು ಇಂದಿಗೂ ಬೇರೆ ಬೇರೆ ಶಿಕ್ಷಣ ಸಂಸ್ಥೆಗಳಲ್ಲಿ ದುಡಿಯುತ್ತಿದ್ದಾರೆ.

ಶಾಲೆಯಲ್ಲಿ ವಿದ್ಯಾರ್ಥಿಗಳ ದೈನಂದಿನ ಚಟುವಟಿಕೆ ಅದ್ವಿತೀಯ. ಅವರ ಪಠ್ಯೇತರ ಚಟುವಟಿಕೆಗಳು ಅನೇಕ ಮತ್ತು ವೈವಿಧ್ಯಮಯ. ದೈನಂದಿನ ಶಾಲಾ ಚಟುವಟಿಕೆ ಪ್ರಾರ್ಥನೆಯೊಂದಿಗೆ ಆರಂಭವಾಗಿ ಒಬ್ಬ ವಿದ್ಯಾರ್ಥಿಯಿಂದ "ದಿನದ ಧ್ಯೇಯ ವಾಕ್ಯ" ('a thought for the day') ಮೈಕ್‌ನಲ್ಲಿ ಪ್ರಕಟಿಸುವುದರೊಂದಿಗೆ ಮತ್ತು ನಂತರ ರಾಷ್ಟ್ರಗೀತೆ ಹಾಡುವುದರೊಂದಿಗೆ ಆರಂಭವಾಗುತ್ತದೆ. ವಾರದಲ್ಲಿ ಚಲನಚಿತ್ರ ಪ್ರದರ್ಶನ,

ಅಭಿನಯ, ಹಾಡುಗಾರಿಕೆ, ಪ್ರಭಂದ, ಪುಟ್ಟ ಭಾಷಣ, ಚರ್ಚೆ, ತರಗತಿ ಶೃಂಗಾರ ಇತ್ಯಾಧಿ ಸ್ಪರ್ಧೆಗಳು, ಯೋಜನೆ, ಅಡುಗೆ ತರಬೇತಿ, ಪ್ರವಾಸ ಇತ್ಯಾದಿಗಳನ್ನೊಳಗೊಂಡಿದ್ದು ಶಾಲಾ ಜೀವನ ವಿದ್ಯಾರ್ಥಿಗಳಿಗೆ ಉತ್ಸಾಹದಾಯಕ ಮತ್ತು ಆನಂದದಾಯಕವಾಗಿರುತ್ತದೆ. ಮಾತ್ರವಲ್ಲದೆ ವಿವಿಧ ರಾಷ್ಟ್ರೀಯ ದಿನಗಳ ಆಚರಣೆ ಮಾಡುವುದರ ಮೂಲಕ ಶಾಲೆ ಶಿಕ್ಷಣವನ್ನು ನಿಜಜೀವನಕ್ಕೆ ಹತ್ತಿರ ತರುತ್ತದೆ ಮಾತ್ರವಲ್ಲದೆ ಆ ಮೂಲಕ ದೇಶದ ಉತ್ತಮ ಪ್ರಜೆಗಳನ್ನಾಗಿ ನಿರ್ಮಾಣ ಮಾಡುತ್ತದೆ. ಆದುದರಿಂದ ಶೈಕ್ಷಣಿಕ ಕಾರ್ಯಚಟುವಟಿಕೆಗಳು ಮಕ್ಕಳನ್ನು ಕೇಂದ್ರೀಕರಿಸಿ ಅವರಿಗೆ ಬರವಣಿಗೆಯ ಕೌಶಲ್ಯವನ್ನು ಹೆಚ್ಚಿಸುವಂತಾದ್ದಾಗಿದೆ. ಉದಾಹರಣೆಗಾಗಿ, ಬೇಸಿಗೆಯ ರಜಾದಿನಗಳ ಬಳಿಕ ಶಾಲೇ ಪುನರಾರಂಭವಾದಾಗ, ವಿದ್ಯಾರ್ಥಿಗಳಿಗೆ ರಜಾಕಾಲದಲ್ಲಿ ಅನುಭವಿಸಿದ ಸ್ವಾರಸ್ಯಕರ ಕೆಲವು ವಿಷಯಗಳನ್ನು ಬರೆಯುವಂತೆ ಕೇಳಿಕೊಳ್ಳಲಾಗುತ್ತದೆ. ಇದು ವಿದ್ಯಾರ್ಥಿಗಳ ಆಲೋಚನಾ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ ಮತ್ತು ಅವರು ತಮ್ಮ ಜೀವನದಲ್ಲಿ ಮತ್ತು ಆಸುಪಾಸಿನ ಸಮಾಜದಲ್ಲಿ ನಡೆಯುವ ವಿಚಾರಗಳನ್ನು ಗಮನಿಸುವುದಕ್ಕೆ ಸಹಾಯ ಮಾಡುತ್ತದೆ.' The minute observation by the tender eyes gives us today a worm's eye view of the time and helps us to reconstruct past from the present.'

ಶಿಕ್ಷಣ ಮತ್ತು ವಿದ್ಯಾರ್ಥಿಯ ಸಂಪೂರ್ಣ ಬೆಳವಣಿಗೆ ಅಪೋಸ್ತೊಲಿಕ್ ಕಾರ್ಮೆಲ್ ಸಭೆಯ ಗುರಿಯಾಗಿದೆ. ಹೆಣ್ಣು ಮಕ್ಕಳಿಗೆ ಅವಶ್ಯವಿರುವ ತರಬೇತಿಗೆ ಬೇಕಾದ ಅಗತ್ಯತೆಗಳು ಮೊದಲನೇದಾಗಿ ಧಾರ್ಮಿಕ ಮತ್ತು ನೈತಿಕ ಪಾಠ, ಎರಡನೆಯದು ಭಾಷೆ, ಚರಿತ್ರೆ, ಭೂಗೋಳ ಇತ್ಯಾದಿ ಸಾಹಿತ್ಯ ಶಿಕ್ಷಣ, ಮೂರನೆಯದು ಮನೆವಾರ್ತೆಯ ತಿಳಿವಳಿಕೆ ಮತ್ತು ಆರೋಗ್ಯದಾಯಕ, ಅಡುಗೆ, ಔಷದ ಇತ್ಯಾದಿ, ನಾಲ್ಕನೆಯದಾಗಿ ಕಲಾ ನೈಪುಣ್ಯತೆಯ ಶಿಕ್ಷಣ, ಸಂಗೀತ, ಹೊಲಿಗೆ ಮತ್ತು ಐದನೆಯದು ದೈಹಿಕ ಶಿಕ್ಷಣ[14]. ಇತರ ಕ್ಲಬ್ ಚಟುವಟಿಕೆಗಳು ಮಕ್ಕಳನ್ನು ಬುದ್ಧಿವಂತರನ್ನಾಗಿ, ಜ್ಞಾನವಂತರನ್ನಾಗಿ ಮತ್ತು ಸ್ಪರ್ಧಾತ್ಮಕ ಜಗತ್ತನ್ನು ಎದುರಿಸತಕ್ಕಷ್ಟು ಬೆಳೆಸುವುದಕ್ಕಾಗಿ ನಡೆಸಲಾಗುತ್ತದೆ ಮತ್ತು ಆ ಮೂಲಕ ಅವರು ನಾಯಕರಾಗಿ ಹೊರಹೊಮ್ಮಲು ಸಾಧ್ಯ ಮಾಡಲಾಗುತ್ತದೆ. ಕ್ಷೇತ್ರ ಸಂದರ್ಶನ, ಪ್ರವಾಸಗಳ ವ್ಯವಸ್ಥೆಗೂ ಪ್ರಾಮುಖ್ಯತೆ ಕೊಡಲಾಗುತ್ತಿದ್ದು ಇದನ್ನು ಪಾಠ ಪ್ರವಚನಗಳ ಭಾಗವಾಗಿ ಮಾಡಲಾಗಿದೆ. ಸಿಬ್ಬಂಧಿ ಮತ್ತು ವಿದ್ಯಾರ್ಥಿಗಳು, ನಗರದ ಅನಾಥಾಶ್ರಮ, ಆಸ್ಪತ್ರೆ, ಕುಷ್ಠರೋಗಿಗಳ ಪುನರ್ವಸತಿ ಕೇಂದ್ರಗಳು, ಪ್ರಾಯಸ್ಥರ ಕೇಂದ್ರಗಳಿಗೆ ಭೇಟಿ ನೀಡಿ ಸಹಾಯದ ಹಸ್ತ ಚಾಚುವ ಮೂಲಕ ಇಲ್ಲಿನ ನಿವಾಸಿಗಳ ಮುಖಗಳಲ್ಲಿ ಮಂದಹಾಸ ಮೂಡುವಂತೆ ಮಾಡುತ್ತಾರೆ.

ಅಪೊಸ್ತೋಲಿಕ್ ಕಾರ್ಮೆಲ್ ಸಂಸ್ಥೆಗಳಲ್ಲಿ ಆನುಭವದೊಂದಿಗೆ ಕಲಿಕೆ ಒಂದು ಪ್ರಾಮುಖ್ಯ ಕಲಿಕಾ ಕ್ರಮವಾಗಿರುತ್ತದೆ. ಆಗಿಂದ್ದಾಗ್ಗೆ ಶಿಕ್ಷಣದ ಭಾಗವಾಗಿ ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಮುಖ್ಯವಾಗಿ ಉಡುಪಿ

ಸಮೀಪದ ಕಾಪು ಲೈಟ್ ಹೌಸ್, "ಜೈನ ಕಾಶಿ" ಎಂದು ಕರೆಯಲ್ಪಡುವ ಮೂಡಬಿದ್ರೆಯ ಸಾವಿರ ಕಂಬದ ಬಸದಿ, ಕಾರ್ಕಳದ ಗೋಮಟೇಶ್ವರ, ಇಂತಹ ಚಾರಿತ್ರಿಕ ಸ್ಥಳಗಳಿಗೆ ಕರೆದುಕೊಂಡು ಹೋಗಲಾಗುತ್ತಿತ್ತು. ಸೈಂಟ್ ಆನ್ಸ್ ಶಾಲೆಯ, ಫಾರ್ಮ್ VIನ ವಿಲ್ಮ ಲೋಬೊ ಎಂಬ ವಿದ್ಯಾರ್ಥಿನಿ ಉಡುಪಿ ಸಮೀಪದ ಕಾಪು ಎಂಬಲ್ಲಿರುವ ಲೈಟ್ ಹೌಸ್‌ಗೆ ಭೇಟಿ ನೀಡಿರುವುದನ್ನು ವಿವರಿಸುತ್ತಾಳೆ. ಲೈಟ್ ಕೀಪರ್ ಅವರಿಂದ ಈ ಸ್ಥಳದ ಚರಿತ್ರೆಯನ್ನು ತಿಳುಕೊಂಡ ಇವರು ನಾವು ಲೈಟ್ ಕೀಪರ್ ಆಗಿದ್ದರೆ ಹಡಗುಗಳು ಅತ್ತಿಂದಿತ್ತ ಸಮುದ್ರದಲ್ಲಿ ಹೋಗುವುದನ್ನು ನೋಡುತ್ತಿರಬಬಹುದು ಎಂದು ನೆನಪಿಸಿಕೊಂಡು ರೋಮಾಂಚನಗೊಳ್ಳುತ್ತಾರೆ. ನಾಲ್ಕು ಗೋಡೆಗಳ ಮಧ್ಯೆ ಪಾಠ ಪ್ರವಚನಗಳಿಂದ ಹೊರಗೆ ಹೋಗುವ ಸಣ್ಣ ಪ್ರವಾಸ ತಮ್ಮ ಜೀವನದಲ್ಲಿ ಹಮ್ಮಿಕೊಳ್ಳಬಹುದಾದ ಸಾಧನೆಗಳ ಬಗ್ಗೆ ಅಲೋಚಿಸಲು ಮತ್ತು ಚಿಪ್ಪಿನಿಂದ ಹೊರಬಂದು ಪ್ರಪಂಚದ ಅದ್ಭುತಗಳ ಸೌಂಧರ್ಯವನ್ನು ವೀಕ್ಷಿಸುವುದೇ ತಮಗೆ ದೊರೆತ ಸ್ವಾತಂತ್ರ್ಯ ಎಂಬ ಅನುಭವ ಪಡೆಯುತ್ತಾರೆ.

ಸೈಂಟ್ ಆನ್ಸ್ ಕಾಲೇಜ್ ಆಫ್ ಎಜುಕೇಶನ್‌ನ ಮೊದಲ ಬ್ಯಾಚ್‌ನ ವಿದ್ಯಾರ್ಥಿನಿ, ಮರ್ಲಿನ್ ಗೋಲಿಯೊತ್[15], ಇವರು ಇಲ್ಲಿನ ಭಗಿನಿಯರು ಕಲಿಸುವ ವಿಧಾನಕ್ಕೆ ಮನಸೋತು, ಇದು ನಿಜವಾಗಿ ಪವಿತ್ರ ಸೇವೆ ಎಂದು ತಿಳಿದು ಹೀಗೆ ಹೇಳುತ್ತಾರೆ – *"As a teacher my ideal is to inculcate in my pupils love of truth, truth is beauty, beauty is truth, it is the motto I would give them. 'Teaching' to me would be a pleasure and not just a profession. I would aim at giving the children the best of all that is good in me. I would cultivate the garden of their souls for Jesus sake"* ಇವರು ನಂತರ ಶಿಕ್ಷಣ ವೃತ್ತಿಯನ್ನು ಆಯ್ಕೆ ಮಾಡಿಕೊಂಡು ಮದರಾಸಿನ ಚರ್ಚ್ ಪಾರ್ಕ್ ಟ್ರೈನಿಂಗ್ ಕಾಲೇಜಿನಲ್ಲಿ ಯಶಸ್ವಿ ಶಿಕ್ಷಕರೆಂಬ ಹೆಸರು ಗಳಿಸುತ್ತಾರೆ.

ಗೌಡ ಸಾರಸ್ವತ ಬ್ರಾಹ್ಮಣ ಸಮುದಾಯದ ನಿವೃತ್ತ ಹೆಡ್‌ಕ್ಲರ್ಕ್ ಒಬ್ಬರ ಮಗಳಾದ ಶ್ರೀಮತಿ ಎನ್. ಸುಶೀಲ ಈ ಕಾಲೇಜಿನ ಪ್ರಥಮ ಬ್ಯಾಚ್‌ನ ವಿದ್ಯಾರ್ಥಿಯಾಗಿದ್ದರು. ಅವರು ವಿದ್ಯಾರ್ಥಿಗಳನ್ನು ಸಂತೋಷಕರವಾಗಿ ಮತ್ತು ಜೀವನವನ್ನು ಮೌಲ್ಯಾಧಾರಿತವಾಗಿ ರೂಪಿಸಲು ಶಿಕ್ಷಕರಿಂದ ಮಾತ್ರ ಸಾಧ್ಯ ಎಂದು ಅರಿತುಕೊಂಡು ಶಿಕ್ಷಕ ವೃತ್ತಿ ಶ್ರೇಷ್ಠ ವೃತ್ತಿಯೆಂದು ಪರಿಗಣಿಸಿ ಅದನ್ನು ಆರಿಸಿಕೊಂಡರು. ನಂತರ ಅವರು ಎರಡು ವರ್ಷ ಕಾಲ "ಟೆಂಪಲ್ ಹೈ ಸ್ಕೂಲ್"ನಲ್ಲಿ ಮುಖ್ಯ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದರು.

ಪೋಸ್ಟ್ ಮಾಸ್ಟರ್ ಒಬ್ಬರ ಮಗಳಾದ ಮಿಸ್ ಎಂ. ಮಾಧವಿ[16] ಅವರು – *"I wish to be true guide to the innumerable little children that will be entrusted to my care in the patch of righteousness and*

duty" ಎಂದು ತನ್ನ ಅಭಿಲಾಷೆ ವ್ಯಕ್ತಪಡಿಸುತ್ತಾರೆ. ಇದು ಈ ಕಾಲೇಜಿನ ಶಿಕ್ಷಣ ಮಟ್ಟ ಎಂತಹುದಾಗಿತ್ತು ಮತ್ತು ಭಗಿನಿಯರು ಯಾವ ರೀತಿ ಶಿಕ್ಷಣ ಸೇವೆಯನ್ನು ಪರಿಗಣಿಸಿದ್ದರು ಎಂಬುದನ್ನು ವ್ಯಕ್ತ ಪಡಿಸುತ್ತದೆ.

5.5 ಮೌಲ್ಯಾಧಾರಿತ ಶಿಕ್ಷಣ

ಮೌಲ್ಯಾಧಾರಿತ ಶಿಕ್ಷಣದ ಅರ್ಥ, ಮೀಸಲಾದ ವಿವಿಧ ಪಾಠಗಳನ್ನು ಅದರಲ್ಲಿರುವ ಮೌಲ್ಯಗಳಿಗೆ ತಕ್ಕಂತೆ ಕಲಿಸುವಂತಾದ್ದಾಗಿದೆ. ಮಾನವ ಶಿಕ್ಷಣ ಚರಿತ್ರೆಯ ಪೂರ್ವ ದಿನಗಳು ಮಾನವ ಜೀವನ ಅಭಿವೃದ್ಧಿಗೆ ಒಂದು ಸಾಧನ ಎಂದು ಪರಿಗಣಿಸಲ್ಪಟ್ಟಿದೆ. ಸಿ. ಎಸ್. ಲೇವೀಸ್ ಎಂಬವರು ಒಮ್ಮೆ - "Education without values as useful as it is seems rather to make man a cleverer devil" ಎಂದು ಹೇಳುತ್ತಾರೆ.

ಪಾಶ್ಚಿಮಾತ್ಯ ಮಿಶನರಿಗಳ ಆಗಮನಕ್ಕೆ ಪೂರ್ವದಲ್ಲಿ ಭಾರತದ ಜನಸಂಖ್ಯೆ ವಿವಿಧ ಧರ್ಮಗಳ ಆಧಾರದಲ್ಲಿ, ವಿವಿಧ ಭಾಷೆಗಳ ಆಧಾರದಲ್ಲಿ, ವಿವಿಧ ಕುಲ, ಜಾತಿ, ವರ್ಗ, ಸಮುದಾಯ[17] ಆಧಾರಿತವಾಗಿತ್ತು. ಭಾರತದಲ್ಲಿ ಇಂಗ್ಲೀಷ್ ಶಿಕ್ಷಣದ ನೈತಿಕ ಅಂಶಗಳನ್ನು ಅಳವಡಿಸಿಕೊಳ್ಳುವಲ್ಲಿ ಹಿಂದೆಬಿದ್ದಿತ್ತು. ಆದುದರಿಂದ ಪಾಶ್ಚಾತ್ಯ ಮಿಶನರಿಗಳು ಕೇವಲ ಪಾಶ್ಚಾತ್ಯ ವಿಜ್ಞಾನವನ್ನು ಅಳವಡಿಸಿಕೊಳ್ಳುವುದು ಶಿಕ್ಷಣಕ್ಕೆ ಸಾಲದು ಎಂದು ಅರಿತುಕೊಂಡರು. ಆದುದರಿಂದ ಗೌರವ, ತಾಳ್ಮೆ, ಇತ್ಯಾದಿ ಮೌಲ್ಯಗಳನ್ನು ಬೆಳೆಸುವುದಕ್ಕೆ ಪ್ರಾಧಾನ್ಯತೆ ಕೊಡುವುದು ಕ್ರೈಸ್ತ ನಿಯಮ ಮತ್ತು ಕೈಸ್ತ ಶಿಕ್ಷಣವಾದುದರಿಂದ ಇದು ಸಮಾಜದ ಅಂಚಿನಲ್ಲಿರುವ ಜನರನ್ನು ಸಮಗ್ರವಾಗಿ ಪರಿವರ್ತಿಸಲು ಸಾಧ್ಯ ಎಂಬುದನ್ನು ಅರಿತುಕೊಂಡರು.

ಸ್ವಾತಂತ್ರ್ಯದ ಬಳಿಕ ಭಾರತ ದೇಶವು ಸ್ವಾಯತ್ತ, ಪ್ರಜಾಪ್ರಭುತ್ವವೆಂದು ಪರಿಗಣಿಸಲ್ಪಟ್ಟು, ಜಾತ್ಯಾತೀತ ಪ್ರಜಾಪ್ರಭುತ್ವ ಎಂಬುದರಲ್ಲಿ "ಜಾತ್ಯಾತೀತ" ಎಂಬ ಪದವು ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದ್ದು ಮೌಲ್ಯಾಧಾರಿತ ಶಿಕ್ಷಣ ಈ ನಿಟ್ಟಿನಲ್ಲಿ ಶಾಲೆಗಳಲ್ಲಿ ಈ ಹಿಂದೆ ಪಾಠಪಟ್ಟಿಯ ಅವಿಭಾಜ್ಯ ಅಂಗವಾಗಿ ಇದ್ದ ಧಾರ್ಮಿಕ ಶಿಕ್ಷಣವನ್ನು ಕೈಬಿಡಬೇಕಾಯಿತು.

ಹೆಚ್ಚಿನ ಮಿಶನರಿ ಶಿಕ್ಷಣ ಸಂಸ್ಥೆಗಳು ನೀತಿ ಪಾಠವನ್ನು ಮುಂದುವರಿಸಿದವು. ಪ್ರತೀ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ನೀತಿಪಾಠಕ್ಕೆ ಅದರದೇ ಆದ ಕ್ರಮಗಳನ್ನು ಅನುಸರಿಸುತ್ತಿದ್ದವು. ಕೆಥೋಲಿಕ ವಿದ್ಯಾರ್ಥಿಗಳಿಗಾಗಿ ನೀತಿಪಾಠವು ಬೈಬಲ್ ವಾಕ್ಯ ಆಧಾರಿತವಾಗಿದ್ದು, ಕೆಥೋಲಿಕೇತರರಿಗೆ ಇತರ ಮೌಲಾಧಾರಿತ ವಿಷಯವಾಗಿದ್ದು ಬೈಬಲ್‌ಗೆ ಸಂಭಂದಪಟ್ಟವುಗಳು ಇರುತ್ತಿರಲಿಲ್ಲ, ಆದರೆ ಪಾಶ್ಚಿಮಾತ್ಯ ಜೀವನ ಶೈಲಿಯ ಆಧಾರದಲ್ಲಿ ಯೋಚಿಸಲು

ಪ್ರೇರೇಪಿಸಿ ಅಂದಿನ ಸಮಾಜದಲ್ಲಿ ಅನುಸರಿಸುತ್ತಿರುವ ತಪ್ಪು ಸಂಪ್ರದಾಯಗಳನ್ನು ಪ್ರಶ್ನಿಸುವುದಕ್ಕೆ ಒತ್ತು ನೀಡುವಂತಾದ್ದಾಗಿತ್ತು. ಪ್ರಾಮುಖ್ಯವಾಗಿ, ಮಹಿಳಾ ಸಭೆಗಳಲ್ಲಿ ಹೆಣ್ಣು ಮಕ್ಕಳು ಮೊದಲ ಬಾರಿಗೆ ಅಸಮಾನತೆಗೆ ಆಸ್ಪದವಿಲ್ಲದ, ಹೊಸ ಪ್ರಪಂಚದ ಅನುಭವವನ್ನು ಹೊಂದುವಾಗ ತಮ್ಮ ಜೀವನವನ್ನು ಹೊಸರೀತಿಯಲ್ಲಿ ಕಲ್ಪಿಸಿಕೊಳ್ಳಲು ಆಸ್ಪದವಾಗುವಂತಿತ್ತು. ಕೆಥೋಲಿಕ ಹುಡುಗಿಯರು 'Sodality' ಮತ್ತು 'Legion of Mary' ಎಂಬ ಸಣ್ಣ ಗುಂಪುಗಳಾಗಿ ರಚಿಸಲ್ಪಟ್ಟು ತಮ್ಮ ತರಗತಿಗಳ ಬಳಿಕ ವಿವಿಧ ಧಾರ್ಮಿಕ ವಿಚಾರಗಳನ್ನು ಚರ್ಚಿಸಿ ಕಲಿತುಕೊಳ್ಳಲು ಮತ್ತು ಅವರನ್ನು ಸಭೆಗಳ ಭಾಗವಾಗಿ ಪರಿವರ್ತಿಸಿ ಅವರು ಸಮಾಜದ ಪರಿವರ್ತನೆಯ ಭಾಗಗಳಾಗಿ ರೂಪುಗೊಳ್ಳಲು ಸಹಾಯ ಮಾಡಲಾಗುತ್ತಿತ್ತು. ಉದಾಹರಣೆಗಾಗಿ 1900 ರಿಂದ 1960ರ ವರೆಗೆ ಅಪೊಸ್ತೋಲಿಕ್ ಕಾರ್ಮೆಲ್‌ನ ವಿವಿಧ ಸಂಸ್ಥೆಗಳಿಗೆ ಸೇರ್ಪಡೆಗೊಂಡ ಹುಡುಗಿಯರು ಧಾರ್ಮಿಕ ಸಂಸ್ಥೆಗೆ ಸೇರಲು ಬಯಸಿದರು. ಅವರು ಕೇವಲ ಈ ಸಂಸ್ಥೆಯ ಆರ್ಡರ್‌ಗೆ ಸೇರಿ ಈ ವೃತ್ತಿಯನ್ನು ಆಯ್ದುಕೊಳ್ಳಲಿಲ್ಲ ಬದಲಾಗಿ ಭಾರತದ ವಿವಿಧ ಸಭೆಗಳ ಆರ್ಡರ್‌ಗೂ ಸೇರಿಕೊಂಡರು.

ಹಿಂದುಳಿದ ವರ್ಗಗಳ ಹೆಣ್ಣು ಮಕ್ಕಳು ತಮ್ಮ ತಂದೆ ತಾಯಂದಿರು ತಮ್ಮ ಹೆಚ್ಚಿನ ಶಿಕ್ಷಣಕ್ಕಾಗಿ ಖರ್ಚುವೆಚ್ಚಗಳನ್ನು ವ್ಯಯಿಸಲು ಅಸಮರ್ಥರಾದುದರಿಂದ ಧಾರ್ಮಿಕ ಸಂಸ್ಥೆಗೆ ಭಗಿನಿಯರ ಸೇವೆಗೆ ಸೇರಿಕೊಂಡರು. ಅನೇಕ ಉನ್ನತ ದರ್ಜೆಯ ಕುಟುಂಬಗಳ ಹೆಣ್ಣು ಮಕ್ಕಳೂ ಈ ಧಾರ್ಮಿಕ ಆರ್ಡರ್‌ಗೆ ಸೇರಿಕೊಂಡಿರುವುದು ಸತ್ಯ ಸಂಗತಿಯಾಗಿತ್ತು. ಅವರು ಮಂಗಳೂರಿನ ಪ್ರತಿಷ್ಠಿತ ಕುಟುಂಬಗಳಿಂದ ಮಾತ್ರ ಬಂದವರಾಗಿರದೆ ಸರಕಾರಿ ಸೇವೆಯಲ್ಲಿ ತಹಶೀಲ್ದಾರ್ ಇಂತಹ ಉನ್ನತ ಹುದ್ದೆಯಲ್ಲಿದ್ದವರ, ಆಸ್ತಿವಂತರ, ಎಸ್ಟೇಟ್ ಓನರ್‌ಗಳ, ವಕೀಲರುಗಳ, ವೈದ್ಯರು ಇತ್ಯಾದಿ ಪ್ರತಿಷ್ಠಿತರ ಮಕ್ಕಳಾಗಿದ್ದರು. ಇಂತಹ ಕೆಲವು ಅಪೊಸ್ತೋಲಿಕ ಕಾರ್ಮೆಲ್ ಸಭೆಯ ಮುಂಚೂಣಿ ಭಗಿನಿಯರ ಮತ್ತು ಇತರ ಅರ್ಡರ್‌ಗಳ ಹಿಂದಿನ ಕಾರ್ಮೆಲೈಟ್ ಭಗಿನಿಯರ ಹೆಸರುಗಳು ಈ ಕೆಳಗಿನಂತಿವೆ.

1. ಕ್ಲೊಟಿಲ್ಡ ಅಲ್ಬುಕರ್ಕ್ (ರೆವೆ. ಮದರ್ ಸಿಲ್ವಿಯ–1902–77) ಬಾಸುಲ್ ಸೆವೆರಿನ್ ಅಲ್ಬುಕರ್ಕ್ ಇವರ ಕಿರಿ ಮಗಳು. 1922ರಲ್ಲಿ ಅಪೊಸ್ತೋಲಿಕ್ ಕಾರ್ಮೆಲ್‌ಗೆ ಸೇರಿ ಹೊಸದಾಗಿ ಸ್ಥಾಪನೆಯಾದ ಸೈಂಟ್ ಆಗ್ನೆಸ್ ಕಾಲೇಜಿನಲ್ಲಿ ಬಿ.ಎ. ಪಧವಿ ವಿದ್ಯಾಭ್ಯಾಸ ಮುಗಿಸಿ ಇಂಗ್ಲೀಷ್ ಭಾಷಾ ಪರೀಕ್ಷೆಯಲ್ಲಿ ಹೆನ್ರಿ ಸ್ಟೋನ್ ಗೋಲ್ಡ್ ಮೆಡಲ್ ಮಾತ್ರವಲ್ಲದೆ ಪೊಲಿಟಿಕಲ್ ಸಯನ್ಸ್ ಮತ್ತು ಇಕನಾಮಿಕ್ಸ್‌ನಲ್ಲಿ ಉನ್ನತ ಶ್ರೇಣಿಗೆ ಕಾರ್ಡೋಝು ಹಾಗೂ ತೊದುಂಟರ್ ಬಹುಮಾನಗಳನ್ನು ಗಳಿಸಿದರು. ಅವರು ನಂತರ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಕೆಲಸ ನಿರ್ವಹಿಸಿದರು ಮತ್ತು ಅವರ ಅಸೌಖ್ಯದ ಹೊರತಾಗಿಯೂ ಜವಾಬ್ದಾರಿಯುತ ಹುದ್ದೆಗಳಾದ Directress

of the Sodality, local Superior, Novice Mistress ಇವುಗಳನ್ನು ನಿರ್ವಹಿಸಿದರು ಕೊನೆಯದಾಗಿ ಸಭೆಯ (1949–57) ಸುಪೀರಿಯರ್ ಜನರಲ್ ಆಗಿ ಆಯ್ಕೆಗೊಂಡರು.

2. ಲೆಟೀಶಿಯಾ ಅರಾನ್ಹ (ಸಿಸ್ಟರ್ ಮಾರ್ಗರೆಟ್) ಇವರು ಪೋಸ್ಟ್ ಮಾಸ್ಟರ್ ಸ್ಟೀಫನ್ ಅರಾನ್ಹ ಇವರ ಪುತ್ರಿಯಾಗಿದ್ದು ಹೆಸರಾಂತ ಭಗಿನಿಯಾಗಿ ಇಕಾನಮಿಕ್ಸ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಮಂಗಳೂರಿನಲ್ಲಿ ಪದವಿ ಪಡೆದ ಪ್ರಥಮ ಮಹಿಳೆ ಎಂಬ ಪ್ರಶಂಸೆಯೊಡನೆ ಗಳಿಸಿದರು. ಅವರ ಸಹೋದರ ಚಾರ್ಲ್ಸ್ ಜೆ. ಆರಾನ್ಹ ಇವರು ಮಂಗಳೂರು ಧರ್ಮಪ್ರಾಂತದ ಧರ್ಮಗುರುವಾಗಿದ್ದು ಮಿಲಾಗ್ರಿಸ್ ಸ್ಕೂಲ್‌ನ ಮುಖ್ಯ ಶಿಕ್ಷಕರಾಗಿಯೂ 20 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು.

3. ಸಬೀನ ಬ್ರಿಟ್ಟೋ (ಸಿಸ್ಟರ್ ಡೋರತಿ 1858–1949) ಇವರು ಮ್ಯಾನುವೆಲ್ ಕಾನ್ಸ್‌ಟೆಂಟೈನ್ ಬ್ರಿಟ್ಟೋ ಇವರ ಮಗಳಾಗಿದ್ದು ಆರಂಭಿಕ ಅಪೋಸ್ತೊಲಿಕ ಕಾರ್ಮೆಲೈಟ್ ಭಗಿಯರಲ್ಲಿ ಒಬ್ಬರಾಗಿದ್ದು ವಿಕ್ಟೋರಿಯಾ ಕಾಸ್ಟ್ ಗರ್ಲ್ಸ್ ಹೈಸ್ಕೂಲ್‌ನಲ್ಲಿ ಕಲಿಸುತ್ತಿದ್ದರು ಮತ್ತು ಲೇಡಿಹಿಲ್ ವಿಕ್ಟೋರಿಯಾ ಶಾಲೆಯ ಸ್ಥಾಪಕಿಯರಲ್ಲಿ ಒಬ್ಬರಾಗಿದ್ದರು. ಇವರ ಸಹೋದರ ಜಿಲ್ಲಾ ಅರಣ್ಯಾಧಿಕಾರಿಯಾಗಿ ನಿವೃತ್ತರಾಗಿದ್ದರು.

4. ಅನ್ನಾ ಮರಿಯ ತೆರೆಸ ಕ್ಯಾಸ್ಟಲಿನೊ (ಮದರ್ ಜೊಸೆಫಿನ್ – 1884–1961) ಇವರು ತಹಶಿಲ್ದಾರ್ ಪೌಲ್ ಕ್ಯಾಸ್ಟಲಿನೊ ಇವರ ಮಗಳಾಗಿದ್ದು ಅಪೊಸ್ತೋಲಿಕ್ ಕಾರ್ಮೆಲ್‌ನ ಮೂರನೇ ಸುಪೀರಿಯರ್ ಜನರಲ್ ಆಗಿದ್ದರು ಮತ್ತು ಸಂಪೂರ್ಣ ಭಾರತೀಯತೆಗೆ ಒತ್ತುಕೊಟ್ಟ ಮೊದಲಿಗರಾಗಿದ್ದರು. ಅವರ ಸೇವೆಯ ಕಾಲದಲ್ಲಿ ಪ್ರತಿವರ್ಷ ಹೊಸ ಕಾನ್ವೆಂಟ್‌ಗಳು ಮತ್ತು ಹೊಸ ಶಾಲೆಗಳು ಕೆನರಾ, ಕೇರಳ, ಗೋವಾ ಮತ್ತು ಸಿಲೋನ್‌ನಲ್ಲಿ ಸ್ಥಾಪಿಸಲ್ಪಟ್ಟವು. ಇವರು ಮಂಗಳೂರಿನ ಮೇರಿಹಿಲ್ (1938) ಅಪೊಸ್ತೊಲಿಕ್ ನೊವಿಶಿಯೇಟ್ ಸ್ಥಾಪಕರಾಗಿ ಮತ್ತು ಸೈಂಟ್ ಆನ್ಸ್ ಟ್ರೈನಿಂಗ್ ಕಾಲೇಜ್, ಮಂಗಳೂರು (1943), ಪಾಟ್ನ ವಿಮೆನ್ಸ್ ಕಾಲೇಜು ಮತ್ತು ರಾಂಚಿ ವಿಮೆನ್ಸ್ ಕಾಲೇಜು ಸ್ಥಾಪನೆಗಾಗಿ ನೆನಪಿಸಲ್ಪಡುತ್ತಾರೆ. ಸೈಂಟ್ ಆನ್ಸ್ ಟ್ರೈನಿಂಗ್ ಕಾಲೇಜು ಮದರಾಸು ಪ್ರೆಸಿಡೆನ್ಸಿಯಲ್ಲಿ ಮದರಾಸಿನ ಹೊರಗಿನ ಪ್ರದೇಶದಲ್ಲಿ ಸ್ಥಾಪಿತವಾದ ಮೊದಲ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಂತರ ಇದು ಸೈಂಟ್ ಆನ್ಸ್ ಕಾಲೇಜ್ ಆಫ್ ಎಜುಕೇಶನ್ ಎಂದು ಮರುನಾಮಕರಣ ಹೊಂದಿತು. ಮದರ್ ಜೊಸೆಫಿನ್ ಅವರಿಗೆ 1947ರಲ್ಲಿ Kaiser-i-Hind Silver Medal[18] ದೊರೆಯಿತು.

5. ಜೊಹನ್ನಾ ಕೊಯೆಲ್ಲೊ (ಸಿಸ್ಟರ್ ಕ್ಯಾಥರಿನ್ – 1846–1909) ಇವರು ಬಂಟ್ವಾಳ ಕೊಯೆಲ್ಲೊ ಕುಟುಂಬದ ಮುಖ್ಯಸ್ಥರಾಗಿದ್ದು ಮುನ್ಸಿಫ್‌ರಂತಹ ಉನ್ನತ ಹುದ್ದೆಗೇರಿದ ಮತ್ತು ಕೊಂಕಣಿ ಸಂಗೀತ ರಚಕರೂ ಮತ್ತು

ಮಂಗಳೂರು ಧರ್ಮಪ್ರಾಂತವನ್ನು ಸೊಸೈಟಿ ಆಫ್ ಜೀಸಸ್ ವಹಿಸಿಕೊಳ್ಳಬೇಕೆಂದು ಆಮಂತ್ರಣ ನೀಡುವ ಸಮಿತಿಯ ಅಧ್ಯಕ್ಷತೆ ವಹಿಸಿದ್ದ ಶ್ರೀ ಅಂತೊನಿ ಜಾನ್ ಕೊಯೆಲ್ಲೊ ಇವರ ಪ್ರಥಮ ಪುತ್ರಿಯಾಗಿದ್ದರು. ಇವರು ಸಿಸ್ಟರ್ಸ್ ಆಫ್ ಸೈಂಟ್ ಅಪಾರಿಶನ್‌ನ ಕಾನ್ವೆಂಟ್‌ಗೆ ಸೇರಿದ ಮಂಗಳೂರಿಗರಾಗಿದ್ದರು. ಈ ಆರ್ಡರ್‌ನ ಭಗಿನಿಯರಿಗೆ ಭಾರತದ ಪಶ್ಚಿಮ ಕರಾವಳಿಯ ಹೆಣ್ಣು ಮಕ್ಕಳಿಗೆ ಶಿಕ್ಷಣ ಒದಗಿಸುವ ಜವಾಬ್ದಾರಿಯನ್ನು (ಬಳಿಕ ಅಪೊಸ್ತೋಲಿಕ ಕಾರ್ಮೆಲೈಟ್ ಎಂದು ಕರೆಯಲಟ್ಟ) ಕಾಂಗ್ರೆಗೇಶನ್ ಆಫ್ ಕಾರ್ಮೆಲೈಟ್ ಟರ್ಟಿಯಾರಿಸ್ 1872ರಲ್ಲಿ ವಹಿಸಿಕೊಳ್ಳುವ ವರೆಗೆ ಇವರಿಗೆ ವಹಿಸಲಾಯಿತು. ಸಿಸ್ಟರ್ಸ್ ಆಫ್ ಸೈಂಟ್ ಜೋಸೆಫ್ ಆರ್ಡರ್‌ಗೆ ಸೇರಿದ ಇತರ ಹೆಣ್ಣು ಮಕ್ಕಳು ನಂತರ ಅಪೋಸ್ತೋಲಿಕ ಕಾರ್ಮೆಲ್‌ಗೆ ಸೇರಿದರು, ಆದರೆ ಸಿಸ್ಟರ್ ಕ್ಯಾಥರಿನ್ ಹಳೆ ಆರ್ಡರ್‌ನಲ್ಲಿಯೇ ಉಳಿದರು. ಅವರು ಕೆಲವು ಸಮಯವನ್ನು ಮಲಬಾರ್‌ನಲ್ಲಿ ಶಿಕ್ಷಣ ಸಂಭಂದಿ ಕೆಲಸದಲ್ಲಿ ತೊಡಗಿಸಿಕೊಂಡರು, ಅದರೆ ನಂತರ ಅಸ್ವಸ್ಥತೆಯ ನಿಮಿತ್ತ ಮಂಗಳೂರಿಗೆ ಹಿಂತಿರುಗಿ ತನ್ನ ಸಮಯವನ್ನು ಜೆಪ್ಪುವಿನಲ್ಲಿ ಅನಾಥ ಹೆಣ್ಣು ಮಕ್ಕಳ ಪರಿಪಾಲನೆಗೆ ಮೀಸಲಿರಿಸಿದರು.

6. ಮೇರಿ ಅಲೋಯ್ಸಿಯಾ ಕೊಯೆಲ್ಲೊ (ಮದರ್ ಅನನ್ಸಿಯೇಟ್–1891–1935) ಇವರು ಕೊಡಿಯಾಲ್‌ಬೈಲ್ ಕೊಯೆಲ್ಲೊ ಪ್ರಭು ಕುಟುಂಬಸ್ಥರು ಎಂದು ಕರೆಯಲ್ಪಡುತ್ತಿದ್ದ ಚೆವಲ್ಲಿಯರ್ ಜಾರ್ಜ್ ಮಾರ್ಟಿನ್ ಕೊಯೆಲ್ಲೊ ಇವರ ಮಗಳಾಗಿದ್ದರು. ಇವರು 1922ರಿಂದ 1934ರ ವರೆಗೆ ಸೈಂಟ್ ಆಗ್ನೆಸ್ ಕಾಲೇಜಿನ ಪ್ರಾಂಶುಪಾಲೆಯಾಗಿದ್ದರು. ಅವರು ಪ್ರಾಂಶುಪಾಲೆಯಾಗಿದ್ದ ಕಾಲದಲ್ಲಿ ಕಾಲೇಜು ಬಿ.ಎ. ತರಗತಿ(1924), ಸೈಂಟ್ ಆಗ್ನೆಸ್ ಕಾಲೇಜನ್ನು ದಕ್ಷಿಣ ಭಾರತದಲ್ಲಿ ಮಹಿಳೆಯರಿಗಾಗಿ ಇರುವ ಒಂದೇ ಪ್ರಥಮ ದರ್ಜೆ ಕಾಲೇಜಾಗಿ ಪರಿಗಣನೆಯಾಯಿತು. 1934ರಲ್ಲಿ ಅವರು ಅಪೊಸ್ತೋಲಿಕ ಕಾರ್ಮೆಲ್‌ನ ಸುಪೀರಿಯರ್ ಜನರಲ್ ಆಗಿ ನೇಮಕಗೊಂಡು ಒಂದು ವರ್ಷದ ಬಳಿಕ ಕೊಲೊಂಬೊಗೆ ಭೇಟಿ ನೀಡುವ ಸಂದರ್ಭದಲ್ಲಿ ಮರಣ ಹೊಂದಿದರು.

7. ರೀಟಾ ಕೊಯೆಲ್ಲೊ (ಮದರ್ ಲೂಸಿ 1851–99), ಸ್ಥಾಪಕ ಅಪೊಸ್ತೋಲಿಕ್ ಕಾರ್ಮೆಲೈಟ್ ಭಗಿನಿಯರಲ್ಲಿ ಐತಿಹ್ಯರಾಗಿದ್ದು 1872ರಲ್ಲಿ ಅವರ ಕುಟುಂಬದ ವಿರೋಧದ ಹೊರತಾಗಿಯೂ ಆರ್ಡರ್‌ಗೆ ಸೇರಿದರು. ಆದುದರಿಂದ ಕುಟುಂಬದ ಆಸ್ತಿಪಾಲಿನಲ್ಲಿ ವಂಚಿತರಾದರು. ತನ್ನ ಮನೆ ಒಂದು ದಿನ ಕಾನ್ವೆಂಟ್ ಆಗಿ ಪರಿವರ್ತನೆ ಹೊಂದಬಹುದು ಎಂದು ಅವರು ನೆನಸಿದ್ದರು; ಅದು ಅವರು ಮರಣ ಹೊಂದಿದ ಎಷ್ಟೋ ವರ್ಷಗಳ ಬಳಿಕ ಅವರ ಅಣ್ಣಂದಿರು ತಮ್ಮ ಮರಮಟ್ಟು ವ್ಯವಹಾರವನ್ನು ಕಾರವಾರಕ್ಕೆ ವರ್ಗಾವಣೆ ಮಾಡಿ ತಮ್ಮ ಮನೆಯನ್ನು ಫಳ್ನೀರಿನ ಶ್ರೀ ಎಂ. ಎಸ್. ಮಸ್ಕರೇನ್ಹಸ್ ಇವರಿಗೆ ಮಾರಾಟ ಮಾಡಿದಾಗ ಅವರು ಆ

ಮನೆಗೆ ಮಾರ್ಜಿಲ್ ಹೌಸ್ ಎಂದು ನಾಮಕರಣ ಮಾಡಿ ಅವರ ಹೆಣ್ಣು ಮಕ್ಕಳಾದ ಮಾರ್ಜೋರಿ ಮತ್ತು ಲೀಲ್ಲ ಅದನ್ನು ಅಪೋಸ್ತೊಲಿಕ್ ಕಾರ್ಮೆಲ್‌ಗೆ ದಾನ ಮಾಡುವುದರೊಂದಿಗೆ ನನಸಾಯಿತು. ಸಿಸ್ಟರ್ ಲೂಸಿ ಅವರ ಅಂತಿಮ ನಿರ್ಧಾರವನ್ನು 1975ರಲ್ಲಿ ಮಾಡಿದರು ಮತ್ತು ಮೂರು ವರ್ಷಗಳ ಬಳಿಕ ಅವರಿಗೆ ಕಣ್ಣಾನೂರಿನ ಕಾನ್ವೆಂಟ್ ಜವಾಬ್ದಾರಿ ವಹಿಸಲಾಯಿತು ಮತ್ತು 1881ರಲ್ಲಿ ಅವರನ್ನು ಕ್ಯಾಲಿಕಟ್ ಕಾನ್ವೆಂಟ್‌ನ ಮೇಲುಸ್ತುವಾರಿಗೆ ನೇಮಿಸಲಾಯಿತು. 1881ರಿಂದ ಅವರ ಮರಣದ ವರೆಗೆ ಅವರು ಸುಪೀರಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದ ಸಮಯ ಇಂಗ್ಲೀಷ್ ಮತ್ತು ಮಲಯಾಳಂ ಶಾಲೆಗಳ ಸ್ಥಾಪನೆ, ಸೈಂಟ್ ಜೋಸೆಫ್‌ಗೆ ಪ್ರತಿಷ್ಠೆಗೊಂಡ ಹೊಸ ಚಾಪೆಲ್ ನಿರ್ಮಾಣ ಇಂತಹ ಅಭಿವೃದ್ಧಿಯನ್ನು ಕಂಡವು. 1899ರಲ್ಲಿ ಅವರು ಮರಣ ಹೊಂದಿದಾಗ ಇಡೀ ಕ್ಯಾಲಿಕಟ್ ಊರೇ ಕಂಬನಿ ಮಿಡಿಯಿತು.

8. ಲಿಲ್ಲಿ ಕೊಲಾಸೊ (ಮದರ್ ತೆದೋಸಿಯ – 1899–1995) ಇವರು ಹೊಸಪೇಟೆಯ ಪ್ರಖ್ಯಾತ ಕೊಲಾಸೊ ಕಾಮತ್ ಕುಟುಂಬಕ್ಕೆ ಸೇರಿದವರಾಗಿದ್ದರು. ಇವರು ಡಾ। ಬೊನವೆಂಚರ್ ಮ್ಯಾನುವೆಲ್ ಕೊಲಾಸೊ ಇವರ ಒಬ್ಬಳೇ ಮಗಳಾಗಿದ್ದು, ಹೆಸರಾಂತ ಅಪೊಸ್ತೊಲಿಕ್ ಕಾರ್ಮೆಲೈಟ್ ಆಗಿದ್ದರು. ಸೈಂಟ್ ಆಗ್ನೆಸ್ ಕಾಲೇಜಿನ ಪ್ರಾಂಶುಪಾಲೆಯಾಗಿ(1934–43), ಶಿಕ್ಷಕ ವೃತ್ತಿ ತರಬೇತಿ ಆರಂಭಿಸಿದರು. ಪಾಟ್ನಾದ ವಿಮೆನ್ಸ್ ಕಾಲೇಜಿನ ಪ್ರಾಂಶುಪಾಲೆ(1959–71)ಯಾಗಿದ್ದಾಗ 1971ರಲ್ಲಿ ಪದ್ಮಶ್ರೀ ಪುರಸ್ಕೃತರಾದರು. ಸುಪೀರಿಯರ್ ಜನರಲ್ ಆಗಿ ಅವರು ಮೆಲ್‌ಬೋರ್ನ್‌ನ ಪೋರ್ಟ್‌ಬ್ಲೇರ್‌ನಲ್ಲಿ ಮತ್ತು ಕುವೈತ್‌ನಲ್ಲಿ ಭಗಿನಿಯರ ಮನೆ ಸ್ಥಾಪಿಸಿದರು. ಅವರು ಭಾರತದ ಧರ್ಮ ಸಮ್ಮೇಳನದ ಮಹಿಳಾ ವಿಭಾಗದ ಅಧ್ಯಕ್ಷೆಯಾಗಿದ್ದು ರೋಮ್‌ನ ಅಂತರ್ ರಾಷ್ಟ್ರೀಯ ಸುಪೀರಿಯರ್ ಜನರಲ್‌ಗಳ ಸಭೆಯ ಭಾರತದ ಪ್ರತಿನಿಧಿ ಮತ್ತು ಕೌನ್ಸಿಲರ್ ಆಗಿದ್ದರು ಮತ್ತು ಸೇಕ್ರೆಡ್ ಕಾಂಗ್ರೆಗೇಶನ್ ಫಾರ್ ದಿ ಪ್ರೊಪಗೇಶನ್ ಆಫ್ ದಿ ಫೈತ್‌ನ ಸಲಹೆಗಾರರಾಗಿದ್ದರು. ಅವರು ತಮ್ಮ ಅಂತಿಮ ದಿನಗಳನ್ನು ಪಾಟ್ನಾದಲ್ಲಿ ಕಳೆದರು. ಅವರ ಸಹೋದರ ಮುಂಬಯಿಯಲ್ಲಿ ಇಲೆಕ್ಟ್ರಿಕಲ್ ಇಂಜಿನಿಯರ್ ಆಗಿದ್ದು ಇನ್ನೊಬ್ಬ ಸಹೋದರ ವೆಸ್ಟರ್ನ್ ರೈಲ್ವೇ, ಮುಂಬಯಿಯಲ್ಲಿ ಚೀಫ್ ಕಮರ್ಶಿಯಲ್ ಸೂಪರಿಂಟೆಂಡೆಂಟ್ ಆಗಿಯೂ, ಇನ್ನೊಬ್ಬ ಸಹೋದರ ಮದರಾಸಿನಲ್ಲಿ ಜರ್ನಲಿಸ್ಟ್ ಆಗಿದ್ದರು.

9. ಮರಿಯ ತೆರೆಸ ಕೊಲಾಸೊ (ಸಿಸ್ಟರ್ ಮೇರಿ ಕ್ಸೇವಿಯರ್) ಇವರು ರಾವ್ ಸಾಹಿಬ್ ಕ್ಸೇವಿಯರ ಕೊಲಾಸೊ ಇವರ ಮಗಳಾಗಿದ್ದರು. 1943ರಲ್ಲಿ ಸ್ಥಾಪಿಸಲ್ಪಟ್ಟ ಸೈಂಟ್ ಆನ್ಸ್ ಟ್ರೈನಿಂಗ್ ಕಾಲೇಜಿನ ಸ್ಥಾಪಕರಲ್ಲಿ ಒಬ್ಬರಾಗಿದ್ದರು. 1954ರಲ್ಲಿ ಇವರಿಗೆ ಲಂಡನ್‌ನಲ್ಲಿ ಮತ್ತು ಸುತ್ತಮುತ್ತಲಿನ ಬ್ರಿಟಿಷ್ ದ್ವೀಪದಲ್ಲಿ British social life and conditions at various social and industrial centers ನ ಬಗ್ಗೆ ಅಧ್ಯಯನ ಮಾಡಲು ಸೋಶಿಯಲ್

ಲೈಫ್ ಬ್ರಿಟಿಷ್ ಕೌನ್ಸಿಲ್ ಸ್ಕಾಲರ್‌ಶಿಪ್ ನೀಡಲಾಗಿತ್ತು. ಅವರು ಅಖಿಲ ಭಾರತ ಮಟ್ಟದಲ್ಲಿ ಧಾರ್ಮಿಕ ಭಗಿನಿಯರಲ್ಲಿ ಪ್ರಥಮರಾಗಿ ಈ ಗೌರವ ಪಡೆದವರಾಗಿದ್ದರು.

10. ಮೇರಿ ಕೊಲಾಸೊ (ಸಿಸ್ಟರ್ ಮಾರಿಯೆಲ) ಇವರು ಫಾ। ಮುಲ್ಲರ್ಸ್ ಆಸ್ಪತ್ರೆಯ ಪ್ರಥಮ ರೇಡಿಯೋಲಜಿಸ್ಟ್ ಆಗಿದ್ದ ಡಾ। ಜೋಸೆಫ್ ಮೋಂಟೆ ಕೊಲಾಸೊ ಇವರ ಪ್ರಥಮ ಪುತ್ರಿ. ಇವರು 1984-96ರಲ್ಲಿ ಅಪೊಸ್ತೋಲಿಕ್ ಕಾರ್ಮೆಲ್ ಸುಪೀರಿಯರ್ ಜನರಲ್ ಆಗಿದ್ದರು.

11. ಏಂಜೆಲಿನ ಕೊಲಾಸೊ (ಸಿಸ್ಟರ್ ಕ್ಲಾರಿಸ್ಸ) ಇವರು 1863ರಿಂದ 1948ರ ಅವಧಿಯಲ್ಲಿ ರೊಸಾರಿಯೋ ಸ್ಕೂಲ್‌ನ ಹೆಸರಾಂತ ಶಿಕ್ಷಕರಾಗಿದ್ದ ರೇಮಂಡ್ ಪಾಸ್ಕಲ್ ಇವರ ಮಗಳಾಗಿದ್ದರು. ಇವರು ಅಪೊಸ್ತೊಲಿಕ್ ಕಾರ್ಮೆಲ್‌ಗೆ ಸೇರಿ ಸೈಂಟ್ ಆನ್ಸ್ ಟ್ರೈನಿಂಗ್ ಕಾಲೇಜಿನ ಮೊದಲ ಪ್ರಾಂಶುಪಾಲೆ(1943-49)ಯಾಗಿದ್ದರು ಮತ್ತು 1949-52ರಲ್ಲಿ ಸೈಂಟ್ ಆಗ್ನೆಸ್ ಕಾಲೇಜಿನ ಪ್ರಾಂಶುಪಾಲೆಯಾಗಿದ್ದರು. ಅವರ ಅಂಕಲ್, ರೆವೆ. ಫಾ। ಮೈಕೆಲ್ ಕೊಲಾಸೊ ಮಂಗಳೂರು ಧರ್ಮಪ್ರಾಂತದ ಪ್ರಮುಖ ಧರ್ಮಗುರು ಆಗಿದ್ದರು. ಇವರು ಸೈಂಟ್ ಆಂಟನೀಸ್ ಚಾರಿಟೇಬಲ್ ಸಂಸ್ಥೆಯ ಸ್ಥಾಪಕ ನಿರ್ದೇಶಕರಾಗಿದ್ದರು. ಮಾತ್ರವಲ್ಲದೆ ಕೊಂಕಣಿ ಸಂಗೀತ ರಚಕರಲ್ಲೊಬ್ಬರಾಗಿದ್ದರು ಮತ್ತು ಮೊನ್‌ಸಿಂಜರ್ ಪಧವಿ ಗಳಿಸಿದ್ದರು.

12. ಬೆನೆಡಿಕ್ಟ ಡಿ'ಸಿಲ್ವ (ಸಿಸ್ಟರ್‌ಮೇರಿ ಆಂಜೆ) ಮಂಗಳೂರಿನ ಹೆಸರಾಂತ ಪೌಂಡ್ ಗಾರ್ಡನ್‌ನವರಾಗಿರುತ್ತಾರೆ. ಇವರು 50 ವರ್ಷಗಳಿಗೂ ಅಧಿಕ ಕ್ಲೋಸ್ಟರ್ಡ್ ಭಗಿನಿಯಾಗಿದ್ದರು. ಅವರ 3 ಸಹೋದರರು ಅತ್ಯುನ್ನತ ಹುದ್ದೆ ಹೊಂದಿದ್ದ ಕಾಫಿಪ್ಲಾಂಟರ್, ಕಸ್ಟಮ್ಸ್ ಆಫೀಸರು, ಸರ್ಕಲ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್ ಆಗಿದ್ದರು.

13. ಸೆರೆಫಿನ್ ಡಿ'ಸೋಜ (ಸಿಸ್ಟರ್ ಮೇರಿ ಆಗ್ನೆಸ್ ಆಫ್ ದಿ ಬ್ಲೆಸ್ಸ್‌ಡ್ ಸೇಕ್ರಮೆಂಟ್-1854-86) ಇವರು ಹೆಸರಾಂತ ಕಲ್ಯಾಣಪುರ ಕುಟುಂಬದ ಸೆಬೆಸ್ಟಿಯನ್ ಡಿ'ಸೋಜ ಇವರ ಹಿರಿಯ ಮಗಳಾಗಿದ್ದರು. ಇವರು 1868ರಲ್ಲಿ ಅಪೋಸ್ತೊಲಿಕ್ ಕಾರ್ಮೆಲ್‌ನ ಪ್ರಥಮ ಬ್ಯಾಚ್‌ನ ಸದಸ್ಯೆಯಾಗಿದ್ದರು.

14. ಸ್ಟೆಲ್ಲ ರೇಚಲ್ ಡಿ'ಸೋಜ (ಸಿಸ್ಟರ್ ಬೆನೆಡಿಕ್ಟ- 1900-75) ಇವರು ಕಾಫಿ ಎಸ್ಟೇಟ್‌ನ ರೈಟರ್ ಆಗಿದ್ದ ಶ್ರೀ ಎಲಿಯಾಸ್ ಪಿಯಾದ್ ಡಿ'ಸೋಜ ಇವರ ಹಿರಿಯ ಮಗಳು. ಇವರು ಅಪೊಸ್ತೋಲಿಕ್ ಕಾರ್ಮೆಲ್‌ನ ಪ್ರತಿಷ್ಠಿತ ಸದಸ್ಯರಾಗಿದ್ದು ಪಾಟ್ನಾ ವಿಮೆನ್ಸ್ ಕಾಲೇಜಿನ ಪ್ರಾಂಶುಪಾಲೆ ಆಗಿ ಕೆಲಸ ನಿರ್ವಹಿಸಿದ್ದರು.

15. ಡೋರಿಸ್ (ಸಿಸ್ಟರ್ ವಿನ್ಸೆಂಟ್) ಇವರು ಮಂಗಳೂರಿನ ಕದ್ರಿ–ಕಂಬಳದ ಹೆಸರಾಂತ ಕುಟುಂಬದ ಸಿಪ್ರಿಯನ್ ಡಿ'ಸೋಜ ಇವರ ಮಗಳು. ಇವರ ಇಬ್ಬರು ಸಹೋದರರು ಸೊಸೈಟಿ ಆಫ್ ಜೀಸಸ್‌ಗೆ ಸೇರ್ಪಡೆಗೊಂಡಿದ್ದರು. ಇವರು ಅಪೊಸ್ತೋಲಿಕ್ ಕಾರ್ಮೆಲ್‌ನ ಸುಪೀರಿಯರ್ ಜನರಲ್ ಆಗಿದ್ದರು.

16. ಮಾರಿ ನೆಲ್ಲಿ ಡಿ'ಸೋಜ (ಸಿಸ್ಟರ್ ಸೆಲೀನ್) ಮತ್ತು ಸೆಲೀನ್ ಡಿ'ಸೋಜ (ಸಿಸ್ಟರ್ ಮರಿಯ ರೋಸ ಇವರು ಕಾಸ್ಮಿರ್ ಡಿ'ಸೋಜ ಇವರ ಸಹೋದರಿಯ ಮಕ್ಕಳಾಗಿದ್ದರು. ಸಿಸ್ಟರ್ ಸೆಲೀನ್ ಅವರು ಲೇಡಿಹಿಲ್ ವಿಕ್ಟೋರಿಯಾ ಗರ್ಲ್ಸ್ ಸ್ಕೂಲನ್ನು 1940ರಲ್ಲಿ ಹೈಸ್ಕೂಲ್ ಮಟ್ಟಕ್ಕೆ ಬೆಳೆಸಿರುವುದಕ್ಕೆ ಸ್ಮರಿಸತಕ್ಕವರಾಗಿದ್ದಾರೆ. ಇಬ್ಬರೂ ಭಗಿನಿಯರು ಮುಖ್ಯ ಶಿಕ್ಷಕಿಯರಾಗಿ ಸಿಸ್ಟರ್ ಸೆಲೇನ್ 1943–49ರಲ್ಲಿ ಮತ್ತು ಸಿಸ್ಟರ್ ಮರಿಯ ರೋಸ 1964–66ರಲ್ಲಿ ಸೈಂಟ್ ಆನ್ಸ್ ಹೈಸ್ಕೂಲ್‌ನಲ್ಲಿ ಸೇವೆ ಸಲ್ಲಿಸಿದ್ದರು.

17. ಮೇರಿ ಕ್ಲೊಟಿಲ್ಡ ಫೆರ್ನಾಂಡೆಸ್[19] (ಮದರ್ ಕ್ಲೊಟಿಲ್ಡ – 1967–1939). ಇವರು 1860ರಲ್ಲಿ ಬ್ರಿಟಿಷರಲ್ಲದೆ ಅತ್ಯುನ್ನತ ಹುದ್ದೆ ಹೊಂದಿದ್ದ ಟ್ರೆಜರಿ ಡೆಪ್ಯುಟಿ ಕಲೆಕ್ಟರ್ ಆಗಿದ್ದ ಜೋಕಿಮ್ ಲೂಯಿಸ್ ಫೆರ್ನಾಂಡೆಸ್ ಇವರ ಮಗಳಾಗಿದ್ದರು. ಅವರ ತಾಯಿ ಮದರ್ ರೆಜಿನ ರೊಸಾರಿಯೊ (ಅಪೋಸ್ತೊಲಿಕ್ ಕಾರ್ಮೆಲ್‌ನ 2ನೇ ಸುಪೀರಿಯರ ಜನರಲ್ ಮತ್ತು ಸೈಂಟ್ ಆಗ್ನೆಸ್ ಕಾಲೇಜಿನ ಸ್ಥಾಪಕಿ, ಮದರ್ ಅಲೋಯ್ಸಿಯಾ ಅವರ ಸಹೋದರಿ). ಇವರು 1887ರಲ್ಲಿ ಸ್ಥಾಪಿಸಲ್ಪಟ್ಟ ಉರ್ಸುಲೈನ್ ಸಭೆಯ 12 ಮೊದಲ ಸದಸ್ಯರಲ್ಲಿ ಒಬ್ಬರಾಗಿದ್ದರು. ಇವರು ತನ್ನ ಕಸಿನ್ ಮದರ್ ನಿಂಫ ಇವರ ಉತ್ತರಾಧಿಕಾರಿ ಸುಪೀರಿಯರ್ ಜನರಲ್ ಆಗಿ 1909ರಿಂದ 1918ರ ವರೆಗೆ ಈ ಹುದ್ದೆಯಲ್ಲಿ ಮುಂದುವರಿದರು. ಸುಪೀರಿಯರ ಜನರಲ್ ಆಗಿ ಅವರ ಸೇವಾ ಅವಧಿಯಲ್ಲಿ ಉರ್ಸುಲೈನ್ ಸಭೆ ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ತರಗತಿಗಳನ್ನು ಮಂಗಳೂರಿನ ವಿವಿಧ ಭಾಗಗಳಲ್ಲಿ ನಡೆಸುತ್ತಿತ್ತು. ಇವರು ಮದರ್ ಹೌಸ್‌ನಲ್ಲಿ ಮತ್ತು ಸೈಂಟ್ ಮೋನಿಕಾಸ್ ಚಾಪೆಲ್, ಸೊಡಾಲಿಟಿ ಆಫ್ ಕ್ರಿಶ್ಚಿಯನ್ ಮದರ್ಸ್ ಸೆಂಟರ್, ಮಿಲಾಗ್ರಿಸ್ ಇಲ್ಲಿ ಹೊಲಿಗೆ ತರಭೇತಿ ನೀಡುತ್ತಿದ್ದರು.

18. ಮೇರಿ ಆಗ್ನೆಸ್ ಫೆರ್ನಾಂಡೆಸ್ (ಸಿಸ್ಟರ್ ಮೇರಿ ಆಗ್ನೆಸ್ – 1869–1950) ಇವರು ಮದರ್ ಕ್ಲೊಟಿಲ್ಡ[20] ಇವರ ಕಿರಿಯ ಸಹೋದರಿ ಆಗಿದ್ದರು. ಅಪೋಸ್ತೊಲಿಕ್ ಕಾರ್ಮೆಲ್‌ಗೆ ಸೇರಿ ಸೈಂಟ್ ಆನ್ಸ್ ಹೈಸ್ಕೂಲ್‌ನ ಮುಖ್ಯ ಶಿಕ್ಷಕಿ (1914–17) ಆಗಿದ್ದರು. ಉರ್ಸುಲೈನ್ ಇವರು ಫೋರ್ಮಲ್ ಆರ್ಡರ್‌ಗೆ 1934ರಲ್ಲಿ ಸೇರ್ಪಡೆಯಾಗಿ ಕೆಟಕಿಸ್ಟ್ ಸಿಸ್ಟರ್ಸ್ ಆಫ್ ಸೈಂಟ್ ಉರ್ಸುಲ ಎಂದು ಕರೆಯಲ್ಪಟ್ಟಾಗ ಸಿಸ್ಟರ್ ಮೇರಿ ಆಗ್ನೆಸ್ ಇವರನ್ನು ಮದರ್ ಅಲೋಯ್ಸಿಯಾ (ಸುಪೀರಿಯರ ಜನರಲ್ ಆಫ್ ಅಪೋಸ್ತೊಲಿಕ್ ಕಾರ್ಮೆಲ್) ನೊವೀಸ್ ಮಿಸ್ಟ್ರೆಸ್ಸ್ ಆಫ್ ದಿ ಉರ್ಸುಲೈನ್ ಆಗಿ ಕಳುಹಿಸಿದ್ದು 10 ವರ್ಷಗಳಿಗೂ ಅಧಿಕ ಈ ಹುದ್ದೆಯಲ್ಲಿದ್ದರು.

19. ಡಾ। ಸಿಸ್ಟರ್ ಲಿಡಿಯ ಫೆರ್ನಾಂಡಿಸ್ ಇವರು ಮಂಗಳೂರಿನ ಮರಕಡ ಕುಟುಂಬದ ಹಿಲಾರಿ ಮರಿಯನ್ ಫೆರ್ನಾಂಡಿಸ್ ಇವರ ಮಗಳಾಗಿದ್ದರು. ಇವರ ಸಹೋದರ ಫಾ। ವಾಲ್ಟರ್ ಫೆರ್ನಾಂಡೆಸ್, ಟ್ರೈಬಲ್ ರಿಸರ್ಚ್‌ನಲ್ಲಿ ಪಿ.ಎಚ್‌ಡಿ. ಗಳಿಸಿದ್ದರು. ಸಹೋದರಿ ಆಲೀಸ್ ಸಲ್ಡಾನ ಇವರು ಉತ್ತಮ ಬರಹಗಾರರಾಗಿದ್ದರು ಮತ್ತು ಸಿಸ್ಟರ್ ಲಿಡಿಯ ಫೆರ್ನಾಂಡೆಸ್ ಮಂಗಳೂರಿನ ಸೈಂಟ್ ಆನ್ಸ್ ಕಾಲೇಜ್ ಆಫ್ ಎಜುಕೇಶನ್‌ನ ಪ್ರಾಂಶುಪಾಲೆಯಾಗಿದ್ದರು. ಇವರ ನಾಯಕತ್ವದಲ್ಲಿ ಕಾಲೇಜು ಅತ್ಯುನ್ನತ ಮಟ್ಟಕ್ಕೆ ಏರಿತ್ತು. ಪ್ರಾಂಶುಪಾಲರಾಗಿ ಇವರ ಕೊಡುಗೆ ಮತ್ತು ಇವರು ಶಿಕ್ಷಣ ತಜ್ಞರಾಗಿದ್ದುದು ವಿಶಿಷ್ಟವಾದುದು.

20. ಎಸ್‌ಪರಾಂಕ ಫ್ಲೋರೀನ ಲೋಬೊ (ಸಿಸ್ಟರ್ ಹೆಲೆನ್ – 1866–98) ಇವರು ಮುನ್ಸಿಫ್ ಜೋಸೆಫ್ ಲೋಬೊ ಇವರು ಹಿರಿಯ ಮಗಳಾಗಿದ್ದರು. ಇವರು 1997ರಲ್ಲಿ ಅಪೋಸ್ತೊಲಿಕ್ ಕಾರ್ಮೆಲ್ ಸೇರಿದರು. ತರಬೇತಿ ಹೊಂದಿದ ಶಿಕ್ಷಕಿಯಾಗಿ ಅವರು 10 ವರ್ಷಗಳ ವಿಕ್ಟೋರಿಯಾ ಕಾಸ್ಟ್ ಗರ್ಲ್ಸ್ ಸ್ಕೂಲ್‌ನಲ್ಲಿ ಕಲಿಸುತ್ತಿದ್ದರು.[20]

21. ಶೀಲಾ ಲೋಬೊ (ಸಿಸ್ಟರ್ ಕಾರ್ಮೆಲ – 1920–50) ಮತ್ತು ಮೇರಿ ಲೋಬೊ (ಸಿಸ್ಟರ್ ಫಿಡೆಲಿಸ್ – 1914–92) ಇವರಿಬ್ಬರು 'ದಿವಾನ್ ಬಹದ್ದೂರ್' ಪಿ. ಸಿ. ಲೋಬೊ[21] ಇವರ ಮಕ್ಕಳು. ಸಿಸ್ಟರ್ ಕಾರ್ಮೆಲ 2 ವರ್ಷ ಅಪೋಸ್ತೊಲಿಕ್ ಕಾರ್ಮೆಲ್‌ಗೆ ಸೇರಿ ಸೈಂಟ್ ಆಗ್ನೆಸ್ ಕಾಲೇಜಿನಲ್ಲಿ ಸೇವೆ ಸಲ್ಲಿಸಿ ಚಿಕ್ಕಂದಿನಲ್ಲೆ ತೀರಿಕೊಂಡರು. ಸಿಸ್ಟರ್ ಫಿಡೆಲಿಸ್ ಇಂಗ್ಲೀಷ್‌ನಲ್ಲಿ ಎಂ.ಎ. ಸ್ನಾತಕೋತ್ತರ ಪಧವಿ ಗಳಿಸಿ ಈ ವಿಷಯದಲ್ಲಿ ಪ್ರೊಫೆಸರ್ ಮತ್ತು ಆಗ್ನೆಸ್‌ನ ಪ್ರಾಂಶುಪಾಲೆ(1943–48) ಆಗಿದ್ದು ನಂತರ ಸೈಂಟ್ ಆನ್ಸ್ ಟ್ರೈನಿಂಗ್ ಕಾಲೇಜಿನಲ್ಲಿ ಅನೇಕ ವರ್ಷ ಕಲಿಸುತ್ತಿದ್ದರು.

22. ಎನಿಡ್ ಸಲ್ಡಾನ (ಸಿಸ್ಟರ್ ಕಾರ್ಮೆಲಿಟ) ಇವರು ತಹಶೀಲ್ದಾರ್ ವಿಕ್ಟರ್ ಸಲ್ಡಾನ[22] ಇವರ ಹಿರಿಯ ಮಗಳಾಗಿದ್ದು ಇವರು ಪ್ರತಿಷ್ಟಿತ ಶಿಕ್ಷಣ ತಜ್ಞೆಯಾಗಿದ್ದು ಮಂಗಳೂರಿನ ಸೈಂಟ್ ಆನ್ಸ್ ಟ್ರೈನಿಂಗ್ ಕಾಲೇಜಿನ ಪ್ರಾಂಶುಪಾಲೆ (1949–58) ಹಾಗೂ ಮಂಗಳೂರಿನ ಸೈಂಟ್ ಆಗ್ನೆಸ್ ಕಾಲೇಜಿನ ಪ್ರಾಂಶುಪಾಲೆ (1960–63) ಆಗಿದ್ದು ನಂತರ ಪ್ರೋವಿಡೆನ್ಸ್ ಕಾಲೇಜು, ಕ್ಯಾಲಿಕಟ್ ಹಾಗೊ ಅವಿಲಾ ಕಾನ್ವೆಂಟ್ ಪಾಟ್ನ ಇಲ್ಲಿ ಸೇವೆ ಸಲ್ಲಿಸಿದ್ದರು. ಅಪೋಸ್ತೋಲಿಕ ಕಾರ್ಮೆಲ್‌ನ ಸುಪೀರಿಯರ್ ಜನರಲ್ ಆಗಿ 1972ರಲ್ಲಿ ಆಯ್ಕೆಗೊಂಡರು.

23. ಏನ್ನಿಫ್ರೆಡ್ ಪಿಂಟೊ (ಸಿಸ್ಟರ್ ನೊಯೆಲ್ಲೆ, ಎ.ಸಿ.) ಇವರು ಮೆಜಿಸ್ಟ್ರೇಟ್ ಆಗಿದ್ದ ಫೆಲಿಕ್ಸ್ ಮ್ಯಾಥ್ಯೂ ಪಿಂಟೊ ಇವರು ಹಿರಿಯ ಮಗಳಾಗಿದ್ದರು. ಇವರು ಸೈಂಟ್ ಆಗ್ನೆಸ್ ಕಾಲೇಜಿನ ಪ್ರಾಂಶುಪಾಲೆಯಾಗಿ (1968–73)

ಸೇವೆ ಸಲ್ಲಿಸಿ 1980-83ರಲ್ಲಿ ಸಭೆಯ ಪ್ರೊವಿನ್ಸಿಯಲ್ ಆಗಿ ಮತ್ತು 1984-96ರ ವರೆಗೆ ಜನರಲ್ ಕೌನ್ಸಿಲರ್ ಆಗಿದ್ದರು.

5.6 ಶಿಕ್ಷಣ ಮತ್ತು ಸಬಲೀಕರಣ:

ಕಾರ್ಮೆಲ್ ಅಧೀನತೆಯ ಸಂಸ್ಥೆಗಳಲ್ಲಿ ಶಿಕ್ಷಣ ಹೊಂದಿದ ಹೆಣ್ಣು ಮಕ್ಕಳು ಕೇವಲ ಜ್ಞಾನ ಪಡೆದಿರುವುದು ಮಾತ್ರವಲ್ಲದೆ ತಮ್ಮನ್ನು ಸಬಲೀಕರಣಗೊಳಿಸುವಲ್ಲಿ ಸಮರ್ಥರಾಗಿದ್ದರು. 1940ರ ಮೊದಲಿನ ಬ್ಯಾಚ್‌ನ ವಿದ್ಯಾರ್ಥಿಗಳಿಂದ ಒಳಗೊಂಡು ಉದ್ಯೋಗ ಹೊಂದಿಕೊಳ್ಳುವಲ್ಲಿ ಸಫಲರಾದರು. ಜಿಲ್ಲೆಯ 100 ವರ್ಷಗಳ ಜನಗಣತಿ ವರದಿಗಳು ಪ್ರೈಮರಿ ಮತ್ತು ಹೈಸ್ಕೂಲ್ ಮಟ್ಟದಲ್ಲಿ ಕಲಿಸುವ ಶಿಕ್ಷಕರು ಗಂಡಸರಿಗಿಂತ ಹೆಂಗಸರೇ ಹೆಚ್ಚಾಗಿದ್ದಾರೆ. ಇವುಗಳಲ್ಲಿ ಕೆಥೋಲಿಕರು ಮುಂಚೂಣಿಯಲ್ಲಿದ್ದಾರೆ ಎಂದು ದೃಡ ಪಡಿಸುತ್ತದೆ. ಇಂದಿಗೂ ಕೂಡಾ, ಶಿಕ್ಷಣ ಸರ್ವೇ ಪ್ರತೀ ಕೆಥೋಲಿಕ ಕುಟುಂಬ ಕನಿಷ್ಠ ಒಬ್ಬ ಶಿಕ್ಷಕಿಯನ್ನು ಹೊಂದಿದ್ದು ಅವರು ಮಿಶನರಿ ಕಾಲೇಜಿನಲ್ಲಿ ಕಲಿತಿದ್ದು ನಂತರ ಅನುದಾನಿತ ಸರಕಾರಿ ಹುದ್ದೆಗಳಲ್ಲಿದ್ದಾರೆಂದು ತಿಳಿಸುತ್ತದೆ. ಮತ್ತು ಹೆಚ್ಚಿನ ಕೌಶಲ್ಯ ಹೊಂದಿದ ವಿದ್ಯಾರ್ಥಿಗಳು ಜಿಲ್ಲೆಯ ವಿವಿಧ ಭಾಗಗಳಲ್ಲಿ ತಮ್ಮದೇ ಸಂಸ್ಥೆಯಲ್ಲಿ ಹುದ್ದೆ ಗಳಿಸುತ್ತಾರೆ ಎಂಬ ಭರವಸೆಯನ್ನು ಭಗಿನಿಯರು ನೀಡುತ್ತಾರೆ. ಸೈಂಟ್ ಆನ್ಸ್ ಕಾಲೇಜ್ ಆಫ್ ಎಜುಕೇಶನ್ ಸಂಸ್ಥೆಗೆ ಸಂಭಂದಿಸಿದಂತೆ 1943ರಲ್ಲಿ 20 ವಿದ್ಯಾರ್ಥಿಗಳಲ್ಲಿ 18 ವಿದ್ಯಾರ್ಥಿಗಳು ದೇಶದ ವಿವಿಧ ಭಾಗಗಳಲ್ಲಿ ಮತ್ತು ವಿದೇಶದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ಒಬ್ಬ ವಿದ್ಯಾರ್ಥಿನಿ, ಕ್ಯಾಲಿಕಟ್‌ನ್ ಆಂಗ್ಲೋ-ಇಂಡಿಯನ್ ಮೇರಿ ಡಿಯೊಮಿಯೆರ್ ಎಂಬಾಕೆ ಕಾಥಿಯವಾರ್‌ನ ರಾಜನ ಮಕ್ಕಳ ಗವರ್ನೆಸ್ ಆಗಿ ಸೇವೆ ಸಲ್ಲಿಸಿದ್ದರು.

ಪ್ರತೀ ಶಾಲೆಯಲ್ಲಿ ಹೆಣ್ಣು ಮಕ್ಕಳು ನಾಯಕತ್ವ ವಹಿಸಿಕೊಳ್ಳುವಂತೆ ತರಬೇತುಗೊಳಿಸಲಾಗುತ್ತಿತ್ತು. ಶಿಕ್ಷಕಿಯರಿಂದ ಅವರಿಗೆ ಶಾಲಾ ಮಂತ್ರಿ ಮಂಡಲದ ಸದಸ್ಯರಾಗಿ ಮಕ್ಕಳಿಂದ ನಡೆಯುವ ಚುನಾವಣೆಯಲ್ಲಿ ಆಯ್ಕೆಗೊಂಡು ಶಾಲಾ ಕಾರ್ಯಚಟುವಟಿಕೆಗಳ ಜವಾಬ್ದಾರಿ ವಹಿಸಿಕೊಳ್ಳುವಂತೆ ಪ್ರೇರೇಪಣೆ ನೀಡಲಾಗುತ್ತಿತ್ತು. ಪ್ರತೀ ಚುನಾಯಿತ ಸದಸ್ಯರಿಗೆ ಒಂದು ಚಿಹ್ನೆ ನೀಡಲ್ಪಟ್ಟು ಚುನಾವಣೆಗಳನ್ನು ಮಕ್ಕಳು ಬ್ಯಾಲೆಟ್ ಪೇಪರ್‌ನಲ್ಲಿ ತಮ್ಮ ಆಯ್ಕೆ ಬರೆದು ಬ್ಯಾಲೆಟ್ ಬಾಕ್ಸ್‌ನಲ್ಲಿ ಹಾಕುವ ರೀತಿಯಲ್ಲಿ ನಡೆಸಲಾಗುತ್ತಿತ್ತು. ಜಾತಿ, ಮತ ಭೇದವಿಲ್ಲದೆ ಹೆಚ್ಚು ಮತಗಳನ್ನು ಪಡೆದ ವಿದ್ಯಾರ್ಥಿಯನ್ನು ಸ್ಕೂಲ್ ಪ್ಯೂಪಲ್ ಲೀಡರ್ (ಎಸ್.ಪಿ.ಎಲ್) ಎಂದು ಆಯ್ಕೆ ಮಾಡಲಾಗುತ್ತಿತ್ತು. ನಾಯಕಿಯಾಗಿ ಈಗೆ ವಿವಿಧ ಜವಾಬ್ದಾರಿಗಳನ್ನು ಕೊಡಲಾಗುತ್ತಿದ್ದು ಸಹಪಾಠಿಗಳಿಗೆ ನಮ್ರ

ಮತ್ತು ಪ್ರಾಮಾಣಿಕರಾಗಿ ಇರಬೇಕಾಗಿತ್ತು. ಇವರನ್ನು ಬೆಳಗುವ ದೀಪದಂತೆ ಇತರರು ಅನುಸರಿಸುವ ರೀತಿ ಒಂದು ಮಾದರಿಯಾಗಿ ತರಬೇತುಗೊಳಿಸಲಾಗುತ್ತಿತ್ತು.

ಗರ್ಲ್ಸ್ ಗೈಡ್ ಮತ್ತು ಬುಲ್‌ಬುಲ್ ಈ ವ್ಯವಸ್ಥೆ ಕೂಡಾ ಹೆಣ್ಣು ಮಕ್ಕಳಿಗೆ ತಮ್ಮ ಸುಖ ಜೀವನದಿಂದ ಹೊರಬಂದು ಹೊರ ಪ್ರಪಂಚದಲ್ಲಿ ಸಮ್ಮಿಳಿತಗೊಳ್ಳುವುದಕ್ಕೆ ಅವಕಾಶವಾಗುತ್ತಿತ್ತು. ಅದು ಸ್ವಾತಂತ್ರ್ಯ ದಿನವಾಗಿರಬಹುದು, ಮಕ್ಕಳ ದಿನ, ಪ್ರಜಾಪ್ರಭುತ್ವ ದಿನ ಇತ್ಯಾಧಿಗಳಲ್ಲಿ ಶಿಕ್ಷಣ ಸಚಿವರು ಸಂಸ್ಥೆಗೆ ಭೇಟಿ ನೀಡುವಾಗ ಗೈಡ್ಸ್ ಇವರು ಮಾರ್ಚ್-ಫಾಸ್ಟ್, ಕಾರ್ಯಕ್ರಮ ಪೆರೇಡ್ ಮತ್ತು ಗಾರ್ಡ್ ಆಫ್ ಆನರ್ ಕೊಡುವುದಕ್ಕೆ ಸಿದ್ಧರಾಗಿರಬೇಕು.

ಕಾರ್ಮೆಲೈಟ್ ಹಳೆ ವಿದ್ಯಾರ್ಥಿಗಳಾಗಿದ್ದ ಕೆಲವು ಪ್ರತಿಷ್ಠಿತ ಮಹಿಳೆಯರು:

1. ಡಾ। ಮಿಸ್ ಮೇರಿ ಆಗ್ನೆಸ್ ಸಲ್ಡಾನ, ಎಂ.ಎ.,ಪಿ.ಎಚ್‌ಡಿ (ಯು.ಎಸ್.ಎ.).ಮೇರಿ ಆಗ್ನೆಸ್ ಸಲ್ಡಾನರಂತವರು ತಮ್ಮ ರೋಲ್‌ನಲ್ಲಿ ಇದ್ದರು ಎಂಬುದಕ್ಕೆ ಕಾಲೇಜು ಹೆಮ್ಮೆ ಪಟ್ಟುಕೊಳ್ಳುತ್ತದೆ. ಇವರು ಅಂದಿನ ದಿನಗಳಲ್ಲಿ ಪ್ರಮುಖ್ಯ ಶಿಕ್ಷಣ ತಜ್ಞರಾಗಿದ್ದ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಇಂಗ್ಲೀಷ್ ಪ್ರೊಫೆಸರ್ ಆಗಿದ್ದ ಜೋಸೆಫ್ ಲೂಯಿಸ್ ಸಲ್ಡಾನ ಇವರ ಮಗಳಾಗಿದ್ದರು. ಇವರು ಲ್ಯಾಟಿನ್, ಸಂಸ್ಕೃತ, ಮರಾಠಿ ಮತ್ತು ಕೊಂಕಣಿಯಲ್ಲಿ ತಜ್ಞರಾಗಿದ್ದರು. ಇವರ ತಾಯಿ ಲೂಯಿಸ ಕೊಯೆಲ್ಲೊ ಸೈಂಟ್ ಅನ್ಸ್ ಆಕಾಡೆಮಿಯ ವಿದ್ಯಾಥಿನಿ ಆಗಿದ್ದು 1900ರಲ್ಲಿ ಮೆಟ್ರಿಕ್ಯುಲೇಶನ್‌ನಲ್ಲಿ ಬಂಗಾರದ ಪಧಕ ಗಳಿಸಿದ ಪ್ರಥಮ ಮಂಗಳೂರಿಗರಾಗಿದ್ದರು. ಮೇರಿ ಆಗ್ನೆಸ್ ಇವರು ಪ್ರತಿಭಾನ್ವಿತ ಭಾಷಣಕಾರರು, ಬರಹಗಾರರು ಮತ್ತು ಬಹುಮುಖ ವ್ಯಕ್ತಿತ್ವ ಹೊಂದಿದಾವರಾಗಿದ್ದರು. ಉತ್ತರದಲ್ಲಿ ಎರಡು ಕಾಲೇಜುಗಳ ಸ್ಥಾಪಕ ಪ್ರಾಂಶುಪಾಲೆ, ಚರ್ಚ್‌ನ ಮತ್ತು ದೇಶದ ಅನೇಕ ಸಮಿತಿ ಮತ್ತು ಕನಿಷನ್‌ಗಳ ಸದಸ್ಯರು ಮತ್ತು ಮುಖ್ಯಸ್ಥರಾಗಿದ್ದು 'Pro Ecclesia et Pontifice' ಪ್ರಶಸ್ತಿ ಗಳಿಸುವ ಭಾಗ್ಯ ಹೊಂದಿದವರು.

2. ಡಾ। ಮಿಸ್ ಜೆಸ್ಸಿ ಟೆಲ್ಲೀಸ್ ನಾಯಕ್, ಎಮ್.ಎ., ಪಿ.ಎಚ್‌ಡಿ(ಯು.ಎಸ್.ಎ.): ಇನ್ನೊಬ್ಬ ಪ್ರತಿಭಾನ್ವಿತ ಅಗ್ನೆಶಿಯನ್. ಡಾ। ಜೆಸ್ಸಿ ಟೆಲ್ಲೀಸ್ ಇವರು ಕ್ಲೋತ್ ಮರ್ಚಂಟ್ ಮತ್ತು ವೆನ್ಲಾಕ್ ಹಾಗೂ ಲೇಡಿ ಗೋಶೆನ್ ಆಸ್ಪತ್ರೆಗಳಿಗೆ ಆಹಾರ ಸರಬರಾಜು ಮಾಡುವ ಸರಕಾರಿ ಗುತ್ತಿಗೆದಾರರಾಗಿದ್ದ ಫ್ರಾನ್ಸಿಸ್ ಕ್ಸೇವಿಯರ್ ಟೆಲ್ಲೀಸ್ ಇವರ ಮಗಳಾಗಿದ್ದರು. ಶಿಕ್ಷಣ ತಜ್ಞೆ, ಬರಹಗಾರರು, ಮಹಿಳಾ ವಿಷಯಕ್ಕೆ ಸಂಭಂದಿಸಿದಂತೆ ಸಮಾಜ ಸೇವಕಿ

ಆಗಿದ್ದು ಮಂಗಳೂರಿನ ಸೈಂಟ್ ಆಗ್ನೆಸ್ ಕಾಲೇಜಿನಲ್ಲಿ ಬಯಾಲಜಿ ಕಲಿಸುವ ಉಪನ್ಯಾಸಕಿ ಆಗಿದ್ದರು. ನಂತರ 1957–65ರ ವರೆಗೆ 8 ವರ್ಷ ಅಮೇರಿಕದ ವಾಷಿಂಗ್‌ಟನ್ ಡಿ.ಸಿ. ಯಲ್ಲಿ ಕಥೋಲಿಕ್ ಯುನಿವರ್ಸಿಟಿಯಲ್ಲಿ ಕಳೆದರು. ಹಿಂದೆ ಬಂದು ಇಂಡಿಯನ್ ಸೋಶಿಯಲ್ ಇನ್ಸ್‌ಟಿಟ್ಯೂಟ್‌ನಲ್ಲಿ ಕಮ್ಯುನಿಟಿ ಡೆವೆಲಪ್‌ಮೆಂಟ್ ಆಫೀಸರ್ ಆಗಿ ಹಿಂದುಳಿದ ವರ್ಗಗಳ ಮಹಿಳೆಯರ ಮಧ್ಯೆ ಸೇವೆ 'ವಿನಾ' (Women's Institute for new Awakening) ಎಂಬ ಸಂಸ್ಥೆಯ ಸ್ಥಾಪಕ ಸದಸ್ಯರಾಗಿದ್ದರು. ತುಳಿಯಲ್ಪಟ್ಟವರ ಬಗ್ಗೆ ಪ್ರೀತಿಯ ಕಾಳಜಿಯನ್ನು ಹೊಂದಿದ್ದು ಜೆಸ್ಸಿಯವರು ತಮ್ಮ ತಾಯ್ನಾಡಿನಲ್ಲಿಬಡತನ, ಅನಕ್ಷರಸ್ತತೆಮತ್ತು ರೋಗ ರುಜಿನಗಳ ವಿರುದ್ದ ಹೋರಾಟಕ್ಕೆ ಕಟಿಬದ್ಧರಾಗಿದ್ದರು. ಇವರು NON Formal Education for Women ಈ ಪುಸ್ತಕದ ಬರಹಗಾರರಾಗಿದ್ದರು. ಇವರ ಹಿರಿಯ ಸಹೋದರಿ ಲೂಯಿಸ ಮಾರ್ಥ ಟೆಲ್ಲೀಸ್ ಇವರು ಜಾಗತಿಕ ಯುದ್ದ II. ರಲ್ಲಿ ಮಿಲಿಟರಿ ಡಾಕ್ಟರ್ ಆಗಿ ಸೇವೆ ಸಲ್ಲಿಸಿದ ಸಮುದಾಯದ ಪ್ರಥಮ ಮಹಿಳೆಯಾಗಿದ್ದರು.

3. ಮಿಸ್ ಪಾಸ್ಕಾಲಿಯ ಪಿಂಟೋ (ಮದರ್ ಮೇಕ್ರಿನಾ ಬಿ.ಎಸ್.). ಮದರ್ ಮೇಕ್ರಿನಾ ಅವರು ಸೈಂಟ್ ಆಗ್ನೆಸ್ ಗೆಲಾಕ್ಸಿಯ ಇನ್ನೊಂದು ತಾರೆ. ಅವರ ಇಲ್ಲಿನ ವಿದ್ಯಾಭ್ಯಾಸದ ಬಳಿಕ ಎಂ.ಎಡ್ ವಿದ್ಯಾಭ್ಯಾಸಕ್ಕಾಗಿ ಯು.ಎಸ್.ಎ.ಗೆ ತೆರಳಿದರು. ಮಂಗಳೂರಿನ ಬೆಥನಿ ಆರ್ಡರ್ ಆಫ್ ಸಿಸ್ಟರ್ಸ್‌ನ ಸ್ಥಾಪಕಿಯಾಗಿದ್ದು ಅವರು 1945ರಲ್ಲಿ ಸ್ಥಾಪಿತವಾದ ರೋಸ ಮಿಸ್ಟಿಕ ಪ್ರೈಮರಿ ಟೀಚರ್ಸ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್‌ನ ಪ್ರಥಮ ಮುಖ್ಯ ಶಿಕ್ಷಕಿ ಆಗಿದ್ದರು. ನಂತರ ಸೇಕ್ರೆಡ್ ಹಾರ್ಟ್ ಹೈಸ್ಕೂಲ್, ಕುಲಶೇಖರ (1940ರಿಂದ 1950) ಇಲ್ಲಿ ಮುಖ್ಯ ಶಿಕ್ಷಕಿ ಆಗಿದ್ದರು. ಇವರು 4ನೇ ಸುಪೀರಿಯರ ಜನರಲ್(1956–77) ಆಗಿ ಆಯ್ಕೆಗೊಂಡರು ಮತ್ತು ಇವರ ನಾಯಕತ್ವದಲ್ಲಿ ಬಿ.ಎಸ್. ಸಭೆಯ ಸಂಖ್ಯೆಯಲ್ಲಿ ಮಾತ್ರವಲ್ಲದೆ ಉತ್ತಮ ಕೆಲಸದಲ್ಲಿ ಅಭಿವೃದ್ಧಿಯಿಂದ ಅಭಿವೃದ್ಧಿಗೆ ಮುನ್ನಡೆಯಿತು.

4. ಶ್ರೀಮತಿ ಒಕ್ಟೇವಿಯಾ ಆಲ್ಬುಕರ್ಕ್: ಸಾಮಾನ್ಯವಾಗಿ ಓಟ್ಟಿ(Otty) ಎಂದೇ ಕರೆಯಲ್ಪಡುತ್ತಿದ್ದ ಶ್ರೀಮತಿ ಒಕ್ಟೇವಿಯಾ ಆಲ್ಬುಕರ್ಕ್ ಅವರು ನಂಬಿಗಸ್ತ ಅಗ್ನೇಶಿಯನ್. ಶ್ರೀ ಸಿರಿಲ್ ಅಲೆಗ್ಸಾಂಡರ್ ಅಲ್ಬುಕರ್ಕ್ ಇವರನ್ನು ಮದುವೆಯಾಗಿ ಸಮಾಜ ಸೇವೆ, ರಾಜಕೀಯದಲ್ಲಿ 50 ವರ್ಷ ಸೇವೆ ಸಲ್ಲಿಸಿ ಇಂದಿಗೂ ಒಬ್ಬ ಹೆಸರಾಂತ ವ್ಯಕ್ತಿಯಾಗಿ ಕರೆಯಲ್ಪಡುತ್ತಿದ್ದಾರೆ. ಇವರು ಲೇಡಿಸಿ ಸೋಶಿಯಲ್ ಸರ್ವಿಸ್ ಲೀಗ್‌ನ ಅಧ್ಯಕ್ಷೆಯಾಗಿ 50 ವರ್ಷ ಸೇವೆ ಸಲ್ಲಿಸಿದ್ದಾರೆ. ರಾಜಕೀಯ ವ್ಯಕ್ತಿಯಾಗಿ ಇವರು ಮಂಗಳೂರು ಮುನಿಸಿಪಲ್ ಕೌನ್ಸಿಲ್‌ನ ಉಪಾಧ್ಯಕ್ಷೆಯಾಗಿ, ಕರ್ನಾಟಕ ಲೆಜಿಸ್ಲೆಟಿವ್ ಎಸೆಂಬ್ಲಿಯ ಸದಸ್ಯೆಯಾಗಿ ಸೇವೆ ಸಲ್ಲಿಸಿದ್ದರು. ಗರ್ಲ್ಸ್ ಗೈಡ್ ಮೂವ್‌ಮೆಂಟ್‌ಗೆ ಹತ್ತಿರ ಸಂಭಂದ ಹೊಂದಿದ್ದು 1980ರಲ್ಲಿ ಗರ್ಲ್ಸ್ ಗೈಡ್‌ನ All-India Commissioner

ಆಗಿ ನೇಮಿಸಲ್ಪಟ್ಟರು. ಇವರು ಹೇಳಲಾರದಷ್ಟು ಅಧಿಕ ಸಮಾಜ ಸೇವಾ ಹಾಗೂ ಸಾಂಸ್ಕೃತಿಕ ಸಂಸ್ಥೆಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1967ರಲ್ಲಿ ಸಿರಿಲ್ ಮತ್ತು ಒಕ್ಟೇವಿಯಾ ಜಂಟಿಯಾಗಿ ಕಡಿ೦ ಇಭಿಭಿಟಜುಚಿ ಜಣ ಕ೦ಟಿಣುಜಿುಭಿಜ ಪ್ರಶಸ್ತಿ ಪಡೆದರು.

5. ಲಿಲ್ಲಿ ಆನ್ನೆ ಡಿ'ಸಿಲ್ವ: ಇವರು 26 ಜುಲೈ 1927ರಲ್ಲಿ ಜನಿಸಿ ಬಂಟ್ವಾಳ ತಾಲೂಕಿನ ಜೆರೋಮ್ ಮತ್ತು ಇಸಬೆಲ್ ಡಯಾಸ್ ಇವರ ಬದುಕುಳಿದ ಇಬ್ಬರು ಮಕ್ಕಳಲ್ಲಿ ಕಿರಿಯರಾಗಿದ್ದರು. ಅವರ ತಂದೆ ಮುಂಬಯಿಯಲ್ಲಿ ಉದ್ಯೋಗಿಯಾಗಿದ್ದುದರಿಂದ, ಅವರ ತಾಯಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಮಂಗಳೂರಿಗೆ ಬಂದು ನೆಲೆಸಿದರು, ಲಿಲ್ಲಿ ಹೇಡರ್ ಅವರು ಸೈಂಟ್ ಆಗ್ನೆಸ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಗಿಸಿ 1948ರಲ್ಲಿ ಬಿ.ಎ. ಪಧವಿ ಪಡೆದರು. ಅವರು ಇಂಗ್ಲೀಷ್‌ನಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾಗಿ ಮದರಾಸು ವಿಶ್ವವಿದ್ಯಾಲಯದ ಬಂಗಾರ ಪಧಕ ಗಳಿಸಿದರು. ಇವರು ಕುಲಶೇಖರದ ವಿಲಿಯಂ ಡಿ'ಸಿಲ್ವ ಅವರೊಂದಿಗೆ ತಮ್ಮ 1951ರಲ್ಲಿ ವಿವಾಹ ಆಗುವ ಮೊದಲು ಸೈಂಟ್ ಆಗ್ನೆಸ್ ಕಾಲೇಜಿನಲ್ಲಿ 3 ವರ್ಷಗಳ ಕಾಲ ಇಂಗ್ಲೀಷ್ ಮತ್ತು ರೋಮನ್ ಹಿಸ್ಟರಿ ಕಲಿಸುತ್ತಿದ್ದರು. ನಂತರ 1 ವರ್ಷ ಸೈಂಟ್ ಜೋಸೆಫ್ಸ್ ಕಾನ್ವೆಂಟ್ ಸ್ಕೂಲ್, ಕರಾಚಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಬಳಿಕ 1953ರಲ್ಲಿ ಮಂಗಳೂರಿಗೆ ತಮ್ಮ ಮೊದಲ ಮಗುವಿನ ಹೆರಿಗೆಗಾಗಿ ಹಿಂತಿರುಗಿದರು. ಲಿಲ್ಲಿಯವರು ಮೆಡಿಕೋ-ಸೈಂಟಿಫಿಕ್ ಶಿಕ್ಷಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದ ಹಮ್‌ದರ್ದ್ ಫೌಂಡೇಶನ್‌ಗೆ ಆಫೀಸರ್ ಆಗಿ ಸೇರಿ ಬಳಿಕ ಉಪಾಧ್ಯಕ್ಷರಾದರು.[23]

ಅಂತಿಮ ಟಿಪ್ಪಣಿಗಳು:

1. ಇದು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಬುದ್ಧಿಮಾಂದ್ಯ ಮಕ್ಕಳ ಮೊದಲ ಶಾಲೆಯಾಗಿದೆ.

2. ಎಸ್.ಆರ್. ಮಂಗಳೂರಿನ ಸೈಂಟ್ ಆಗ್ನೇಸ್ ವಿಶೇಷ ಶಾಲೆಯಪ್ರಾಂಶುಪಾಲರಾದ ಮಾರಿಯಾ ಜ್ಯೋತಿ ಎ.ಸಿ., ಹೊಸಪೆಟ್ಟು ಕುಟುಂಬದ ಪ್ರಸಿದ್ಧ ಕೊಲಾಕೊ ಕಾಮತ್‌ಗೆ ಸೇರಿದವರು. ಅವರ ದೊಡ್ಡಮ್ಮ-ತಾಯಿ ಮಾರ್ಗರೇಟ್ ಪ್ರಸಿದ್ಧ ವಿದ್ಯಾವಂತವರ್ಗದವರು. (ಮೈಕೆಲ್ ಲೋಬೊ ಪು .171)

3. 1882 ರಲ್ಲಿ, ಭಾರತೀಯ ಶಿಕ್ಷಣ (ಹಂಟರ್) ಆಯೋಗವು ಭಾರತದಲ್ಲಿ ಶಿಕ್ಷಣದ ಪ್ರಗತಿಯನ್ನು ಪರಿಶೀಲಿಸಿದಾಗ, ಬಾಲಕಿಯರ ಪ್ರಾಥಮಿಕ ಶಿಕ್ಷಣವು ಸ್ವಲ್ಪ ಪ್ರಗತಿಯನ್ನು ಸಾಧಿಸಿತು ಆದರೆ ಅವರಿಗೆ ದ್ವಿತೀಯ ಮತ್ತು ಉನ್ನತ ಶಿಕ್ಷಣ ಇನ್ನೂ ವಿರಳವಾಗಿತ್ತು. 1886-87ರಲ್ಲಿ, ಕೇವಲ 5 ಸರ್ಕಾರಿ ನಿರ್ವಹಣೆ,

3 ಸ್ಥಳೀಯ ಮತ್ತು ಪುರಸಭೆಯ ಮಂಡಳಿಗಳು, 221 ನೆರವಿನ ಮತ್ತು 15 ಅನುದಾನ ರಹಿತ ಮಾಧ್ಯಮಿಕ ಶಾಲೆಗಳು ಇಡೀ ಭಾರತದಲ್ಲಿ ಬಾಲಕಿಯರಿಗಾಗಿ ಮತ್ತು ಒಂಬತ್ತು ವಿದ್ಯಾರ್ಥಿಗಳನ್ನು ಹೊಂದಿರುವ ಒಂದು ಬಾಲಕಿಯರ ಕಾಲೇಜು ಶಾಲೆಯನ್ನು ಮಾತ್ರ ನಿರ್ವಹಿಸುತ್ತಿದ್ದವು. 1882 ರಲ್ಲಿ, ಶಾಲೆಗೆ ಹೋಗುವ ವಯಸ್ಸಿನ ಹುಡುಗಿಯರಲ್ಲಿ ಕೇವಲ ಎರಡು ಪ್ರತಿಶತ ಹುಡುಗಿಯರು ಮಾತ್ರ ಶಾಲೆಯಲ್ಲಿದ್ದರು. ಹಂಟರ್ ಆಯೋಗವು "ಸ್ತ್ರೀಶಿಕ್ಷಣವನ್ನು ಸ್ಥಳೀಯ, ಪುರಸಭೆ ಮತ್ತು ಪ್ರಾಂತೀಯ ನಿಧಿಗಳ ಮೇಲೆ ಕಾನೂನುಬದ್ಧ ಶುಲ್ಕವಾಗಿ ಪರಿಗಣಿಸಬೇಕು ಮತ್ತು ವಿಶೇಷ ಪ್ರೋತ್ಸಾಹವನ್ನು ಪಡೆಯಬೇಕು" ಎಂದು ಶಿಫಾರಸು ಮಾಡಿದೆ. ಎಲ್ಲಾ ಮಹಿಳಾ ಶಾಲೆಗಳು ಸಹಾಯಕ್ಕೆ ಅರ್ಹವಾಗಬೇಕೆಂದು ಮತ್ತು ಬಾಲಕಿಯರ ಶಾಲೆಗಳಿಗಿಂತ ಬಾಲಕಿಯರ ಶಾಲೆಗಳಿಗೆ ಸಹಾಯದ ಪರಿಸ್ಥಿತಿಗಳು ಸುಲಭವಾಗಬೇಕೆಂದು ಅದು ಬಯಸಿತು. ಬಾಲಕರ ಶಾಲೆಗಳಿಗಿಂತ ಬಾಲಕಿಯರ ಶಾಲೆಗಳಲ್ಲಿನ ಶಿಕ್ಷಣದ ಗುಣಮಟ್ಟವು ಸುಲಭವಾಗಿರಬೇಕು ಮತ್ತು ಮನೆಯ ಜೀವನದ ಅವಶ್ಯಕತೆಗಳಿಗೆ ವಿಶೇಷ ಉಲ್ಲೇಖವನ್ನು ನೀಡಬೇಕು. ಬಾಲಕಿಯರ ಶಾಲೆಗಳಿಗೆ ಉದಾರ ನೆರವು ನೀಡಬೇಕಾಗಿತ್ತು, ಇದರಲ್ಲಿ ಆಡುಭಾಷೆಯ ಜೊತೆಗೆ ಇಂಗ್ಲಿಷ್ ಕಲಿಸಬೇಕಾಗಿತ್ತು. ಬಾಲಕಿಯರಿಗೆ ವಿಶೇಷ ಬಹುಮಾನ ಮತ್ತು ವಿದ್ಯಾರ್ಥಿ ವೇತನಕ್ಕಾಗಿ ಅವಕಾಶ ಕಲ್ಪಿಸಬೇಕು. (ಎಸ್. ಭಟ್ಟಾಚಾರ್ಯ (ಸಂಪಾದಿತ), ಮಹಿಳಾ ಶಿಕ್ಷಣದ ಅಭಿವೃದ್ಧಿ, ದಾಖಲೆ ಸಂಖ್ಯೆ 19, ಪುಟ 36)

4. ಎ ಗಜೆಟಿಯರ್ ಆಫ್ ಸದರ್ನ್ ಇಂಡಿಯಾ ವಿದ್ ತೆನಸೆರಿಮ್ ಪ್ರಾವಿನ್ಸಸ್ ಆ್ಯಂಡ್ ಸಿಂಗಾಪುರ್, (1855), ಮದ್ರಾಸ್, ಪು. 547

5. ಕೆಮ್ಮಣ್ಣು ಉಡುಪಿ ಜಿಲ್ಲೆಯ ಒಂದು ಸಣ್ಣ ಹಳ್ಳಿಯಾಗಿದ್ದು, ಇದು ಕರ್ನಾಟಕದ ಪಶ್ಚಿಮ ಕರಾವಳಿಯಲ್ಲಿ ಸುವರ್ಣನದಿಯ ಪಕ್ಕದಲ್ಲಿದೆ. ಈ ಸ್ಥಳವು ಹಲವಾರು ಸಣ್ಣ ದ್ವೀಪಗಳ ಸಂಯೋಜನೆಯಾಗಿದೆ. ಭಾರೀ ಮಳೆಯ ದಿನಗಳಲ್ಲಿ ಈ ದ್ವೀಪಗಳು ಪ್ರವಾಹಕ್ಕೆ ಒಳಗಾಗುತ್ತವೆ ಮತ್ತು ಮುಖ್ಯ ಭೂಮಿಯನ್ನು ತಲುಪಲು ದೋಣಿಗಳನ್ನು ಅವಲಂಬಿಸಬೇಕಾಗಿತ್ತು.

6. ರೆವೆ. ವಿಕ್ಟರ್ ರೊಸಾರಿಯೋ ಫೆರ್ನಾಂಡಿಸ್ (ಬಿಷಪ್ 1930–55 ಅವರ ಸುದೀರ್ಘ ಅವಧಿಯಲ್ಲಿ 35 ಪ್ಯಾರಿಷ್ ಮತ್ತು ಅನೇಕ ಪ್ರಾಥಮಿಕ ಶಾಲೆಗಳ ಸೃಷ್ಟಿಯನ್ನು ಕಂಡಿತು. ಅವರು ಆಲಿವೆಟ್ ಬ್ರದರ್ಸ್ (1934) ನ ಸ್ಥಾಪಕರಾಗಿದ್ದರು, ಧಾರ್ಮಿಕ ಸಮಾಜವು ಕ್ಯಾಟೆಕಿಸಮನ್ನು ಕಲಿಸುವ ಕೆಲಸವನ್ನು ವಹಿಸಿಕೊಂಡಿದೆ. ಅವರು 1939 ರಲ್ಲಿ ಸ್ಥಾಪನೆಯಾದ ಡಯಾಸಿಸ್‌ನ ಅಂಗವಾದ ಕೊಂಕಣಿ ನಿಯತಕಾಲಿಕ 'ರಾಕ್ಣೋ'ದ ಪೋಷಕರಾಗಿದ್ದರು. ಡಯಾಸಿಸ್‌ನ ಪ್ರತಿ ಪ್ಯಾರಿಷ್ ಒಂದು ಪ್ರಾಥಮಿಕ ಶಾಲೆಯನ್ನು

ಹೊಂದಿದೆ ಎಂದು ಅವರು ನೋಡಿದರು– ಮತ್ತು ಕಲ್ಯಾಣಪುರ–ಮಿಲಾಗ್ರಿಸ್ ಮತ್ತು ನಂತೂರ್ (ಪದುವಾ ಹೈಸ್ಕೂಲ್) ಪ್ರಾರಂಭಿಸಲಾಯಿತು. ಶ್ರೀರಂಗಪಟ್ಟಣ ಸೆರೆಯಾಳುಗಳ ಸ್ಮರಣೆಗಾಗಿ ಮಂಗಳೂರಿನಲ್ಲಿರುವ ಪ್ರಸ್ತುತ ನಂತೂರ್ ಕ್ರಾಸ್ ಇರುವ ಜಾಗಕ್ಕೆ ಆ ಹೆಸರು ಬಂತು.

7. ಮ್ಯಾಗಜೀನ್, ಹಿಸ್ಟರಿ ಆಫ್‌ಸೈಂಟ್ ಮರಿಯಾ ಗೊರೆಟ್ಟಿ ಕಾನ್ವೆಂಟ್ ಇತಿಹಾಸ, ಕೆಮ್ಮಣ್ಣು

8. ಮಂಗಳೂರಿನ ಬಿಷಪರು, 1881–1955

9. ಸಿಸ್ಟರ್ ಎಮ್ ಕ್ಯಾರೋಲ್ (ಸಂಪಾದಿತ), ದಿ ಎ ಸಿ ಸಿಂಫನಿ – ಎ ಹಿಸ್ಟರಿ ಆಫ್ ದ ಕಾರ್ಮೆಲ್ ಕಾಂಗ್ರಿಗೇಶನ್, ಸಂಪುಟ 3, 1960 –1984, ಇವರಿಂದ, ಸಿಸ್ಟರ್ ಎಮ್. ಲಿಸೇರಿಯಾ ಮತ್ರು ಸಿಸ್ಟರ್ ಲೊರೆನಾ, ದಿ ಅಪೊಸ್ಟೋಲಿಕ್ಕಾರ್ಮೆಲ್ ಪ್ರಕಾಶನ (ಬೆಂಗಳೂರು), ಪು. 51–54

10. ಅದೇ ಪುಟ 54

11. ಅದೇ ಪುಟ 56

12. ಅದೇ ಪುಟ 45

13. ಅಮಿತಾ ಗುಪ್ತಾ, (2006) ಅರ್ಲಿ ಚೈಲ್ಡ್‌ಹುಡ್ ಎಜುಕೇಶನ್, ಪೋಸ್ಟ್ ಕೊಲೊನಿಯಲ್ ಥಿಯರಿ, ಆಂಡ್ ಟೀಚಿಂಗ್ ಪ್ರಾಕ್ಟೀಸಸ್ ಇನ್ ಇಂಡಿಯಾ, ಪ್ಯಾಲ್‌ಗ್ರೇವ್, ಮ್ಯಾಕ್‌ಮಿಲನ್, ನ್ಯೂಯಾರ್ಕ್, (ಪುಟ 234)

14. ಅನ್ನಿ ಬೆಸೆಂಟ್ ಸಹ ಈ ತತ್ವಗಳನ್ನು ನಂಬಿದ್ದರು ಮತ್ತು 1904 ರಲ್ಲಿ ಬನಾರಸ್ ಸೆಂಟ್ರಲ್ ಹಿಂದೂ ಬಾಲಕಿಯರ ಶಾಲೆಯನ್ನು ಪ್ರಾರಂಭಿಸಿದರು.

15. ಅವರು ತಿರುಚಿನಾಪಳ್ಳಿಯಲ್ಲಿ ಸ್ಟೇಷನ್ ಸೂಪರಿಂಟೆಂಡ್ ರವರ ಮಗಳು, ಮತ್ತು ಹುಟ್ಟಿನಿಂದ ಆಂಗ್ಲೋ–ಇಂಡಿಯನ್ ಆಗಿದ್ದರು. ಅವರು 1943 ರಲ್ಲಿ ಕಾಲೇಜಿನ ಮೊದಲ ಬ್ಯಾಚ್ ವಿದ್ಯಾರ್ಥಿಯಾಗಿದ್ದರು ಮತ್ತು ನಂತರ 1953 ರವರೆಗೆ ಮದ್ರಾಸಿನಲ್ಲಿ ಅತ್ಯಂತ ಪ್ರಸಿದ್ಧ ಶಿಕ್ಷಕಿಯಾಗಿದ್ದರು.

16. 1948 ರಲ್ಲಿ ಇವರನ್ನು ಕಣ್ಣೂರಿನಲ್ಲಿ ಸರಕಾರಿ ಮಹಿಳಾ ತರಬೇತಿ ಶಾಲೆಯ ಸಹಾಯಕ ಶಿಕ್ಷಿಕಿಯನ್ನಾಗಿ ನೇಮಿಸಲಾಯಿತು

17. ಶಿಕ್ಷಣ ಆಯೋಗದ ವರದಿ 1964-66

18. ಸೋದರಿ ಪಿ.ಜಿ. ಡಿಸೋಜ (ಮೈಸೂರು ಸಿವಿಲ್ ಸರ್ವಿಸ್, ನಲ್ಲಿದ್ದು ಇವರು "ರಾಜ್ಯ ಕಾರ್ಯ ಪ್ರವೀಣ ಬಿರುದನ್ನು ಪಡೆದವರಾಗಿದ್ದು ದಿವಾನ್ ಸರ್. ಎಂ. ವಿಶ್ವೇಶ್ವರಿಯ್ಯ ಅವರೊಂದಿಗೆ ಒಡನಾಗಿಯಾಗಿದ್ದರು.

19. ಮೇರಿ ಕ್ಲೋಟಿಲ್ಡಾ ಫೆರ್ನಾರ್ಂಡೀಸ್ (ಮದರ್ ಕ್ಲೊಟಿಲ್ಡಾ) (1867-1939) 1860 ರಲ್ಲಿ ಜೋಕಿಮ್ ಲೂಯಿಸ್ ಫೆರ್ನಾಂಡಿಸ್ ಅವರು ಡೆಪ್ಯೂಟಿ ಕಲೆಕ್ಟರ್‌ಗಳ ಖಜಾನೆಯ ಮುಖ್ಯಸ್ಥರಾಗಿದ್ದು ಬ್ರಿಟಿಷರಲ್ಲದ ಮೊದಲ ಮಂಗಳೂರಿಗ. ಮತ್ತು ಅವಳ ತಾಯಿ ರೆಜಿನಾ ರೊಸಾರಿಯೋ. ಅವರ ಸಹೋದರಿ ಮದರ್ ಅಲೋಸಿಯಾ ಅಪೋಸ್ತೋಲಿಕ್ ಕಾರ್ಮೆಲ್ ಸಭೆಯ ಎರಡನೇ ಸುಪಿರಿಯರ್ ಜನರಲ್ ಮಾತ್ರವಲ್ಲದೆ ಸೈಂಟ್ ಆಗ್ನೇಸ್ ಕಾಲೇಜಿನ ಸ್ಥಾಪಕಿಯಾಗಿದ್ದಾರೆ.

20.ವಿಕ್ಟೋರಿಯಾ ಕಾನ್ವೆ ಗರ್ಲ್ಸ್ ಶಾಲೆಯನ್ನು 1887 ರಲ್ಲಿ ಸ್ಥಾಪಿಸಿದರು. (ವಿಕ್ಟೋರಿಯಾರಾಣಿಯ ಪ್ರವೇಶದ ಸುವರ್ಣ ಮಹೋತ್ಸವ ಸವಿನೆನಪಿಗಾಗಿ). ಡೊಂಗರಕೇರಿಯಲ್ಲಿರುವ ಇದು ವಿಶೇಷವಾಗಿ ಉನ್ನತ ಜಾತಿಯ ಹಿಂದೂ ಹುಡುಗಿಯರಿಗೆ ಅವಕಾಶ ಕಲ್ಪಿಸಿತು. 1920 ಲೇಡಿಹಿಲ್‌ಗೆ ಸ್ಥಳಾಂತರಗೊಂಡು ಅಲ್ಲಿ ಹೊಸ ಕಾನ್ವೆಂಟ್ ಸ್ಥಾಪಿನೆ ಆಯಿತು.

21. ಪಿ.ಸಿ.ಲೋಬೊರವರು ಜಿಲ್ಲಾ ಮತ್ತು ಅಧಿವೇಶನ ನ್ಯಾಯಾಧೀಶರ ಸ್ಥಾನವನ್ನು ಪಡೆದ ಮೊದಲ ಮಂಗಳೂರಿನವರಲ್ಲಿ ಒಬ್ಬರು. ಅವರು ಲೋಕೋಪಕಾರಿ ಹಾಗೂ ಸೈಂಟ್ ಆಗ್ನೇಸ್ ಕಾಲೇಜಿನ ಪ್ರಮುಖ ಮಹಾ ಪೋಷಕರು.

22. 1935 ರಲ್ಲಿ ಕಿಂಗ್ ಜಾರ್ಜ್ 5 ಪಟ್ಟಾಭಿಷೇಕದ ಪದಕ ಮತ್ತು 1963 ರಲ್ಲಿ 'ಪ್ರೊ ಎಕ್ಲೆಸಿಯಾ ಪೋಂಟಿಫಿಸ್' ಪ್ರಶಸ್ತಿನೀಡಲಾಯಿತು. ಅವರ ತಂದೆ ಜೋಕಿಮ್ ಎಲ್. ಸಲ್ಡಾನ್ಹಾ ಅವರು ತಮ್ಮ 36 ನೇ ವಯಸ್ಸಿನಲ್ಲಿ ತಹಶೀಲ್ದಾರರ ಸ್ಥಾನಕ್ಕೆ ಬೆಳೆದರು ಮತ್ತು ನಂತರ ಡೆಪ್ಯೂಟಿ ಕಲೆಕ್ಟರ್ ರಾಗಿ ನೇಮಕಗೊಂಡರು.

23. ಜಾನ್. ಬಿ. ಮೊಂತೆರೋ (2013) ಕ್ಯಾಸ್ಕ್ಆಂಡ್ ಫೆಲೋ ಸೆಂಚುರಿಯನ್ಸ್', ಎ ಕ್ಯಾಸ್ಕ್ ಸೆಂಟೆನರಿ ಪಬ್ಲಿಕೇಶನ್, ಕ್ಯಾಥೊಲಿಕ್ ಅಸೋಸಿಯೇಶನ್ ಆಫ್ ಸೌತ್ ಕೆನರಾ, ಮಂಗಳೂರು .ಪುಟ..206

ಅಧ್ಯಾಯ: ಆರು

ಫಲಿತಗಳು

ಅಧ್ಯಾಯ: ಆರು

ಫಲಿತಗಳು

ಅಪೊಸ್ತೋಲಿಕ್ ಕಾರ್ಮೆಲ್ ಹೆಣ್ಣು ಮಕ್ಕಳ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡದೊಂದು ಕಾಂತ್ರಿಯನ್ನೆ ಮಾಡಿತ್ತು ಎನ್ನುವುದು ಈ ಸಂಶೋಧನೆಯಲ್ಲಿ ಕಂಡುಕೊಂಡ ಮುಖ್ಯ ವಿಷಯ. ನಗರಗಳಲ್ಲಿ ಮಾತ್ರವಲ್ಲದೆ ಹಿಂದುಳಿದ ಗ್ರಾಮಾಂತರ ಪ್ರದೇಶಗಳಲ್ಲೂ ಹಲವಾರು ಸಾಮಾಜಿಕ ಬದಲಾವಣೆಯನ್ನು ತರುವಲ್ಲಿ ಇದು ಕಾರಣವಾಯಿತು. ಉದಾಹರಣೆಗೆ – ಬಂಟ್ವಾಳ ತಾಲೂಕಿನ ಮೊಡಂಕಾಪು ಪರಿಸರದಲ್ಲಿ ಹೆಣ್ಣುಮಕ್ಕಳ ಶಿಕ್ಷಣ ಕೇವಲ 7ನೇ ತರಗತಿಯವರೆಗೆ ಮಾತ್ರ ಸೀಮಿತವಾಗಿತ್ತು. ಶ್ರೀಮಂತರ ಮನೆಯ ಹೆಣ್ಣುಮಕ್ಕಳು ಉನ್ನತ ಶಿಕ್ಷಣಕ್ಕಾಗಿ ಮಂಗಳೂರು ಅಥವಾ ಹತ್ತಿರದ ಎಸ್.ವಿ.ಎಸ್. ಶಾಲೆಗೆ ಹೋಗುತ್ತಿದ್ದರು. ಆದರೆ ಇವರ ಸಂಖ್ಯೆ ತೀರಾ ಕಡಿಮೆಯಾಗಿತ್ತು. ಬಹು ಸಂಖ್ಯೆಯಲ್ಲಿದ್ದ ಬಡ ಹೆಣ್ಣುಮಕ್ಕಳು ಬೇರೆ ಪರ್ಯಾಯ ವ್ಯವಸ್ಥೆಯಿಲ್ಲದ ಕಾರಣ ಹಾಗೂ ಮನೆಯಲ್ಲಿ ಆರ್ಥಿಕ ಸ್ಥಿತಿ ತೀರ ಕೆಳಮಟ್ಟದಲ್ಲಿ ಇದ್ದುದರಿಂದ ಅತಿ ಸಣ್ಣ ಪ್ರಾಯದಲ್ಲೇ ನಗರಪ್ರದೇಶಗಳಲ್ಲಿ ಬೇರೆಯವರ ಮನೆ ಕೆಲಸಕ್ಕೋ ಅಥವಾ ಕೃಷಿ ಕಾರ್ಯಗಳಿಗೋ ತೆರಳುವ ಸ್ಥಿತಿ ಉಂಟಾಗಿತ್ತು. ಇನ್ನು ಕ್ರೈಸ್ತ ಜನಾಂಗದ ಮನೆಗಳಲ್ಲಂತೂ ಕುಡಿತದ ಚಟದಿಂದ ಮನೆಯ ಯಜಮಾನ ಹೆಂಡತಿ ಮತ್ತು ಮಕ್ಕಳ ಜವಾಬ್ದಾರಿಯಿಂದ ನುಣುಚಿಕೊಂಡದ್ದರಿಂದ, ಹೆಣ್ಣುಮಕ್ಕಳು ಹಣ ಸಂಪಾದನೆಗಾಗಿ ದೂರದ ಮುಂಬೈ ಅಥವಾ ಬೆಂಗಳೂರಿಗೆ ಹೋಗಿ ಬೇರೆಯವರ ಮನೆಗಳಲ್ಲಿ ಅಥವಾ ಹೊಟೇಲುಗಳಲ್ಲಿ ದುಡಿಯುವ ಪರಿಸ್ಥಿತಿ ಉಂಟಾಗಿತ್ತು. ಹೀಗೆ ಚಿಕ್ಕ ಪ್ರಾಯದಲ್ಲೆ ಮನೆಯ ಜವಾಬ್ದಾರಿಯನ್ನು ತಮ್ಮ ಮೇಲೆ ಎಳೆದುಕೊಂಡ ಕಾರಣದಿಂದಾಗಿ ಮದುವೆಯಾಗುವ ವಯಸ್ಸಿನಲ್ಲಿ ಮದುವೆಯಾಗದೆ ತನಗಿಂತ ಸಣ್ಣ ಪ್ರಾಯದ ತಂಗಿ-ತಮ್ಮಂದಿರ ಜೀವನವನ್ನು ಒಂದು ಹಂತಕ್ಕೆ ತಂದು ನಿಲ್ಲುಸುವರಷ್ಟರಲ್ಲಿ ಮದುವೆಯಾಗುವ ಪ್ರಾಯವನ್ನು ಮೀರಿ ಅವಿವಾಹಿತರಾಗಿಯೋ ಅಥವಾ ಬಹಳ ವರ್ಷಗಳ ನಂತರ ಕಾದು ಮದುವೆಯಾಗುವ ಪರಿಸ್ಥಿತಿ ಉಂಟಾಗಿತ್ತು. ಆದರೆ 1963 ರಲ್ಲಿ (ಅಪೋಸ್ತಾಲಿಕ್ ಕಾರ್ಮೆಲ್) 8ನೇ ತರಗತಿಯನ್ನು ಇಗರ್ಜಿಯ ಪರಿಸರದಲ್ಲಿ ಆರಂಭಿಸಿದ್ದರಿಂದ, ಕ್ರೈಸ್ತರಾಗಲೀ ಇತರರಾಗಲೀ 7ನೇ ತರಗತಿಯಾದ ಕೂಡಲೇ ತಮ್ಮ ಹೆಣ್ಣು ಮಕ್ಕಳನ್ನು 8ನೇ ತರಗತಿಗಾಗಿ ಕಾರ್ಮೆಲ್ ಶಾಲೆಯಲ್ಲಿ ಸೇರಿಸ ತೊಡಗಿದರು. 3 ವರ್ಷಗಳ ಕಾಲ ಇಲ್ಲಿನ ಭಗಿನಿಯರ ಮಾರ್ಗದರ್ಶನದಲ್ಲಿ ವ್ಯಾಸಂಗವನ್ನು ಮುಗಿಸಿ ಉನ್ನತ ಶಿಕ್ಷಣಕ್ಕಾಗಿ ಮಂಗಳೂರಿಗೆ ತೆರಳಿದರು. ಮಂಗಳೂರಿಗೆ ದಿನನಿತ್ಯ ಹೋಗಿಬರಲು ಸರಿಯಾದ ವ್ಯವಸ್ಥೆ ಇಲ್ಲದಿದ್ದ ಕಾಲವದು. ವಾಹನಗಳ ವ್ಯವಸ್ಥೆ ಬಹು ವಿರಳವಾದುದರಿಂದ ಇದ್ದ ವಾಹನಗಳನ್ನು ಶ್ರೀಮಂತರ ಮಕ್ಕಳಷ್ಟೇ ಬಳಸಿಕೊಳ್ಳುವ ಸ್ಥಿತಿ ಇದ್ದದ್ದರಿಂದ

ಬಡಕುಟುಂಬದ ಹೆಣ್ಣು ಮಕ್ಕಳು ಅಪೊಸ್ತೋಲಿಕ್ ಕಾರ್ಮೆಲ್ ಭಗಿನಿಯರ ಬೋರ್ಡಿಂಗ್‌ಗಳಲ್ಲಿ ಉಳಿದುಕೊಂಡು ಶಿಕ್ಷಣವನ್ನು ಪಡೆಯುತ್ತಿದ್ದರು. ಇಲ್ಲಿನ ಪ್ರೌಢ ಶಿಕ್ಷಣ ಮುಗಿದ ನಂತರ 1960ರ ದಶಕದಲ್ಲಿ ಸೈಂಟ್ ಆನ್ಸ್ ಮತ್ತು ಸೈಂಟ್ ಆಗ್ನೇಸ್ ಬೋರ್ಡಿಂಗ್‌ಗಳಲ್ಲಿ ಉಳಿದುಕೊಂಡು ಅಲ್ಲಿಯ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದರು. ಇವರ ಜತೆಯಲ್ಲಿ ದೂರದ ಮುಂಬೈ, ಕಲ್ಲಿಕೋಟೆ, ಕೊಡಗು, ಮೈಸೂರು ಹೀಗೆ ಅನ್ಯ ಜಿಲ್ಲೆಯ ಹಾಗೂ ರಾಜ್ಯದ ವಿದ್ಯಾರ್ಥಿಗಳ ಸೇರ್ಪಡೆಯ ಪರಿಣಾಮವಾಗಿ ಕೇವಲ ಶಿಕ್ಷಣ ಮಾತ್ರವಲ್ಲದೆ ಇತರೆ ಕ್ಷೇತ್ರಗಳಲ್ಲಿ ಕೂಡಾ ಬಹಳಷ್ಟು ಸಾಂಸ್ಕೃತಿಕ ಪಲ್ಲಟಗಳು ಉಂಟಾದುವು. ಉದಾಹರಣೆಗೆ: ಅನ್ಯ ಜಿಲ್ಲೆ ರಾಜ್ಯಗಳಿಂದ ಬಂದಿದ್ದ ವಿದ್ಯಾರ್ಥಿಗಳ ಪ್ರೇರಣೆ ಮತ್ತು ಒಡನಾಟದಿಂದಾಗಿ ಹೆಣ್ಣುಮಕ್ಕಳ ಹಾವ ಭಾವ, ಮನಸ್ಥಿತಿ, ಭಾಷೆ, ಯೋಚನಾ ಪ್ರಕ್ರಿಯೆ, ಚಲ,ಎಲ್ಲ ಪರಿಸ್ಥಿತಿಯಲ್ಲಿ ಹೊಂದಿಕೊಂಡು ಬಾಳುವ ಸ್ವಭಾವ, ಧೈರ್ಯ ಮುಂತಾದವುಗಳನ್ನು ಕಲಿತರು. ಕಾಲೇಜು ಶಿಕ್ಷಣ ಮುಗಿದ ತಕ್ಷಣ ಅಲ್ಲೆ ಇರುವ T.C.H ಮತ್ತು B.Ed Course ಗಳಿಗೆ ಸೇರಿದರು. ಕೆಲವರು 10 ತಿಂಗಳಲ್ಲಿ ಇನ್ನು ಕೆಲವರು 2 ವರ್ಷಗಳಲ್ಲಿ ತಮ್ಮ ವ್ಯಾಸಾಂಗವನ್ನು ಮುಗಿಸಿ,ಶಿಕ್ಷಕಿ ವೃತ್ತಿಯನ್ನು ಆರಿಸಿಕೊಂಡರು. ಬಂಟ್ವಾಳದ ಹಲವಾರು ಮಂದಿ ಹೆಣ್ಣುಮಕ್ಕಳು ತಾವು ಕಲಿತ ವಿದ್ಯಾಸಂಸ್ಥೆಯಲ್ಲೇ ಮತ್ತೆ ವೃತ್ತಿಯನ್ನು ಆರಂಭಿಸಿದರು. ಉಳಿದವರು ಪುತ್ತೂರು, ಉಪ್ಪಿನಂಗಡಿ, ಮಂಗಳೂರು ಹಾಗೂ ವಿವಿಧ ಶಾಲೆಗಳಲ್ಲಿ ತಮ್ಮ ಹೊಸ ಬದುಕನ್ನು ಕಂಡುಕೊಂಡರು.

ಈ ಸಂದರ್ಭದಲ್ಲಿ ನಾವು ಗಮನಿಸಲೇಬೇಕಾದ ಇನ್ನೂ ಕೆಲವು ಅಂಶಗಳೆಂದರೆ, 1963ರ ಮೊದಲು ಹಾಗೂ ನಂತರ ಮೊಡಂಕಾಪು ಪರಿಸರದ ಹಾಗೂ ಆಸುಪಾಸಿನ ಹೆಣ್ಣುಮಕ್ಕಳ ಜೀವನದಲ್ಲಿ ಕಂಡುಬಂದ ಪರಿವರ್ತನೆ ಅಥವಾ ವ್ಯತ್ಯಾಸಗಳು. ಮೊದಲನೆಯಾಗಿ ಬಾಲ್ಯವಿವಾಹ ಕ್ರಮೇಣ ಕಡಿಮೆಯಾಯಿತು. ಎರಡನೆಯದಾಗಿ, ತಮ್ಮ 12ನೇ ವಯಸ್ಸಿನಲ್ಲಿ ವ್ಯಾಸಂಗವನ್ನು ಮೊಟಕುಗೊಳಿಸಿ ಮನೆಯಲ್ಲೇ ಕಾಲಹರಣ ಮಾಡುತ್ತಿದ್ದವರು ಕನಿಷ್ಠ 15ನೇ ವಯಸ್ಸಿನವರೆಗೆ ಶಿಕ್ಷಣವನ್ನು ಪಡೆಯಲಾರಂಭಿಸಿದರು. ಹೀಗೆ ಮದುವೆಯಾಗುವ ವಯಸ್ಸು ಏರುತ್ತಾ ಹೋಯಿತು. ಉನ್ನತ ಶಿಕ್ಷಣವನ್ನು ಪಡೆದವರು ಉದ್ಯೋಗವನ್ನು ಸೇರಿ ತಮ್ಮ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಬದಲಾಯಿಸಿಕೊಂಡು ಜೀವನಮಟ್ಟವನ್ನು ಸುಧಾರಿಸಿಕೊಂಡರು. ದೊಡ್ಡ ನಗರಗಳಿಗೆ ಉದ್ಯೋಗಕ್ಕಾಗಿ ತೆರಳುವ ಪದ್ಧತಿ ಕ್ರಮೇಣ ಕಡಿಮೆಯಾಗುತ್ತಾ ಬಂತು. ಇನ್ನು ಕೆಲವು ಮಂದಿ ಕ್ರಿಶ್ಚಿಯನ್ ಹೆಣ್ಣು ಮಕ್ಕಳು ಭಗಿನಿಯರ ಸೇವಾಮನೋಭಾವದಿಂದ ಪ್ರೇರಿತರಾಗಿ ಸನ್ಯಾಸತ್ವವನ್ನು ಸ್ವೀಕರಿಸಿದರು. ಮುಂದಕ್ಕೆ 7 ವರ್ಷಗಳ ಕಾಲ ಕಾನ್ವೆಂಟ್‌ಗಳಲ್ಲಿ ಸನ್ಯಾಸತ್ವದ ತಯಾರಿಯಲ್ಲಿ ತೊಡಗಿ, ತರಬೇತಿಯನ್ನು ಪಡೆದು ಇವರದ್ದೇ ಆದ ಬೇರೆ ಬೇರೆ ವಿದ್ಯಾಸಂಸ್ಥೆಗಳಲ್ಲಿ ಉನ್ನತ ಹುದ್ದೆಯನ್ನು ಪಡೆದು ಸಾಮಾಜಿಕ ಪರಿವರ್ತನೆಯ ಕಾರ್ಯದಲ್ಲಿ ತೊಡಗಿದರು.

ಇನ್ನು ಮೂಲ್ಕಿಯ ಸಮೀಪದಲ್ಲಿರುವ ಕೆಮ್ಮಣ್ಣುವಿನಲ್ಲಿ ಎ.ಸಿ. ಶಾಲೆ ಪ್ರಾರಂಭವಾದ ಪರಿಣಾಮವಾಗಿ ಅಲ್ಲಿ ಬಹುತೇಕ ಬದಲಾವಣೆಯಾದದ್ದನ್ನ ಕಾಣಬಹುದು. ಈ ಪುಟ್ಟ ಹಳ್ಳಿಯು ಸಮುದ್ರ ತೀರದಲ್ಲಿರುವುದರಿಂದ ಮೊಗವೀರ ಮತ್ತು ಬೆಸ್ತ ಸಮುದಾಯದವರು ಬಹು ಸಂಖ್ಯೆಯಲ್ಲಿ ಇಲ್ಲಿ ವಾಸವಾಗಿದ್ದರು. ಸುತ್ತಲೂ ಜಲಾವೃತವಾಗಿರುವ ಕಾರಣದಿಂದಾಗಿ ಹೆಣ್ಣು ಮಕ್ಕಳಿಗೆ ದೂರದ ಶಾಲೆಗಳಿಗೆ ಹೋಗುವ ಪರಿಸ್ಥಿತಿ ಇರಲಿಲ್ಲ. ಗಂಡು ಮಕ್ಕಳು ಮಾತ್ರ ದೋಣಿಗಳಲ್ಲಿ ತೆರಳಿ ಶಿಕ್ಷಣವನ್ನು ಪಡೆಯುತ್ತಿದ್ದರು. ಮಳೆಗಾಲದಲ್ಲಂತೂ ನೀರಿನ ಮಟ್ಟ ಹೆಚ್ಚಾಗಿರುವ ಕಾರಣ ದೋಣಿಯಲ್ಲಿ ತೆರಳುವುದು ಅಪಾಯಕಾರಿಯಾಗಿತ್ತು. ಹೀಗಿರುವ ಸಂದರ್ಭದಲ್ಲಿ ಎ.ಸಿ. ಭಗಿನಿಯರು ಕೆಮ್ಮಣ್ಣುವಿನಲ್ಲಿ ಪ್ರಪ್ರಥಮಬಾರಿಗೆ ಶಾಲೆಯೊಂದನ್ನು ತೆರೆದರು. ಈ ಶಾಲೆಯು ಹತ್ತಿರವಿರುವ ಕಾರಣ ಹಾಗೂ ಇಲ್ಲಿ ಬೋಧನೆ ಮಾಡುವವರು ಭಗಿನಿಯರಾಗಿದ್ದರಿಂದ ಎಲ್ಲ ಜಾತಿಯ ಹೆಣ್ಣು ಮಕ್ಕಳು ಈ ಶಾಲೆಗೆ ತೆರಳಿದರು. ಹೀಗೆ ಬೆಸ್ತರು, ಮೊಗವೀರರು ಹಾಗೂ ಅನ್ಯಜಾತಿಯವರು ಮೊದಲ ಬಾರಿಗೆ ಶಿಕ್ಷಣವನ್ನು ಪಡೆಯುವ ಅವಕಾಶವನ್ನು ಪಡೆದರು. ತದನಂತರ ಮಂಗಳೂರಿನಲ್ಲಿದ್ದ ಬೋರ್ಡಿಂಗ್ ವ್ಯವಸ್ಥೆಯಿಂದಾಗಿ ಕೆಲವರು ಉನ್ನತ ವ್ಯಾಸಾಂಗಕ್ಕಾಗಿ ನಗರಗಳಿಗೆ ತೆರಳಿದರು. ಹೀಗೆ ಈ ಹಿಂದೆ ಇಲ್ಲವಾಗಿದ್ದ ಉನ್ನತ ವ್ಯಾಸಂಗದ ಸೌಲಭ್ಯ ಪ್ರಕೃತ ಒದಗಿ ಬಂದದ್ದರಿಂದ ಹೆಚ್ಚಿನವರು ಉನ್ನತ ಶಿಕ್ಷಣ ಪಡೆದು ಉದ್ಯೋಗವನ್ನು ಆರಿಸಿ ಬೇರೆ ಶಾಲೆಗಳಲ್ಲಿ ಶಿಕ್ಷಕಿಯರ ವೃತ್ತಿ ಅಥವಾ ಇನ್ನಿತರ ಹುದ್ದೆಗೆ ಹೋಗುವ ಕನಸು ಕಾಣುತ್ತಿದ್ದ ಅದೆಷ್ಟೋ ಹೆಣ್ಣು ಮಕ್ಕಳು ಈಗ ತಮ್ಮ ಕನಸು ನನಸಾಗುತ್ತಿರುವುದನ್ನು ಕಂಡು ಸಂತೋಷಪಡುತ್ತಿದ್ದರು, ಇಷ್ಟು ಮಾತ್ರವಲ್ಲದೆ ಇವರ ಜೀವನ ಇನ್ನುಳಿದ ಹೆಣ್ಣು ಮಕ್ಕಳಿಗೆ ಪ್ರೇರಣೆಯಾಯಿತು.

